॥ ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ॥

ಗೀತಾಜ್ಯೋತಿ

ಶ್ರೀ ಭಗವತ್ಪಾದ ಪ್ರಕಾಶನ
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನಮ್
ಮಠದೇವಳ, ಶಿರಸಿ (ಉ.ಕ.) – 581 336

ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ

ಗೀತಾಜ್ಯೋತಿ

ಪ್ರಧಾನ ಸಂಪಾದಕರು:

ಮಹಾಮಹೋಪಾಧ್ಯಾಯ

ವಿದ್ವಾನ್ ಎನ್. ರಂಗನಾಥ ಶರ್ಮಾ

ಸಹಸಂಪಾದಕರು:

ಡಾ. ಶ್ರೀರಾಮ ಭಟ್ಟ

ವಿದ್ವಾನ್ ಶಂಕರ ಭಟ್ಟ, ಬಾಲಿಗದ್ದೆ

ಶ್ರೀ ಜಗನ್ನಾಥ ಹೇಮಾದ್ರಿ

ಪ್ರಕಾಶಕರು:

ಶ್ರೀ ಭಗವತ್ಪಾದ ಪ್ರಕಾಶನ

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

ಮಠದೇವಳ, ಶಿರಸಿ (ಉ.ಕ.) – 581 336

ದೂರವಾಣಿ: (08384) 279311, 279359, 279477

'GEETA JYOTI' A Collection of articles on Holy Shrimad Bhagavadgeeta

Edited by : Vidwan **N. Ranganatha Sharma**

Published by : **Shri Bhagawatpada Prakashana**
Sonda Swarnavalli Maha Samstana

Post : **Mathadevala**
Tq: Sirsi Dist : North Kanara - 581336
Phone : 08384, 279311, 279359, 279477

First Impression : 2011

Pages : xii + 148 = 160

Copies : 5000

Price : Rs. 100/-

ಶ್ರೀ ಭಗವತ್ಪಾದ ಪ್ರಕಾಶನ

ಅಧ್ಯಕ್ಷರು : ಶ್ರೀ ಶ್ರೀಮದ್ ಜಗದ್ಗುರು ಶಂಕರಾಚಾರ್ಯ
ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು

ಕಾರ್ಯದರ್ಶಿ : ಶ್ರೀ ಆರ್.ವಿ. ಭಾಗವತ ಸಿರ್ಸಿಮಕ್ಕಿ

ಸಹಕಾರ್ಯದರ್ಶಿ : ಶ್ರೀ ಆಯ್. ಎಂ. ಹೆಗಡೆ, ಶಿರಸಿ

ಸದಸ್ಯರು : ಶ್ರೀ ನಾ.ಸು. ಭರತನಳ್ಳಿ
ಪ್ರಾ. ಕೆ.ವಿ. ಭಟ್ಟ ಶಿರಸಿ
ಶ್ರೀವನರಾಗಶರ್ಮ ಯಲ್ಲಾಪುರ
ಶ್ರೀ ಎಂ.ಸಿ. ಹೆಗಡೆ, ಸಿರ್ಸಿಮಕ್ಕಿ
ಶ್ರೀ ದತ್ತಾತ್ರಯ ಭಟ್ಟ ಕೋಟೆಮನೆ ಹುಬ್ಬಳ್ಳಿ
ಡಾ. ಜಿ.ಎಂ. ಹೆಗಡೆ, ಧಾರವಾಡ

ಪ್ರಥಮ ಮುದ್ರಣ : 2011

ಪ್ರತಿಗಳು : 5000

ಪುಟಗಳು : xii + 148 = 160

ಬೆಲೆ : ರೂ. 100/- (ಒಂದು ನೂರು ರೂಪಾಯಿಗಳು)

ಮುದ್ರಕರು
ಆದಿತ್ಯ ಪ್ರಿಂಟರ್ಸ್
ನಂ. 1, ಶ್ರೀ ರಾಮಾಂಜನೇಯ ರಸ್ತೆ
ಹನುಮಂತನಗರ, ಬೆಂಗಳೂರು - 19
ದೂರವಾಣಿ: 080-2660 6776
ಫ್ಯಾಕ್ಸ್: 080-2660 6566
ಇ-ಮೇಲ್: prakash@adityaprinters.com

ಈ ಪುಸ್ತಕದ ಪ್ರಕಟಣೆಗೆ 'ಭಗವದ್ಗೀತಾ ಅಭಿಯಾನ-ಕರ್ನಾಟಕ' ಸಮಿತಿಯು ಆರ್ಥಿಕ ನೆರವನ್ನು ನೀಡಿದೆ.

ಸಂಪಾದಕೀಯ

ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥ ಶರ್ಮಾ

ಭಗವದ್ಗೀತೆಯು ಭಾರತೀಯರಾದ ನಮಗೆ ಪವಿತ್ರಗ್ರಂಥ ಮಾತ್ರವಲ್ಲದೆ ಪುರುಷಾರ್ಥ ಚತುಷ್ಟಯವನ್ನು ವ್ಯವಸ್ಥಿತವಾಗಿ ಬೋಧಿಸುವ ಶ್ರೇಷ್ಠ ಗ್ರಂಥ. ಇಂತಹ ಒಂದು ಗ್ರಂಥವು ಜಗತ್ತಿನ ಇನ್ನೊಂದು ದೇಶದಲ್ಲಿ ಉದಿಸಲಿಲ್ಲ ಎಂದರೆ ಅತಿಶಯೋಕ್ತಿ ಯೇನಾಗುವುದಿಲ್ಲ.

ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇಮಹಾಭಾರತಮ್ । ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾಧ್ಯಾಯಿನೀಂ ಅಂಬ ತ್ವಾಮನುಸಂದಧಾಮಿ ಭಗವದ್ಗೀತೇ ! ಭವದ್ವೇಷಿಣೀಮ್ ॥

ಈ ಶ್ಲೋಕವು ಪ್ರಕೃತದಲ್ಲಿ ಹೇಳಬೇಕಾದ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಭಗವಂತನೇ ಉಪದೇಶಿಸಿದ್ದು 'ಭಗವದ್ಗೀತೆ' ಎನಿಸಿತು. ಆತನ ಉಕ್ತಿಗಳನ್ನು ಸಂಗ್ರಹಿಸಿ ವ್ಯಾಸಮಹರ್ಷಿಗಳು ಮಹಾಭಾರತದ ನಡುವೆ ಸೇರಿಸಿದ್ದಾರೆ. ಹದಿನೆಂಟು ಅಧ್ಯಾಯಗಳಲ್ಲಿ ಪುರುಷಾರ್ಥಗಳೆನಿಸಿದ ಧರ್ಮಾರ್ಥಕಾಮಮೋಕ್ಷಗಳನ್ನು ಸಂಕ್ಷೇಪವಾಗಿ ಆದರೂ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಇದು ಉಪನಿಷತ್ತುಗಳ ಸಾರವಾಗಿದೆ.

ಮಾನವನು ತನ್ನ ಅಭ್ಯುದಯಕ್ಕಾಗಿ ಪ್ರಯತ್ತಿಸುತ್ತಿರುವುದು ಪ್ರಕೃತಿಸಿದ್ಧ. ಲೌಕಿಕ ಸುಖಗಳ ಭೋಗರೂಪವಾದ ಅಭ್ಯುದಯವು ಅರ್ಥಕಾಮಗಳನ್ನು ಅವಲಂಬಿಸಿರುವುದರಿಂದ ಅವುಗಳ ಪ್ರಾಪ್ತಿಗಾಗಿ ಮಾನವನು ನಾನಾ ಮಾರ್ಗಗಳನ್ನು ಅನುಸರಿಸುತ್ತಾನೆ. ಮಾರ್ಗಾನುಸರಣೆಯಲ್ಲಿ ಸಹಜವಾದ ಮೋಹಕ್ಕೆ ಒಳಗಾಗಿ ಮುಗ್ಗರಿಸುತ್ತಾನೆ. "ಈ ಹಂತೇ ಕಾಮಭೋಗಾರ್ಥಮ ನ್ಯಾಯೇನಾರ್ಥಸಂಚಯಾನ್" ಎಂಬ ಗೀತೋಕ್ತಿಯಂತೆ ಅನ್ಯಾಯ ಮಾರ್ಗಕ್ಕೆ ಇಳಿಯುವುದೇನೂ ಅಪೂರ್ವವಲ್ಲ. ಅನ್ಯಾಯ ಮಾರ್ಗದಿಂದ ಪರರಿಗೆ ಕಷ್ಟವೂ, ಪರಿಣಾಮದಲ್ಲಿ ಸಮಾಜಕ್ಕೆ ದುಸ್ಥಿತಿಯೂ ಪ್ರಾಪ್ತವಾಗುವುದಲ್ಲದೇ, ತನ್ನ ಇಹಪರಸೌಖ್ಯಗಳಿಗೂ ಭಂಗವಾಗುತ್ತದೆಂಬುದು ಹೊಳೆಯುವುದಿಲ್ಲ. ಹೊಳೆದರೂ 'ಬಲಾದಿವ ನಿಯೋಜಿತಃ' ಎಂಬಂತೆ ಅನ್ಯಾಯಮಾರ್ಗದಲ್ಲಿಯೇ ಸಾಗುತ್ತಾನೆ. ಈ ಅನ್ಯಾಯದ ಮಾರ್ಗವನ್ನು ತಪ್ಪಿಸಲು ತನ್ನ ದಾರಿಯು ಅಧರ್ಮದಿಂದ ತುಂಬಿದೆಯೆಂಬುದು ಚಿತ್ತಕ್ಕೆ ಹೊಳೆಯಬೇಕಾಗಿದೆ,

ಇದಕ್ಕೆ ಧರ್ಮದ ಜ್ಞಾನವು ಅತ್ಯಾವಶ್ಯಕವೆಂದೂ, ತಾನು ಅನುಸರಿಸುತ್ತಿರುವುದು ಅಧರ್ಮದ ದಾರಿಯೆಂದೂ ಸ್ಪಷ್ಟವಾಗಿ ಗೋಚರಿಸಬೇಕು. ಆಗ ಶಾಸ್ತ್ರದ ಒತ್ತಡದಿಂದ ಧರ್ಮಜ್ಞಾನದ ಬೆಳಕು ಮಾತ್ರ ಚಿತ್ತಕ್ಕೆ ಗೋಚರಿಸಿ ಚಿತ್ತ ಶುದ್ಧಿಯನ್ನುಂಟು ಮಾಡಲು ಸಹಕಾರಿಯಾಗುತ್ತದೆ. ಶ್ರೀ ರಾಮನು ವಾಲಿಯನ್ನುದ್ದೇಶಿಸಿ ವಾಲ್ಮೀಕಿ ರಾಮಾಯಣದಲ್ಲಿ ಹೀಗೆ ಹೇಳುತ್ತಾನೆ– 'ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ ಪ್ಲವಂಗಮ' (ವಾ.ರಾ.ಕಿ.ಕಾಂಡ 18–15) ಎಂದು. ಹೀಗೆ ಪರಮದುರ್ಜ್ಞೇಯವಾದದ್ದು ಜ್ಞೇಯವಾಗುವುದು ಗುರುಶುಶ್ರೂಷೆಯಿಂದ ಮತ್ತು ಜನ್ಮಾಂತರ ಸಂಸ್ಕಾರಬಲದಿಂದಲೇ ಎಂದು ತಿಳಿಯಬೇಕು.

ಧರ್ಮಾರ್ಥಕಾಮಗಳೆಂಬ ತ್ರಿವರ್ಗದ ಜ್ಞಾನವಾಗಿ ಧರ್ಮದಿಂದಲೇ ಅರ್ಥಕಾಮಗಳನ್ನು ಸಾಧಿಸಬೇಕೆಂದು ಪ್ರವೃತ್ತನಾಗುವುದೇ ಮನುಷ್ಯನ ಅಭ್ಯುದಯ ಮಾರ್ಗ. ಈ ಅಭ್ಯುದಯವೇ ಮೋಕ್ಷಕ್ಕೆ ದಾರಿ. "ಯತೋಽಭ್ಯುದಯನಿಃಶ್ರೇಯಸ ಸಿದ್ಧಿಃ ಸ ಧರ್ಮಃ" ಎಂಬುದಾಗಿ ಶಾಸ್ತ್ರವಚನವಿದೆ. ನಿಃಶ್ರೇಯಸವೆಂದರೆ ಮೋಕ್ಷ. ಯಾವುದಕ್ಕಿಂತ ಅಧಿಕವಾದ ಶ್ರೇಯಸ್ಸು ಇಲ್ಲವೋ ಅದೇ ನಿಃಶ್ರೇಯಸ. ಈ ಅಭ್ಯುದಯ ಮಾರ್ಗ ಮತ್ತು ಸಾಧ್ಯವಾದ ಮೋಕ್ಷ – ಇವೆರಡನ್ನೂ ಹೇಗೆ ಸಾಧಿಸಬೇಕೆಂದು ಒಂದೆಡೆಯಲ್ಲಿ ತಿಳಿಸಿ ಹೇಳಿರುವುದೇ ಭಗವದ್ಗೀತೆಯ ಒಂದು ಹೆಚ್ಚುಗಾರಿಕೆ.

ಮನುಷ್ಯನ ಚಿತ್ತವು ಇಹಲೋಕದ ಸುಖಕ್ಕಾಗಿ ಅರ್ಥಕಾಮಗಳ ಕಡೆಗೂ, ಶಾಸ್ತ್ರಬೋಧನೆಯಿಂದ ಮೋಕ್ಷದ ಕಡೆಗೂ ಹರಿಯುತ್ತದೆ. ಈ ಸಂದರ್ಭದಲ್ಲಿ ಇಂದ್ರಿಯಗಳನ್ನು ನಿಗ್ರಹಿಸಿ ಮೋಕ್ಷದ ಕಡೆಗೆ ಹರಿಯುವಂತೆ ಮಾಡುವುದು ಹೇಗೆ? ಇದು ದುಷ್ಕರವಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಹೌದು, ಇದು ದುಷ್ಕರವೇ ಆದರೂ ಹಠದಿಂದ ಅಭ್ಯಾಸ ವೈರಾಗ್ಯಗಳ ಮೂಲಕ ಇಂದ್ರಿಯ ನಿಗ್ರಹ ಸಾಧ್ಯವೆಂದು ಗೀತೆಯು ಬೋಧಿಸುತ್ತದೆ. ಇದನ್ನೇ ಶ್ರೀಕೃಷ್ಣನು "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ" (ಭಗವದ್ಗೀತಾ 6–35) ಎಂದು ಹೇಳಿ ಅಭ್ಯಾಸ, ವೈರಾಗ್ಯ ಎಂಬಿವು ಚಿತ್ತನಿಗ್ರಹಕ್ಕೆ ಆವಶ್ಯಕವೆಂದಿದ್ದಾನೆ. ಇದನ್ನೇ ಪಾತಂಜಲಯೋಗ ಸೂತ್ರವು "ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ" (ಯೋ.ಸೂ. 1–12) ಎಂದು ಹೇಳಿದೆ.

ಸಾಮಾನ್ಯವಾಗಿ ಮನುಷ್ಯನಲ್ಲಿ ರಜೋಗುಣವೇ ಅಧಿಕವಾಗಿರುತ್ತದೆ. ಅದು ಮನುಷ್ಯನನ್ನು ಅರ್ಥಕಾಮಗಳ ಕಡೆಗೇ ಬಲವಂತವಾಗಿ ದೂಡುತ್ತದೆ. ಆದ್ದರಿಂದ ಇಂದ್ರಿಯನಿಗ್ರಹವು ಕಠಿಣವೇ ಹೌದು. ಆದ್ದರಿಂದ ಭಗವದ್ಗೀತೆಯು ವಿಶೇಷವಾಗಿ ಕರ್ಮಮಾರ್ಗವನ್ನೇ ಬೋಧಿಸಿ, ಆ ಕರ್ಮವೇ ಇಂದ್ರಿಯನಿಗ್ರಹಕ್ಕೆ ಹೇಗೆ ಸಹಕಾರಿಯಾಗುತ್ತದೆಂಬುದನ್ನೂ ತಿಳಿಸಿಕೊಡುತ್ತದೆ.

ಭಗವಂತನಲ್ಲಿ ದೃಢವಾಗಿಟ್ಟಿರುವ ಭಕ್ತಿಯು ಭಕ್ತನ ಇಂದ್ರಿಯಗಳನ್ನು ಎಂದಿಗೂ ಪಾಪಕಾರ್ಯಕ್ಕೆ ದೂಡುವುದಿಲ್ಲ. ಆದ್ದರಿಂದ ಶ್ರೇಯಸ್ಸನ್ನು ಬಯಸುವ ಮನುಷ್ಯನು ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನು ನೆಲೆಗೊಳಿಸಿ ಕರ್ತವ್ಯಕರ್ಮದಲ್ಲಿ ತೊಡಗಬೇಕು.

ಆಗ ಕ್ರಮವಾಗಿ ಚಿತ್ತವು ರಾಜಸ ತಾಮಸ ಭಾವನೆಗಳನ್ನು ಹೊರಕ್ಕೆ ದೂಡಿ ಚಿತ್ತವನ್ನು ಸಾತ್ವಿಕ ಭಾವದೆಡೆಗೆ ಕರೆದೊಯ್ಯುವುದು. ಒಂದು ಮಾತನ್ನು ನೆನೆಪಿನಲ್ಲಿಡಬೇಕು. ಇಂದ್ರಿಯನಿಗ್ರಹವು ಸುಲಭವಲ್ಲ. ಭಕ್ತನು ದೃಢಚಿತ್ತನಾಗಿ ರಾಜಸ ಭಾವನೆಗಳನ್ನು ಹೊರದೂಡಲು ಪ್ರಯತ್ನಿಸುತ್ತಿದ್ದರೆ ಒಂದು ದಿನ ಇಂದ್ರಿಯಗಳನ್ನು ನಿಗ್ರಹಿಸಲು ಸಾಧ್ಯವಾಗುತ್ತದೆ. ಇದು ಭಗವಂತನ ಅನುಗ್ರಹ.

ಶ್ರೀಕೃಷ್ಣನು ಗೀತೆಯ ಮೂರನೆಯ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾನೆ :

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ । ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ (ಭ.ಗೀತಾ 3–22)

ಪಾರ್ಥ ! ಮೂರು ಲೋಕಗಳಲ್ಲಿಯೂ ನಾನು ಮಾಡಬೇಕಾದ ಕರ್ತವ್ಯ ಕರ್ಮವು ಯಾವುದೂ ಇಲ್ಲ. ಏಕೆಂದರೆ, ನನಗೆ ಅಪ್ರಾಪ್ತವಾದ ಯಾವುದನ್ನೂ ಪಡೆಯಬೇಕಾಗಿಲ್ಲ. ಆದರೂ ನಾನು ಕರ್ಮದಲ್ಲಿ ತೊಡಗಿಯೇ ಇರುತ್ತೇನೆ.

ಏವಂ ಚ ಮೋಕ್ಷವನ್ನು ಬಯಸತಕ್ಕವನು ಇಂದ್ರಿಯನಿಗ್ರಹವನ್ನು ಸಾಧಿಸದೇ ಕರ್ತವ್ಯಕರ್ಮಗಳನ್ನು ತ್ಯಜಿಸಿ ಒಮ್ಮೆಯೇ ವೈರಾಗ್ಯವನ್ನು ಪಡೆದವನೋ ಎಂಬಂತೆ ವರ್ತಿಸುವುದು ಯುಕ್ತವಲ್ಲ ಎಂಬುದೇ ಭಗವದ್ಗೀತೆಯ ಬೋಧನೆಯೆಂದು ತಿಳಿಯಬೇಕು. ಆದ್ದರಿಂದಲೇ "ಕುರು ಕರ್ಮೈವ ತಸ್ಮಾತ್ ತ್ವಂ " "ಯುಧ್ಯಸ್ವ ವಿಗತಜ್ವರಃ" ಎಂದು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಿಸಿದ್ದಾನೆ. ಆದ್ದರಿಂದಲೇ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಉಪದೇಶವು ಸಾರ್ಥಕವಾಗುತ್ತದೆ, ಮೋಕ್ಷಮಾರ್ಗದಲ್ಲಿ ಹೋಗತಕ್ಕ ಸಾಧಕನಿಗೆ ಈ ಉಪದೇಶ, ಸರ್ವರಿಗೂ ಅಲ್ಲ. "ಫಲದ ಆಶೆಯಿಲ್ಲದೇ ಯಾರು ಕರ್ಮ ಮಾಡುತ್ತಾರೆ" ಎಂದು ಕೇಳುವುದು ಅಜ್ಞಾನವಿಜೃಂಭಿತವಾದದ್ದು.

ಆದರೆ ಕರ್ಮದಿಂದಲೇ ಮೋಕ್ಷಸಾಧನೆಯಾಗುವುದಿಲ್ಲ. "ಜ್ಞಾನಾನ್ಮುಕ್ತಿರ್ನಕರ್ಮಣಾ" ಮುಂತಾದ ಸಕಲವಚನಗಳೂ ಆತ್ಮ ಜ್ಞಾನದಿಂದಲೇ ಮುಕ್ತಿಯೆಂದು ನಿಶ್ಚಯಿಸಿ ಹೇಳಿವೆ. ನಿಷ್ಕಾಮಕರ್ಮದಿಂದ ಚಿತ್ತಶುದ್ಧಿ. ನಾನಾ ಜನ್ಮಗಳಲ್ಲಿ ಮಾಡಿದ ಕರ್ಮಗಳಿಂದ ನಮ್ಮ ಚಿತ್ತವು ಕೊಳೆಯಾಗಿರುತ್ತದೆ. ಕಾಮ ಕ್ರೋಧಾದಿಗಳೇ ಚಿತ್ತಕ್ಕೆ ಅಂಟಿದ ಕೊಳೆ. ನಿಷ್ಕಾಮ ಕರ್ಮಗಳಿಂದ ಮತ್ತು ಭಗವದ್‌ಭಕ್ತಿ ಯಿಂದ ಚಿತ್ತದ ಈ ಕೊಳೆಯು ಕ್ರಮವಾಗಿ ನಶಿಸುತ್ತಾ ಹೋಗುವುದು. ಕೊಳೆಯೆಲ್ಲವೂ ತೊಲಗಿ ಹೋಗುವುದೇ ಚಿತ್ತಶುದ್ಧಿ. ಚಿತ್ತಶುದ್ಧಿಯಾದ ಮೇಲೆ ಜ್ಞಾನದ ಉದಯ. ಜ್ಞಾನವೆಂದರೆ ಆತ್ಮಜ್ಞಾನ. ಇದೇ ಬ್ರಹ್ಮಜ್ಞಾನ. ನಮ್ಮ ಆತ್ಮವೇ ಬ್ರಹ್ಮ ಎಂಬುದು ಸಕಲ ಉಪನಿಷತ್ತುಗಳ ಬೋಧನೆಯಾಗಿದೆ. ಏವಂ ಚ ನಿಷ್ಕಾಮ ಕರ್ಮ, ಭಕ್ತಿ, ಮೋಕ್ಷ ಎಂಬ ಮೂರು ಕ್ರಮವಾಗಿ ಸಾಧಿಸಬೇಕಾದವು.

ಭಕ್ತ್ಯಾ ಮಾಮಭಿಜಾನಾತಿ ಯಾವಾನ್‌ಯಶ್ಚಾಸ್ಮಿ ತತ್ತ್ವತಃ । ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥ ಗೀತಾ 18–55

ಈ ಶ್ಲೋಕದ ತಾತ್ಪರ್ಯವೇಂದರೆ – ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ಕರ್ತವ್ಯಕರ್ಮಗಳಲ್ಲಿ ತೊಡಗಬೇಕು. ನಿರ್ದಿಷ್ಟವಾದ ಫಲದ ಆಶೆಯನ್ನು ಬಿಡಬೇಕು. ಇದರಿಂದ ಕಾಮಕ್ರೋಧಾದಿ ಚಿತ್ತದ ಕೊಳೆಗಳು ನಶಿಸಿ ಚಿತ್ತವು ಶುದ್ಧವಾಗುತ್ತದೆ, ಚಿತ್ತಶುದ್ಧಿಯಿಂದ ಭಗವದ್‌ಭಕ್ತಿಯು ದೃಢವಾಗುತ್ತದೆ. ದೃಢವಾದ ಭಕ್ತಿಯೇ ಬ್ರಹ್ಮಜ್ಞಾನವೆಂಬ ಭವ್ಯಸೌಧದ ಮಹಾದ್ವಾರ. ಈ ದ್ವಾರದ ಮೂಲಕ ಒಳಗೆ ಪ್ರವೇಶಿಸುವುದೇ ಮೋಕ್ಷವೆಂದು ತಿಳಿಯಬೇಕು. ಇದನ್ನೇ ಭಗವದ್ಗೀತೆಯು ಏಳುನೂರು ಶ್ಲೋಕಗಳಿಂದ ವಿಸ್ತಾರವಾಗಿ ಉಪದೇಶಿಸಿದೆ. ಇಹ ಪರಗಳೆಂಬ ಎರಡು ಲೋಕಗಳ ಸ್ವರೂಪವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದೇ ಮನುಷ್ಯನ ಗುರಿ. ಅರ್ಥಕಾಮಗಳು ಮನುಷ್ಯ ಜನ್ಮದ ಗುರಿ ಅಲ್ಲ. ಅವು ಎಂದಿಗೂ ಪೂರ್ಣವಾಗತಕ್ಕವಲ್ಲ, ಮತ್ತೆ ಮತ್ತೆ ಸಂಸಾರಕ್ಕೆ ದೂಡುವ ಅನರ್ಥಕಾರಿಗಳು. ಆದ್ದರಿಂದ ಅವನ್ನು ಗೆದ್ದು ದೂರಕ್ಕೆ ತಳ್ಳಿ ಧರ್ಮಮಾರ್ಗದಿಂದ ಮೋಕ್ಷವನ್ನು ಸಾಧಿಸಬೇಕು ಎಂಬುದೇ ಪರಮಾರ್ಥ. ಇದನ್ನು ಸುಲಭ ಶೈಲಿಯಲ್ಲಿ ತಿಳಿಸಿಕೊಡುವ ಪುಣ್ಯಗ್ರಂಥವೇ ಭಗವದ್ಗೀತೆ.

ಭಗವದ್ಗೀತೆಯಲ್ಲಿ ಪ್ರತಿಪಾದಿಸಿದ ನಿಷ್ಕಾಮಕರ್ಮ ಯೋಗವು ಸಕಲ ಮಾನವರೂ ಪಾಲಿಸಬೇಕಾದ ನೈತಿಕಮೌಲ್ಯಗಳನ್ನು ಒಳಗೊಳ್ಳುತ್ತದೆ. ಸತ್ಯ, ಪರೋಪಕಾರ, ಅಹಿಂಸೆ, ಸ್ವಾರ್ಥಪರಿತ್ಯಾಗ, ಮುಂತಾದ ಗುಣಗಳನ್ನು ಜನರು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂಬುದು ಕರ್ಮಯೋಗದ ಪ್ರಧಾನವಾದ ನೆಲಗಟ್ಟು.

ಶ್ರೀಸ್ವರ್ಣವಲ್ಲೀ ಸಂಸ್ಥಾನದ ಮಠಾಧೀಶ್ವರರಾದ ಶ್ರೀ ಶ್ರೀಗಳವರು ನಾಲ್ಕು ವರ್ಷಗಳ ಹಿಂದೆಯೇ ಇದೆಲ್ಲವನ್ನೂ ಪರಿಶೀಲಿಸಿ ಪ್ರಜೆಗಳಲ್ಲಿ ಮೊದಲು ಸದ್‌ಗುಣಗಳು ಬೆಳೆಯಲೆಂದು ಈ ಭಗವದ್ಗೀತಾಭಿಯಾನವನ್ನು ಆರಂಭಿಸಿದ್ದಾರೆ. ಮುಖ್ಯವಾಗಿ ಭಗವದ್ಗೀತೆಯ ಪ್ರಚಾರವೇ ಈ ಕಾರ್ಯಕ್ಕೆ ಉತ್ತಮವಾದ ಸಾಧನವೆಂದು ಇದನ್ನು ಆರಿಸಿಕೊಂಡಿರುವುದು ಪ್ರಶಂಸನೀಯವಾಗಿದೆ. ಈ ಅಭಿಯಾನದ ಹೆಚ್ಚಿನ ವಿವರಗಳನ್ನು ಡಾ. ಶ್ರೀರಾಮಭಟ್ಟರು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ತಮ್ಮ ಲೇಖನದಲ್ಲಿ ತಿಳಿಸಿಕೊಟ್ಟಿದ್ದಾರೆ.

ಅಭಿಯಾನ ಎಂದರೇನು? ಈ ಶಬ್ದಕ್ಕೆ ದಂಡಯಾತ್ರೆ ಎಂಬುದು ಸಾಮಾನ್ಯವಾದ ಅರ್ಥ. ದಂಡಯಾತ್ರೆಯು ದುಷ್ಟರ ದಮನಕ್ಕಾಗಿ ಶತ್ರುಗಳ ಮೇಲೆ ರಾಜರು ಸೈನ್ಯಸಮೇತ ನುಗ್ಗುವುದೇ ಆಗಿದೆ. ಪ್ರಕೃತದಲ್ಲಿ ಗೀತೆಯು ಹೇಳಿದ ಆಸುರೀ ಸಂಪತ್ತನ್ನು ನಿಗ್ರಹಿಸುವುದು ಎಂದರ್ಥ. ಒಂದು ಸತ್ಕಾರ್ಯವನ್ನು ಆರಿಸಿಕೊಂಡು ಅದರ ಪ್ರಚಾರಕ್ಕಾಗಿ ಹಲವಾರು ಮಾರ್ಗೋಪಾಯಗಳನ್ನು ಜನತೆಗೆ ತಿಳಿಸಿಕೊಡುವುದೇ ಅಭಿಯಾನ. ಸದ್ವಿಷಯದ ಪ್ರಚಾರೋಪನ್ಯಾಸ ಎಂದು ಹೇಳಬಹುದು.

ಪರಮಪೂಜ್ಯ ಸ್ವರ್ಣವಲ್ಲೀ ಮಠಾಧೀಶರಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಭಗವದ್ಗೀತಾಭಿಯಾನಕ್ಕಾಗಿ ಕಳೆದು ನಾಲ್ಕು ವರ್ಷಗಳಿಂದ ಎಷ್ಟು ಶ್ರಮಿಸಿದ್ದಾರೆಂದೂ, ಎಷ್ಟು ಮಾರ್ಗಗಳನ್ನು ಅನುಸರಿಸಿದ್ದಾರೆಂದೂ, ಎಷ್ಟು ಕಡೆ ಸಂಚಾರ

ಮಾಡಿ ಉಪನ್ಯಾಸಗಳನ್ನು ನೀಡಿದ್ದಾರೆಂದೂ ಡಾ. ಶ್ರೀರಾಮಭಟ್ಟರು ಸ್ಫುಟವಾಗಿ ನಿರೂಪಿಸಿದ್ದಾರೆ. ಜನತೆಯ ಸಮಗ್ರಕಲ್ಯಾಣವೇ ಈ ಅಭಿಯಾನದ ಪರಮ ಲಕ್ಷ್ಯವಾಗಿರುತ್ತದೆ. ಕರ್ನಾಟಕದಲ್ಲಿ ಹಿಂದೆ ಎಂದೂ ನಡೆಯದ ಈ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿದ ಶ್ರೀ ಶ್ರೀಗಳವರಿಗೆ ನಾವು ಕೃತಜ್ಞತೆಯಿಂದ ತಲೆಬಾಗಿಸಬೇಕು.

ಈ ಭಗವದ್ಗೀತಾಭಿಯಾನದ ಸಮಾರೋಪದ ಸ್ಮರಣೆಗಾಗಿ ಬರೆದ ಕೆಲವು ಲೇಖನಗಳ ಸಂಗ್ರಹ ಈ ಸ್ಮರಣ ಸಂಚಿಕೆಯಲ್ಲಿವೆ. ವಿದ್ವಜ್ಜನರು ಬರೆದ ಈ ಲೇಖನಗಳೆಲ್ಲವೂ ಸಂಗ್ರಹಯೋಗ್ಯವಾಗಿವೆ. ಇವುಗಳಲ್ಲಿ ಒಂದು ಲೇಖನವು ಸಂಸ್ಕೃತ ಭಾಷೆಯಲ್ಲಿಯೂ ಇನ್ನೆರಡು ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿಯೂ ಇರುವುದು ಗಮನಾರ್ಹ. ಈ ಗ್ರಂಥದಲ್ಲಿರುವ ಲೇಖನಗಳಲ್ಲಿ ಶ್ರೀಯುತ ಬನ್ನಂಜೆ ಗೋವಿಂದಾಚಾರ್ಯರು ಬರೆದ "ಮನಃಶಾಸ್ತ್ರದ ವಿಸ್ಮಯ – ಭಗವದ್ಗೀತೆ" ಎಂಬ ಲೇಖನವು ವಿಸ್ಮಯಕಾರಿ ಯಾಗಿರುವುದು ಹೌದು.

ಮನ್ವಾದಿ ಕೇಚಿತ್‌ಬ್ರುವತೇ ಹ್ಯಾಸ್ತಿಕಾದಿ ತಥಾ ಪರೇ । ತಥೋಪಚರಿತರಾದ್ಯನ್ಯೇ ಭಾರತಂ ಪರಿಚಕ್ಷತೇ ॥ ಎಂಬ ಶ್ಲೋಕದ ಅರ್ಥವು ಈ ವಿಸ್ಮಯಕ್ಕೆ ಕಾರಣವಾಗಿದೆ. ಮಹಾಭಾರತವು ಅತ್ಯಂತ ವಿಸ್ತೃತವಾದ ಗ್ರಂಥ. ಇದರ ಆರಂಭ ಎಲ್ಲಿಂದ ? ಎಂಬುದೇ ಪ್ರಶ್ನೆ. ಅದು ಮನ್ವಾದಿ, ಆಸ್ತಿಕಾದಿ, ಮತ್ತು ಉಪರಿಚರಾದಿ ಎಂದು ಮೂರು ಅಭಿಪ್ರಾಯಗಳಿವೆ. ಮನ್ವಾದಿ = ಮನು ಎಂಬಾತನಿಂದ ಭಾರತದ ಆರಂಭ, ಮನುವಿನ ವಂಶದಲ್ಲಿ ಹುಟ್ಟಿದ ಮತ್ಸ್ಯಕನ್ಯೆಯು ಕೌರವ ಪಾಂಡವರ ವಂಶಕ್ಕೆ ಆದಿಯಾದವಳು. ಆಸ್ತಿಕಾದಿ = ಜನಮೇಜಯನ ಸರ್ಪಯಾಗಕ್ಕೆ ಆಸ್ತೀಕನು ಬರುತ್ತಾನೆ. ಅಲ್ಲಿಂದ ಭರತದ ಆರಂಭ ಉಪರಿಚರಾದಿ = ಉಪರಿಚರನೆಂಬ ವಸುವಿನ ವಂಶದಲ್ಲಿ ಹಿಂದೆ ಹೇಳಿದ ಮತ್ಸ್ಯಕನ್ಯೆಯ ಜನನ. ಈ ಮೂರು ಪ್ರಕರಣಗಳಿಂದ ಮಹಾಭಾರತದ ಆರಂಭವಾಗಿದೆ ಎಂದು ಮತಭೇದಗಳಿವೆ. ಇದು ನಾನು ತಿಳಿದುಕೊಂಡ ಅರ್ಥ. ಶ್ರೀಮಾನ್ ಬನ್ನಂಜೆಯವರು ಈ ಶ್ಲೋಕಕ್ಕೆ ಹೇಳುವ ಅರ್ಥವು ಬೇರೆ, ಅವರ ಲೇಖನವನ್ನು ಓದಿ ನೋಡಿ.

ಶ್ರೀಮದ್ ಭಗವದ್ಗೀತಾ ಅಭಿಯಾನದ ಸಮಾರೋಪದ ಶುಭ ಸಂದರ್ಭದ ನೆನಪಿಗಾಗಿ ಪ್ರಕಟವಾಗುತ್ತಿರುವ ಗ್ರಂಥಕ್ಕೆ ಒಂದು ಸಂಪಾದಕೀಯವನ್ನು ಬರೆದುಕೊಡಬೇಕೆಂದು ಶ್ರೀ ಸ್ವರ್ಣವಲ್ಲೀ ಶ್ರೀ ಶ್ರೀಗಳವರು ನನಗೆ ಆದೇಶಿಸಿದರು. ಅವರ ಆದೇಶದಂತೆ ಈ ಎಲ್ಲ ಲೇಖನಗಳನ್ನು ಅವಲೋಕಿಸಿ, ಈ ಸಂಪಾದಕೀಯವನ್ನು ಬರೆಯಬೇಕಾಯಿತು. ಈ ಪ್ರಕಾರದಲ್ಲಿ ನನ್ನನ್ನು ಅನುಗ್ರಹಿಸಿದ ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಪಾದಗಳಿಗೆ ಭಕ್ತಿಪೂರ್ವಕವಾದ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಭಗವದ್ಗೀತಾ ಅಭಿಯಾನ

ಐದನೆಯ ವರ್ಷಕ್ಕೆ ಪದಾರ್ಪಣ ಮಾಡಿದ (ಅಕ್ಟೋಬರ್ 2007ರಿಂದ ಜನವರಿ 2012 ರವರೆಗೆ) ನಮ್ಮ ನಾಡಿನಾದ್ಯಂತ ತುಂಬು ಉತ್ಸಾಹ, ಶ್ರದ್ಧೆ, ಭಕ್ತಿಗಳಿಂದ ನಡೆದ ಅವಿಸ್ಮರಣೀಯ ವಿದ್ಯಮಾನ ಶ್ರೀಮದ್ಭಗವದ್ಗೀತಾ ಅಭಿಯಾನ. ನಮ್ಮ ದೇಶದ ಜನಮಾನಸ ದಿಗಿಲುಗೊಂಡಿದೆ. ಕಾರಣ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಶೀಲವಿಲ್ಲದ ಆಚಾರ, ದುಶ್ಚಟ, ಮೌಢ್ಯ, ಮತಾಂಧತೆ, ರಾಷ್ಟ್ರಾಭಿಮಾನದ ಕೊರತೆ, ಭಯೋತ್ಪಾದನೆ ಇವು ದೇಶದ ಸ್ವಾಸ್ಥ್ಯವನ್ನೇ ಕದಡಿದೆ. ಈ ಹಿನ್ನೆಲೆಯಲ್ಲಿ ಪರಿಸರ ರಕ್ಷಣೆಗಾಗಿ ಟೊಂಕಕಟ್ಟಿ "ಹಸಿರು ಸ್ವಾಮೀಜಿ" ಎಂದೇ ಪ್ರಸಿದ್ಧರಾದ ಉತ್ತರಕನ್ನಡ ಜಿಲ್ಲೆಯ ಶಿರಸಿ ಸಮೀಪದ ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧೀಶರಾದ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಶ್ರೀಮದ್ ಭಗವದ್ಗೀತೆಯ ದಿವ್ಯ ಸಂದೇಶವನ್ನು ನಾಡಿನುದ್ದಕ್ಕೆ ಸಾರುವ ಮಹಾಸಂಕಲ್ಪವನ್ನು ಮಾಡಿದರು. "ವಿಕೃತ ಮನಸ್ಸು ಪ್ರಪಂಚದಾದ್ಯಂತ ಸೃಷ್ಟಿಸಿದ ತಲ್ಲಣಕ್ಕೆ, ಮತಧರ್ಮವನ್ನು ಮೀರಿದ ಆದರೆ ಎಲ್ಲ ಧರ್ಮಗಳ ಸಾರವನ್ನು ಹೊತ್ತ ಭಗವದ್ಗೀತೆಯ ದಿವ್ಯ ಸಂದೇಶವೇ ಪರಿಹಾರ" ಎನ್ನುವುದು ಶ್ರೀಗಳವರ ಅಚಲ ನಿರ್ಧಾರ. ಅಲ್ಲದೆ ಸಮಷ್ಟಿಯ ಅವಿಭಾಜ್ಯ ಅಂಗವಾದ ವ್ಯಕ್ತಿಯ ಸ್ವದೌರ್ಬಲ್ಯಕ್ಕೆ ದಿವ್ಯೌಷಧಿ ಭಗವದ್ಗೀತೆ. ಅದಕ್ಕಾಗಿಯೇ ಗೀತೆಯ "ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ..." ಎನ್ನುವ ಊರ್ಜಸ್ವೀ ವಾಣಿಯನ್ನು ಧ್ಯೇಯವಾಕ್ಯವಾಗಿಸಿಕೊಂಡು ಶ್ರೀಗಳವರು ಮಿಂಚಿನ ಸಂಚಾರದ ಅಭಿಯಾನವನ್ನು ಆರಂಭಿಸಿದರು. ನೈತಿಕ ಮೌಲ್ಯಗಳ ತಳಪಾಯದಲ್ಲಿ ವ್ಯಕ್ತಿತ್ವ ಪರಿಷ್ಕಾರ ಮತ್ತು ವಿಕಾಸ, ಸಾಮಾಜಿಕ ಸ್ವಾಸ್ಥ್ಯ ಸಂಪಾದನೆ ಮತ್ತು ರಾಷ್ಟ್ರೀಯ ಭಾವೈಕ್ಯ ಈ ಅಭಿಯಾನದ ಮುಖ್ಯ ಲಕ್ಷ್ಯ.

ಈ ಸದ್ಭಾವನೆ ಮತ್ತು ಮಹದುದ್ದೇಶಗಳಿಂದ ನಾಡಿನ ಎಲ್ಲ ಚಿಂತಕರು, ವಿದ್ವಾಂಸರು, ಸಾಧು–ಸಂತರು, ಸಮಾಜ ಸೇವಕರು, ಸಾರ್ವಜನಿಕರನ್ನು ನೇರವಾಗಿ, ವ್ಯವಸ್ಥಿತವಾಗಿ ಸಂಪರ್ಕಿಸುತ್ತ ಅಭಿಯಾನವನ್ನು ರೂಪಿಸಿ ಮುನ್ನಡೆಸಿದ ಮಹತ್ಕಾರ್ಯ ಶ್ರೀಗಳವರದು. ನಾಡಿನ ಜನತೆ ಜಾತಿ, ಮತ, ಪಂಥ, ಲಿಂಗ ಭೇದವನ್ನು ಮೀರಿ ಈ ಅಭಿಯಾನಕ್ಕೆ ಕೈಜೋಡಿಸಿದ್ದು, ಅಭಿಯಾನ ಯಶಸ್ವಿಯಾಗುವುದಕ್ಕೆ ಮುಖ್ಯ ಕಾರಣ. ನಾಲ್ಕು ವರ್ಷಗಳಿಗೂ ಮೀರಿದ ಈ ಅಭಿಯಾನದಲ್ಲಿ ಶ್ರೀಗಳವರು ಇದೊಂದು ತಪಸ್ಸು ಎನ್ನುವಂತೆ ತಾವೂ ತೊಡಗಿಸಿಕೊಂಡು ಜನತೆಯನ್ನೂ ಪ್ರೇರೇಪಿಸಿದರು.

ಈ ಅಭಿಯಾನವು ಐದು ಮುಖಗಳಲ್ಲಿ ಭಗವದ್ಗೀತೆಯನ್ನು ಆಬಾಲ-ವೃದ್ಧ ಜನತೆಗೆ ತಲುಪಿಸುವ ಯಶಸ್ವೀ ಪ್ರಯೋಗವನ್ನು ಕೈಗೊಂಡಿತು. ಕಂಠಪಾಠ, ಉಪನ್ಯಾಸ, ಕಲಾಪ್ರಕಾರ, ಗೀತಾವೈಭವ, ಗೀತಾಪುಸ್ತಕ ವಿತರಣೆ ಇವು ಅಭಿಯಾನದ ಪಂಚಮುಖಗಳು.

ಕಂಠಪಾಠ : ವಿಶೇಷವಾಗಿ ಮಕ್ಕಳಿಗೆ ಮಾತೆಯರಿಗೆ ಗೀತೆಯ 14 ಮತ್ತು 15ನೇ ಅಧ್ಯಾಯಗಳನ್ನು ಕಂಠಪಾಠ ಮಾಡಿಸಲಾಯಿತು. ಇದಕ್ಕಾಗಿ ಈ ಅಧ್ಯಾಯಗಳ ಸುಶ್ರಾವ್ಯ ಗಾಯನದ ಧ್ವನಿಸುರುಳಿ ಮತ್ತು ಮುದ್ರಿಕೆಗಳನ್ನು ಹೊರತರಲಾಗಿದೆ. ಇವು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾದದ್ದು ಜನಪ್ರಿಯತೆಯ ದ್ಯೋತಕ. ಒಟ್ಟು 30 ಜಿಲ್ಲೆಗಳಲ್ಲಿ 30 ಸಾವಿರಕ್ಕೂ ಹೆಚ್ಚು ಕಂಠಪಾಠ ಕೇಂದ್ರಗಳು ನಡೆದದ್ದು ವಿಶೇಷ. ಪ್ರಾಥಮಿಕ, ಪ್ರೌಢ ಮತ್ತು ಸಾರ್ವಜನಿಕ ಈ ಮೂರು ನೆಲೆಗಳಲ್ಲಿ ಕಂಠಪಾಠ ಕೇಂದ್ರಗಳನ್ನು ರೂಪಿಸಲಾಗಿತ್ತು.

ಉಪನ್ಯಾಸ : ಸಂತರು, ವಿದ್ವಾಂಸರು ನಾಡಿನ ಉದ್ದಗಲಕ್ಕೆ ಉಪನ್ಯಾಸಗಳನ್ನು ನಡೆಸಿಕೊಟ್ಟರು. ಒಂದು ದಿನದ, ಮೂರು ದಿನಗಳ ಹಾಗೂ ಏಳು ದಿನಗಳ (ಸಪ್ತಾಹ) ಉಪನ್ಯಾಸಗಳು ಗೀತೆಯ ಸಂದೇಶವನ್ನು ತಲುಪಿಸುವಲ್ಲಿ ಯಶಸ್ವಿಯಾದವು.

ಕಲಾಪ್ರಕಾರ : ನೃತ್ಯರೂಪಕ, ಯಕ್ಷಗಾನ, ಹರಿಕಥೆಗಳ ಮೂಲಕ ಗೀತೆಯ ವಸ್ತು ಮತ್ತು ತತ್ತ್ವವನ್ನು ಪ್ರತಿಬಿಂಬಿಸಲಾಯಿತು. ಇದಕ್ಕಾಗಿಯೇ ಭಗವದ್ಗೀತೆಯನ್ನಾಧರಿಸಿದ ಸಾಹಿತ್ಯಸೃಷ್ಟಿ ಮತ್ತು ಕಲಾವಿದರ ತರಬೇತಿಯನ್ನು ಪರಿಣಿತರಿಂದ ರೂಪಿಸಲಾಗಿತ್ತು.

ಗೀತಾವೈಭವ : ಭಗವದ್ಗೀತೆ ಭಾರತೀಯ ಭಾಷೆಗಳಷ್ಟೇ ಅಲ್ಲದೆ ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಅನುವಾದಗೊಂಡಿದೆ. ಪ್ರಪಂಚದ ಚಿಂತಕರೂ ವಿಜ್ಞಾನಿಗಳೂ ಗೀತೆಯ ವಿಚಾರಧಾರೆಯನ್ನು ಮೆಚ್ಚಿಕೊಂಡಾಡಿದ್ದಾರೆ. ಗೀತಾ ಗ್ರಂಥದ ಈ ವಿರಾಟ್ ಸ್ವರೂಪವನ್ನು ಪ್ರದರ್ಶಿಸುವ ಪ್ರಯತ್ನ ಇದು. ಸುಮಾರು ಒಂದು ಸಾವಿರ ಗೀತಾ ಸಾಹಿತ್ಯದ ಪ್ರದರ್ಶಿನಿಯು ಅಭಿಯಾನದ ಉದ್ದಕ್ಕೂ ಮೆಚ್ಚುಗೆಗೆ ಪಾತ್ರವಾಗಿದೆ.

ಗೀತಾಪುಸ್ತಕ ವಿತರಣೆ : ಪ್ರತಿ ಮನೆಗಳಲ್ಲೂ ಭಗವದ್ಗೀತೆ ಇರಬೇಕು. ಈ ಉದ್ದೇಶದ ಹಿನ್ನೆಲೆಯಲ್ಲಿ ಸುಮಾರು 15 ಲಕ್ಷಕ್ಕೂ ಮೀರಿ ಪುಸ್ತಕ ವಿತರಣೆ ಆಗಿರುವುದು ಅಭಿಯಾನದ ಯಶಸ್ಸಿನ ದ್ಯೋತಕ.

ಇಂಥ ಬೃಹತ್ ಅಭಿಯಾನವನ್ನು ಯಶಸ್ವಿಗೊಳಿಸುವಲ್ಲಿ ಸಾವಿರ ಸಾವಿರ ಕಾರ್ಯಕರ್ತರು ದುಡಿದಿದ್ದಾರೆ. ಎಲ್ಲ ಸಾಧು-ಸಂತರು, ಮಠಾಧೀಶರುಗಳನ್ನು ಒಳಗೊಂಡ ರಾಜ್ಯಮಟ್ಟದ ಮಾರ್ಗದರ್ಶಕ ಸಮಿತಿ, ನ್ಯಾಯಮೂರ್ತಿ ಶ್ರೀ ಎಂ. ರಾಮಾ ಜೋಯಿಸ್ ಅವರ ಅಧ್ಯಕ್ಷತೆಯಲ್ಲಿ ನಾಡಿನ ಗಣ್ಯರನ್ನೊಳಗೊಂಡ 'ರಾಜ್ಯ ಸಮಿತಿ' ಮತ್ತು ನಾಡಿನ ವಿದ್ವಾಂಸರನ್ನೊಳಗೊಂಡ 'ವಿದ್ವತ್ ಸಮಿತಿ' ಅಭಿಯಾನದ ಸಮಗ್ರ ರೂಪುರೇಷೆಯನ್ನು ನಿರ್ಮಿಸಿ ಮುನ್ನಡೆಸಿದೆ. ರಾಜ್ಯಮಟ್ಟದ ಈ ಮೂರು ಸಮಿತಿಗಳ ಅಡಿಯಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಮಿತಿಗಳು ರಚಿತವಾಗಿ ಗೀತಾಭಿಯಾನವು

ಸಂಪನ್ನಗೊಂಡಿತು. ಎಲ್ಲ ಜಿಲ್ಲೆಗಳಲ್ಲಿ ಅಭಿಯಾನಕ್ಕೆ ಪೂರ್ವಭಾವಿಯಾಗಿ ಜಿಲ್ಲಾಸಮಿತಿ ರಚನೆ, ಕಾರ್ಯಕರ್ತರ ಸಮಾವೇಶ ಹಾಗೂ ಶಿಕ್ಷಕ–ಉಪನ್ಯಾಸಕರ ಪ್ರಶಿಕ್ಷಣ ಶಿಬಿರಗಳು ನಡೆದವು. ಶಿಕ್ಷಕರ ಪ್ರಶಿಕ್ಷಣ ನೀಡುವ ಜವಾಬ್ದಾರಿಯನ್ನು ಶ್ರೀ ಸ್ವರ್ಣವಲ್ಲೀ ಮಠದ ಮಾತೃ ಮಂಡಳಿಯು ವಹಿಸಿದೆ. ಉಪನ್ಯಾಸಕರ ತರಬೇತಿಗೆ ಅಗತ್ಯವಾದ ಕೈಪಿಡಿಯನ್ನು ನಿರ್ಮಿಸಿ ಒದಗಿಸಲಾಗಿತ್ತು.

ವಿಚಾರ ಸಂಕಿರಣ: ಅಭಿಯಾನದ ಅಂಗವಾಗಿ ಹಲವು ವಿಚಾರ ಸಂಕಿರಣಗಳು ನಡೆದವು.

1. ಬೆಂಗಳೂರಿನ ನಿಮ್ಹಾನ್ಸ್ ಸಹಯೋಗದಲ್ಲಿ 'ಭಗವದ್ಗೀತೆ ಮತ್ತು ಮಾನಸಿಕ ಸ್ವಾಸ್ಥ್ಯ' ರಾಷ್ಟ್ರೀಯ ವಿಚಾರ ಸಂಕಿರಣ.
3. ಮಂಗಳೂರಿನಲ್ಲಿ 'ಭಗವದ್ಗೀತೆ ಮತ್ತು ನಿರ್ವಹಣ ಶಾಸ್ತ್ರ' ವಿಚಾರ ಸಂಕಿರಣ.
3. ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಸಹಯೋಗದಲ್ಲಿ 'ಭಗವದ್ಗೀತೆ ಮತ್ತು ವಚನಸಾಹಿತ್ಯ–ಸರ್ವ ಸಮನ್ವಯ ದೃಷ್ಟಿ' ವಿಚಾರ ಸಂಕಿರಣ.
4. ಬೆಂಗಳೂರಿನ ಆಯುಷ್ ಸಂಸ್ಥೆಯ ಸಹಯೋಗದಲ್ಲಿ 'ಭಗವದ್ಗೀತೆ ಮತ್ತು ಆಯುರ್ವಿಜ್ಞಾನ' ವಿಚಾರ ಸಂಕಿರಣ.

ನಾಡಿನ ಪತ್ರಿಕೆಗಳು ಮತ್ತು ದೂರದರ್ಶನ ಮಾಧ್ಯಮವು ಸುದೀರ್ಘ ಕಾಲ ನಡೆದ ಅಭಿಯಾನದ ಸಚಿತ್ರ ವಿವರಗಳನ್ನು ಉದ್ದಕ್ಕೂ ಜನಮಾನಸದಲ್ಲಿ ಬಿಂಬಿಸಿದ ಕಾರ್ಯವು ಶ್ಲಾಘನೀಯ.

ಈ ಸಮಗ್ರ ಗೀತಾಭಿಯಾನಕ್ಕೆ ಕಳಸವಿಟ್ಟಂತೆ ದಿನಾಂಕ 8–01–2012 ಭಾನುವಾರ ರಾಜಧಾನಿಯಾದ ಬೆಂಗಳೂರಿನ ಅರಮನೆ ಮೈದಾನದಲ್ಲಿ, ಎಲ್ಲ ಜಿಲ್ಲೆಗಳ ಪ್ರತಿನಿಧಿಗಳನ್ನೊಳಗೊಂಡ ಜನತಾ ಸಮೂಹದ ಸಮ್ಮುಖದಲ್ಲಿ ರಾಜಮಟ್ಟದ "ಮಹಾಸಮರ್ಪಣೆ" ನಡೆದಿದೆ. ಈ ಹೊತ್ತಿನಲ್ಲಿ ಸಿಂಹಾವಲೋಕನ ಕ್ರಮದಲ್ಲಿ ಅಭಿಯಾನದ ಜಿಲ್ಲಾವಾರು ಸಂಕ್ಷಿಪ್ತ ಮಾಹಿತಿಯನ್ನು ಈ ಮುಂದೆ ಒದಗಿಸಲಾಗಿದೆ. ಈ ವರದಿಯು ಶ್ರೀ ಮಠದ "ಸ್ವರ್ಣವಲ್ಲೀಪ್ರಭಾ" ಮಾಸಪತ್ರಿಕೆಯಲ್ಲಿ ಆಯಾ ಕಾಲಕ್ಕೆ ಪ್ರಕಟವಾದ ವರದಿಗಳನ್ನು ಬಹುತೇಕವಾಗಿ ಆಧರಿಸಿದೆ. ವಿಸ್ತಾರ ಭಯದಿಂದಾಗಿ ಜಿಲ್ಲಾ ತಾಲ್ಲೂಕು ಸಮಿತಿಗಳ ಸಮಗ್ರ ಮಾಹಿತಿಯನ್ನೂ ಕಾರ್ಯಕರ್ತರ ಯೋಗದಾನವನ್ನೂ ಇಡಿಯಾಗಿ ನೀಡಲಾಗುತ್ತಿಲ್ಲ. ಜಗದ್ಗುರು ಪರಮಾತ್ಮನ ಈ ಕೈಂಕರ್ಯದಲ್ಲಿ ಪಾಲುಗೊಂಡ ಸಮಸ್ತ ಜನತೆಗೆ

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನವು ಗುರುದೇವತಾನುಗ್ರಹದಿಂದ ಸನ್ಮಂಗಳವುಂಟಾಗಲೆಂದು ಹಾರೈಸಿದೆ.

– ಸಹ ಸಂಪಾದಕರು

ಪ್ರಕಾಶಕರ ನುಡಿ

ಭಾರತದ ಸಾಂಸ್ಕೃತಿಕ ಪ್ರಪಂಚದ ಮಹಾಚೇತನವಾದ ಆದಿಶಂಕರಾಚಾರ್ಯರು (ಕ್ರಿ.ಶ. 788–820) ಈ ಪುಣ್ಯಭೂಮಿಯಲ್ಲಿ ಅವತರಿಸಿ ಅದ್ವೈತ ಮತದ ಸಂಸ್ಥಾಪನಾ ಕಾರ್ಯ ಮಾಡಿರುವುದು ನಮ್ಮ ಭಾಗ್ಯ ವಿಶೇಷವಾಗಿದೆ. ಆದಿಶಂಕರರ ಅನುಗ್ರಹದಿಂದ ಕಾಶಿಯ ದಶಾಶ್ವಮೇಧ ಘಾಟಿನಲ್ಲಿ ಆರಂಭವಾದ ಸ್ವರ್ಣವಲ್ಲೀ ಮಠವು ಮುಂದೆ ಕ್ರಮವಾಗಿ ಉಜ್ಜಯಿನಿ, ಗೋಕರ್ಣ, ಕಡತೋಕೆ, ಸಹಸ್ರಲಿಂಗ ಮತ್ತು ಇಂದಿನ ಸ್ವರ್ಣವಲ್ಲಿಗೆ ಬಂದು ಧರ್ಮದೀಪವಾಗಿ ಬೆಳಗುತ್ತಲಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸುಂದರ ನಿಸರ್ಗ ಪರಿಸರದ ರಮ್ಯ ತಾಣದಲ್ಲಿರುವ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನವು ಅದ್ವೈತ ಮತದ ಮಹಾಗುರುಪೀಠವಾಗಿ ಪ್ರಸಿದ್ಧವಾಗಿದೆ. ಸುಮಾರು ಹನ್ನೆರಡು ನೂರು ವರ್ಷಗಳ ಭವ್ಯವಾದ ಇತಿಹಾಸ ಶ್ರೀಮಠಕ್ಕಿದೆ. ಶ್ರೀ ವಿಶ್ವವಂದ್ಯ ಸರಸ್ವತಿಗಳಿಂದ ಆರಂಭವಾಗಿ ಇಂದಿನ ಪೀಠಾಧಿಪತಿಗಳಾದ ಶ್ರೀ ಗಂಗಾಧರೇಂದ್ರ ಸರಸ್ವತಿಗಳವರೆಗೆ 54 ಯತಿವರ್ಯರು ಶ್ರೀಮಠದ ಸಂಸ್ಕೃತಿ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಸಮಸ್ತ ಗೋಕರ್ಣಮಂಡಲಕ್ಕೆ ಗುರುಪೀಠವಾಗುವುದರ ಜೊತೆಗೆ ಘಟ್ಟದ ಮೇಲಿನ ಹದಿನಾರು ಸೀಮೆಗಳು ಹಾಗೂ ಘಟ್ಟದ ಕೆಳಗಿನ ಕೆಲಭಾಗಗಳು ಶ್ರೀಮಠದ ವ್ಯಾಪ್ತಿಯಲ್ಲಿದ್ದು ನಾಡಿನಾದ್ಯಂತ ಅಪಾರ ಸಂಖ್ಯೆಯ ಭಕ್ತಕೋಟಿಯನ್ನು ಶ್ರೀಮಠವು ಪಡೆದಿದೆ.

ಪ್ರಸ್ಥಾನತ್ರಗಳಲ್ಲಿ ಪ್ರಮುಖವಾದ ಭಗವದ್ಗೀತೆ ಭಾರತೀಯ ಸಂಸ್ಕೃತಿಯ ಸಾರ ಸರ್ವಸ್ವವಾಗಿದೆ. ವೇದ, ಉಪನಿಷತ್ತುಗಳ ತತ್ವವಿಚಾರಗಳನ್ನು ತಿಳಿಯಾಗಿ ನಿರೂಪಿಸುವ ಭಗವದ್ಗೀತೆ ಕೃಷ್ಣ ಪರಮಾತ್ಮನ ದಿವ್ಯವಾಣಿಯಾಗಿದೆ. ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣೀ ಸಂಗಮವಾಗಿ ಸಂಶೋಭಿಸುವ ಗೀತೆಯನ್ನು ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಆಳವಾಗಿ ಅಭ್ಯಸಿಸಿ ಅದನ್ನು ಅದ್ವೈತ ವ್ಯಾಖ್ಯಾನ ಪದ್ಧತಿಯಲ್ಲಿ ಹೊಸ ಚಿಂತನೆಗಳೊಂದಿಗೆ ಭಕ್ತಿಕೋಟಿಗೆ ಉಪದೇಶಿಸುತ್ತಿದ್ದಾರೆ. ಅವರ ಗೀತಾವ್ಯಾಖ್ಯಾನ ಅದ್ವೈತ ತತ್ತ್ವಮೀಮಾಂಸೆಯ ಮಹೋನ್ನತಿಯನ್ನೂ, ಅಧ್ಯಾತ್ಮ ವಿದ್ಯೆಯ ಸಾರವನ್ನೂ ಒಳಗೊಂಡಿದೆ.

ಭಗವದ್ಗೀತೆಯ ಪ್ರವಚನ, ಪ್ರಸಾರ, ಪ್ರಕಟಣೆ, ವ್ಯಾಖ್ಯಾನಗಳನ್ನು ನಿರಂತರವಾಗಿ ನಡೆಸುತ್ತಲಿರುವ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಮನುಷ್ಯನ ಅಂತರಂಗದ ವಿಕಾಸ ಭಗವದ್ಗೀತೆಯಿಂದ ಆಗುತ್ತದೆ ಎಂದು ಬಲವಾಗಿ ಪ್ರತಿಪಾದಿಸುತ್ತಲಿದ್ದಾರೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಭಗವದ್ಗೀತಾ ಅಭಿಯಾನ ನಡೆಸಿದ ಶ್ರೇಯಸ್ಸು ಶ್ರೀಗಳದು. ಬೆಳೆಯುತ್ತಿರುವ ಮಕ್ಕಳಲ್ಲಿ ಭಗವದ್ಗೀತಾ ಕಂಠಪಾಠ ಮಾಡಿಸಿ ಪ್ರತಿನಿತ್ಯ ಗೀತಾಪಠಣ ಆಗುವಂತೆ ಮಾಡಿದ್ದಾರೆ. 'ಗೀತಾವೈಭವ' ಪುಸ್ತಕ ಪ್ರದರ್ಶನ ಗೀತಾ ಅಭಿಯಾನದ ವಿಶೇಷ

ಆಕರ್ಷಣೆಯಾಗಿದೆ. ಭಗವದ್ಗೀತೆಯ ಐವತ್ತು ಲಕ್ಷ ಪ್ರತಿಗಳು ಕನ್ನಡಿಗರ ಕೈ ಸೇರುವಂತೆ ಮಾಡಿದ್ದಾರೆ. ಈ ಅಭಿಯಾನದಲ್ಲಿ ಮುಸ್ಲಿಂ, ಕ್ರೈಸ್ತರನ್ನೊಳಗೊಂಡಂತೆ ಸಮಾಜದ ಎಲ್ಲ ವರ್ಗದ ಜನರು ಜಾತಿ ಮತ ಭೇದವಿಲ್ಲದೆ ಭಾಗವಹಿಸಿದ್ದಾರೆ. ಭಗವದ್ಗೀತೆಯನ್ನು ಜೈಲುಗಳಲ್ಲಿರುವ ಖೈದಿಗಳಿಗೂ ನೀಡಿ ಅವರ ಮನಃಪರಿವರ್ತನೆ ಆಗುವಂತೆ ಮಾಡುವಲ್ಲಿ ಶ್ರೀಗಳು ಶ್ರಮಿಸಿದ್ದಾರೆ.

'ಭಗವದ್ಗೀತಾ ಅಭಿಯಾನ' ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಭಗವದ್ಗೀತೆಯ ಅಭಿಯಾನದ ಮಹಾಸಮರ್ಪಣೆಯ ಸಮಾರಂಭ ಕನ್ನಡ ನಾಡಿನ ರಾಜಧಾನಿ ಬೆಂಗಳೂರಲ್ಲಿ 8 ಜನವರಿ 2012ರಂದು ಜರುಗುತ್ತಿರುವ ಸಂದರ್ಭದಲ್ಲಿ 'ಗೀತಾಜ್ಯೋತಿ' ಲೋಕಾರ್ಪಣೆ ಆಗುತ್ತಿರುವದು ಹರ್ಷದಾಯಕ ಸಂಗತಿಯಾಗಿದೆ ಇದರ ಪ್ರಧಾನ ಸಂಪಾದಕರಾದ ಮಹಾಮಹೋಪಾಧ್ಯಾಯರಾದ ವಿದ್ವಾನ್ ಎನ್. ರಂಗನಾಥ ಶರ್ಮರು. ಸಂಪಾದಕ ಮಂಡಳಿಯ ಸದಸ್ಯರು ಗೀತಾ ಚಿಂತನೆಯ ಲೇಖನಗಳನ್ನು ಸಂಪಾದಿಸುವಲ್ಲಿ ಪ್ರಕಟಿಸುವಲ್ಲಿ ನೆರವಾಗಿದ್ದಾರೆ.

ಭಗವದ್ಗೀತೆಯ ಮಹೋನ್ನತಿಯನ್ನು ಕುರಿತು ಅನೇಕ ಗಣ್ಯ ವಿದ್ವಾಂಸರು ಲೇಖನಗಳನ್ನು ಬರೆದು ಕೊಟ್ಟು ಉಪಕರಿಸಿದ್ದಾರೆ. ಅವರಿಗೆಲ್ಲ ಕೃತಜ್ಞತೆಯ ವಂದನೆಗಳು.

ಈ ಗ್ರಂಥದ ಪ್ರಕಟಣೆಗೆ ಮಾರ್ಗದರ್ಶನ ಮಾಡಿದ ಪರಮಪೂಜ್ಯ ಶ್ರೀಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರಿಗೆ ನಮ್ಮ ಭಕ್ತಿಪೂರ್ವಕ ನಮನಗಳು.

ಗೀತಾಜ್ಯೋತಿಯ ಓದು ಎಲ್ಲರ ಹೃದಯಗಳಲ್ಲಿ ಭಗವಂತನ ದಿವ್ಯೋಪದೇಶದ ಪ್ರಭೆಯನ್ನು ಹರಡುವಂತಾಗಲಿ ಎಂದು ನಾವು ಮನಸಾರೆ ಹಾರೈಸುತ್ತೇವೆ.

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ

ಡಾ. ಜಿ.ಎಂ. ಹೆಗಡೆ

ಶ್ರೀ ಆರ್.ವಿ. ಭಾಗ್ವತ

ಪರಿವಿಡಿ

ಕ್ರ.ಸಂ.	ವಿಷಯ	ಪು.ಸಂ.
1.	ಭಗವದ್‌ಗೀತೆಯಲ್ಲಿ ಜ್ಞಾನಯೋಗ ವ್ಯವಸಾಯಾತ್ಮಕ ಬುದ್ಧಿಗೆ ಭಗವದ್ಗೀತೆ ಪ್ರೇರಕ – ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು	1
2.	ಶ್ರೀ ಮದ್ಭಗವದ್ಗೀತೆಯಲ್ಲಿ ಉಪಾಸನೆ – ಪ.ಪೂ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು	8
3.	ಮನಃಶಾಸ್ತ್ರದ ವಿಸ್ಮಯ : ಭಗವದ್ಗೀತೆ – ವಿದ್ಯಾವಾಚಸ್ಪತಿ ಬನ್ನಂಜೆ ಶ್ರೀ ಗೋವಿಂದಾಚಾರ್ಯ	13
4.	ವಿಶ್ವರೂಪ – ವಿಶ್ವಸಂದೇಶ – ಡಾ. ಕೆ.ಎಸ್. ನಾರಾಯಣಾಚಾರ್ಯ	18
5.	ಭಗವದ್ಗೀತೆಯಲ್ಲಿ ಆತ್ಮಸ್ವರೂಪ – ವಿದ್ವಾನ್ ಅನಂತ ಶರ್ಮಾ, ಭುವನಗಿರಿ	22
6.	ಗೀತೆಯ ಧರ್ಮ ಪರಿಕಲ್ಪನೆ – ವಿದ್ವಾನ್ ರಾಮಚಂದ್ರ ಶರ್ಮಾ, ತ್ಯಾಗಲಿ	26
7.	ಪ್ರಜ್ಞಾವಾದ, ವೇದವಾದಗಳ ನಡುವಿನ ನಡೆ ವ್ಯಕ್ತಿತ್ವ ವಿಕಸನಕ್ಕೆ ಮನೋವೈಜ್ಞಾನಿಕ ಗೀತಾ ಸಂದೇಶ – ಪ್ರೊ. ರಾಮಚಂದ್ರ ಜಿ. ಭಟ್ಟ, ಕೋಟೆಮನೆ	31
8.	ಗೀತೋಪದಿಷ್ಟ ರಾಜಧರ್ಮ ಭಗವದ್ಗೀತೆಯಲ್ಲಿ ಸಾರ್ವಕಾಲಿಕತೆ – ಶ್ರೀ ಎಸ್.ಆರ್. ರಾಮಸ್ವಾಮಿ	40
9.	ಗೀತೆಯಲ್ಲಿ ನಿರ್ವಹಣಾ ಶಾಸ್ತ್ರದ ಹೊಳಹುಗಳು – ಡಾ. ಎಂ. ಪ್ರಭಾಕರ ಜೋಶಿ	51

10. 'ಭಗವದ್ಗೀತೆ' ತಿಳಿಸುವ ಕಾರ್ಯ-ಕಾರಣ ಸಂಬಂಧ
– ದ್ವಿವೇದೀವಿದ್ವಾನ್ ಕೊರ್ಗಿ ವೆಂಕಟೇಶ್ವರ ಉಪಾಧ್ಯಾಯ 55

11. ಭಗವದ್ಗೀತೆ ಹಾಗೂ ಆಯುರ್ವಿಜ್ಞಾನ
– ವೈದ್ಯ ಸಾಂಬಮೂರ್ತಿ, ಗಾಯತ್ರಿ 60

12. ಗೀತೆ ರೂಪಿಸಿದ ಪ್ರಪತ್ತಿ
– ಪ್ರೊ. ಕೆ.ಎಸ್. ಕಣ್ಣನ್ 75

13. ಗೀತೆಯ ಮೌಲ್ಯ
– ಡಾ. ಮೈಖೇಲ್ 81

14. ಭಗವದ್ಗೀತೆಯಲ್ಲಿ ಯೋಗ
– ಡಾ. ಎಚ್.ವಿ. ನಾಗರಾಜರಾವ್ 85

15. ಗೀತೆಯ ಅಧ್ಯಾಯ ಶೀರ್ಷಿಕೆ
– ವಿದ್ವಾನ್ ಗಂಗಾಧರ ವಿ. ಭಟ್ 89

16. ಭಗವದ್ಗೀತೆಯಲ್ಲಿ ಲೋಕಸಂಗ್ರಹ
– ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ 95

17. ಸರ್ವ ಸಮನ್ವಯ ತತ್ತ್ವ ಭಗವದ್ಗೀತೆ
– ಡಾ. ಶ್ರೀರಾಮ ಭಟ್ಟ 100

18. ಭಗದ್ಗೀತೆಯ ಕನ್ನಡ ಪದ್ಯಾನುವಾದಗಳು
– ಪ್ರೊ. ಜಿ. ಅಶ್ವತ್ಥನಾರಾಯಣ 104

19. ಭಗವದ್ಗೀತೆ ಒಂದು ಮನೋವಿಜ್ಞಾನ
– ಡಾ. ಆನಂದ ಪಾಂಡುರಂಗಿ 115

20. **Srimadbhagavadgita provides the essential base for Engineering to serve the needs of the Society**
- Dr. H.C. Visvesvaraya 121

21. **Principles of Mental health as delineated in the Bhagavadgita**
- Dr. Shantala Hegde 127

22. ಗೀತಾವಾಙ್ಮಯ ಕೃತಿಸೂಚಿ
– ಡಾ. ಪ್ರಜ್ಞಾ ಶಿರೀಷ್ 135

23. 'ಗೀತಾವೈಭವ' – ಪುಸ್ತಕ ಪ್ರದರ್ಶನಿಯ ವಿವರ 138

* * *

श्रीमत्परमहंसपरिव्राजकाचार्यवर्य पदवाक्यप्रमाण पारावारपारीण यमनियमासन प्राणायामप्रत्याहारध्यानधारण
समाध्यष्टाङ्गयोगानुष्ठाननिष्ठ षण्मतव्यवस्थापनाचार्य तपश्चक्रवर्त्यनाद्यविच्छिन्न श्रीश्रीमज्जगद्गुरु शङ्कराचार्यशिष्य
श्री भास्करेन्द्र सरस्वती करकमलसञ्जात श्री श्रीमत् विश्ववन्द्य सरस्वती गुरुपरम्पराप्राप्त सकलनिगमागमसारहृदय सांख्यत्रयप्रतिपादक
क्रमागतश्रौतस्मार्तकर्ममार्गव्यवस्थापक अशेषत्रय्यन्ताद्यद्वैतसिध्दान्तप्रबन्धप्रवर्तक आदिराजधानी विद्यानगर महाराजधानी
श्रीमत् सुधापुरवरसिंहासनाधीश्वर सर्वतन्त्रस्वतन्त्र व्याख्यान सिंहासनाधिष्ठित राजाधिराजदेशिक गोकर्णमण्डलाधीश
सह्याद्रि पुरवराधीश्वर शाल्मली तीरवास श्रीमल्लक्ष्मीनृसिंह चन्द्रमौळिपदपङ्केरुहरसग्रासाळिवन्मानस
श्री ललिताचरणदास श्रीमत् सोदा स्वर्णवल्ली महासंस्थनाधीश्वर
श्री श्रीमत्सर्वज्ञेन्द्र सरस्वती श्रीस्वामिकरकमलसञ्जात
श्री श्रीमद् गन्गाधरेन्द्र सरस्वती श्रीस्वामिभिः क्रियते नारायण स्मृतयः

ಭಗವದ್‌ಗೀತೆಯಲ್ಲಿ ಜ್ಞಾನಯೋಗ

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು

'ಜ್ಞಾನ'ಯೋಗ ಉಳಿದೆಲ್ಲ ಯೋಗಗಳಗಳಿಗಿಂತ ಮುಖ್ಯವಾದದ್ದು ಎಂಬುದು ನಿಃಸಂದೇಹ. ಯಾಕೆಂದರೆ ಉಳಿದೆಲ್ಲ ಯೋಗಗಳೂ ಕೊನೆಗೊಳ್ಳುವುದು ಜ್ಞಾನಯೋಗದಲ್ಲಿ. "ಸರ್ವಂಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ" ಎಂಬಲ್ಲಿ ಭಗವಂತ ಇದನ್ನೇ ಹೇಳಿದ್ದಾನೆ. "ಇಜ್ಯಾಚಾರದಯಾಹಿಂಸಾದಾನ ಸ್ವಾಧ್ವಾಯ ಕರ್ಮಣಾಂ । ಅಯಂ ತು ಪರಮೋ ಧರ್ಮಃ ಯದ್ಯೋಗೇನಾತ್ಮಾದರ್ಶನಮ್॥" ಯಜ್ಞ, ಆಚಾರ, ದಯೆ, ಅಹಿಂಸೆ, ದಾನ, ಸ್ವಾಧ್ಯಾಯ ಮತ್ತು ಕರ್ಮಗಳಿಗೆ ಧರ್ಮವೆಂದು ಹೆಸರಿದೆ. ಆದರೆ ಇವೆಲ್ಲವುಗಳಿಗಿಂತಲೂ 'ಪರಮ' ಅಂದರೆ ಶ್ರೇಷ್ಠವಾದ ಧರ್ಮ ಯೋಗದ ಮೂಲಕ ಆತ್ಮದರ್ಶನ. ಇಲ್ಲಿ ಆತ್ಮದರ್ಶನವೆಂದರೆ ಪರಮಾತ್ಮಾನುಭವ, ಪರಮಾತ್ಮನಿಗಿಂತ ತಾನು ಬೇರೆಯಲ್ಲ ಎಂಬ ಅನುಭವ. ಇದೇ 'ಜ್ಞಾನ' ಈ ಜ್ಞಾನದಲ್ಲಿ ಸ್ಥಿರವಾಗಿ ನಿಲ್ಲುವಿಕೆಯೇ ಜ್ಞಾನಯೋಗ. ಇದೇ ಯೋಗಿ ಯಾಜ್ಞವಲ್ಕ್ಯರ ಈ ಶ್ಲೋಕದಲ್ಲಿರುವ 'ಯದ್‌ಯೋಗೇನ ಆತ್ಮದರ್ಶನಂ' ಎಂಬ ಮಾತಿನ ಅರ್ಥ. ಇದನ್ನು ಯಾಜ್ಞವಲ್ಕ್ಯರು ಶ್ರೇಷ್ಠವಾದ ಧರ್ಮವೆಂದು ಕರೆದಿದ್ದಾರೆ. ಯಾಕೆಂದರೆ ಉಳಿದ ಯಜ್ಞ, ಆಚಾರ, ಮುಂತಾದ ಧರ್ಮಗಳೆಲ್ಲವೂ ಪರ್ಯವಸಾನಗೊಳ್ಳುವುದು ಜ್ಞಾನಯೋಗವೆನಿಸಿದ 'ಆತ್ಮದರ್ಶನ'ದಲ್ಲಿಯೇ ಆಗಿದೆ. ಆದ್ದರಿಂದಲೇ ಅದು ಉಳಿದೆಲ್ಲ ಯೋಗಗಳಿಗಿಂತ, ಅಂದರೆ ಕರ್ಮ, ಭಕ್ತಿ, ಧ್ಯಾನ (ರಾಜ) ಯೋಗಗಳಿಗಿಂತ ಶ್ರೇಷ್ಠವಾದದ್ದು, ಮುಖ್ಯವಾದದ್ದು. ಈ 'ಜ್ಞಾನ'ವನ್ನು ಭಗವಂತನು ಭಗವದ್‌ಗೀತೆಯಲ್ಲಿ ಸಾಂಖ್ಯ ಎಂಬುದಾಗಿ ಕರೆದಿದ್ದಾನೆ.

'ಜ್ಞಾನ'ವೆಂಬ ಪರಮಾತ್ಮಾನುಭವ ಸಿದ್ಧಿಸಲು ತುಂಬಾ ಯೋಗ್ಯತೆ ಬೇಕಾಗುತ್ತದೆ. ಸಾಧನಚತುಷ್ಟಯಸಂಪನ್ನರಾದವರು ಶ್ರವಣ-ಮನನ-ನಿದಿಧ್ಯಾಸನಗಳಿಂದ ಆ 'ಜ್ಞಾನ'ವನ್ನು ಪಡೆಯುತ್ತಾರೆ. ವಿವೇಕ, ವೈರಾಗ್ಯ, ಶಮಾದಿ ಷಟ್ಕ (ಶಮ, ದಯೆ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನ), ಮತ್ತು ಮುಮುಕ್ಷತ್ವ ಸಾಧನ ಚತುಷ್ಟಯ. ಇವಿಷ್ಟು ಅರ್ಹತೆಗಳನ್ನು

ಗಳಿಸಲು ಕರ್ಮ, ಭಕ್ತಿಗಳು ಸಾಧನಗಳು. ಸಾಧನಚತುಷ್ಟಯ ಸಂಪನ್ನರಾದವರು ವೇದಾಂತವನ್ನು ಶ್ರವಣ ಮಾಡುತ್ತಾರೆ, ಅಂದರೆ ವೇದಾಂತಗಳನ್ನು ಅರ್ಥಸಹಿತ ಗುರುಗಳಿಂದ ಉಪದೇಶ ಪಡೆಯುತ್ತಾರೆ. ಉಪದೇಶ ಪಡೆದದ್ದನ್ನು ಶಾಸ್ತ್ರಸಮ್ಮತವಾದ ತರ್ಕಗಳ ಮೂಲಕ ಅಥವಾ ಯುಕ್ತಿಗಳ ಮೂಲಕ ತನ್ನ ಅನುಭವಕ್ಕೆ ಸರಿಹೋಗುವಂತೆ ಚಿಂತನೆ ಮಾಡುವಿಕೆಯೇ ಮನನ. ಮನನದಿಂದ ದೃಢವಾದ ವೇದಾಂತಾರ್ಥದಲ್ಲಿ ಮನಸ್ಸನ್ನು ಧ್ಯಾನದ ಮೂಲಕ ನಿಲ್ಲಿಸುವಿಕೆಯೇ ನಿದಿಧ್ಯಾಸನ. ನಿದಿಧ್ಯಾಸನ ಪರಿಪಕ್ವಗೊಂಡಾಗ ಹಿಂದೆ ಹೇಳಿದ 'ಜ್ಞಾನ'ವುಂಟಾಗುತ್ತದೆ ಆ 'ಜ್ಞಾನಕ್ಕೆ ಸಾಧನಗಳಾದ್ದರಿಂದ ಶ್ರವಣ–ಮನನ–ನಿದಿಧ್ಯಾಸನಗಳನ್ನು 'ಜ್ಞಾನ'ವೆಂಬುದಾಗಿ ಕರೆಯುವುದುಂಟು.

'ಜ್ಞಾನ' ಎಂದರೆ ಸರಿಯಾದ ತಿಳುವಳಿಕೆ (ಯಥಾರ್ಥಜ್ಞಾನ) 'ಅಜ್ಞಾನ'ವೆಂಬುದು ಇದಕ್ಕೆ ವಿರುದ್ಧವಾದದ್ದು. 'ಅಜ್ಞಾನ'ವೆಂದರೆ ತಪ್ಪು ತಿಳುವಳಿಕೆ. ಈ ತಪ್ಪು ತಿಳುವಳಿಕೆಯ ಮೂಲವಾಗಿರುವ ಅವಿದ್ಯೆಯನ್ನು ಕೂಡ 'ಅಜ್ಞಾನ'ವೆಂದೇ ಕರೆಯುತ್ತಾರೆ.

ಭಗವಂತನು ಈ 'ಜ್ಞಾನ'ನ್ನು ನೇರವಾದ ಶಬ್ದಗಳಲ್ಲಿ ಹದಿಮೂರನೇ ಅಧ್ಯಾಯದಲ್ಲಿ ಉಲ್ಲೇಖಿಸುತ್ತಾನೆ. "ಕ್ಷೇತ್ರಜ್ಞಂಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ । ಕ್ಷೇತ್ರ ಕ್ಷೇತ್ರಜ್ಞಯೋರ್ಜ್ಞಾನಂ ಯತ್ ತದ್ ಜ್ಞಾನಂ ಮತಂ ಮಮ ॥" ಎಲ್ಲ ಶರೀರಗಳಲ್ಲಿಯೂ ಇರುವ ಜೀವ ಚೈತನ್ಯವು ತಾನೇ ಎಂಬುದಾಗಿ ತಿಳಿಯಬೇಕೆಂದು ಭಗವಂತ ಹೇಳುತ್ತಿದ್ದಾನೆ. ಅಲ್ಲದೇ ಈ ತಿಳುವಳಿಕೆಯೇ ಸರಿಯಾದ ತಿಳುವಳಿಕೆ ಎಂಬುದಾಗಿ ಹೇಳುತ್ತಿದ್ದಾನೆ. ಸರಿಯಾದ ತಿಳುವಳಿಕೆ ಯಾವುದೆಂದು ಗೊತ್ತಾದ ಮೇಲೆ ಅದಕ್ಕೆ ವಿರುದ್ಧವಾದ ತಿಳುವಳಿಕೆಯು ತಪ್ಪು ತಿಳುವಳಿಕೆ ಎಂಬುದಾಗಿ ಅರ್ಥವಾಗುತ್ತದೆ. ಜೀವಚೈತನ್ಯನು ತನ್ನನ್ನು ತಾನು ಶರೀರ ಎಂಬುದಾಗಿ ಗುರುತಿಸಿ ಕೊಂಡರೆ, ಪರಮಾತ್ಮನಿಗಿಂತ ತಾನು ಬೇರೆ ಎಂಬುದಾಗಿ ಅರಿತುಕೊಂಡರೆ, ಅದು ತಪ್ಪು ತಿಳುವಳಿಕೆ, ಅಥವಾ ಅಜ್ಞಾನ. ಉಪನಿಷತ್ತು ಈ ತಪ್ಪು ತಿಳುವಳಿಕೆಯನ್ನು ಕುರಿತಾಗಿ ಹೇಳುತ್ತದೆ – "ಅನ್ಯೋಸೌ ಅನ್ಯೋಹಂ ಅಸ್ಮಿ ಇತಿ ನಸವೇದ ಯಥಾಪಶುಃ ಏವಂ ಸ ದೇವನಾಮ್"

ಪರಮಾತ್ಮ ಚೈತನ್ಯ ಬೇರೆ, ತಾನು ಬೇರೆ, ಹೀಗೆ ಯಾರು ಅರಿಯುತ್ತಾನೋ ಅವನು ಸರಿಯಾಗಿ ತಿಳಿದುಕೊಂಡಿಲ್ಲ ಎಂಬುದು ಈ ವಾಕ್ಯದ ಅರ್ಥ. ಆದರೆ ನಮಗೆಲ್ಲರಿಗೂ ನಾನು ಪರಮಾತ್ಮನಿಗಿಂತ ಬೇರೆ ಎಂಬ ಅರಿವೇ ಸಹಜವಾಗಿ ಇದೆ ಅಲ್ಲವೇ ? ಎಂದು ಕೇಳಬಹುದು. ನಿಜ, ಸಹಜವಾಗಿ ಹಾಗೆಯೇ ತಿಳುವಳಿಕೆ ಇರುತ್ತದೆ. ಸಹಜವಾದದ್ದೆಲ್ಲವೂ ಸರಿ ಎಂಬುದಾಗಿ ನಿಯಮವೇನೂ ಇಲ್ಲ. ತಪ್ಪು ತಿಳುವಳಿಕೆ ಸಹಜವಾದದ್ದರಿಂದಲೇ ಆ ತಪ್ಪು ತಿಳುವಳಿಕೆಯನ್ನು 'ಸ್ವಾಭಾವಿಕವಾದ ಅಜ್ಞಾನ' ಎಂಬುದಾಗಿ ಹಿರಿಯರು ಕರೆದಿದ್ದಾರೆ. ಅಜ್ಞಾನವು ಸ್ವಾಭಾವಿಕವಾದ್ದರಿಂದಲೇ ಅಜ್ಞಾನವೇ ಜೀವಾತ್ಮನ ಪ್ರಕೃತಿ ಅಥವಾ ಕಾರಣ ಶರೀರ ಎಂಬುದಾಗಿ ಹೇಳಿದ್ದಾರೆ. ಪ್ರಯತ್ನವಿಲ್ಲದೇ

ಸಿದ್ಧವಾಗಿರುವ ಈ ಅಜ್ಞಾನವನ್ನು ಪ್ರಯತ್ನಪೂರ್ವಕವಾದ ಸಾಧನೆಯಿಂದ ಜ್ಞಾನದ ಮೂಲಕ ಹೋಗಲಾಡಿಸಿ ಕೊಳ್ಳಬೇಕು. ಇದಕ್ಕಾಗಿಯೇ ಭಗವದ್ಗೀತೆ ಬಂದಿದೆ. ಇದಕ್ಕಾಗಿಯೇ ಉಪನಿಷತ್ತುಗಳು ಬಂದಿವೆ. ಹಿಂದೆ ಹೇಳಿದ ಸಾಧನಗಳ ಮೂಲಕ ತತ್ತ್ವಜ್ಞಾನವನ್ನು ಪಡೆದು ಮಹಾತ್ಮರು ಈ ಅಜ್ಞಾನವನ್ನು ಹೋಗಲಾಡಿಸಿಕೊಳ್ಳುತ್ತಾರೆ.

ಭಗವಂತನು ಭಗವದ್ಗೀತೆಯಲ್ಲಿ ಜ್ಞಾನವನ್ನು ಪಡೆಯಲು ಮಾರ್ಗವನ್ನು ಹೀಗೆ ಹೇಳುತ್ತಾನೆ – ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಃ ತತ್ತ್ವದರ್ಶಿನಃ॥" ತತ್ತ್ವದರ್ಶಿಗಳಾದ ಜ್ಞಾನಿಗಳನ್ನು ಬಳಿಸಾರಿ ನಮಸ್ಕರಿಸಿ, ವಿನಯಪೂರ್ವಕವಾಗಿ ಪ್ರಶ್ನಿಸುವ ಮೂಲಕ ಮತ್ತು ಅವರ ಶುಶ್ರೂಷೆ ಮಾಡುವ ಮೂಲಕ ಜ್ಞಾನವನ್ನು ಪಡೆಯಬೇಕು. ಇಲ್ಲಿ ಪ್ರಣಿಪಾತ ಅಂದರೆ ವಿನಯಪೂರ್ವಕವಾದ ಪ್ರಶ್ನೆ. ಇದು ತನ್ನ ವಿದ್ಯಾಭಿಮಾನದ ಪರಿತ್ಯಾಗ, ಶುಶ್ರೂಷೆ ತನ್ನ ಅಂತಸ್ತು ಗೌರವಗಳನ್ನು ಕುರಿತಾದ ಅಭಿಮಾನದ ತ್ಯಾಗ. ಮೂರು ವಿಧದ ಅಭಿಮಾನಗಳ ತ್ಯಾಗದಿಂದಲೇ ಗುರುಕೃಪೆ. ಹಾಗೂ ಅಂತಹ ಗುರುಕೃಪೆಯಿಂದಲೇ ಜ್ಞಾನಪ್ರಾಪ್ತಿ ಎಂಬುದು ಈ ಶ್ಲೋಕದ ತಾತ್ಪರ್ಯ ಎಂಬುದಾಗಿ ಹಿರಿಯರು ಹೇಳುತ್ತಾರೆ.

ಭಗವಂತನು ಭಗವದ್ಗೀತೆಯಲ್ಲಿ 13ನೇಯ ಅಧ್ಯಾಯದಲ್ಲಿ ಜ್ಞಾನಸಾಧನಗಳ ಪಟ್ಟಿಯನ್ನು ಇಟ್ಟಿದ್ದಾನೆ. ಅವುಗಳನ್ನು 'ಜ್ಞಾನ' ವೆಂದೇ ಅವನು ಕರೆದಿದ್ದಾನೆ. 1) ಅಮಾನಿತ್ವಂ 2) ಅದಂಭಿತ್ವಂ 3) ಅಹಿಂಸಾ 4) ಕ್ಷಾಂತಿಃ 5) ಆರ್ಜವಂ 6) ಆಚಾರ್ಯೋಪಾಸನಂ 7) ಶೌಚಂ 8) ಸ್ಥೈರ್ಯಂ 9) ಆತ್ಮವಿನಿಗ್ರಹಃ 10) ಇಂದ್ರಿಯಾರ್ಥೇಷು ವೈರಾಗ್ಯಂ 11) ಅನಹಂಕಾರ ಏವಚ 12) ಜನ್ಮಮೃತ್ಯು ಜರಾವ್ಯಾಧಿ ದುಃಖ ದೋಷಾನುದರ್ಶನಮ್ ॥ 13) ಅಸಕ್ತಿಃ 14) ಅನಭಿಷ್ವಂಗಃ ಪುತ್ರದಾರ ಗೃಹಾದಿಷು 15) ನಿತ್ಯಂಚ ಸಮಚಿತ್ತತ್ವಂ ಇಷ್ಟಾನಿಷ್ಟೋಪ ಪತ್ತಿಷು ॥ 16) ಮಯಿಚಾನನ್ಯ ಯೋಗೇನ ಭಕ್ತಿ ರವ್ಯಭಿಚಾರಿಣೀ॥ 17) ವಿವಿಕ್ತ ದೇಶಸೇವಿತ್ವಂ 18) ಅರತಿಃ ಜನಸಂಸದಿ॥ 19) ಅಧ್ಯಾತ್ಮ ಜ್ಞಾನ ನಿತ್ಯತ್ವಂ 20) ತತ್ವ ಜ್ಞಾನಾರ್ಥ ದರ್ಶನಮ್" ಇವುಗಳನ್ನು ಕ್ರಮವಾಗಿ 1) ಅಭಿಮಾನವಿಲ್ಲದಿರುವಿಕೆ

2) ಡಂಭಾಚಾರವಿಲ್ಲದಿರುವಿಕೆ 3) ಅಹಿಂಸೆ 4) ಕ್ಷಮಾ 5) ಋಜುತೆ 6) ಗುರೂಪಾಸನೆ 7) ಅಂತರಂಗ ಬಹಿರಂಗಗಳಲ್ಲಿ ಶುದ್ಧಿ

8) ಮೋಕ್ಷ ಮಾರ್ಗದಲ್ಲಿ ದೃಢ ನಿಶ್ಚಯ 9) ಶರೀರೇಂದ್ರಿಯಗಳ ನಿಯಂತ್ರಣ 10) ಇಂದ್ರಿಯ ವಿಷಯಗಳಲ್ಲಿ ವೈರಾಗ್ಯ 11) ಅಹಂಕಾರ ಇಲ್ಲದಿರುವಿಕೆ 12) ಜನ್ಮ, ಮರಣ, ಮುಪ್ಪು, ರೋಗ ಮತ್ತು ದುಃಖಗಳಲ್ಲಿ ಇರುವ ಅನರ್ಥದ ಅರಿವು 13) ಸಕ್ತಿಯಿಲ್ಲದಿರುವಿಕೆ 14) ಪುತ್ರ, ಪತ್ನಿ, ಗೃಹ, ಮುಂತಾದವುಗಳ ವಿಷಯದಲ್ಲಿ ಮೋಹ ಇಲ್ಲದಿರುವಿಕೆ 15) ಯಾವಾಗಲೂ ಇಷ್ಟಾನಿಷ್ಟಗಳು ಪ್ರಾಪ್ತವಾದಾಗ ಸಮಚಿತ್ತತೆ 16)

ಭಗವಂತನಲ್ಲಿ ಅವ್ಯಭಿಚರವಾದ ಭಕ್ತಿ 17) ಏಕಾಂತಪ್ರಿಯತೆ 18) ಜನ ಸಮೂಹದಲ್ಲಿ ಆಸಕ್ತಿ ಇಲ್ಲದಿರುವಿಕೆ, 19) ಅಧ್ಯಾತ್ಮ ಚಿಂತನೆಯಲ್ಲಿಯೇ ನಿತ್ಯ ತೊಡಗಿರುವಿಕೆ 20) ತತ್ತ್ವ ಜ್ಞಾನದ ಪ್ರಯೋಜನದ (ಮೋಕ್ಷ) ಬಗ್ಗೆಯೇ ಚಿಂತನೆ, ಇವೆಲ್ಲವುಗಳೂ 'ಜ್ಞಾನ' ಎನಿಸಿಕೊಳ್ಳುತ್ತವೆ. ಅಂದರೆ ಇವೆಲ್ಲವೂ ಜ್ಞಾನಸಾಧನಗಳಾಗಿವೆ. ಪರಿಪೂರ್ಣ ಜ್ಞಾನಿಗಳಲ್ಲಿ ಇವೆಲ್ಲವೂ ಸಹಜವಾಗಿ ಇರುತ್ತವೆ. ಆದರೆ ಜ್ಞಾನ ಸಾಧಕನು ಇವುಗಳನ್ನು ಪ್ರಯತ್ನಪೂರ್ವಕವಾಗಿ ತನ್ನಲ್ಲಿ ಅಳವಡಿಸಿಕೊಂಡಷ್ಟೂ 'ಜ್ಞಾನ'ವು ಬೇಗ ಸಿದ್ಧಿಸುತ್ತದೆ. ಜ್ಞಾನಸಾಧನಗಳನ್ನೇ 'ಜ್ಞಾನ' ಎಂಬುದಾಗಿ ಕರೆದು, ಅವುಗಳನ್ನು ಒಟ್ಟಿಗೆ ಸೇರಿಸಿ, ಸಾಧಕರಿಗೆ ಅನುಕೂಲವಾಗುವಂತೆ ಕೊಟ್ಟಿರುವುದು ಭಗವದ್ಗೀತೆಯ ವೈಶಿಷ್ಟ್ಯ.

ಹೀಗೆ ಜ್ಞಾನ (ಸಾಂಖ್ಯ), ಜ್ಞಾನಸಾಧನಗಳು, ಜ್ಞಾನಪ್ರಾಪ್ತಿಯ ಉಪಾಯಗಳನ್ನು (ಕರ್ಮಯೋಗ, ಭಕ್ತಿಯೊಗ ಮತ್ತು ಅಷ್ಟಾಂಗಯೋಗಗಳು) ಭಗವದ್ಗೀತೆಯಲ್ಲಿ ತುಂಬಿಕೊಂಡಿವೆ. ಭಗವದ್ಗೀತೆಯಲ್ಲಿ ಹೇಳಿರುವ ವಿಷಯಗಳಲ್ಲಿ ಅತಿ ಮುಖ್ಯವಾದ ವಿಷಯ ಜ್ಞಾನ ಅಥವಾ ಸಾಂಖ್ಯ. ಇಷ್ಟೆಲ್ಲ ಹೇಳಿದ್ದರಿಂದ ಜ್ಞಾನವು ಪುಸ್ತಕದಿಂದ ಬಂದ ತಿಳುವಳಿಕೆ ಅಲ್ಲ, ಅದು ಸಾಧನೆಯ ಪರಿಪಕ್ವತೆಯಿಂದ ಉಂಟಾದ ಅನುಭವ ಎಂಬುದು ಗೊತ್ತಾಗದಿರುವುದಿಲ್ಲ. ಅನುಭವವೇ ಮಾಹಿತಿಯ ಮೂಲ ಎಂಬುದು ಭಾರತೀಯರ ದೊಡ್ಡ ವೈಶಿಷ್ಟ್ಯ. ಅದನ್ನಿಲ್ಲಿ ನಾವು ಕಾಣಬಹುದಾಗಿದೆ.

'ಭಗವದ್ಗೀತಾ ಅಭಿಯಾನ ಕರ್ಣಾಟಕದ' ಮಹಾ ಸಮರ್ಪಣೆಯ ಸಂದರ್ಭದಲ್ಲಿ ಹೊರತಲು ಸಂಕಲ್ಪಿಸಿರುವ 'ಗೀತಾಭಿಯಾನ' ಅವತರಣಿಕೆಯು ಸುಂದರವಾಗಿ ಮೂಡಿಬರಲಿ, ಎಲ್ಲಾ ಜನರಿಗೆ ತಲುಪಲಿ ಎಂಬುದಾಗಿ ಆಶಿಸುತ್ತೇವೆ.

ಲೋಕಾಃ ಸಮಸ್ತಾಃ ಸುಖಿನೋ ಭವಂತು.

ವ್ಯವಸಾಯಾತ್ಮಕ ಬುದ್ಧಿಗೆ ಭಗವದ್ಗೀತೆ ಪ್ರೇರಕ

'ಪ್ರಪನ್ನಪಾರಿಜಾತಾಯ ತೋತ್ರವೇತ್ರೈಕಪಾಣಯೇ ।
ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ ॥''

ಸಮಾಜದಲ್ಲಿ ಎರಡು ವಿಧದ ವ್ಯಕ್ತಿಗಳು ಸಿಗುತ್ತಾರೆ. ಬುದ್ಧಿವಂತರು ಹಾಗೂ ಸಂಸ್ಕಾರವಂತರು. ಚೆನ್ನಾಗಿ ವಿದ್ಯೆಯನ್ನು ಕಲಿತು ಪ್ರಪಂಚದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬುದ್ಧಿವಂತರಾದವರು ಒಂದು ವರ್ಗ. ಹೆಚ್ಚೇನೂ ಓದದೇ ಈ ಪ್ರಪಂಚದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಒಳ್ಳೆಯ ನಡತೆ, ಒಳ್ಳೆಯ ಸ್ವಭಾವ, ಒಳ್ಳೆಯ ಗುಣ ಇವುಗಳನ್ನು ಮೈಗೂಡಿಸಿಕೊಂಡ ಸಂಸ್ಕಾರವಂತ ವ್ಯಕ್ತಿಗಳದ್ದು ಇನ್ನೊಂದು ವರ್ಗ. ಈ ಎರಡೂ ಒಂದು ವ್ಯಕ್ತಿಯಲ್ಲಿ ಕೂಡಿರಬಾರದು ಎಂಬುದೇನೂ ಇಲ್ಲ. ಆದರೂ, ಸಾಮಾನ್ಯವಾಗಿ ಬುದ್ಧಿವಂತನಾಗಿ ಇದ್ದವನೂ ಸಂಸ್ಕಾರವಂತನಾಗಿಯೂ ಇರುವುದು ಕಂಡುಬರುವುದು ಹಾಗೂ ಸಂಸ್ಕಾರವಂತನಾಗಿದ್ದವರು

ಬುದ್ಧಿವಂತರಾಗಿಯೂ ಕಂಡುಬರುವುದು ವಿರಳ. ಈ ಎರಡೂ ಒಂದೇ ವ್ಯಕ್ತಿಯಲ್ಲಿ ಕೂಡಿರುವುದು ವಿರಳ. ಈ ನಿಟ್ಟಿನಲ್ಲಿ ಎರಡು ವಿಧದ ವ್ಯಕ್ತಿಗಳು ಎಂಬುದಾಗಿ ವಿಭಾಗಿಸಲಾಗಿದೆ.

ಬುದ್ಧಿವಂತನಲ್ಲಿ ಬೇಕಾದಷ್ಟು ತಿಳುವಳಿಕೆ ಇರುತ್ತದೆ. ಆಲೋಚನೆ ಮಾಡುವ ಶಕ್ತಿ ಇರುತ್ತದೆ. ಒಳ್ಳೆಯ ನಡತೆ ಎಂದರೆ ಯಾವುದು? ಕೆಟ್ಟ ನಡತೆ ಎಂದರೆ ಯಾವುದು? ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಆದರೂ ಆತನಲ್ಲಿ ಒಳ್ಳೆಯ ನಡತೆ ಇದ್ದೇ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಬುದ್ಧಿವಂತನಲ್ಲಿ ಒಳ್ಳೆಯ ನಡತೆ ಇದ್ದೇ ಇರುತ್ತದೆ ಎಂಬ ನಿಯಮವಿಲ್ಲ.

ಆದರೆ, ಸಂಸ್ಕಾರವಂತನಲ್ಲಿ ಹಾಗಲ್ಲ. ಒಳ್ಳೆಯ ನಡತೆ ಇದ್ದೇ ಇರುತ್ತದೆ. ಹಾಗೆ ಆತನಲ್ಲಿಯೂ ಬುದ್ಧಿವಂತಿಕೆ ಇದ್ದೇ ಇರುತ್ತದೆ ಎಂಬ ನಿಯಮ ಇಲ್ಲ.

ಈ ಬುದ್ಧಿವಂತನ ಒಂದು ಮನಸ್ಥಿತಿ ಇರುತ್ತದಲ್ಲ, ಅದು ವಿಕ್ಷೇಪ ಎಂದು ಹೇಳುತ್ತಾರೆ. ಸಂಸ್ಕಾರವಂತನ ಒಂದು ಮನಸ್ಥಿತಿ ಇದೆಯಲ್ಲ ಅದಕ್ಕೆ ಚಿತ್ತ ಸಂಕ್ಷೇಪ ಎಂದು ಹೇಳಬಹುದು. ಏಕೆಂದರೆ ಆತನಲ್ಲಿ ಚಿತ್ತವಿಕ್ಷೇಪ ಇರುವುದಿಲ್ಲ.

ಚಿತ್ತ ವಿಕ್ಷೇಪ ಎಂದರೆ ಮನಸ್ಸಿನಲ್ಲಿ ತುಂಬಾ ಚಂಚಲತೆ, ಬದುಕಿಗೆ ಒಂದು ನಿರ್ದಿಷ್ಟವಾದಂತಹ ಗುರಿ ಇಲ್ಲ. ನಿಯತ್ತಿನ ಬದುಕಿನ ಕ್ರಮ ಇಲ್ಲ. ಈ ಒಂದು ವಿಚಿತ್ರ ಮನಸ್ಥಿತಿಗೆ ಚಿತ್ತ ವಿಕ್ಷೇಪ ಎನ್ನುತ್ತಾರೆ.

ಸಂಸ್ಕಾರವಂತನ ಮನಸ್ಸು ಹಾಗಲ್ಲ. ಅಲ್ಲಿ ಬದುಕಿಗೆ ಒಂದು ಗುರಿ ಉಂಟು, ನಿಯತವಾದ ಒಂದು ಕ್ರಮ ಉಂಟು. ಆದರೆ, ಮನಸ್ಸಿನಲ್ಲಿ ತುಂಬಾ ಚಂಚಲತೆ ಇರುವುದಿಲ್ಲ, ಸಂಸ್ಕಾರವಂತನ ಈ ಒಂದು ಮನಸ್ಥಿತಿಯನ್ನೇ ಗೀತಾಚಾರ್ಯ "ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರು ನಂದನ । ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್॥" ಎನ್ನುತ್ತಾನೆ.

ವಿಕ್ಷೇಪಗೊಂಡಿರುವ ಚಿತ್ತವನ್ನು ಅವ್ಯವಸಾಯಾತ್ಮಕ ಬುದ್ಧಿ ಎಂದು ಕರೆದಿದ್ದಾರೆ. ಸಂಸ್ಕಾರಗಳಿಲ್ಲದೆ ಕೇವಲ ಬುದ್ಧಿ ಸಂಪಾದಿಸಿಕೊಂಡಿದ್ದರೆ ಆತನ ಮನಸ್ಥಿತಿ ಹೀಗಿರುತ್ತದೆ.

ಇದಕ್ಕೆ ಎರಡು ಉದಾಹರಣೆಗಳನ್ನು ಕೊಡಬಹುದು. ಮಹಾಭಾರತ ಕಾಲದ ಉದಾಹರಣೆ. ಅವ್ಯವಸಾಯಾತ್ಮಕ ಬುದ್ಧಿಗೆ ದುರ್ಯೋಧನ ಉದಾಹರಣೆ. ಆತ ಹೇಳುತ್ತಾನೆ.

> **"ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ ।**
> **ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಃ ॥"**

ನನಗೆ ಒಳ್ಳೆಯ ನಡತೆ ಎಂದರೇನು ಗೊತ್ತು. ಕೆಟ್ಟ ನಡತೆ ಅಂದರೆ ಏನು

ಎಂಬುದೂ ಗೊತ್ತು. ಆದರೆ, ಕೆಟ್ಟ ನಡತೆಯನ್ನು ನಾನು ಬಿಡಲಾರೆ, ಒಳ್ಳೆಯ ನಡತೆಯನ್ನು ನಾನು ವಹಿಸಲಾರೆ. ಅಂದರೆ ವಿಷಯಗಳು ಗೊತ್ತಿದ್ದರೂ ಆಚರಣೆಗೆ ಬಾರದ ದುಸ್ಥಿತಿ ಈ ಬುದ್ಧಿವಂತನಲ್ಲಿ ಕಾಣುತ್ತೇವೆ. ಅವ್ಯವಸಾಯಾತ್ಮಕ ಬುದ್ಧಿ ಕಾಣುತ್ತೇವೆ.

ವ್ಯವಸಾಯಾತ್ಮಕ ಬುದ್ಧಿಗೆ ಧರ್ಮರಾಜನ ಉದಾಹರಣೆ. ಆತ ಹೆಜ್ಜೆ ಹೆಜ್ಜೆಗೂ ಕೂಡ ಒಳ್ಳೆಯ ವಿಷಯ, ಆಲೋಚನೆ ಮಾಡುವ ಜೊತೆಗೆ ನಡತೆಯಲ್ಲಿ ಅಳವಡಿಸಿಕೊಳ್ಳುವುದನ್ನು ಕಾಣುತ್ತೇವೆ. ಆತನೇನೋ ತುಂಬಾ ಬುದ್ಧಿವಂತ ಎಂಬುದಾಗಿ ಮಹಾಭಾರತದಲ್ಲಿ ಚಿತ್ರಿಸಿದ್ದು ಕಂಡುಬರುವುದಿಲ್ಲ. ಆದರೆ, ಒಳ್ಳೆಯ ನಡತೆ, ಒಳ್ಳೆಯ ಮಾತು, ಧರ್ಮಮಯವಾದ ಜೀವನ ಅವನದ್ದು. ಆದ್ದರಿಂದ ಅವನನ್ನು ವ್ಯವಸಾಯಾತ್ಮಕ ಬುದ್ಧಿಗೆ ಉದಾಹರಣೆಯಾಗಿ ಕೊಡಬಹುದು.

ಹಾಗೆ ಇತ್ತೀಚಿನ ದಿವಸಗಳಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಮತ್ತು ಅವರ ಸಮಕಾಲೀನರಾದ ಶ್ರೀ ಈಶ್ವರಚಂದ್ರ ವಿದ್ಯಾಸಾಗರರನ್ನು ಉದಾಹರಿಸಬಹುದು. ಶ್ರೀ ರಾಮಕೃಷ್ಣ ಪರಮಹಂಸರು ಒಂದು ದೃಷ್ಟಿಯಿಂದ ಅವರು ಸುಶಿಕ್ಷಿತರೇನೂ ಅಲ್ಲ. ಶಾಲೆ ಕಲಿತವರಲ್ಲ, ಪ್ರಪಂಚದ ಬಗ್ಗೆ ಪುಸ್ತಕದ ಮೂಲಕ ಮಾಹಿತಿ ಸಂಗ್ರಹಿಸಿದವರಲ್ಲ. ಆದರೆ, ಶ್ರೀ ಈಶ್ವರಚಂದ್ರ ವಿದ್ಯಾಸಾಗರರು ಅನೇಕ ಮಾಹಿತಿಗಳನ್ನು ತಮ್ಮ ಬುದ್ಧಿಯಲ್ಲಿ ಸಂಗ್ರಹಿಸಿಕೊಂಡವರು, ವಿದ್ಯಾವಂತರು. ತುಂಬಾ ಓದಿದವರು. ರಾಮಕೃಷ್ಣ ಪರಮಹಂಸರ ಜೀವನಕ್ಕೂ ಈಶ್ವರಚಂದ್ರ ವಿದ್ಯಾಸಾಗರರ ಜೀವನಕ್ಕೂ ತುಂಬಾ ಅಂತರವಿದೆ. ಪರಮಹಂಸರನ್ನು ನಾವು ಮಹಾಜ್ಞಾನಿಗಳು ಎಂಬುದಾಗಿ ಗೌರವಿಸುತ್ತೇವೆ. ಈ ಅವ್ಯವಸಾಯಾತ್ಮಕ ಬುದ್ಧಿಯನ್ನು ಪ್ರಯತ್ನಪಟ್ಟರೆ ಕ್ರಮೇಣ ವ್ಯವಸಾಯಾತ್ಮಕ ಬುದ್ಧಿಯನ್ನಾಗಿ ರೂಢಿಸಿಕೊಳ್ಳಬಹುದು. ಹಾಗೆ ರೂಢಿಸಿಕೊಳ್ಳಬೇಕು ಎಂಬುದು ಶ್ರೀಕೃಷ್ಣನ ಅಪೇಕ್ಷೆ.

ಏಕೆಂದರೆ, ಅವ್ಯವಸಾಯಾತ್ಮಕವಾದ ಬುದ್ಧಿ ಉಳ್ಳವನಿಗೆ ಜೀವನದಲ್ಲಿ ನೆಮ್ಮದಿ ಇರುವುದಕ್ಕೆ ಸಾಧ್ಯವಿಲ್ಲ. ವ್ಯವಸಾಯಾತ್ಮಕ ಬುದ್ಧಿ ಉಳ್ಳವನಿಗೆ ಜೀವನದಲ್ಲಿ ನೆಮ್ಮದಿ ಇರುತ್ತದೆ. ಆತ ತಾನೊಂದೇ ನೆಮ್ಮದಿಯಾಗಿ ಇರದೇ ಇನ್ನೊಬ್ಬರನ್ನೂ ನೆಮ್ಮದಿಯಾಗಿ ಇರುವಂತೆ ಮಾಡಬಲ್ಲ. ಆದ್ದರಿಂದ ನಾವು ಮಾಹಿತಿ ತಂತ್ರಜ್ಞಾನದ ಮೂಲಕ ನಮ್ಮ ಬುದ್ಧಿಯನ್ನು ಬೆಳೆಸಿಕೊಂಡ ಹಾಗೇ ಒಳ್ಳೆಯ ನಡತೆಯ ಮೂಲಕ ನಮ್ಮ ಹೃದಯವನ್ನೂ ಬೆಳೆಸಿಕೊಳ್ಳಬೇಕು. ಎರಡೂ ಕೂಡಿಸಿಕೊಂಡರೆ ಉತ್ತಮ ವ್ಯಕ್ತಿತ್ವದ ನಿರ್ಮಾಣ ಸಾಧ್ಯವಾಗುತ್ತದೆ. ಇವೆರಡೂ ಕೂಡುವುದಕ್ಕೂ ಸಾಧ್ಯವುಂಟು. ಅದಕ್ಕೆ 'ವಿದ್ಯಾ ವಿನಯೇನ ಶೋಭತೇ'. ವಿದ್ಯೆಯೆಂದರೆ ನಾವು ಕಲಿತದ್ದು. ಒಳ್ಳೆಯ ಗುಣಗಳ ಮೊತ್ತವೇ ವಿನಯ. ಅವೆರಡೂ ಸೇರಿದರೆ ತುಂಬಾ ಶೋಭೆ ಉಂಟಾಗುತ್ತದೆ. ಒಳ್ಳೆಯ ವ್ಯಕ್ತಿತ್ವ ನಿರ್ಮಾಣವಾಗುತ್ತದೆ.

ಆದ್ದರಿಂದ ವಿದ್ಯಾಭ್ಯಾಸದ ಜೊತೆ ಜೊತೆಗೇನೆ ಒಳ್ಳೆಯ ನಡತೆಯನ್ನು ಕಲಿಸಬೇಕು.

ಮೋಸ ಮಾಡಬಾರದು. ಸುಳ್ಳು ಹೇಳಬಾರದು. ದಯೆಯನ್ನು ಬೆಳೆಸಿಕೊಳ್ಳಬೇಕು. ಕ್ಷಮಾಗುಣವನ್ನು ಬೆಳೆಸಿಕೊಳ್ಳಬೇಕು. ಇತ್ಯಾದಿ ಅನೇಕ ಸದ್ಗುಣಗಳ ಒಂದು ವಿಸ್ತಾರವಾದ ನಿರೂಪಣೆ ಭಗವದ್ಗೀತೆಯಲ್ಲಿ ಬರುತ್ತದೆ. ಆ ವ್ಯವಸ್ಥಿತವಾದ ನಿರೂಪಣೆಯನ್ನು ಒಮ್ಮೆ ಓದಬೇಕು, ಅವುಗಳನ್ನು ಚಿಂತನೆ ಮಾಡಬೇಕು, ಜೀವನದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಪ್ರಯತ್ನಿಸಬೇಕು. ಈ ಎಲ್ಲ ಮಾತುಗಳ ಒಂದು ಸಾರ ಸಂಗ್ರಹದಂತೆ ಭಗವಂತನ ಈ ಮಾತು ಬಂದಿದೆ.

"ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋऽವ್ಯವಸಾಯಿನಾಮ್ ॥"

ಈ ರೀತಿಯಲ್ಲಿ ನಮ್ಮ ಬುದ್ಧಿಯನ್ನು ತಿದ್ದಿಕೊಳ್ಳುವ ಸಂಸ್ಕಾರ ಕೊಡುಕೊಳ್ಳುವ ಒಂದು ಉಪಾಯ ಭಗವದ್ಗೀತೆಯಲ್ಲಿ ಬಂದಿರುವಷ್ಟು ಉತ್ತಮವಾಗಿ ಬೇರೆಲ್ಲೂ ಬಂದಿಲ್ಲ ಎಂದರೆ ತಪ್ಪಿಲ್ಲ. ಅದಕ್ಕೋಸ್ಕರ ಭಗವದ್ಗೀತೆ ಓದಬೇಕು, ಅನುಸರಿಸಬೇಕು.

"ಲೋಕಾಃ ಸಮಸ್ತಾಃ ಸುಖಿನೋ ಭವಂತು"

ನಾರಾಯಣ ನಾರಾಯಣ ನಾರಾಯಣ

ಶ್ರೀ ಮದ್ಭಗವದ್ಗೀತೆಯಲ್ಲಿ ಉಪಾಸನೆ

ಪ.ಪೂ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು

ಅ) ಉಪಾಸನೆಯ ಅರ್ಥ–ವ್ಯಾಪ್ತಿ : 'ಉಪಾಸನೆ' ಎಂದರೆ ಉಪ = ಸಮೀಪ, ಆಸನ = ಪೀಠ, ಕುಳಿತುಕೊಳ್ಳುವುದು. ಇದರ ವಿಸ್ತೃತಾರ್ಥ = ಆರಾಧನೆ, ಪೂಜೆ, ಚಿಂತನಗೈಯುವುದು, ಸ್ಮರಿಸುವುದು.

ಪ್ರತಿಯೊಬ್ಬನಿಗೆ ತನ್ನ ಆತ್ಮೋನ್ನತಿ ಮಾಡಿಕೊಳ್ಳುವುದೇ ಅವನ ಅಂತಿಮ ಗುರಿ – ನರನು ನಾರಾಯಣನಾಗುವದು, ಮಾನವನು ಮಹಾದೇವನಾಗುವುದು. ನಾವೆಲ್ಲಾ ಪರಮಾತ್ಮನ ಅಂಶಜರು. ಆತನ ಸೃಷ್ಟಿಯಲ್ಲಿ ಮೂಡಿ ಬಂದವರು. ಸರ್ವಜ್ಞ, ಸರ್ವಕರ್ತೃ, ಸರ್ವವ್ಯಾಪಿಯಾದ ಪರಮಾತ್ಮನು ಸಂಕಲ್ಪ ಮಾತ್ರದಿಂದ ಅಭಿನ್ನ ನಿಮಿತ್ತೋಪಾದನ ಕಾರಣನಾಗಿ ಈ ವಿಶ್ವವನ್ನು ನಿರ್ಮಿಸಿದನು. ಈ ವಿಶ್ವದ ಕಣಕಣದಲ್ಲಿಯೂ ಪರಮಾತ್ಮನಿರುವನು. ಪರಮಾತ್ಮನು ಸೃಷ್ಟಿಕರ್ತನಾಗಿ, ಪಾಲಕನಾಗಿ, ಪರಿವರ್ತಕನಾಗಿ ಕಾರ್ಯ ಮಾಡುತ್ತಿದ್ದರೂ ಅಸಕ್ತನು, ನಿರ್ಲಿಪ್ತನು ಇದ್ದುದು ವಿಶೇಷ. ಈ ಮಾತನ್ನು ಶ್ರುತಿಗಳು ದೃಢಪಡಿಸುತ್ತವೆ. ಪರಮಾತ್ಮನ ಸೃಷ್ಟಿಯಲ್ಲಿ ಮಾನವನು ಅತ್ಯಂತ ಶ್ರೇಷ್ಠ ಸ್ಥಾನದಲ್ಲಿದ್ದಾನೆ. 84 ಲಕ್ಷ ಪ್ರಕಾರದ ಜೀವಿಗಳಲ್ಲಿ ಇವನದು ಅಗ್ರಸ್ಥಾನ. ಇದಕ್ಕೆ ಕಾರಣ ಈತನು ಪಡೆದ ಅನೇಕ ಮೌಲಿಕ ವರಗಳು. ಪರಮಾತ್ಮನು ಎಲ್ಲ ದೇಹಗಳಲ್ಲಿದ್ದರೂ ಅಜ, ನಿತ್ಯ, ಪೂರ್ಣ, ಸನಾತನ, ನಿರ್ಲಿಪ್ತ ಎಂಬುದನ್ನು ಮಾನವರಲ್ಲಿ ಕೆಲವರು ಮಾತ್ರ ಬಲ್ಲರು. ಉಳಿದ ಜೀವಿಗಳಾಗಲಿ ಮಾನವರಲ್ಲಿ ಮೂಢರು, ಕ್ಷಿಪ್ತರು ಅರಿಯಲಾರರು.

ಮಾನವರಲ್ಲಿ ಯಾರು – ಇಚ್ಛಾಶಕ್ತಿ(ಆಶಾ), ಜ್ಞಾನಶಕ್ತಿ(ತಿಳುವಳಿಕೆ), ಕಾರ್ಯಶಕ್ತಿ (ಯತ್ನ), ಚೇತಸ್(ಮತಿ) ಪಡೆದು ಅವುಗಳನ್ನು ಅಂದರೆ ಇಚ್ಛಾಶಕ್ತಿಯ ಸಂಪದವನ್ನು ದೇವನ ಚರಣದಲ್ಲಿ ಸಮರ್ಪಿಸಿ ಮುಮುಕ್ಷುತ್ವವನ್ನು, ಕಾರ್ಯಶಕ್ತಿ ಸಂಪದವನ್ನು ದೇವನಡಿಗೆ ನೀಡಿ ಅಭ್ಯಾಸಿ, ಜ್ಞಾನಶಕ್ತಿ ಸಂಪದವನ್ನು ಶಿವನಿಗೆ ನಿಯೋಗಿಸಿ ಅನುಭವಿಯಾಗಿ, ಮತಿಶಕ್ತಿ ಸಿರಿಯನ್ನು ಬ್ರಹ್ಮನಲ್ಲಿ ಹರಿಗೊಳಿಸಿ ಅಪರೋಕ್ಷಾನು ಭಾವಿಯಾಗಿದ್ದರೆ ಈ ನಾಲ್ವರ ಜನ್ಮ ಸಾರ್ಥಕ. ಇವರ ಸಂಪದ ಪಾವನ. ಚಿರಶಾಂತಿಯು ಅವರ ಕೈವಶ.

ಆದರೆ ಬಹುಜನರು ಕ್ಷಣಿಕ ಸುಖವನ್ನೀಯುವ ವಿಷಯಗಳಿಗಾಗಿ ತಮ್ಮೆಲ್ಲ ಇಚ್ಛೆ, ಯತ್ನ, ಜ್ಞಾನ ಹಾಗೂ ಮತಿಯನ್ನು ವ್ಯರ್ಥಗೊಳಿಸುತ್ತಿದ್ದಾರೆ. ಅಂಥವರನ್ನು ಪರಮಾತ್ಮನು ವಿಚೇತಸರು ಅಂದರೆ ರಾಕ್ಷಸಿ ಸ್ವಭಾವ ಉಳ್ಳವರು ಎಂದಿದ್ದಾನೆ. ಇಂಥವರು ತಮ್ಮ ಜೀವನವನ್ನು ತಾವೇ ವಿನಶ್ಯಗೊಳಿಸಿಕೊಳ್ಳುತ್ತಿದ್ದಾರೆ.

ಅಸುರ್ಯನಾಮ ತೇ ಲೋಕಾ ಅಂಧೇನ ತಮಸಾವೃತಾಃ ।
ತಾನ್ ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥

ಇಂಥವರು ದೇಹ ಬಿಟ್ಟು ಆ ಭಯಂಕರ ಲೋಕಗಳನ್ನು ಮೇಲಿಂದ ಮೇಲೆ ಪಡೆಯುತ್ತಾರೆ. ಆದರೆ ಯಾರು –

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥

ಇಂಥ ದೈವಿ ಸ್ವಭಾವವನ್ನು – ಶಮ, ಧಮ, ದಾನ, ವೇದಾಧ್ಯಯನ, ಕ್ಷಮಾ, ಶಾಂತಿ–ಯಾರು ಪಡೆದಿದ್ದಾರೋ ಅವರು ಮಹಾತ್ಮರು. ಅವರ ಭಾವ ವಿಶಾಲ, ಮನಸ್ಸು ಸಬಲ, ಹೃದಯ ವಿಮಲವಾಗಿದೆ. ದೇವಮಾರ್ಗದಲ್ಲಿ ಅವರ ಜೀವನ ಯಾತ್ರೆ ಸಾಗಿದೆ. ಅಂಥವರು ಜೀವನ್ಮುಕ್ತರು.

ಅಂಥ ಮಹಾತ್ಮರು –

ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥

1) ಕೀರ್ತನ : 'ನಾಮ ಮಾತ್ರೇನ ವಸ್ತು ಸಂಕೀರ್ತನಂ' – ಪರಮಾತ್ಮನ ನಾಮಮಾತ್ರ ಉಚ್ಚಾರಣೆಯು ಸಂಕೀರ್ತನವು. ಪರಮಾತ್ಮನ ಗುಣ ಲಕ್ಷಣಗಳ ವರ್ಣನೆಯನ್ನು ಗುರು–ಶ್ರುತಿಗಳಿಂದ ಆಲಿಸುವದು ಸಂಕೀರ್ತನವು. 'ಇದಂ ಅಮೃತಂ ಬ್ರಹ್ಮ ಇದಂ ಸರ್ವಂ'. ಈ ಪರಮ ಆತ್ಮನು ಸರ್ವ ಭೂತಗಳ ಚೈತನ್ಯ ರಸಃ. ಅವನು ಈ ಜೀವಾತ್ಮನ ತೇಜೋರೂಪ; ಅಮೃತಮಯ ಪುರುಷನು. ಅವನು ಅದ್ವಯ, ಅಕ್ಷರ. ಹೀಗೆ ಶೃತಿಗಳು ಕೀರ್ತಿಸಿವೆ. ಇದು ತಾತ್ವಿಕ ಕೀರ್ತನವು ಇದೇ ಪ್ರಕಾರ ಮಂತ್ರ, ಜಪ, ಮತ್ತು ಧರ್ಮ ಗ್ರಂಥಗಳ ಪಠಣವು ಕೀರ್ತನವೆ.

2) ಯತ : ಗುರು ಕೊಟ್ಟ ಮಹಾ ವಾಕ್ಯಗಳನ್ನು ತನ್ನ ಹೃದಯದಲ್ಲಿರಿಸಿ, ಕೃಷಿ ಮಾಡಿ ಬೆಳೆಯಿಸಿ ಫಲ ಪಡೆಯುವ ಸತತ ತತ್ಪರತೆಯೇ ಯತ್ನ.

3) ನಮನ, ದೃಢವ್ರತ : ನಮಗೆ ದೈವೀ ಗುಣಗಳನ್ನು ಉದಾರ ಹೃದಯದಿಂದ ಧಾರೆಯೆರೆದ ಶ್ರೀ ಗುರುವಿಗೂ, ದೇವನಿಗೂ, ಸಂತ–ಮಹಂತರಿಗೂ ಶಿರಬಾಗಿಸುವದು. ವಿನಮ್ರತೆ ಸೂಚಿಸುವುದು ನಮನ. ಇದು ಕೃತಜ್ಞತೆ, ವಿನಯ, ಸಮರ್ಪಣ ಸೂಚಕ, ಭಕ್ತಿ ಹಾಗೂ ಸದು ಹೃದಯ ದರ್ಶಕ.

4) ಚಿತ್ತೈಕಾಗ್ರತೆ (ನಿತ್ಯಯೋಗ): ಮನಸ್ಸು ಯಾವಾಗಲು ದೇವನ ದ್ಯಾನದಲ್ಲಿ

ನಿರತನಾಗಿರುವುದು ನಿತ್ಯಯೋಗ. ನಿಧಿ ಧ್ಯಾಸ, ಏಕಾಗ್ರತೆ. ಮೇಲಿನ ಸಾಧನಾ ಪಥಗಳಲ್ಲಿ ಸಾಗುವುದೇ ಉಪಾಸನೆ ಎನಿಸುತ್ತದೆ.

ಬ) ಉಪಾಸನೆಯ ಪ್ರಕಾರಗಳು :

ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೆ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋ ಮುಖಂ ॥

1) **ಜ್ಞಾನಯಜ್ಞೋಪಾಸನೆ :** ಪರಿಶುದ್ಧವೂ ಪಾವನವೂ ಆದ ಹೃದಯದಲ್ಲಿ ದೇವ ಪ್ರಭೆಯನ್ನು ಗ್ರಹಿಸಿ ವಿವಿಧ ಭಾವ ಪುಷ್ಪಗಳಿಂದ ಪೂಜಿಸಿ ಮನಸ್ಸನ್ನು ಆ ಜ್ಞಾನದ ಬೆಳಕಿನಲ್ಲಿಯೇ ಸಮರ್ಥಿಪಿಸುವದು ಜ್ಞಾನಯಜ್ಞೋಪಾಸನೆಯೆನಿಸುವುದು. ನಿಜಗುಣ ಶಿವಯೋಗಿಗಳ ಪ್ರಕಾರ ಭಾವ ಪದಾರ್ಥಗಳು– ಆಸನ, ಆಹ್ವಾನ, ಅರ್ಘ್ಯ, ಪಾದ್ಯ ಆಚಮನ, ಅಭಿಷೇಕ, ಆಚ್ಛಾದನ, ಉಪವೀತ, ಅಲಂಕೃತಿ ಅನುಲೇಪನ, ಪುಷ್ಪ, ಧೂಪ, ದೀಪ, ನೈವೇದ್ಯ, ವೀಳ್ಯ, ಆವೃತ್ತಿ, ವಂದನೆ, ವಿಸರ್ಜನೆ, ಅಷ್ಟಾದಶ ಭಾವೋಪಾಚಾರಗಳಿಂದ ದೇವನನ್ನು ಅರ್ಚಿಸಿದ ಯೋಗಿಯು ಕೃತಾರ್ಥ.

2) **ಏಕತ್ವೋಪಾಸನೆ:** ಮನಸ್ಸಿನ ಸಂಘದಿಂದ ಜೀವನ ಭಾವ, ಜಗತ್ತಿನ ಸಂಘದಿಂದ ಈಶ ಭಾವ ಇವೆರಡನ್ನು ತೊರೆದಾಗ ಪ್ರತ್ಯಗಾತ್ಮಾಭಿನ್ನ ಪರಬ್ರಹ್ಮನೋರ್ವನೇ! ಈ ಅದ್ವಯ ಪ್ರಜ್ಞೆಯೇ ಏಕತ್ವೋಪಾಸನೆಯು.

3) **ಪೃಥಕ್ತ್ವೋಪಾಸನೆ:** ದೇವನು ವಿಶ್ವದ ಒಡೆಯ. ಅವನು ಅನಂತ ಅವ್ಯಯ. ಆದರೆ ನಾನು ಕಿಂಚಿಜ್ಞ, ನಾನು ಅವನ ದಾಸನು–ಸೇವಕನು ಎಂಬ ದಾಸೋಹಂ ಭಾವ. ಇದು ಪೃಥಕ್ತ್ವೋಪಾಸನೆ ಎನಿಸುವುದು.

4) **ಬಹುಧಾ ಉಪಾಸನೆ:** ದೇವನೇ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಪರಶಿವ, ಕಾಳಿಕೆ, ಭವಾನಿ, ಅಂಬಿಕೆ, ಶಾರದೆ ಎಂದು ಭಾವಿಸಿ ತಮಗಿಷ್ಟವಾದ ಒಂದು ಮೂರ್ತಿಯನ್ನು ಅರ್ಚಿಸುವದು ಬಹುಧಾ ಉಪಾಸನೆಯು.

5) **ಸರ್ವಾತ್ಮ ಉಪಾಸನೆ:** ದೇವನು ಪರಮಸತ್ಯ – ನಿತ್ಯ – ಶಾಶ್ವತನು. ಎಲ್ಲದರಲ್ಲೂ ಅವನ ಅಸ್ತಿತ್ವವಿದೆ. ಇರುವುದೆಲ್ಲವೂ ವಾಸ್ತವಿಕವಾಗಿ ಸತ್ಯ! ನಿತ್ಯ!! ಈ ಭಾವನೆಯಿಂದ ಬದುಕುವುದು ಸರ್ವಾತ್ಮ ಉಪಾಸನೆಯು.

ಕ) ಉಪಾಸನೆಯ ಫಲ :

1) ಉಪಾಸಕನಲ್ಲಿ ಸರ್ವಾತ್ಮ ಭಾವ ಉದಿಸುವುದು:

ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಮ್ ।
ಮಂತ್ರೋಹಮೇವಾಜ್ಯಮಹಮಗ್ನಿರಹಂ ಹುತಮ್ ॥

ಪಿತಾಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್ ಸಾಮ ಯಜುರೇವ ಚ ॥

ನಾನೇ ಕ್ರತು, ಯಜ್ಞ, ಸ್ವಧಾ, ಔಷಧ, ಆಜ್ಯ, ಮಂತ್ರ, ಅಗ್ನಿ ಮತ್ತು ಹುತ ಹಾಗು ನಾನೇ ವಿಶ್ವದ ಪಿತಾ, ಮಾತಾ, ಪೋಷಕ, ಪಿತಾಮಹ, ತಿಳಿಯಬೇಕಾದ ವಸ್ತುವು.

ನಾನು ನಾಲ್ಕು ವೇದಗಳು. ಪವಿತ್ರವಾದ ಓಂಕಾರವೂ ನಾನೇ. ನನ್ನ ಚೇತನ ರಸಃ ಜೀವಿಗಳ ಹಾಗೂ ಜಡ ವಸ್ತುಗಳ ಒಳಗೆಲ್ಲ ಹರಿಯುತ್ತಿದೆ.

ನನ್ನನ್ನು ಯಥಾವತ್ತಾಗಿ ಗುರುತಿಸಿದ ಸರ್ವಾತ್ಮದರ್ಶಿಯು ಬಾಹ್ಯಾಂತರದಲ್ಲಿ ನನ್ನನ್ನೇ ನೋಡುತ್ತಾನೆ. ಅವನಿಗೆ ವಿಶ್ವದ ಮಾನವರೆಲ್ಲ ದೇವರು. ಅವರ ಸೇವೆಯೂ ಪೂಜೆ. ಅವನ ಮುಖದಿಂದ ಸದಾ ಸ್ನೇಹಶೀಲ, ಕಾರುಣ್ಯಪೂರ್ಣ ಶಬ್ದಗಳು ಬರುತ್ತವೆ. ಅವನ ಮಾತು ಮಂತ್ರ. ಅವನ ನಡತೆ ಧರ್ಮ. ಅವನ ಬದುಕು ಪಾವನ.

2) ಉಪಾಸಕನು ಪರಮಾತ್ಮನನ್ನೇ ಹೊಂದುತ್ತಾನೆ :

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೆ ।
ತೇಷಾಂ ನಿತ್ಯಾಭಿಯುಕ್ತಾಣಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಯಾರು ನನ್ನನ್ನು ಏಕಾಗ್ರಚಿತ್ತದಿಂದ ಅನನ್ಯ ಭಕ್ತಿ ಭಾವಯುಕ್ತರಾಗಿ ಉಪಾಸಿಸುವರೋ ಅವರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ. ಅವರು ನನ್ನ ಪ್ರೀತಿಗೆ ಪಾತ್ರರು. ಉದಾ–(1) ನಾಮದೇವನು ನಾಯಿಯಲ್ಲಿಯೂ ದೇವನನ್ನು ಕಂಡನು. ಉದಾ–(2) ಏಕನಾಥ ಮಹಾರಾಜರು ಭಾಗವತ ರಚನೆಯಲ್ಲಿ ತಲ್ಲೀನರಾದಾಗ ದೇವರು ಸೇವಕನ ವೇಷ ಧರಿಸಿ ಕಸಗುಡಿಸುವದು, ನೀರು ತರುವುದು, ಬಟ್ಟೆ ತೋಳೆಯುವುದು, ಅಂಗ ಸೇವೆ ಮಾಡಿ ಅವನ ಆಳಿನಾಳಾಗಿ ದುಡಿದನು.

ಸರ್ವಜ್ಞನು ಈ ಮಾತನ್ನು ದೃಢಪಡಿಸುತ್ತಾನೆ.
ಕೋಳಿ ಕೂಗದ ಮುನ್ನ ಏಳುವುದು ದಿನ ನಿತ್ಯ । ದ
ಯಾಳು ದೇವರನ್ನು ನೆನೆದರಾದೇವರು ।
ಆಳಿನಾಳಯ್ಯ ಸರ್ವಜ್ಞ।

ಗೀತೆಯಲ್ಲಿ ಪರಮಾತ್ಮನು ಇನ್ನೂ ವಿಸ್ತೃತವಾಗಿ ಹೇಳುತ್ತಾರೆ,

ಯಾಂತಿ ದೇವವ್ರತಾ ದೇವಾನ್ ಪಿತ್ಯಾನ್ ಯಾಂತಿ ಪಿತೃವ್ರತಾ ।
ಭೂತಾಣಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋऽಪಿ ಮಾಂ॥

ದೇವತೆಗಳಲ್ಲಿ ಭಕ್ತಿಯುಳ್ಳವರು ದೇವತೆಗಳನ್ನು ಹೊಂದುತ್ತಾರೆ. ಅದರಂತೆ ಪಿತೃ ಭಕ್ತರು ಪಿತೃಗಳನ್ನು ಭೂತ ಪೂಜಕರು ಭೂತಗಳನ್ನು ಸೇರುತ್ತಾರೆ. ನನ್ನ ಭಕ್ತರು ನನ್ನನ್ನು ಸೇರುತ್ತಾರೆಂದು ಅವರ ಸ್ಪಷ್ಟ ಅಭಿಪ್ರಾಯ.

3) ಉಪಾಸಕನು ಕರ್ಮ ಬಂಧನದಿಂದ ಬಿಡುಗಡೆ ಹೊಂದುತ್ತಾನೆ,

ಶುಭಾಶುಭಫಲೈರೇವಂ ಮೋಕ್ಷಸೇ ಕರ್ಮಬಂಧನೈಃ ।
ಸನ್ಯಾಸ ಯೋಗಯುಕ್ತಾತ್ಮ ವಿಮುಕ್ತೋ ಮಾಮುಪೈಷ್ಯಸಿ ॥

ಶುಭಾಶುಭ ಫಲದಾಯಕ ಕರ್ಮ ಬಂಧನದಿಂದ ಬಿಡುಗಡೆಯಾಗಿ ಸನ್ಯಾಸ ರೂಪಯೋಗದಿಂದ ಶುದ್ಧ ಅಂತಃಕರಣವುಳ್ಳವನಾಗಿ ಮುಕ್ತನಾಗಿ ದೇವನನ್ನು ಹೊಂದುವನು.

4) ಭಕ್ತಿಪೂರ್ವಕವಾಗಿ ಪೂಜಿಸುವ ಉಪಾಸಕನಲ್ಲಿ ದೇವನಿರುವನು :

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥

ತಾರತಮ್ಯ ಭಾವ ಮಾಡದೆ ಎಲ್ಲರನ್ನೂ ಪ್ರೀತಿಸಿ ದೇವರನ್ನು ಭಜಿಸುವ ಭಕ್ತನ ಹೃದಯದಲ್ಲಿ ಪರಮಾತ್ಮನು ತಾನಿರುವನೆಂದು ಹೇಳಿದ್ದಾನೆ.

ಯಥಾ ನದ್ಯಸ್ಸ್ಯಂದಮಾನಾಸ್ಸಮುದ್ರೇ ಅಸ್ತಂಗಚ್ಛಂತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥

ವಿವಿಧ ಗತಿಯಿಂದ ಹರಿಯುವ ನದಿಗಳು ತಮ್ಮ ನಾಮ ರುಪಗಳ ತೊರೆದು ಸಮುದ್ರದಲ್ಲಿ ಅಸ್ತವಾಗುವವೋ ಹಾಗೇ ದೇವ ವಿಜ್ಞಾನಿಗಳು ತಮ್ಮ ಪೂರ್ವಾಶ್ರಮವನ್ನು ತ್ಯೇಜಿಸಿ ಪರಬ್ರಹ್ಮನಲ್ಲಿ ಅವಿನಾಭಾವಿಗಳಾಗುತ್ತಾರೆ.

5) ಉಪಾಸನೆಯಿಂದ ಉಪಾಸಕನಲ್ಲಿ ಅನನ್ಯ ಭಕ್ತಿ ಉಂಟಾಗಿ ದೃಢ ಭಕ್ತನಾಗುವನು. ಅಂತ ಭಕ್ತನಿಗೆ ನಾಶವೇ ಇಲ್ಲ.

ಕ್ಷಿಪ್ರಂಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿ ಜಾನೀಃ ನ ಮೇ ಭಕ್ತಃ ಪ್ರಣಶ್ಯತಿ ॥

ಇಷ್ಟೆ ಅಲ್ಲ, ದೇವನನ್ನು ಯಾರು ಆಶ್ರಯಿಸುವರೋ ಅವರಲ್ಲಿ ತಾರತಮ್ಯವಿಲ್ಲವೋ ಅವರು ದೇವನನ್ನು ಹೊಂದುತ್ತಾರೆ.

ಡ) ಉಪಸಂಹಾರ :–

ಶ್ರೀ ಮದ್ಭಗವದ್ಗೀತೆಯಲ್ಲಿ ಪ್ರತಿಯೊಂದು ಅಧ್ಯಾಯದಲ್ಲಿಯೂ ಉಪಾಸನೆಯು ಸೂಕ್ಷ್ಮವಾಗಿ ಹರಡಿದೆ. ಇದೊಂದು ಉಪಾಸನಾ ಗ್ರಂಥವೆಂದೇ ಹೇಳಬಹುದು. ಆಚಾರ ಸಂಹಿತೆಯೂ ಹೌದು. ಬದುಕನ್ನು ಸುಂದರವೂ ದಿವ್ಯವೂ ಆಗುವಂತೆ ಮಾಡಿಕೊಳ್ಳಲು ಮಾರ್ಗದರ್ಶನವುಳ್ಳದ್ದು. ಸಂಸಾರದ ತೆರೆಕೊಬ್ಬಿ ಬಡಿಯುವಾಗ ಹತಾಶನಾಗದೆ– 'ನಾನು ಪರಮಾತ್ಮನ ಸೃಷ್ಟಿಯಲ್ಲಿದ್ದೇನೆ. ಆತನ ಅಂಶ ನನ್ನಲ್ಲಿಯೂ ಇದೆ. ನಾನೂ ಅವಿನಾಶಿ–ಅಮರ. ನನ್ನನ್ನು ನಾನೇ ಉದ್ಧರಿಸಿಕೊಳ್ಳಬೇಕು–'

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈವರಿಪುರಾತ್ಮನಃ ॥

ನನ್ನನ್ನು ನಾನೇ ಉದ್ಧರಿಸಿಕೊಳ್ಳಲು ಸಾಧ್ಯವಿದೆ ಎಂದು ದೃಢನಿರ್ಧಾರದಿಂದ, ಅನನ್ಯ, ಶ್ರದ್ಧೆ, ಭಕ್ತಿ, ನಿಷ್ಠೆಯಿಂದ, ಸತತ ಪ್ರಯತ್ನ, ಸರ್ವಾರ್ಪಣ ಭಾವದಿಂದ ಜೀವನ ಸಾಗಿಸಿದರೆ, ಭಗವದ್ದರ್ಶನವಾಗಿ ಉಪಾಸನೆಯು ಯಶದಲ್ಲಿ ಭಾಷಾಂತರಿಸಲ್ಪಡುವುದು ಎಂದು ಪರಮಾತ್ಮನೇ ತನ್ನ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಮನಃಶಾಸ್ತ್ರದ ವಿಸ್ಮಯ : ಭಗವದ್ಗೀತೆ

– ವಿದ್ಯಾವಾಚಸ್ಪತಿ ಬನ್ನಂಜೆ ಶ್ರೀ ಗೋವಿಂದಾಚಾರ್ಯ

ಮಹಾಭಾರತ ಮೂರು ಬಗೆಯಿಂದ ತೆರೆದುಕೊಳ್ಳುತ್ತದೆ ; ಐತಿಹಾಸಿಕವಾಗಿ, ಮನಃಶಾಸ್ತ್ರೀಯವಾಗಿ ಮತ್ತು ಭಗವತ್‌ಪರವಾಗಿ,

ಈ ಮಾತಿನ ಸುಳಿವನ್ನು ಭಾರತವೇ ಹೇಳುತ್ತದೆ–

ಮನ್ವಾದಿ ಕೇಚಿದ್ ಬ್ರುವತೇ ಹ್ಯಾಸ್ತೀಕಾದಿ ತಥಾ ಪರೇ ।
ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ॥

[ಭಾರತ ಮನನೀಯವಾದ ಜೀವನಮೌಲ್ಯವನ್ನು ಹೇಳುವ ಮನಃಶಾಸ್ತ್ರೀಯ (ಮನ್ವಾದಿ) ಗ್ರಂಥ ಎಂದು ಕೆಲವು ಹೇಳುತ್ತಾರೆ. ಆಸ್ತಿಕರಾದ ಪಾಂಡವರ ಇತಿಹಾಸವಿದು (ಆಸ್ತಿಕಾದಿ) ಎಂದು ಕೆಲವರು, ಎಲ್ಲಕ್ಕೂ ಮೇಲಿರುವ ಭಗವಂತನ ಗುಣಗಾನವಿದು (ಉಪರಿಚರಾದಿ) ಎಂದು ಮತ್ತೆ ಕೆಲವರು.]

ಅವರವರ ಅರಿವಿಗೆ ಎಟುಕುವಷ್ಟು ಅವರವರ ಪಾಲಿನ ಭಾರತ. ಎಲ್ಲರೂ ಸರಿ. ಎಲ್ಲವೂ ಭಾರತದ ಅರ್ಥವೆ. ಭಾರತ ಬರಿಯ ಕುರುಪಾಂಡವರ ಇತಿಹಾಸವಲ್ಲ, ಅಧ್ಯಾತ್ಮದ ಇತಿಹಾಸ ಕೂಡ ಅಲ್ಲವೇ ?

ಹೊರಗಣ್ಣಿಗೆ ಪಾಂಡವರ ಇತಿಹಾಸ. ಒಳಗಣ್ಣಿಗೆ ಮನುಕುಲದ ಮನೋರಂಗದ ಇತಿಹಾಸ. ತಿಳಿಗಣ್ಣಿಗೆ ಭಗವಂತನ ಗುಣಗಾಥೆಯ ಇತಿಹಾಸ.

ಮೊದಲ ನೋಟಕ್ಕೆ ಇತಿಹಾಸ: Historical interpretation of the Mahabharata. ಅದರಾಚೆಗೆ ಮನಃಶಾಸ್ತ್ರ Psychological interpretation, ಮೂಲತಃ ತತ್ವಶಾಸ್ತ್ರ; Spiritual interpretation.

ಮನಃಶಾಸ್ತ್ರೀಯವಾಗಿ ಭಾರತದ ಸಾರವನ್ನು ಸಾರುವ ಗ್ರಂಥ ಭಗವತ್‌ಗೀತೆ. ನಾದವೆಲ್ಲ ಭಗವನ್ಮಯವಾಗುವ ತತ್ತ್ವಶಾಸ್ತ್ರದ ಕೊನೆಯ ಮಜಲಿಗೆ ನಮ್ಮನ್ನೊಯ್ಯುವ ಗ್ರಂಥ ವಿಷ್ಣುಸಹಸ್ರನಾಮ. ಈ ನೆಲೆಯಲ್ಲಿ ಮಹಾಭಾರತದ 32 ಲಕ್ಷ ಅಕ್ಷರಗಳೂ ಭಗವಂತನ 32 ಲಕ್ಷ ನಾಮಗಳು ಹೊರತು ಇನ್ನೇನೂ ಇಲ್ಲ.

ಸದ್ಯಕ್ಕೆ ನಮಗೆ ಪ್ರಸ್ತುತವಾಗಿರುವುದು ಇತಿಹಾಸದಲ್ಲಡಗಿರುವ ಅಧ್ಯಾತ್ಮದ ಜೀವನ ಮೌಲ್ಯದ ಸಂದೇಶ, ಮಹಾ ಭಾರತದ 'ಮನ್ವಾದಿ', ಮನಃಶಾಸ್ತ್ರೀಯ ಅರ್ಥದ ಮುಖ. ಭಗವತ್‌ಗೀತೆ ಇದಕ್ಕೆಂದೇ ಮೀಸಲು.

ಇದು ಮನಃಶಾಸ್ತ್ರವೂ ಹೌದು, ಸಂಖ್ಯಾಶಾಸ್ತ್ರವೂ ಹೌದು. ನ್ಯೂಮರಾಲಜಿಯ ಮೂಲಕ ಫಿಲಾಸಫಿಯತ್ತ ಪ್ರಯಣ.

ಮಹಾಭಾರತದ ಸಂಖ್ಯೆ ಏಳು ಮತ್ತು ಹದಿನೆಂಟು. ಏಳು ಪಾತ್ರಗಳ ಮೂಲಕ 18 ಮೌಲ್ಯಗಳ ವಿಶ್ಲೇಷಣೆ.

ಯಾವ ಏಳು? ಏನು ಹದಿನೆಂಟು?

ಪಂಚ ಪಾಂಡವರು, ದ್ರೌಪದಿ ಮತ್ತು ಕೃಷ್ಣ – ಇವು ಏಳು ಪಾತ್ರಗಳು

ಈ ಪಾತ್ರಗಳು ಪ್ರತಿನಿಧಿಸುವ ಮೌಲ್ಯಗಳು ಹದಿನೆಂಟು –

ಧರ್ಮರಾಜ	=	ಧರ್ಮ	(1)			ಪ್ರಾಣ	(10)
ಭೀಮ	=	ಭಕ್ತಿ	(2)			ಬಲ	(11)
		ಜ್ಞಾನ	(3)	ಅರ್ಜುನ	=	ಶ್ರವಣ	(12)
		ವೈರಾಗ್ಯ	(4)			ಮನನ	(13)
		ಪ್ರಜ್ಞಾ	(5)			ನಿದಿಧ್ಯಾಸನ	(14)
		ಮೇಧಾ	(5)	ನಕುಲ	=	ಶೀಲ	(15)
		ಧೃತಿ	(7)	ಸಹದೇವ	=	ವಿನಯ	(16)
		ಸ್ಥಿತಿ	(8)	ದ್ರೌಪದಿ	–	ವೇದವಿದ್ಯೆ	(17)
		ಯೋಗ	(9)	ಕೃಷ್ಣ	=	ವೇದವೇದ್ಯ	(18)

ಧರ್ಮದ ಪಂಚಾಂಗದ ಮೇಲೆ ಭಕ್ತಿ ಜ್ಞಾನ ಮುಂತಾದ ಹತ್ತು ಗುಣಗಳನ್ನು ಮೈಗೂಡಿಸಿಕೊಂಡು ಶಾಸ್ತ್ರಾರ್ಥದ ಶ್ರವಣ, ಮನನ, ನಿದಿಧ್ಯಾಸನ ನಡೆಯಬೇಕು : ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ.

ಶಾಸ್ತ್ರಜ್ಞಾನದ ಜತೆಗೆ ಶೀಲ–ವಿನಯಗಳು ನಿತ್ಯ ಸಂಗಾತಿಗಳಾಗಿರಬೇಕು. ಈ ಹದಿನಾರು ಮೌಲ್ಯಗಳ ನೆರವಿನಿಂದ ಹದಿನೇಳನೆಯ ವೇದವಿದ್ಯೆಯನ್ನು ಒಲಿಸಿಕೊಂಡು ಹದಿನೆಂಟನೆಯ ವೇದವೇದ್ಯವನ್ನು ಪಡೆಯುವುದೇ ಒಟ್ಟು ಅಧ್ಯಾತ್ಮದ ಇತಿಹಾಸದ ಸಾರಾಂಶ. ಇದೇ ಭಾರತದ ಮನೋವೈಜ್ಞಾನಿಕ ಅರ್ಥ. ಇದೇ ಭಗವತ್‌ಗೀತೆಯ ಅರ್ಥ.

ಅದಕ್ಕೆಂದೆ ಮಹಾಭಾರತದಲ್ಲಿ ಹದಿನೆಂಟು ಪರ್ವಗಳು. ಭಗವತ್‌ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳು. ಇದೊಂದು ಅಧ್ಯಾತ್ಮದ ಸಂಖ್ಯೆ. ಇದೇ ಗೀತೆಯ ಸಾಂಖ್ಯದ ಗುಟ್ಟು, ಇದೇ ಹದಿನೆಂಟರ ಗುಟ್ಟು.

ಇದು ಒಂದು ಬಗೆಯ ಹದಿನೆಂಟರ ಗಂಟು, ಇದನ್ನು ಇನ್ನೊಂದು ಬಗೆಯಿಂದಲೂ ಗೀತೆ ವಿಶ್ಲೇಷಿಸುತ್ತದೆ.

ಹದಿನೈದು ಜಡಬೇಲಿಗಳಿಂದ ಸುತ್ತುವರಿದವನು ಹದಿನಾರನೆಯ ಜೀವ. ಹದಿನೇಳನೆಯದು ಪ್ರಕೃತಿ. ಹದಿನೆಂಟನೆಯವನು ಪುರುಷೋತ್ತಮ.

ಇದನ್ನೇ ಗೀತೆ ಕ್ಷರಪುರುಷ, ಅಕ್ಷರಪುರುಷ ಮತ್ತು ಉತ್ತಮಪುರುಷ ಎಂಬ ತ್ರಿಪುಟಿಯಲ್ಲಿ ನಿರೂಪಿಸುತ್ತದೆ.

ಕ್ಷರವಾಗುವ, ನಾಶವಾಗುವ 15 ಜಡಬೇಲಿಗಳಿಂದ ಆವೃತವಾದ ಜೀವಜಾತ ಕ್ಷರಪುರುಷ.

ಜೀವಜಾತವನ್ನು ಸಂಸಾರದ ಬೇಲಿಯಲ್ಲಿ ಬಿಗಿದ ಮೂಲಪ್ರಕೃತಿ ಅಕ್ಷರಪುರುಷ.

ಬೇಲಿಯಿಂದ ಬಿಡುಗಡೆಗೊಳಿಸುವ, ಮೋಕ್ಷಪ್ರದನಾದ ಭಗವಂತ ಉತ್ತಮ ಪುರುಷ ; ಪುರುಷೋತ್ತಮ.

ಯಾವುದು ಈ ಜಡಬೇಲಿ? ಉಪನಿಷತ್ತು ಇದನ್ನು ವಿವರಿಸುತ್ತದೆ–

ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂದ್ರಿಯಂ ಮನೋಽನ್ನ–ಮನ್ನಾದ್ ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ ಲೋಕೇಷು ನಾಮ ಚ ।

1. ಶ್ರದ್ಧೆ, 2. ಆಕಾಶ, 3. ಗಾಳಿ, 4. ಬೆಂಕಿ, 5. ನೀರು, 6. ನೆಲ, 7. ಹತ್ತು ಇಂದ್ರಿಯಗಳು, 8. ಮನಸ್ಸು, 9. ಅನ್ನ, 10. ವೀರ್ಯ, 11. ಆಲೋಚನೆ, 12. ಮಾತು, 13. ಕೃತಿ, 14. ಸ್ಥಿರ–ಚರ ಸೊತ್ತು ಮತ್ತು 15. ಹೆಸರು. ಇವು ಹದಿನೈದು ಬೇಲಿಗಳು. ಈ ಬೇಲಿಯ ಬಿಗಿತವೇ ಸಂಸಾರ.

ಇವು ನಾಶವಾಗುವಂಥವು. ಅದರಿಂದ ಕ್ಷರಗಳು –

ಈ ಬೇಲಿಯಿಂದ ಪಾರಾಗುವ ಕಥೆಯೇ ಅಧ್ಯಾತ್ಮದ ಇತಿಹಾಸ. ಇದೇ ಭಗವದ್ ಗೀತೆಯ ಸಂದೇಶ.

15 ಜಡಬೇಲಿಗಳಿಂದ, ನಾಮ – ರೂಪಾತ್ಮಕವಾದ ಪ್ರಪಂಚದಿಂದ ಆವೃತನಾದ ಜೀವ, ಅದರ ಆಚೆಗೆ ಬಂಧಕ ಶಕ್ತಿಯಾದ ಪ್ರಕೃತಿ ಮತ್ತು ಮೋಚಕ ಶಕ್ತಿಯಾದ ಭಗವಂತ – ಈ ತ್ರಿಪುಟಿಯಲ್ಲಿ ಇಡಿಯ ಅಧ್ಯಾತ್ಮ ಅಡಗಿದೆ.

ಈ ಅಧ್ಯಾತ್ಮದ ಅಂತರಂಗದ ಸಂದೇಶವನ್ನೇ 700 ಶ್ಲೋಕಗಳಲ್ಲಿ ಭಗವದ್‌ಗೀತೆ ನಮ್ಮ ಮುಂದೆ ತೆರೆದಿಟ್ಟಿದೆ.

ಹೃದಯವೆಂಬ ಕುರುಕ್ಷೇತ್ರ

ಶ್ರೀಕೃಷ್ಣ ಅರ್ಜುನನಿಗೆ 5000 ವರ್ಷಗಳ ಹಿಂದೆ ಗೀತೋಪದೇಶ ಮಾಡಿದ. ಈ ಮಾತೇನೋ ನಿಜ. ಆದರೆ ಗೀತೆ ಸಾವಿರಾರು ವರ್ಷಗಳ ಹಿಂದಿನ ಐತಿಹಾಸಿಕ ಘಟನೆಯಾಗಿ ಮಾತ್ರವೇ ಗ್ರಾಹ್ಯವಲ್ಲ. ಅದು 5000 ವರ್ಷಗಳ ಹಿಂದೆ ಕುರುಕ್ಷೇತ್ರದಲ್ಲಿ ಕೌರವ-ಪಾಂಡವರ ಯುದ್ಧದಲ್ಲಿ ನಡೆದ ಘಟನೆಯಷ್ಟೇ ಅಲ್ಲ, ಅದು ನಮ್ಮದೇ ಇತಿಹಾಸ.

ಕುರುಕ್ಷೇತ್ರ ಎಲ್ಲೋ ಉತ್ತರ ಭಾರತದಲ್ಲಿರುವ ಒಂದು ಭೂಭಾಗವಲ್ಲ, ನಮ್ಮೆಲ್ಲರ ಹೃದಯ-ಕ್ಷೇತ್ರವೇ ಕುರುಕ್ಷೇತ್ರ. ನಮ್ಮ ಕರ್ಮಕ್ಷೇತ್ರವಾದ ನಮ್ಮ ಬದುಕೇ ಕುರುಕ್ಷೇತ್ರ.

ನಮ್ಮೊಳಗೆಯೆ ಮಹಾಭಾರತದ ಯುದ್ಧ ನಡೆಯುತ್ತಿದೆ. ನಮ್ಮೊಳಗೆಯೆ ಕೌರವರಿದ್ದಾರೆ ; ಪಾಂಡವರಿದ್ದಾರೆ ! ಹದಿನೆಂಟು ಅಕ್ಷೋಹಿಣಿ ಸೇನೆಗಳಿವೆ.

ನಮ್ಮೊಳಗಿನ ದುರ್ಯೋಧನ ಇನ್ನೊಬ್ಬರ ಆಸ್ತಿಯನ್ನು ಲಪಟಾಯಿಸು ಎನ್ನುತ್ತಿರುತ್ತಾನೆ. ನಮ್ಮೊಳಗಿನ ದುಃಶ್ಯಾಸನ ಪರಸ್ತ್ರೀಯರ ಮೇಲೆ ಕೈಮಾಡಲು ಹಾತೊರೆಯುತ್ತಿರುತ್ತಾನೆ. ನಮ್ಮೊಳಗಿನ ವಿಕರ್ಣ ಸಜ್ಜನಿಕೆಯ ಮುಖವಾಡದ ಮಾತುಗಳನ್ನಾಡುತ್ತ ನಮ್ಮೊಳಗಿನ ಹುಳುಕನ್ನು ಮುಚ್ಚಿಡಲು ಪ್ರಯತ್ನಿಸುತ್ತಾನೆ. ಸಾವಿರ ಸಾವಿರ ದುಷ್ಪವೃತ್ತಿಗಳು ಇದನ್ನು ಆಗಗೊಡಲು ನಮ್ಮೊಳಗೆ ಶಸ್ತ್ರ ಹಿಡಿದು ಸಜ್ಜಾಗಿ ನಿಂತಿವೆ.

ಇಂಥವರ ನಡುವೆಯೂ ನಮ್ಮೊಳಗಿನ ಧರ್ಮರಾಜ 'ಛೇ, ಹೀಗೆಲ್ಲ ಮಾಡಬೇಡ' ಎನ್ನುತ್ತಿರುತ್ತಾನೆ. ಭೀಮಾರ್ಜುನರು 'ಇದರ ವಿರುದ್ಧ ಹೋರಾಡು' ಎನ್ನುತ್ತಿರುತ್ತಾರೆ. ನಕುಲ 'ಶೀಲ ಕಳೆದುಕೊಂಡು ಕೆಟ್ಟಬಾಳು ಬದುಕಬೇಡ' ಎಂದು ಎಚ್ಚರಿಸುತ್ತಿರುತ್ತಾನೆ. ಸಹದೇವ 'ದುರಹಂಕಾರಿಯಾಗಿ ದಾರಿತಪ್ಪಬೇಡ' ಎಂದು ಬೆನ್ನು ತಟ್ಟುತ್ತಾನೆ. ಸಜ್ಜನಿಕೆಯ ಪುಟ್ಟ ಸೇನೆ ಇವರ ಪರವಾಗಿ ನಮ್ಮೊಳಗೆ ಕಾದಾಟಕ್ಕೆ ಸಿದ್ಧವಾಗಿದೆ.

ನಮ್ಮ ಬದುಕಿನಲ್ಲೇ ನಡೆಯುವ ಈ ಧರ್ಮಾಧರ್ಮಗಳ, ಸಜ್ಜನಿಕೆ-ದೌರ್ಜನ್ಯಗಳ, ಒಳಿತು-ಕೆಡುಕುಗಳ, ನೀತಿ-ಅನೀತಿಗಳ ಮಾನವೀಯತೆ-ದಾನವೀಯತೆಗಳ ನಡುವಣ ಈ ನಿರಂತರ ಯುದ್ಧದಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಕೌರವರು ಗೆಲ್ಲುತ್ತಾರೆ. ನಾವು ಕೌರವರು ಹೇಳಿದಂತೆಯೇ ನಡೆದುಕೊಂಡುಬಿಡುತ್ತೇವೆ. ಪಾಂಡವರು ತೆಪ್ಪಗೆ ಸೋತು ಕಾಡುಪಾಲಾಗುತ್ತಾರೆ.

ಇಂಥ ಸಂದರ್ಭದಲ್ಲಿ ಗೀತೆ ನಮ್ಮನ್ನು ಎಚ್ಚರಿಸುತ್ತದೆ. "ನಿನ್ನೊಳಗೆ ನಡೆಯುವ ಯುದ್ಧದಲ್ಲಿ ಕೌರವರು ಗೆಲ್ಲುವಂತೆ ಮಾಡಿಕೊಂಡು ನಿನ್ನ ಬಾಳನ್ನು ಹಾಳುಮಾಡಿಕೊಳ್ಳಬೇಡ. ಕೌರವರು ಗೆಲ್ಲುವುದು ಎಂದರೆ ನೀನು ಸೋಲುವುದು

ಎಂದೇ ಅರ್ಥ. ಪಾಂಡವರು ಗೆಲ್ಲುವುದು ಎಂದರೆ ನೀನು ಗೆಲ್ಲುವುದು ಎಂದರ್ಥ. ಆದರಿಂದ ಎಲ್ಲ ಸಂದರ್ಭದಲ್ಲೂ ಪಾಂಡವರು ಗೆಲ್ಲುವಂತೆ ನೋಡಿಕೋ. ನೀನು ಕೌರವನಾಗಬೇಡ, ಅರ್ಜುನನಾಗು. ನಿನಗೆ ಭೀಮನ ಬೆಂಬಲವಿರಲಿ; ಧರ್ಮದ ನೆರವಿರಲಿ, ನಿನ್ನ ಬದುಕಿನ ಸಾರಥ್ಯವನ್ನು ಶ್ರೀಕೃಷ್ಣನಿಗೆ ಒಪ್ಪಿಸು".

ಮನುಷ್ಯನ ಮಾನಸಿಕ ಸಮಸ್ಯೆಗಳಿಗೆಲ್ಲ ಸಾರ್ವಕಾಲಿಕವಾಗಿ ಉತ್ತರ ನೀಡುವ ಗ್ರಂಥ ಭಗವದ್‌ಗೀತೆ. ಅದರಿಂದಲೇ ಅದು ಯಾವುದೋ ಕಾಲಕ್ಕೆ, ಯಾವುದೋ ಒಂದು ವರ್ಗದ ಜನಕ್ಕೆ ಮಾತ್ರ ಸೀಮಿತವಾದ ಗ್ರಂಥವಲ್ಲ. ಒಂದು ಧರ್ಮದ ಜನಕ್ಕೆ ಮಾತ್ರವೆ ಗ್ರಾಹ್ಯವಾದ ಧಾರ್ಮಿಕ ಗ್ರಂಥವಲ್ಲ, ಕಾಲ–ದೇಶಗಳ ಸೀಮೆಯನ್ನು ದಾಟಿ ನಿಲ್ಲಬಲ್ಲ ಮಹಾನ್ ಗ್ರಂಥ.

ಗೀತೆ ಬರಿಯ ಅಧ್ಯಾತ್ಮ ಗ್ರಂಥವಲ್ಲ. ಜಗತ್ತಿನ ಮೊತ್ತಮೊದಲ ಮನಃಶಾಸ್ತ್ರೀಯ ಗ್ರಂಥವೂ ಹೌದು. ಯಾವ ಮನಃಶಾಸ್ತ್ರದ ಸಮಸ್ಯೆಗೂ ಗೀತೆ ಉತ್ತರಿಸದೆ ಬಿಡುವುದಿಲ್ಲ. ಆದರೆ ದಡ್ಡರಿಗೆ ಯಾವ ಮದ್ದೂ ಉಪಯೋಗವಿಲ್ಲ. ಸಾಯಹೊರಟವನಿಗೆ ಮದ್ದು ಅಸಹ್ಯವಾಗುತ್ತದೆ. ಅವನು ಮದ್ದನ್ನೆ ದ್ವೇಷಿಸುತ್ತಾನೆ ; ಅಂತತಃ ತನ್ನ ಬದುಕನ್ನೆ ದ್ವೇಷಿಸುತ್ತಾನೆ.

ಇಂಥ ಒಂದು ಅದ್ಭುತವಾದ ಗ್ರಂಥ ನಮ್ಮ ದೇಶದಲ್ಲಿ ನಿರ್ಮಾಣವಾಗಿದೆ ಅನ್ನೋದು ನಮಗೆಲ್ಲ ಹೆಮ್ಮೆಯ ಸಂಗತಿಯಾಗ ಬೇಕು. "ಗೀತೆಯ ದೇಶದಿಂದ ಬಂದವರು" ಎಂದು ವಿದೇಶಿಯರು ನಮ್ಮನ್ನು ಗೌರವದಿಂದ ಕಾಣುವುದನ್ನು ನಾನು ಕಂಡು ದಂಗಾಗಿದ್ದೇನೆ. ಆದರೆ ನಮ್ಮ ಜನ ಇಷ್ಟು ದೊಡ್ಡ ಸಂಪತ್ತು ನಮ್ಮ ಬಳಿಯೇ ಇದ್ದೂ ಜ್ಞಾನದರಿದ್ರರಾಗಿ ಬದುಕುತ್ತಿದ್ದಾರೆ. ದಡ್ಡತನಕ್ಕೆ ಮದ್ದೇ ಇಲ್ಲ. ತಮಗೆ ಏನೂ ಗೊತ್ತಿಲ್ಲ ಎನ್ನುವುದೂ ಗೊತ್ತಿಲ್ಲದೆ ಇದ್ದವರನ್ನು ಯಾರು ಕಾಪಾಡಬೇಕು!

ವಿಶ್ವರೂಪ ~ ವಿಶ್ವಸಂದೇಶ

– ಡಾ. ಕೆ.ಎಸ್. ನಾರಾಯಣಾಚಾರ್ಯ

"ಗೀತಾ, ಗಂಗಾ, ಗಾಯತ್ರಿ, ಗೋವಿಂದ" ಈ ನಾಲ್ಕು "ಗ" ಕಾರದಿಂದ ಆರಂಭವಾಗುವ ಪವಿತ್ರ ಶಕ್ತಿಗಳ ನಾಮಗಳು ನಮ್ಮನ್ನು ಪೂತಗೊಳಿಸುತ್ತವೆಂದು ಶ್ರೀಮಹಾಭಾರತ, ಇದೇ ಗೀತಾ ಉಪದೇಶ ಮುಕ್ತಾಯ ಸಂದರ್ಭದಲ್ಲಿ ತಿಳಿಸುತ್ತದೆ. 'ಗೋವಿಂದ' ಎಂದರೆ ಶ್ರೀಕೃಷ್ಣ, ಅವನ ಪಾದೋದ್ಭವೆ 'ಗಂಗೆ', ಮುಖೋದ್ಭವೆ 'ಗೀತಾ', ಅವನ ಪ್ರತಿಭಾವಿಲಾಸ ; ಜಗತ್ ಪ್ರಚೋದನ ಶಕ್ತಿಯ ರಹಸ್ಯ ಕೇಂದ್ರವೇ 'ಗಾಯಿತ್ರಿ' ಮಂತ್ರ. ಎಲ್ಲವೂ ಪರಸ್ಪರ ಸಂಬಂಧ, ಮಂತ್ರಾತ್ಮಕ.

ಗೀತೆ ಎಲ್ಲರ ಮಾತೆ ಎಂಬುದು ಸನಾತನ ಗ್ರಹಿಕೆ. ಅದನ್ನು ಸನಾಥೀಗೊಳಿಸಿ ಸಮರ್ಥಿಸುವ ವಾಕ್ಯಗಳು ಎಲ್ಲೆಂದರಲ್ಲಿ ಗೀತೆಯಲ್ಲಿ ಸೂತ್ರದಂತಿವೆ. ಒಂದನ್ನು ಮಾತ್ರ ಇಲ್ಲಿ ವಿವೇಚಿಸಿ ಅನುಭವಿಸೋಣ :

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ, ಸ ಚಮೇ ನ ಪ್ರಣಶ್ಯತಿ ॥ (6–30)

"ಯಾವನೊಬ್ಬನು ಎಲ್ಲೆಡೆಯೂ ನನ್ನನ್ನೇ ಕಾಣುವನೋ, ಎಲ್ಲವನ್ನೂ ನನ್ನಲ್ಲೇ ಕಾಣುವನೋ ಅವನ ಭಾಗಕ್ಕೆ (ಅವನ ಅನುಭವದಲ್ಲಿ) ನಾನು ಇಲ್ಲವಾಗುವುದಿಲ್ಲ, ನನ್ನ ಭಾಗಕ್ಕೆ (ನನ್ನ ಅನುಭವದಲ್ಲಿ) ಅವನೂ ಇಲ್ಲದಾಗುವುದಿಲ್ಲ."

ಬಹುದೊಡ್ಡ ತತ್ತ್ವ ಇಲ್ಲಿ ಅಡಗಿದೆ. ಭಗವಂತನೂ, ಭಕ್ತನೂ ಒಬ್ಬರಿಗೊಬ್ಬರು "ಪ್ರಣಾಶ" ಹೊಂದಲಾರರು ಎಂಬ ಭರವಸೆಯ ಹಿಂದೆ ಏನು ಅಡಗಿದೆ? ಎಂದರೆ ಅವಿನಾಸಂಬಂಧ ಎಂದು ಹೇಳಬಹುದು. 'ಪ್ರಣಾಶ' ಸಂಭವವಾದರೂ ಹೇಗೆ? ಒಬ್ಬ ನಾಸ್ತಿಕ, ಭೌತಿಕವಾದಿ ಎನ್ನಿ. ಅವನಿಗೆ ಎಲ್ಲೆಲ್ಲೂ ಪಂಚ ಭೂತಗಳೇ ಕಾಣಿಸುವುದಾದರೆ, ದೇವರು ಅಲ್ಲಿ ತಿರೋಧಾನ ಹೊಂದಿರುತ್ತಾನೆ. ಗರ್ವಗೊಂಡ ಗೋಪಿಯರಿಗೆ ಶ್ರೀಕೃಷ್ಣ ಅಂತರ್ಧಾನನಾದ ಹಾಗೆ. ರಾಸಲೀಲಾಧ್ಯಾಯದ ಭಾಗವತದಲ್ಲಿ ಈ ತಿರೋಧಾನ ತತ್ತ್ವ ಇದೆ ಲವ ಮಾತ್ರ ಅಹಂಕಾರ ಇರುವವರಿಗೂ ದೇವರು ಕಾಣಲಾರ. ಅದೇ ಅವನ ಭಾಗಕ್ಕೆ 'ನಾಶ', 'ಪ್ರಣಾಶ'. ಎಲ್ಲವನ್ನೂ ವಾಸುದೇವನಲ್ಲಿಯೇ ಕಾಣುವ

ಇನ್ನೊಬ್ಬ ಭಕ್ತನಿಗೆ, ಭಗವಂತನಿಗೂ ಆಗ ಆ ಭಕ್ತನೇ ಕಾಣುವವನಾಗಿ, ಭಗವಂತನಿಗೆ ಭಕ್ತಸಂಗ ಲಾಭ ಎಂಬುದು ರಸಪೂರ್ಣ ವಿವರಣೆ. ಆಗ ಭಕ್ತ 'ಪ್ರಣಾಶವಿಲ್ಲ' ಎಂದರೆ ಭಗವಂತನ ಉಪೇಕ್ಷೆಯಿಲ್ಲ, ಔದಾಸೀನ್ಯ ಇಲ್ಲ, ಪ್ರಹ್ಲಾದನಂತೆ, ಭಗವಂತನ ಕಣ್ಣು ಸದಾ ಅವನ ಮೇಲೆಯೇ ಇರುತ್ತದೆ. ಭಗವದ್ದರ್ಶನವಿಲ್ಲದೆ ಭಕ್ತ 'ನಾಶ', ಭಕ್ತದರ್ಶನವಿಲ್ಲದೆ ಭಗವಂತನ 'ಕೊರಗು, ಸೊರಗು' ಈ ಎರಡೂ ಇರುವುದಿಲ್ಲ. ಎಂಬುದು ತಾತ್ಪರ್ಯ. ಶಾಂಡಿಲ್ಯ ವಿದ್ಯೆಯ 'ಸರ್ವಂಖಲು ಇದಂ ಬ್ರಹ್ಮ' ಎಂಬ ಉಪದೇಶಸಾರ ಇದು ಎಂದು ಹೇಳಬಹುದು.

ಈಗ ಇದರ ವಿವರಣೆ ಗೀತೆಯಲ್ಲೇ ಎರಡು ಪರಸ್ಪರ ಸಾಪೇಕ್ಷ ಅಧ್ಯಾಯಗಳಲ್ಲಿದೆ. (1) ಹತ್ತನೆಯ ಅಧ್ಯಾಯದಲ್ಲಿ ಭಗವಂತನ ವೈಭವ, (Excellence) ಸೌಂದರ್ಯ, ಶಕ್ತಿ, ಚೆಲುವು, ಜ್ಞಾನ, ಉನ್ನತಿ, ಮತ್ತ್ವಸೂಚಕ ಚಿಹ್ನೆಗಳು – ಇವು ಎಲ್ಲೆಲ್ಲಿ ಎದ್ದು ಕಾಣುವಂತಿವೆ? ಎಂಬ ಉದಾಹರಣೆಗಳು "ಯೋ ಮಾಂ ಪಶ್ಯತಿ ಸರ್ವತ್ರ" ಎಂಬುದರ ವಿವರಣೆಯಂತಿದೆ. ಲೋಕದಲ್ಲಿ ಆ ವೈಭವ, ಹನಿ, ಸೌಂದರ್ಯ ಚೆಲ್ಲದ ವಸ್ತುವೇ ಇಲ್ಲ. "ಯದ್ಯತ್ ವಿಭೂತಿಮತ್ ಸತ್ತ್ವಂ, ಶ್ರೀಮತ್, ಊರ್ಜಿತಂ" ಎಂಬುದೆಲ್ಲ, ಅವನ ಅನಂತ ಮಹಿಮಾ ಕೇಂದ್ರಗಳು. (2) ಹನ್ನೊಂದನೆಯ ಅಧ್ಯಾಯದಲ್ಲಿ ಈ ಚರಾಚರವಿಶ್ವವೆಲ್ಲ ಆ ಭಗವಂತನಲ್ಲೇ ಅಡಗಿರುವ ಇನ್ನೊಂದು ವೈಭವದ ಮುಖಕ್ಕೆ ಗೀತೆ ಆರತಿ ಎತ್ತಿದೆ. ಶ್ರೀ ವಿಷ್ಣುಸಹಸ್ರನಾಮದ ಧ್ಯಾನಶ್ಲೋಕದ ತತ್ತ್ವವೂ, ವೈಶ್ವಾನರ ವಿದ್ಯೆಯ ರಹಸ್ಯವೂ ಇಲ್ಲಿವೆ. ಯಕ್ಷರಾಕ್ಷಸ ಭೂತ ಪಿಶಾಚ, ಭೇತಾಳ, ಕಿನ್ನರ, ಉರಗ, ನಾಗಾವಿಗಳೂ, ದೇವ, ಪಿತೃ, ಗಂಧರ್ವ, ಮೊದಲಾದ ಉನ್ನತ ಸೃಷ್ಟಿವರ್ಗವೂ, ಎಲ್ಲ ಹದಿನಾಲ್ಕು ಲೋಕಗಳೂ ಇಲ್ಲೇ ಅಡಗಿವೆ ಎಂದರೆ ಗ್ರಹಿಸುವುದು ಕಷ್ಟ. ಅದೇ ಪೂರ್ಣತ್ವ. 'ವಿಶ್ವಂ, ವಿಷ್ಣುಃ' – ಪೂರ್ಣತ್ವ, ವ್ಯಾಪಕತ್ವ, ತತ್ತ್ವಗಳು ಮತಿಹೀನರಿಗಿರಲಿ, ಜ್ಞಾನಿಗಳಿಗೂ ಮರ್ತ್ಯಮಾನವ ಲೋಕದಲ್ಲಿ ಪ್ರತ್ಯಕ್ಷಾಸಾಧ್ಯ. ಅರ್ಜುನನಿಗೇ ಆಗಲೇ ಇಲ್ಲ. ಇಚ್ಛೆ ಇತ್ತು. "ನಾನು ಕಂಡೇನೆಂದು ನಿನಗೆ ಅನ್ನಿಸಿದರೆ" – (ಮನ್ಯಸೇ ಯದಿ ತತ್ ಶಕ್ಯಂ ಮಯಾದ್ರಷ್ಟುಮಿತಿ....11–4) ಎಂದೇ ಸಂದೇಹದಿಂದ ಕೇಳಿದ. ಆಗಲಿಲ್ಲ. ವ್ಯಾಸಕೃಪೆಯಿದ್ದ, ಸಂಜಯನಿಗೆ ಅದು ಸಾಧ್ಯವಾಯಿತೆಂದು ಗೀತಾಫಲಶ್ರುತಿ ಭಾಗ ಹೇಳುತ್ತದೆ. ಅದು ಗುರುಕೃಪೆಯ ಬಲ. ಶ್ರೀಕೃಷ್ಣ ಸಖನಾಗಿದ್ದೂ, ಅರ್ಜುನನಿಗೆ ಗುರುಕೃಪೆ ಒದಗಿ ಬರಲಿಲ್ಲ. ಯೋಚಿಸಿ.

ಇದೇ ಇಲ್ಲಿ ಇನ್ನೊಂದು ಮರ್ಮವೂ ಇದೆ. ವಿಶ್ವರೂಪಿಯ ತೆರೆದ ಬಾಯಿ 'ನಾನು ಕಾಲ' ಎಂದುಕೊಂಡ ಶ್ರೀಕೃಷ್ಣನ ಪ್ರಳಾಯಂತಕ ಮುಖ, ಭಯಾನಕವಾದದ್ದು ಅರ್ಥೈಸಲು ಕೆಲವರಿಗೆ ಕಷ್ಟ. ವಿವರಣೆಗೆ ಕಠೋಪಪಷತ್ತಿನ 'ಯಸ್ಯ ಬ್ರಹ್ಮಜಾ ಕ್ಷತ್ರಂಚ ಉಭೇ ಭವತ ವದನೇ, ಮೃತ್ಯುಃ ಯಸ್ಯೋಪಸೇಚನಂ" ಎಂಬ ಸೂಕ್ತಿಗೆ ಇಲ್ಲಿ ವಿವರಣೆ. ಬ್ರಹ್ಮಸೂತ್ರದ "ಅತ್ತಾಚರಾಚರಗ್ರಹಣಾತ್" ಎಂಬ ಸಂಗ್ರಹಕ್ಕೆ ಇಲ್ಲಿ

ವ್ಯಾಖ್ಯಾನದಂತೆ. 'ಭಗವಂತನು ಎಲ್ಲವನ್ನೂ ತಿನ್ನುತ್ತಾನೆ' ಎಂದರೆ ಏನರ್ಥ? "ಅಹಮನ್ನಂ ಅದಂತಂ ಆದ್ಮಿ" ಎನ್ನುವ ತೈತ್ತರೀಯ ಶ್ರುತಿಯೂ ಸ್ಮರಣೀಯ. ಭಗವಂತ 'ತಿನ್ನು'ವುದೆಂದರೆ ತನ್ನ ಪ್ರಯೋಜನಕ್ಕೆ, ಉಪಯೋಗಕ್ಕೆ 'ಬಳಸಿಕೊಳ್ಳು'ವುದು ಎಂದರ್ಥ. ಪಶ್ಚಿಮದ ತತ್ತ್ವಜ್ಞರು ಇದನ್ನು (ಖಿಜ ಆಂಥಿಣಡುಟಿಜ ಂಜ ಂಠಿಠಿಡಿಂಠಿಡುಚಿ-ಣುಂಟಿ) ಎನ್ನುತ್ತಾರೆ. ಭೀಷ್ಮ ದ್ರೋಣ ಕರ್ಣ ದುರ್ಯೋಧನ ದುಃಶಾಸನಾದಿ ಸಕಲ ಕೌರವರೂ, ಯುಧಿಷ್ಠಿರಾದಿ ಸಕಲ ಪಾಂಡವರೂ ಅವನ ಉಪಕರಣಗಳೇ ! ತೆರೆದ ಬಾಯಲ್ಲಿ ಎರಡು ಬೇರೆ ಕಡೆಯಿಂದ 'ಕ್ಯೂ' ನಿಂತು ಎಂಬಂತೆ, ಶ್ರೀಕೃಷ್ಣ ವದನದಲ್ಲಿ ಪ್ರವೇಶಿಸುತ್ತಾರೆ. ಅವನು ಚಪ್ಪರಿಸಿ ಭಕ್ಷಿಸುತ್ತಾನೆ. 'ಲೇಲಿಹ್ಯಸೇ' ಎನ್ನುತ್ತಾನೆ ಅರ್ಜುನ. ಭೀಷ್ಮಾದಿಗಳ ಮಂಡೆಗಳು ಪುಡಿಪುಡಿಯಾಗಿ ಕೃಷ್ಣನ ಹಲ್ಲುಸಂದಿಗಳಲ್ಲಿ ಅರ್ಜುನನಿಗೆ ಕಾಣಿಸುತ್ತಾರೆ. ಕೇಚಿತ್ ವಿಲಗ್ನಾ ದಶನಾಂತರೇಷು ಸಂದೃಶ್ಯಂತೇ ಚೂರ್ಣಿತೈಃ ಉತ್ತಮಾಂಗೈಃ" (11–27)

ಇವೆಲ್ಲವನ್ನೂ ಸಾಂಕೇತಿಕವಾಗಿ ಕಾಣಲೂ ಪ್ರತಿಭೆ, ಧೀವಿಲಾಸ, ಸೂಕ್ಷ್ಮಮತಿ, ಗುರುಕೃಪೆ ಬೇಕು. ಅದಿಲ್ಲದವರಿಗೆ ಎಲ್ಲವೂ ಪ್ರಶ್ನಾತೀತ. 'ದ್ರೌಪದಿಗೇಕೆ ಅವಮಾನ? ಏನು ಅಪರಾಧ ಅವಳದು? ಯುಧಿಷ್ಠಿರ ಏಕೆ ಜೂಜಾಡಿದ? ಭೀಷ್ಮ ದ್ರೋಣರಿಗೇಕೆ ಮಂಕು ಕವಿಯಿತು? ಕೃಷ್ಣನೊಡನೆ ಯುದ್ಧ ತಪ್ಪೆಂದೇಕೆ ತಿಳಿಯಲಿಲ್ಲ? ದುರ್ಯೋಧನ ಸತ್ತ ರೀತಿ, ಕೃಷ್ಣಮಾಯೆಗಳು... ಎಲ್ಲಕ್ಕೂ ಇಲ್ಲಿ ಉತ್ತರವಿದೆ. ಮಹಾಭಾರತದ ಎಲ್ಲ ಪ್ರಶ್ನೆಗಳಿಗೂ ವಿಶ್ವರೂಪಾಧ್ಯಾಯದಲ್ಲೇ ಉತ್ತರವಿರುವುದನ್ನು ಕುರಿತು ಬರೆದರೆ ರೋಚಕವೂ, ಬೋಧಪ್ರದವೂ ಆದ ಮಹಾಗ್ರಂಥವಾಗುತ್ತದೆ. ಈಗ ಒಂದು ಮುಖ್ಯ ಪ್ರಶ್ನೆ, ಪಾಮರರು ಕೇಳುವುದು; (ಅಥವಾ ಎರಡು ಎನ್ನಿ) 1) "ಎಲ್ಲರೂ ಒಂದುದಿನ ಸಾಯುತ್ತಾರಾದರೆ, ಒಳ್ಳೆಯವರಿಗೂ ಕೆಟ್ಟವರಿಗೂ ಆಗ ಏನು ವ್ಯತ್ಯಾಸ?"; 2) "ಹೇಗೆ ಹೇಗೆ ಸತ್ತವರಿಗೋ ಮೋಕ್ಷವುಂಟೇ?"

ಈ ಅಧ್ಯಾಯದಲ್ಲಿ ಉತ್ತರಗಳು ಹೀಗೆ :

1) ಸತ್ಪುರುಷರು, ಭಕ್ತರು, ಪ್ರಪನ್ನರು, ಉಪಾಸಕರು, ಸಾಧಕರು, ಯೋಗಿಗಳು – ಯಥಾ ನದೀನಾಂ ಬಹವೋಂಬುವೇಗಾಃ ಸಮುದ್ರಮೇವಾಭಿಮುಖಾ ದ್ರವಂತಿ.... (11–28) ಎಂಬಂತೆ "ತೀರ್ಥ"ರಾಗಿ (ತೀರ್ಥೀಕುರ್ವಂತಿ ತೀರ್ಥಾನಿ ಎಂದು ಶ್ರೀ ಭಾಗವತ ಹೇಳುವಂತೆ) ಸ್ನಾನಪಾನ ವ್ಯವಸಾಯ, ಆಹ್ನಿಕಾದಿಗಳಿಗೆ ಬಹೂಪಯುಕ್ತವಾದ ನದಿಗಳಂತೆ ಇಲ್ಲಿ ಬಾಳಿ, ಸಮುದ್ರಪ್ರಾಯನಾದ ಭಗವಂತನನ್ನೇ ಸೇರುತ್ತಾರೆ. ಪೂರ್ಣತ್ವಪ್ರಾಪ್ತಿ. ಇದೇ ಸಾಯುಜ್ಯಮೋಕ್ಷ. "ಅವಿಭಾಗೇನ ದೃಷ್ಟತ್ವಾತ್" ಬ್ರ.ಸೂ. ನೆನೆಯಬಹುದು.

2) ದುಷ್ಟರು, ಕಂಟಕರು, ರಾಜಸ ತಾಮಸಗುಣ ಬಿಡದ ಅಪರಿಪೂರ್ಣ ಅಪರಿಪಕ್ವ ಚೇತನರು : ಯಥಾ ಪ್ರದೀಪ್ತಂ ಜ್ವಲನಂ ಪತಂಗಾಃ ।। ವಿಶಂತಿ ನಾಶಾಯ

ಸಮೃದ್ಧವೇಗಾಃ...(11–29) ಎಂಬಂತೆ ಪತಂಗದ ಹುಳಗಳಂತೆ, ಭಗವಂತನೆಂಬ ಜ್ವಾಲೆಯನ್ನು ಮುತ್ತಿ ರೆಕ್ಕೆಸುಟ್ಟು ಎಣ್ಣೆಯೆಂಬ ಅಂಟು ಸಂಸಾರದಲ್ಲೇ ಬಿದ್ದು ಮತ್ತೆ ಸಾಯುತ್ತಾರೆ.

ಬದುಕುವುದೂ, ಸಾಯುವುದೂ ಈ ಲೋಕದಲ್ಲೇ ಆದರೂ ಒಬ್ಬರಿಗೆ ಇದು ಸಾಧನಲೋಕ, ಇನ್ನೊಬ್ಬರಿಗೆ ಭೋಗಲೋಕ. ಒಬ್ಬ ಪರೋಪಕಾರೀ, ಇನ್ನೊಬ್ಬ ಪರಪೀಡಕ. ಏಕೆ ಈ ವ್ಯತ್ಯಾಸ ಕಾಣಲಾರದು? ನೀವು ಧೃತರಾಷ್ಟ್ರರಾದರೆ ಲೋಕದಲ್ಲಿ ಏನೂ ಕಾಣುವುದಿಲ್ಲ. Ethics, Aesthetics, Metaphysics, Morality, – ಯಾವ ಶಾಸ್ತ್ರವೂ ನಿಮಗೆ ಪ್ರಯೋಜಕವಾಗಲಾರದು".

ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಃ ಚಲನ ಕಾರಣಂ ।
ಉಪದೇಶಾತ್ ಹರಿಂ ಬುದ್ಧಾಂ ವಿಂಮತೇತ್ ಸ್ವಸ್ಯಕರ್ಮಸು ॥

ಎಂಬುದು ಸಂಜಯ ಕಂಡುಕೊಂಡ ಸತ್ಯ, ತತ್ವ

1) ಒಳ್ಳೆಯದೂ, ಕೆಟ್ಟುದೂ ಪಕ್ಕಪಕ್ಕದಲ್ಲೇ ಈ ಲೋಕದಲ್ಲೇ ಇವೆ.
2) ವ್ಯವಸ್ಥೆ ಬೇರೆ ಬೇರೆ, ಒಂದು ಇನ್ನೊಂದಾಗುವುದಿಲ್ಲ.
3) ಪರಲೋಕ, ಪುಣ್ಯ, ಪಾಪ, ಕರ್ಮ, ಧರ್ಮ ಎಲ್ಲಾ ಉಂಟು.
4) ಭಗವಂತನಿಗೆ ಅತೀತವಾದದ್ದು ಯಾವುದೂ ಇಲ್ಲ. ಎಲ್ಲಾ ಅಧೀನ.
5) ಚೇತನರನ್ನು ಸನ್ಮಾರ್ಗಗಮನ, ಸದಾಚಾರ, ಸನ್ನಡತೆ, ಶೀಲ, ಭಕ್ತಿಜ್ಞಾನಗಳ ಮೂಲಕ ದೇವರು ತನ್ನೆಡೆಗೆ ಪಕ್ವಮಾಡಿ ಕರೆದುಕೊಳ್ಳುವ, ಕಮ್ಮಟ 'ಕಡಾಯಿ' (ಯಕ್ಷಪ್ರಶ್ನೆಯ ಭಾಷೆ) ಕಾರ್ಯಾಗಾರ, ಈ ಲೋಕ.
6) ಸೃಷ್ಟಿ ವ್ಯಾಪಾರಕ್ಕೆ ಇದೇ ಅರ್ಥ. ಚೇತನೋದ್ಧಾರ (ವಿಶ್ವರೂಪ ಅಧ್ಯಾಯಕ್ಕೆ ಅರ್ಥ ಹೇಳದಾದರೆ, ಲಯದಂತೆ, ಸೃಷ್ಟಿ ಸ್ಥಿತಿಗಳೂ ಅರ್ಥವಿಲ್ಲವಾಗುತ್ತವೆ
7) ಸರ್ವಮುಕ್ತಿ ಇಲ್ಲ. – ಇವು ಸಾರಾಂಶ

"ದೇವರೇ ನೀನಿದ್ದೀಯಾ? ಏಕಿದ್ದೀಯೇ? ನಾನೆಲ್ಲಿದ್ದೇನೆ? ನನಗೂ ನಿನಗೂ ಯಾತರ ಸಂಬಂಧ? ಈ ಲೋಕ ಇಷ್ಟು ವಿವಿಧ ವಿಚಿತ್ರ ಆಶ್ಚರ್ಯಕರವಾಗಿರುವುದಕ್ಕೇನರ್ಥ? ಎಂಬ ವೇದಾಂತದೂರರ ಪಾಮರರ ಪ್ರಶ್ನೆಗಳಿಗೂ ಇಲ್ಲೇ ಅರ್ಥ ಇರುವುದು, ಮರ್ಮ. ಗುರುಮುಖೇನ ಅಭ್ಯಸಿಸಬೇಕಾದ ಬಹಳಷ್ಟು ರಹಸ್ಯಗಳು ಇನ್ನೂ ಉಂಟು.

ಭಗವದ್ಗೀತೆಯಲ್ಲಿ ಆತ್ಮಸ್ವರೂಪ

– ವಿದ್ವಾನ್ ಅನಂತಶರ್ಮಾ, ಭುವನಗಿರಿ

ಶ್ರೀಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಆತ್ಮಸ್ವರೂಪವನ್ನು ಉಪದೇಶಿಸಬೇಕಾದ ಸಂದರ್ಭವೊದಗಿದ್ದೇ ಆಶ್ಚರ್ಯದ ಸಂಗತಿ. ಜೀವನದುದ್ದಕ್ಕೂ ಅನೇಕ ಯುದ್ಧಗಳಲ್ಲಿ ವೀರಾವೇಶದಿಂದ ಹೋರಾಡಿ ಶತ್ರುಗಳನ್ನು ನಿಷ್ಕರುಣೆಯಿಂದ ಸಂಹರಿಸಿದ ಅರ್ಜುನನಿಗೆ ತನ್ನವರನ್ನೇ ಎದುರಿಸಬೇಕಾಗಿ ಬಂದಾಗ ಮಹಾಕರುಣೆ ಆವರಿಸಿತಂತೆ. (ಕೃಪಯಾ ಪರಯಾವಿಷ್ಟಃ) ನನ್ನವರೇ ಆದ ಭೀಷ್ಮಾದಿಗಳನ್ನು ಹೇಗೆ ಕೊಲ್ಲಲಿ ಎಂದು ಅಲವತ್ತುಕೊಂಡ. ಹಾಗೆ ಕೊಲ್ಲುವುದರಿಂದ ಆಗಬಹುದಾದ ಅನರ್ಥಪರಂಪರೆಗಳ ಬಗ್ಗೆ ದೀರ್ಘ ವಿಷಾದವನ್ನೇ ತಾಳಿದ. ಇದಕ್ಕೆ ಮೂಲ ತಾನು ಭೀಷ್ಮಾದಿಗಳನ್ನು ಕೊಲ್ಲುತ್ತೇನೆ. ಅವರು ತನ್ನಿಂದ ಸಾಯುತ್ತಾರೆ ಎಂಬ ಅವನ ಅಳಲು. ಹೀಗೆ ಶೋಕಮೋಡಗಳಲ್ಲಿ ಮಗ್ನನಾದ ಅವನ ಕಣ್ಣನ್ನು ತೆರೆಯಿಸಲು ಶ್ರೀಕೃಷ್ಣನು ಅವನಿಗೆ ಆತ್ಮಸ್ವರೂಪವನ್ನು ವಿವರಿಸ ಬೇಕಾಯಿತು. ಅದೇ ಭಗವದ್ಗೀತೆ ಎಂಬ ಹೆಸರಿನಲ್ಲಿ ನಮ್ಮ ಮುಂದಿದೆ.

ಏಳುನೂರು ಶ್ಲೋಕಗಳುಳ್ಳ ಭಗವದ್ಗೀತೆಯಲ್ಲಿ ಆತ್ಮಸ್ವರೂಪವನ್ನು ನೇರವಾಗಿ ಬೋಧಿಸುವ ಶ್ಲೋಕಗಳು ಕೇವಲ 20–24 ಮಾತ್ರ. ಉಳಿದವು ವಿವರಣೆಗಾಗಿಯೂ ಪ್ರಾಸಂಗಿಕವಾಗಿಯೂ ಬಂದವುಗಳು. ಆದರೆ ಚಿತ್ರದ ಹಿನ್ನೆಲೆಯಲ್ಲಿರುವ ಬಟ್ಟೆಯಂತೆ ಈ ಆತ್ಮಸ್ವರೂಪದ ವರ್ಣನೆ ಇಡೀ ಭಗವದ್ಗೀತೆಯನ್ನೇ ಆವರಿಸಿದೆ. ಶೋಕಿಸ ಬಾರದವರನ್ನು ಕುರಿತು ನೀನು ಶೋಕಿಸುತ್ತಿರುವೆ, ನಿನ್ನ ಶೋಕ ಯಾರಿಗಾಗಿ? ಈ ಭೀಷ್ಮಾದಿಗಳ ಶರೀರಕ್ಕಾಗಿಯೋ ಅಥವಾ ಆ ಶರೀರದಲ್ಲಿರುವ ಆತ್ಮರುಗಳಿಗಾಗಿಯೋ? ಶರೀರಕ್ಕಾಗಿಯಾದರೆ ದುಃಖಿಸಬೇಕಾಗಿಲ್ಲ. ಏಕೆಂದರೆ ಶರೀರ ಎಂದಾದರೂ ಬಿದ್ದುಹೋಗುವಂಥದೆ. ಇನ್ನು ಆತ್ಮಕ್ಕಾಗಿಯಾದರೆ ಆಗಲೂ ದುಃಖಿಸಬೇಕಾಗಿಲ್ಲ. ಏಕೆಂದರೆ ಆತ್ಮ ಅವಿನಾಶಿ. ಮನುಷ್ಯನು ಹಳೆಯ ಬಟ್ಟೆಯನ್ನು ಬಿಸಾಕಿ ಹೊಸ ಬಟ್ಟೆಯನ್ನು ತೊಟ್ಟುಕೊಳ್ಳು ವಂತೆ ಜೀವನ ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಧರಿಸುತ್ತಾನೆ. ಆತ್ಮನು ಶಾಶ್ವತ, ದೇಹ ಅಶಾಶ್ವತ. ಆತ್ಮನಿಗೆ ಜನನ ಮರಣಾದಿಗಳು ಯಾವವೂ ಇಲ್ಲ. "ಈ ಆತ್ಮನನ್ನು ಖಡ್ಗ ಕತ್ತರಿಸಲಾರದು, ಬೆಂಕಿ ಸುಡಲಾರದು, ಗಾಳಿ ಒಣಗಿಸಲಾರದು, ನೀರು ಒದ್ದೆ ಮಾಡಲಾರದು.." ಇತ್ಯಾದಿ.

ಆದರೆ ಇದನ್ನೆಲ್ಲ ಶ್ರೀಕೃಷ್ಣನು ಅರ್ಜುನನಿಗೆ ತಿಳಿಸಬೇಕಾಗಿರಲಿಲ್ಲ. ಇದೆಲ್ಲ ಅವನಿಗೆ ಗೊತ್ತಿದ್ದದ್ದೆ. 'ಇವರನ್ನೆಲ್ಲ ಕೊಂದರೆ ನಾನು ನರಕಕ್ಕೆ ಹೋಗಬೇಕಾಗುತ್ತದೆ' ಎಂದು ಹೇಳಿದ ಅರ್ಜುನನಿಗೆ ಶರೀರಕ್ಕಿಂತ ಬೇರೆಯ ಆತ್ಮನಿದ್ದಾನೆ. ಅವನು ಕರ್ಮಾನುಸಾರ ಸ್ವರ್ಗಕ್ಕೂ ನರಕಕ್ಕೂ ಹೋಗುವವನು. ಅವನಿಗೆ ಅನೇಕ ಜನ್ಮಗಳಿವೆ. ಶರೀರ ನಾಶದಿಂದ ಅವನು ನಾಶಹೊಂದುವುದಿಲ್ಲ ಎಂದು ಗೊತ್ತೇ ಇದೆ. ಇದೇನೋ ಒಂದು ಹೊಸ ವಿಷಯವೆಂಬಂತೆ ಕೃಷ್ಣನು ಅರ್ಜುನನಿಗೆ ಹೇಳಬೇಕಾಗಿರಲಿಲ್ಲ. ಹಾಗಿದ್ದರೆ ಅವನು ಹೇಳಿದ್ದೇನು? "ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ। ಉಭೌ ತೌ ನ ವಿಜಾನೀತಃ ನಾಯಂ ಹಂತಿ ನ ಹನ್ಯತೇ ॥ "ಈ ಆತ್ಮನನ್ನು ಯಾವನು ಕೊಲ್ಲುತ್ತೇನೆಂದು ತಿಳಿಯುತ್ತಾನೋ ಯಾವನು ಕೊಲ್ಲಲ್ಪಡುವವನೆಂದು ತಿಳಿಯತ್ತಾನೋ ಅವರಿಬ್ಬರಿಗೂ ಏನೂ ಗೊತ್ತಿಲ್ಲ. ಈ ಆತ್ಮನು ಕೊಲ್ಲುವವನೂ ಅಲ್ಲ, ಕೊಲ್ಲಲ್ಪಡುವವನೂ ಅಲ್ಲ." ಕೃಷ್ಣನ ಈ ಮಾತು ಅನವಶ್ಯಕವಾಗಿತ್ತು. ಆತ್ಮನು ಎಂದಿಗೂ ಸಾಯದವನು ಎಂದು ಗೊತ್ತಿದ್ದವನಿಗೆ ಅವನನ್ನು ಯಾರೂ ಸಾಯಿಸಲಾರರು ಎಂದೂ ಗೊತ್ತಿರುತ್ತದೆ. ಹಾಗಿದ್ದರೆ ಅರ್ಜುನನಿಗಿದ್ದ ಅಜ್ಞಾನವೇನು ? ಯಾವುದನ್ನು ಹೋಗಲಾಡಿಸಲು ಕೃಷ್ಣನು ಪ್ರಯತ್ನಿಸಿದ್ದಾನೆ? ಗೀತೆಯನ್ನು ಮನಸ್ಸಿಟ್ಟು ಅಧ್ಯಯನ ಮಾಡಿದಾಗ ಶ್ರೀಕೃಷ್ಣನು ಬೋಧಿಸಿದ ಆತ್ಮಸ್ವರೂಪ ನಮಗೆ ಗೋಚರಿಸುವುದು ಹೀಗೆ –

ಆತ್ಮನು ನಿರಾಕಾರ. ಅವನಿಗೆ ದೇಶಕಾಲಗಳಾವುದರ ಮಿತಿಯೂ ಇಲ್ಲ. ವಸ್ತುಗಳು ಬೇರೆ ಬೇರೆಯೆನಿಸುವುದೇ ದೇಶಕಾಲಗಳ ಮಿತಿಯಿಂದಾಗಿ. ವಸ್ತುವೊಂದು ಒಂದು ನಿರ್ದಿಷ್ಟ ಸ್ಥಳದಲ್ಲಿರುತ್ತದೆ ನಿರ್ದಿಷ್ಟಕಾಲದಲ್ಲಿರುತ್ತದೆ ಎಂದಾಗ ಮಾತ್ರ ಅದು ಇತರ ವಸ್ತುಗಳಿಗಿಂತ ಭಿನ್ನವಾಗಿರುತ್ತದೆ. ಆತ್ಮನಿಗೆ ಅದಿಲ್ಲವಾದುದರಿಂದ ಆತ್ಮನಾನಾತ್ವಕ್ಕೆ ಅವಕಾಶವೇ ಇಲ್ಲ. ಒಬ್ಬನೇ ಸೂರ್ಯನು ಬೇರೆ ಬೇರೆ ಜಲಪ್ರದೇಶಗಳಲ್ಲಿ ಬೇರೆ ಬೇರೆ ಪ್ರತಿಬಿಂಬವನ್ನು ಪಡೆಯುವಂತೆ ಒಬ್ಬನೇ ಆತ್ಮನು ಭಿನ್ನ ಭಿನ್ನ ಶರೀರಗಳಲ್ಲಿ ಬೇರೆ ಬೇರೆಯಾಗಿರುವಂತೆ ತೋರುತ್ತಾನೆ. "ಅವಿಭಕ್ತಂ ವಿಭಕ್ತೇಷು ವಿಭಕ್ತಮಿವ ಚ ಸ್ಥಿತಮ್" ಆತ್ಮನು ಅವ್ಯಯನು, ಇವನೆಂದೂ ಹಾನಿಗೊಳಗಾಗುವುದಿಲ್ಲ. ಕೆಲವರು ಸ್ವತಃ ಹಾನಿಗೊಳಗಾಗದಿದ್ದರೂ ತನ್ನವರ ಹಾನಿಯಿಂದ ಹಾನಿಗೊಳಗಾಗುತ್ತಾರೆ. ಉದಾಹರಣೆಗೆ ಧನಿಕನೊಬ್ಬನ ಧನ ನಾಶವಾದರೆ ಧನಿಕನೂ ನಾಶವಾದಂತೆ. ಈ ಆತ್ಮನಿಗೆ ಸ್ವತಃ ಆಗಲಿ ತನ್ನದರ ಮೂಲಕವಾಗಲಿ ನಾಶವಿಲ್ಲ. ಏಕೆಂದರೆ ಇವನಿಗೆ ಯಾವುದರ ಸಂಬಂಧವೂ ಇಲ್ಲ. ಇವನು ಅಪ್ರಮೇಯನು. ಯಾವ ಪ್ರಮಾಣಗಳೂ ಇವನನ್ನು ತಿಳಿಸಿಕೊಡಲಾರವು. ಇವನೇ ಪ್ರಮಾಣಗಳನ್ನರಿಯುವವನು. ಇವನಿಂದಾಗಿಯೇ ಪ್ರಮಾಣಗಳು ತಮ್ಮ ತಮ್ಮ ಪ್ರಮೇಯಗಳನ್ನು ತಿಳಿಸುತ್ತವೆ. ಆದ್ದರಿಂದಲೇ ಉಪನಿಷತ್ತು ತಿಳಿಸುವಂತೆ ಆತ್ಮನು ಮನಸ್ಸು ಮತ್ತು ಮಾತುಗಳಿಗೆ ಅಗೋಚರನು.

(ಅವ್ಯಕ್ತೋSಯಮಚಿಂತ್ಯೋSಯಂ).

ಆತ್ಮನು ಶರೀರಾತಿರಿಕ್ತನೆಂದು ತಿಳಿದವರೂ ಸಹ ಅವನನ್ನು ಕರ್ತಾ ಭೋಕ್ತಾ ಎಂದು ಭಾವಿಸಿರುತ್ತಾರೆ. ಕರ್ತೃತ್ವದಿಂದಾಗಿ ಅವನು ಪುಣ್ಯಪಾಪಗಳಿಗೆ ಭಾಗಿಯಾಗುತ್ತಾನೆ. ಅವುಗಳ ಫಲಗಳನ್ನನುಭವಿಸಲೆಂದೇ ಮುಂದಿನ ಜನ್ಮಗಳನ್ನು ತಾಳುತ್ತಾನೆ. ಆತ್ಮನು ನಿತ್ಯನಾದರೂ ಅವನನ್ನು ಶರೀರದಿಂದ ಬೇರ್ಪಡಿಸುವುದೇ ಕೊಲೆ. ಅಂಥ ಕೊಲೆ ಮಾಡುವುದು ಪಾಪಕರ. ಹೀಗೆ ಅರ್ಜುನನ ಯೋಚನಾಲಹರಿ. ಇದೇ ಅರ್ಜುನನ ಅಜ್ಞಾನ. ಆತ್ಮನು ಸ್ವತಃ ಕರ್ತೃವಲ್ಲ. ಆತ್ಮನದು ಎಂದು ತೋರಿಬರುವ ಕಾರ್ಯಕ್ಕೆ ಬೇರೆಯವೇ ಆದ ಐದು ಕಾರಣಗಳೇ ಇವೆ. ಮೊದಲನೆಯದು ಶರೀರ. ಇಚ್ಛೆ, ದ್ವೇಷ, ಸುಖ, ದುಃಖ, ಜ್ಞಾನ, ಮುಂತಾದವುಗಳು ಹೊರತೋರಿಕೊಳ್ಳುವುದಕ್ಕೆ ಆಸ್ಪದವಾಗಿರುವಂಥಾದ್ದು. ಎರಡನೆಯದು ಅಂತಃಕರಣ. ಮೂರನೆಯದು ಶಬ್ದ-ಸ್ಪರ್ಶ ಮುಂತಾದವುಗಳನ್ನು ತಿಳಿಸಿಕೊಡತಕ್ಕ ಇಂದ್ರಿಯಗಳು. ನಾಲ್ಕನೆಯದು ಪ್ರಾಣಾದಿಗಳ ವ್ಯಾಪಾರ. ಐದನೆಯದು ಕಣ್ಣು ಮುಂತಾದವುಗಳ ಅನುಗ್ರಾಹಕವಾದ ಸೂರ್ಯ ಮುಂತಾದ ದೇವತೆಗಳು. ಜೀವಿಗಳು ಮಾಡುವ ಯಾವುದೇ ಕೆಲಸವಾದರೂ – ಅದು ನ್ಯಾಯವಾದ ಅಥವಾ ಅನ್ಯಾಯವಾದ–ಯಾವುದೇ ಇರಬಹುದು – ಈ ಐದೂ ಕಾರಣಗಳು. ಹೀಗಿರುವಾಗ ಇದಕ್ಕೆಲ್ಲ ತಾನೇ ಕಾರಣ ಎಂದು ಭಾವಿಸುವುದು ಅಜ್ಞಾನ. ಇದನ್ನರಿತು ಯಾವುದೇ ಕೆಲಸದಲ್ಲಿಯೂ 'ನಾನು ಮಾಡುತ್ತೇನೆ' ಎಂಬ ಕರ್ತೃತ್ವಾಭಿಮಾನವನ್ನು ತೊರೆದು ಕೆಲಸ ಮಾಡಿದರೆ ಕರ್ಮವು ಅವನನ್ನು ಬಂಧಿಸುವುದಿಲ್ಲ (ನ ಬಧ್ಯತೇ ಕುರ್ವನ್ನಪಿ ನ ಲಿಪ್ಯತೇ) ಕರ್ತೃತ್ವವೇ ಇಲ್ಲವೆಂದಾದ ಮೇಲೆ ಕರ್ಮಫಲಗಳ ಭೋಕ್ತೃತ್ವವೂ ಇಲ್ಲ. ಇಂದ್ರಿಯಗಳ ಮೂಲಕ ನಡೆಸುವ ವಿಷಯ ಭೋಗವೂ ಅವನದಲ್ಲ. ಹೀಗೆ ಕರ್ತೃತ್ವ ಭೋಕ್ತೃತ್ವ ಕರ್ಮಫಲಗಳ ಸಂಯೋಗ ಇದಾವುದೂ ಅವನಿಗೆ ಸಂಬಂಧಿಸಿದ್ದಲ್ಲ. ಇದೆಲ್ಲ ಸ್ವಾಭಾವಿಕ ಅಂದರೆ ಅವಿದ್ಯೆಯಿಂದಾಗಿ ಕಾಣಿಸಿಕೊಳ್ಳುವುದು. ಈ ವ್ಯವಹಾರವೆಲ್ಲ ಆ ಅವಿದ್ಯತೆ.

ಹದಿಮೂರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಆತ್ಮನ ಬಗ್ಗೆ ಇನ್ನೂ ಹೆಚ್ಚಿನ ವಿವರವನ್ನು ತಿಳಿಸುತ್ತಾನೆ. ಈ ಶರೀರವೇ ಕ್ಷೇತ್ರ ಇದರಲ್ಲಿ ನಾನು ಎಂದು ಅಭಿಮಾನವನ್ನು ತಾಳಿದವನು ಕ್ಷೇತ್ರಜ್ಞ, ಎಲ್ಲ ಕ್ಷೇತ್ರಗಳಲ್ಲಿರುವ ಕ್ಷೇತ್ರಜ್ಞ ನಾನೇ ಎನ್ನುತ್ತಾನೆ ಭಗವಂತ. ಈ ಮೂಲಕ ತನ್ನ (ಆತ್ಮನ) ಸರ್ವವ್ಯಾಪಕತೆಯನ್ನು ಮತ್ತೆ ಮತ್ತೆ ಒತ್ತಿ ತಿಳಿಸುತ್ತಿದ್ದಾನೆ. ಆತ್ಮನನ್ನು ಸತ್ (ಇರುವವನು) ಎಂದಾಗಲಿ, ಅಸತ್ (ಇಲ್ಲದಿರುವವನು) ಎಂದಾಗಲಿ ಹೇಳಲು ಸಾಧ್ಯವಿಲ್ಲ. ಇಂದ್ರಿಯ ಗೋಚರವಾಗಬಲ್ಲ ವಸ್ತುವನ್ನು ಮಾತ್ರ ಸತ್ ಎಂದಾಗಲಿ ಅಸತ್ ಎಂದಾಗಲಿ ಹೇಳಬಹುದು. ಇಂದ್ರಿಯಾತೀತವಾದ ವಸ್ತುವಿನ ಬಗ್ಗೆ ಹೀಗೆ ಏನನ್ನೂ ಹೇಳಲಾಗದು. ಅದಕ್ಕೆ ಯಾವ ಇಂದ್ರಿಯಗಳೂ ಇಲ್ಲ. ಆದರೆ ಎಲ್ಲ ಇಂದ್ರಿಯ ಗುಣಗಳಿಂದ ಬೆಳಗುತ್ತಿರುವುದು, ಅದು ನಿರ್ಗುಣ. ಸತ್ತ್ವ, ರಜಸ್ಸು, ತಮಸ್ಸು ಎಂಬ ಯಾವ ಗುಣಗಳು ಅದಕ್ಕಿಲ್ಲ. ಅಷ್ಟೇ ಅಲ್ಲ, ಆ ಮೂರು ಗುಣಗಳ ಕಾರ್ಯವಾವುದೂ ಆತ್ಮದೊಡನೆ ಸಂಪರ್ಕ ಹೊಂದಿದ್ದಿಲ್ಲ. ಆದರೂ ಸುಖದುಃಖ

ಮೋಹಾತ್ಮಕವಾಗಿ ಪರಿಣಾಮಗೊಂಡ ಆ ಗುಣಗಳನ್ನು ನೋಡುತ್ತಾನೆ. ಆತನು ಸಕಲ ಭೂತಗಳ ಒಳಗೂ ಹೊರಗೂ ಇರುವನು. ಸಮಸ್ತ ಚರಾಚರಭೂತಗಳೂ ಅವನೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಆತ್ಮನನ್ನು ಬಿಟ್ಟು ವಿಶ್ವದಲ್ಲಿ ಇನ್ನೇನೂ ಇಲ್ಲ.

ಈ ಆತ್ಮನು ಬೆಳಕಿಗೂ ಬೆಳಕು. ಜೀವಿಗಳೆಲ್ಲ ಸೂರ್ಯ, ಚಂದ್ರ ಹಾಗೂ ದೀಪಗಳ ಬೆಳಕಿನಿಂದ ಪ್ರಪಂಚವನ್ನು ನೋಡುತ್ತಾರೆ. ತಮ್ಮ ವ್ಯವಹಾರವನ್ನು ನಡೆಸುತ್ತಾರೆ. ಆದರೆ ಆ ರವಿಚಂದ್ರಾದಿಗಳನ್ನೂ ಈ ಆತ್ಮನು ಅರಿಯುತ್ತಾನಾದುದರಿಂದ ಇವನು ಬೆಳಕುಗಳ ಬೆಳಕು. ಕೇವಲ ಅರಿವಿನ ಸ್ವರೂಪನು. ಈ ರೀತಿಯಿಂದ ಕೃಷ್ಣನು ಅರ್ಜುನನಿಗೆ ಆತ್ಮಸ್ವರೂಪವನ್ನು ವಿವರಿಸುತ್ತಾನೆ.

ಈ ಮೊದಲು ಅರ್ಜುನನು ಆತ್ಮನನ್ನು ಶರೀರೇಂದ್ರಿಯಗಳಿಂದ ಭಿನ್ನನು, ನಿತ್ಯನು ಎಂದು ತಿಳಿದಿದ್ದರೂ ಅವನನ್ನು ಶರೀರದಲ್ಲಿ ಮಾತ್ರವೇ ಇರುವವನು, ಕರ್ತೃ, ಭೋಕ್ತೃ, ಪಾಪಪುಣ್ಯಗಳಿಂದ ಲೇಪಿತನಾದವನು ಎಂದು ತಿಳಿದಿದ್ದನು. ಇದೇ ಅರ್ಜುನನ ಭ್ರಾಂತಿಯಾಗಿತ್ತು. ಆದ್ದರಿಂದಲೇ ಯುದ್ಧವೆನ್ನುವುದು ತನ್ನ ಇಹಪರಗಳನ್ನೆಲ್ಲ ನಾಶ ಮಾಡುತ್ತದೆಯೆಂದು ಭಾವಿಸಿದ್ದನು. ಕೃಷ್ಣನು ಆತ್ಮನ ಪಾರಮಾರ್ಥಿಕ ಹಾಗೂ ವ್ಯಾವಹಾರಿಕ ಸ್ವರೂಪಗಳನ್ನು ಪ್ರತ್ಯೇಕಿಸಿ ತಿಳಿಸಿಕೊಟ್ಟನು. ಪಾರಮಾರ್ಥಿಕವಾಗಿ ಆತ್ಮನು ನಿತ್ಯ ಶುದ್ಧಬುದ್ಧ ಮುಕ್ತರೂಪನು, ಸರ್ವಗತನು, ಸಚ್ಚಿದಾನಂದರೂಪನು, ವ್ಯಾವಹಾರಿಕಜೀವನು. ಮನಸ್ಸೆಂಬ ಉಪಾಧಿಯೊಡನೆ ಕರ್ತೃವೂ ಭೋಕ್ತೃವೂ ಆಗುತ್ತಾನೆ. ಆದರೆ ಇದು ಅವನ ಪಾರಮಾರ್ಥಿಕ ಸ್ವರೂಪವಲ್ಲ. ಇದನ್ನೆಲ್ಲ ಅರ್ಥಮಾಡಿಕೊಂಡು ಕರ್ತೃತ್ವಾಭಿಮಾನ ಹಾಗೂ ಫಲಾಶೆಯನ್ನು ಬಿಟ್ಟು ಸ್ವಧರ್ಮೋಚಿತ ಕರ್ಮವನ್ನು ಮಾಡುತ್ತಿದ್ದರೆ ಕರ್ಮಬಂಧನವಿಲ್ಲ ಎಂದು ಉಪದೇಶಿಸುತ್ತಾನೆ. ಈ ಗೀತೋಪದೇಶದ ಮುಖ್ಯ ಫಲ ಅರ್ಜುನನ ಮಾತಿನಲ್ಲೇ ಹೇಳುವುದಾದರೆ ಮೋಹನಾಶ (ನಷ್ಟೋ ಮೋಹಃ) ಆತ್ಮಬೋಧದ ಫಲವೇ ಇದು.

ಗೀತೆಯ ಧರ್ಮ ಪರಿಕಲ್ಪನೆ

– ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ

ನ ರಾಜ್ಯಂ ನಚರಾಜಾಸೀತ್ ನ ದಂಡೋ ನಚದಾಂಡಿಕಃ ।
ಧರ್ಮೇಣೈವ ಪ್ರಜಾಃ ಸರ್ವಾಃ ರಕ್ಷಂತಿಸ್ಮ ಪರಸ್ಪರಂ ॥

ಹಿಂದೆ ಕೃತಯುಗದಲ್ಲಿ "ರಾಜ್ಯ" ಎನ್ನುವುದು ಇರಲಿಲ್ಲ. ರಾಜ್ಯವೇ ಇಲ್ಲದ ಮೇಲೆ ರಾಜನೂ ಇರಲಿಲ್ಲ. "ದಂಡಿಸುವುದು (ಶಿಕ್ಷಿಸುವುದು) ಇರಲಿಲ್ಲ. ದಂಡನೆಯೇ ಇಲ್ಲವೆಂದಾಗ ದಂಡಿಸುವವನೂ ಅಂದರೆ ಆರಕ್ಷಕರಾಗಲಿ ನ್ಯಾಯಾಧೀಶರಾಗಲಿ ಇರಲಿಲ್ಲ. ಆ ಕಾಲದಲ್ಲಿ ಪ್ರಜೆಗಳೆಲ್ಲರೂ ಅನ್ಯೋನ್ಯವಾಗಿ 'ಧರ್ಮ'ದಿಂದಲೇ ಸುರಕ್ಷಿತರಾಗಿದ್ದರು. ಕೃತಯುಗ–ಸತ್ಯಯುಗ–ಆದಿಯುಗ ಎಂದೆಲ್ಲ ಕರೆಯುವ ಆ ಕಾಲದಲ್ಲಿ 'ಕೃತಕೃತ್ಯಾಃ ಪ್ರಜಾಃಸರ್ವಾಃ' ಪ್ರಜೆಗಳೆಲ್ಲ ಕೃತಕೃತ್ಯರು ಸಾರ್ಥಕವಾದ ಸುರಕ್ಷಿತವಾದ ಯಾವ ಕೇಡೂ ಇಲ್ಲದ ಸುಖಮಯವಾದ, ತೃಪ್ತಿ–ಸಂತೋಷದ ಬದುಕನ್ನು ಪಡೆದಿದ್ದರು ಎಂದು ಅನೇಕ ಉಲ್ಲೇಖಗಳಿವೆ. ಈ ಬಗೆಯ ಬದುಕಿಗೆ ಕಾರಣವಾದದ್ದು 'ಧರ್ಮ' ವಂತೆ. ಹಾಗಾದರೆ ಆ ಧರ್ಮವು ಏನು? ಯಾವುದು? ಯಾವುದಿರಬಹುದು ಎಂದು ವಿಚಾರ ಉಂಟಾಗುತ್ತದೆ. ಧಾರಣಾತ್ ಧರ್ಮ ಇತ್ಯಾಹುಃ (ಬದುಕಿಗೆ ಆಧಾರವಾದದ್ದು ಧರ್ಮ) ಧರ್ಮೋ ಧಾರಯತಿ ಪ್ರಜಾಃ (ಧರ್ಮವು ಪ್ರಜೆಗಳನ್ನು ಧಾರಣ ಮಾಡುತ್ತದೆ.) ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ (ಧರ್ಮವು ಸಂಪೂರ್ಣ ಜಗತ್ತಿಗೆ ಆಧಾರವಾದದ್ದು) ಧರ್ಮೋ ರಕ್ಷತಿ ರಕ್ಷಿತಃ (ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ) ಸತ್ಯಂ ಧರ್ಮೇ ಪ್ರತಿಷ್ಠಿತಂ (ಸತ್ಯವು ಧರ್ಮದಲ್ಲಿ ಪ್ರತಿಷ್ಠಿತವಾಗಿದೆ) ಯತೋಭ್ಯುದಯ ನಿಶ್ರೇಯಸ ಸಿದ್ಧಿಃ ಸಃಧರ್ಮಃ ಅಭ್ಯುದಯ ನಿಶ್ರೇಯ (ಮೋಕ್ಷ) ಸಿದ್ಧಿಸಾಧನೆವೇ ಧರ್ಮ – ಈ ಎಲ್ಲ ಆರ್ಷೇಯ ವಾಕ್ಯಗಳು ಧರ್ಮದ ಮಹತ್ವವನ್ನು ಸಾರುತ್ತವೆ. ಆದರೆ ಈ ಮಾತುಗಳಿಂದ ಧರ್ಮವೆಂದರೆ ಏನು? ಎನ್ನುವುದಕ್ಕೆ ಉತ್ತರ ದೊರಕುವುದಿಲ್ಲವಾದರೂ ಧರ್ಮದ ಮಹತ್ವ, ಅದರ ವಿಶ್ವವ್ಯಾಪಕತೆ, ಜಗತ್ತಿನ ಸಕಲರ ಬಾಳಿನ ಬುನಾದಿಯಾಗಿರುವಿಕೆ ಮುಂತಾದ ಮಹಿಮೆಯ ಅರಿವಾಗುತ್ತದೆ. "ಯಾವ ದೊಣ್ಣೆ ನಾಯಕನ ಹಂಗೂ ಇಲ್ಲದೇ ಪ್ರಜೆಗಳೇ ತಮ್ಮನ್ನು ತಾವು ರಕ್ಷಿಸಿಕೊಳ್ಳಬಲ್ಲ ಧರ್ಮವನ್ನು ಕುರಿತು ಗೌರವಾದರಗಳು ಉಂಟಾಗುತ್ತವೆ" ಭಾರತದ ಪ್ರಾಚೀನ ಸ್ಮೃತಿಕಾರರು ಧರ್ಮದ ಲಕ್ಷಣವನ್ನು ಸಂಗ್ರಹಿಸಿ ಹೇಳಿದ್ದಾರೆ.

ಧೃತಿಃಕ್ಷಮಾ ಧರ್ಮೋऽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ । ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್, ಧೃತಿ, ಕ್ಷಮೆ, ದಮ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ, ವಿದ್ಯೆ, ಸತ್ಯ, ಅಕ್ರೋಧ, ಇವು ಹತ್ತು ಧರ್ಮದ ಲಕ್ಷಣಗಳು. ಇವೆಲ್ಲ ವ್ಯಕ್ತಿಯಲ್ಲಿ ಇರಬೇಕಾದ ರೂಢಿಸಿಕೊಳ್ಳಬೇಕಾದ ಗುಣಗಳು. ಇವುಗಳಲ್ಲೂ ಮುಖ್ಯವಾಗಿ "ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ । ಏತಂ ಸಾಮಾಸಿಕಂ ಧರ್ಮಂ.... ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ ಈ ಐದು ಸಂಕ್ಷೇಪವಾಗಿ ಪ್ರಜೆಗಳು ಅನುಸರಿಸಲೇಬೇಕಾದವುಗಳು.

ಸ್ವಯಂ ಪ್ರಜೆಗಳು ಈ ಹತ್ತು ಅಥವಾ ಐದು ಲಕ್ಷಣಗಳಿಂದ ಸಂಸ್ಕಾರವಂತರಾದಾಗ ಕುಟುಂಬವೆಂಬ ಸಣ್ಣ ಪ್ರಕಾರದಿಂದ ವಿಶ್ವಪೂರ್ತಿಯಾಗಿ, ಸ್ವಯಂಶಕ್ತಿಯ ಸಮಾಜವು ಸಿದ್ಧವಾಗುತ್ತದೆ. "ಕೃಣ್ವಂತೋ ವಿಶ್ವಮಾರ್ಯಂ" "ವಿಶ್ವಜನತೆಯನ್ನೇ ಶ್ರೇಷ್ಠ ಚಾರಿತ್ರ್ಯಶೀಲ ರನ್ನಾಗಿ ಮಾಡುವ" ಉನ್ನತ ಧ್ಯೇಯವನ್ನು ಸಾಧಿಸುವ ರಾಜಮಾರ್ಗವಾಗಿ "ಧರ್ಮ" ವು ಆಧಾರ ಭೂಮಿಕೆಯಾಗುತ್ತದೆ. ಧರ್ಮದ ಹರಹು, ಸ್ವರೂಪ ಮತ್ತು ಫಲಗಳನ್ನು ಹೃದಯಂಗಮಗೊಳಿಸಲು ವಿಷ್ಣು, ವಾಮನ, ವರಾಹ ಪುರಾಣಗಳಲ್ಲಿ ಧರ್ಮೋತ್ಪತ್ತಿ ಕಥೆಯನ್ನು ಹೀಗೆ ಕಲ್ಪಿಸಲಾಗಿದೆ. "ಬ್ರಹ್ಮನು ಸೃಷ್ಟಿಚಿಂತನೆಯಲ್ಲಿದ್ದಾಗ ಅವನ ದೇಹದ ಬಲಭಾಗದಿಂದ (ಬಲವಕ್ಷಸ್ಥಳದಿಂದ, ಸ್ತನದ ತುದಿಯಿಂದ-ಧರ್ಮಸ್ಥನಾಂತಾದ್ ಭವತ್) ವೃಷಭಾಕಾರದ ಧರ್ಮಪುರುಷನು ಜನಿಸಿದನು. ಬ್ರಹ್ಮನು ಆ ವೃಷಭಾಕಾರದ ಪುರುಷನಿಗೆ ಪ್ರಜಾರಕ್ಷಣೆಯ ಕಾರ್ಯವನ್ನು ಒಪ್ಪಿಸಿದನು. ಈ ಧರ್ಮವೃಷಭನು ಕೃತಯುಗದಲ್ಲಿ ನಾಲ್ಕು ಪಾದಗಳಿಂದಲೂ ನೆಲೆಗೊಂಡಿತ್ತು. ಯುಗಕ್ರಮದಲ್ಲಿ ಒಂದೊಂದೆ ಕಾಲು ಎತ್ತುತ್ತ ಕಲಿಯುಗಾಂತದಲ್ಲಿ ನಾಲ್ಕನೇ ಪಾದವನ್ನೂ ಎತ್ತಿದಾಗ ಪ್ರಳಯವಾಗುವುದು" ಈ ಧರ್ಮಪುರುಷ (ವೃಷಭಾಕಾರ)ನಿಗೆ ಹದಿಮೂರು ಪತ್ನಿಯರು – ಶ್ರದ್ಧಾ, ಮೈತ್ರೀ, ದಯಾ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯಾ, ಉನ್ನತಿ, ಬುದ್ಧಿ, ಮೇಧಾ, ತಿತಿಕ್ಷಾ, ಶ್ರೀಃ (ಲಕ್ಷ್ಮಿ) ಮೂರ್ತಿ (ವಪು) ಈ ಪತ್ನಿಯರ ಜೊತೆ ಸೇರಿ ಧರ್ಮನು ಹಡೆದ ಮಕ್ಕಳು ಹದಿಮೂರು – ಧೃತಿ, ಪ್ರಸಾದ, ಅಭಯ, ಸುಖ, ಮುದ, ಸ್ಮಯ (ಗರ್ವ), ಯೋಗ, ದರ್ಪ, ಅರ್ಥ, ಸ್ಮೃತಿ, ಕ್ಷೇಮ, ಪ್ರಶ್ರಯ, ನರ-ನಾರಾಯಣರು. ವಿಷ್ಣುಪುರಾಣ ದಲ್ಲಿ ಈ ಮೇಲಿನ ಮಕ್ಕಳ ಜೊತೆ – ಕಾಮ, ನಿಯಮ, ಸಂತೋಷ, ಲೋಭ, ಶ್ರುತ, ದಂಡ, ನಯ, ವಿನಯ, ಬೋಧ, ಲಜ್ಜಾ, ವ್ಯವಸಾಯ, ಸಿದ್ಧಿ, ಯಶ, ಕೀರ್ತಿ ಎಂಬ ಹದಿನಾಲ್ಕು ಸೇರಿ ಒಟ್ಟು ಇಪ್ಪತ್ತೇಳು ಮಕ್ಕಳು ಎನ್ನಲಾಗಿದೆ. ಈ ಧರ್ಮವು ಸಪರಿವಾರವಾಗಿ ಕೃತಯುಗದಲ್ಲಿ ನಾಲ್ಕು ಪಾದಗಳನ್ನೂರಿ ನಿಂತಿದ್ದರೆ, ಮುಂದೆ ಯುಗ ಪರಿವರ್ತನೆಯಲ್ಲಿ ಒಂದೊಂದು ಪಾದವನ್ನು ಎತ್ತಿದಂತೆ ಧರ್ಮವು ಹ್ರಾಸವಾಗತೊಡಗಿತು. ನಾನಾ ಬಗೆಯಲ್ಲಿ ಸಾಮಾಜಿಕ ಪರಿವರ್ತನೆಗಳು ಆಗುತ್ತ ಬಂದವು. ಆಗ ಧರ್ಮದ ಅಂಗಾಂಶಗಳನ್ನೇ ಧರ್ಮವೆಂದು ಸಾರಲಾಯಿತು.

"ಚೋದನಾಲಕ್ಷಣಾರ್ಥೋಧರ್ಮಃ" ವೇದಗಳು ಪ್ರೇರೇಪಿಸುವ ಯಜ್ಞ-ಯಾಗಾದಿಗಳೇ ಧರ್ಮ. ಅಹಿಂಸಾ ಪರಮೋಧರ್ಮಃ ಅಹಿಂಸೆಯೇ ಶ್ರೇಷ್ಠ ಧರ್ಮ. ಆಚಾರಃ ಪರಮೋಧರ್ಮಃ – ಆಚಾರವೇ ಪರಮಧರ್ಮ ಮುಂತಾದ ಧರ್ಮಾಂಶಗಳ ಘೋಷಣೆಯ ಜೊತೆ ಜೊತೆಗೇ ವರ್ಣಧರ್ಮ, ಆಶ್ರಮಧರ್ಮ, ರಾಜಧರ್ಮ, ಪ್ರಜಾಧರ್ಮ, ಸ್ತ್ರೀಧರ್ಮ, ಪತಿಧರ್ಮ, ಮುಂತಾದ ಖಿಲ ಧರ್ಮಗಳು ಉದ್ಭವಿಸಿದವು. ಸ್ಮೃತಿಗಳು, ಪುರಾಣಗಳು, ದರ್ಶನಗಳು, ಧರ್ಮಶಾಸ್ತ್ರಗಳು, ಅರ್ಥಶಾಸ್ತ್ರಗಳು, ಕಾಮಶಾಸ್ತ್ರಗಳು, ಮೋಕ್ಷ ಶಾಸ್ತ್ರಗಳು ಕಾಲಾನುಗುಣವಾಗಿ ಧರ್ಮಪದವನ್ನು ನಾನಾರ್ಥಗಳಲ್ಲಿ ಬಳಸಿದವು. ಧರ್ಮ ಶಬ್ದವು ಗುಣ, ಆಚಾರ, ಸಂಪ್ರದಾಯ, ವಾಡಿಕೆ ವೈದಿಕ ಕರ್ಮಾನುಷ್ಠಾನ, ಪುಣ್ಯಕಾರ್ಯ, ಕರ್ತವ್ಯ, ವಸ್ತುವಿನಲ್ಲಿರುವ, ರೂಪಾದಿಗಳು, ಅದೃಷ್ಟವಾದದ್ದು, ಜೀವಾತ್ಮ, ಪರಮಾತ್ಮ, ಸಾದೃಶ್ಯ, ಸಮಾನಗುಣ, ನೀತಿ, ನ್ಯಾಯ, ಸ್ವಭಾವ, ವ್ಯಕ್ತಿಯ ಕೆಲಸಕಾರ್ಯಗಳು, ಯಜ್ಞ, ಅಹಿಂಸೆ, ದಯೆ, ನಿಯಮ, ಕಾಯಿದೆ, ಕಾನೂನು, ಯಮರಾಜ, ಬಿಲ್ಲು, ಸೋಮಪಾನ, ವೇದ, ಉಪನಿಷತ್ತು, ಮನೋಧರ್ಮ, ಸಂಸ್ಕಾರ, ವೃತ್ತಿ, ಮೋಕ್ಷ, ನಡತೆ, ಮಾನವೀಯತೆ, ಜಾತಿ, ಕುಲ, ಮತ ಮುಂತಾದ ಅನೇಕ ಅರ್ಥಗಳಲ್ಲಿ ಬಳಕೆಯಾಗಿ ಯುಗದಿಂದ ಯುಗಕ್ಕೆ ದಿನದಿಂದ ದಿನಕ್ಕೆ "ಧರ್ಮವು" ಗೊಂದಲಮಯವಾಯಿತು. ಮೂಲ ಧರ್ಮಸ್ವರೂಪವು ಅಬಾಧಿತವಾಗಿ ಇದ್ದರೂ, ಅರಿವು-ಆಚರಣೆಗಳಲ್ಲಿ ಅನೇಕ ವಿರೋಧಾಭಾಸಗಳು ಹುಟ್ಟಿಕೊಂಡವು. "ಧರ್ಮಸ್ಯಮೂಲಂ ನಿಹಿತಂ ಗುಹಾಯಾಂ । ಮಹಾಜನೋ ಯೇನಗತಃ ಸಪಂಥಾಃ ॥ ಅನಾದಿಯಾಗಿ ಅನಂತದತ್ತ ನಿರಂತರ ಹರಿಯುವ ಪ್ರವಾಹಾತ್ಮಕವಾದ ಧರ್ಮವನ್ನು ಅರಿಯುವುದು ಕಷ್ಟ. ಅದು ನಿಗೂಢ. ಆದ್ದರಿಂದ ನಿಮ್ಮ ಮುಂದಿರುವ ಶ್ರೇಷ್ಠ ವ್ಯಕ್ತಿಯನ್ನು ಗಮನಿಸಿ ಅನುಸರಿಸಿರಿ" ಎಂದು ಶ್ರದ್ಧಾವಂತರಿಗೆ ಬೋಧಿಸುವಂತಾಯಿತು.

ಇಂಥ "ಧರ್ಮಗ್ಲಾನಿಯ" ಸಂದರ್ಭದಲ್ಲೇ ಧರ್ಮಸ್ವರೂಪವನ್ನು ವಿವರಿಸಿದೆ. "ಧರ್ಮ ಸಂಸ್ಥಾಪನಾ" ಕಾರ್ಯವನ್ನು ಕೈಗೊಳ್ಳಲೆಂದೇ ಶ್ರೀಭಗವದ್ಗೀತೆಯ ಉದಯವಾಯಿತು. ಶ್ರೀಕೃಷ್ಣನು ಅರ್ಜುನ-ನರನೆಂಬ ಮನುಷ್ಯನನ್ನು ಮುಂದಿಟ್ಟುಕೊಂಡು ಧರ್ಮಬೋಧೆಯನ್ನು ಮಾಡಿದನು. ಶ್ರೀ ಶಂಕರಭಗವತ್ಪಾದರು ಭಗವದ್ಗೀತೆಯನ್ನು ಸಂಪೂರ್ಣ ಆಲೋಚನೆಮಾಡಿ ಅದರ ಸ್ವರೂಪ, ನಡೆ, ಮಾರ್ಗ, ಉದ್ದೇಶ, ಫಲಪ್ರಯೋಜನಗಳನ್ನು ಆಳವಾಗಿ ಅಧ್ಯಯನ ಮಾಡಿ ಅಪಾರ್ಥಕ್ಕೆ ಅನ್ಯಾರ್ಥಕ್ಕೆ ಎಡೆಯಿಲ್ಲದಂತೆ ಭಾಷ್ಯವನ್ನು ರಚಿಸಿದರು. ಭಗವದ್ಗೀತೆ ಧರ್ಮಕ್ಷೇತ್ರೇ ಎಂದೇ ಆರಂಭವಾಗುತ್ತದೆ. ಮಧ್ಯದಲ್ಲಿ ಧರ್ಮಗ್ಲಾನಿ, ಧರ್ಮಸಂಸ್ಥಾಪನಾ, ಸ್ವಧರ್ಮ, ತ್ರಯೀಧರ್ಮ, ಶಾಶ್ವತಧರ್ಮ ಮುಂತಾಗಿ ಪ್ರಸ್ತಾಪಿಸಿ ಸರ್ವಧರ್ಮದ ಮಾತಿನಿಂದ ಕೊನೆಗೊಳ್ಳುತ್ತದೆ.

ಆಚಾರ್ಯ ಶಂಕರರು ಭಗವದ್ಗೀತಾ ಭಾಷ್ಯ ಭೂಮಿಕೆಯಲ್ಲಿ "ಧರ್ಮವು ಪ್ರವೃತ್ತಿ

ಲಕ್ಷಣ ಮತ್ತು ನಿವೃತ್ತಿ ಲಕ್ಷಣ ಎಂದು ಎರಡು ಬಗೆಯಾಗಿದೆ. ಹೀಗೆ ಎರಡು ಬಗೆಯಾದ ಧರ್ಮವು ಜಗತ್ತಿನ ಸ್ಥಿತಿಗೆ ಕಾರಣವಾಗಿ, ಪ್ರಾಣಿಗಳ (ಐಹ್ಮಿಕ) ಅಭ್ಯುದಯ (ಉನ್ನತಿ) ಮತ್ತು ನಿಶ್ರೇಯಸ್ಸಿಗೆ (ಮೋಕ್ಷಕ್ಕೆ) ಕಾರಣವಾಗಿದೆ. ದೀರ್ಘಕಾಲಾನಂತರದಲ್ಲಿ ಧರ್ಮಾನುಷ್ಠಾನಕರಲ್ಲಿ ನಾನಾ ಕಾಮನೆಗಳು ಉತ್ಪನ್ನವಾಗಿ ವಿವೇಕ ವಿಜ್ಞಾನಗಳು ಹ್ರಾಸವಾಗಿ ಅಧರ್ಮದಿಂದ ಧರ್ಮವು ತಿರಸ್ಕೃತವಾಗಿ ಅಧರ್ಮವು ಪ್ರವರ್ಧಮಾನವಾದಾಗ ಜಗತ್ತಿನ ಸ್ಥಿತಿಯನ್ನು ಕಾಪಾಡಲು ಅವತರಿಸಿ ಪ್ರವೃತ್ತಿ ನಿವೃತ್ತಿ ಎಂಬ ಧರ್ಮವನ್ನು ಅರ್ಜುನನಿಗೆ ಬೋಧಿಸಿದನು. ಆ ಭಗವದ್ಗೀತೆಯನ್ನು ವ್ಯಾಸರು (ಭಗವದ್) ಗೀತಾ ಎಂಬ ಏಳುನೂರು ಶ್ಲೋಕಗಳಲ್ಲಿ ಸಂಗ್ರಹಿಸಿದರು ಎಂದು ಭಗವದ್ಗೀತೆಯ ಧ್ಯೇಯೋದ್ಧೇಶಗಳನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ರಾಷ್ಟ್ರದ ಮಹಾಮೇಧಾವಿಗಳಲ್ಲೊಬ್ಬರಾದ ಶ್ರೀ ಡಿ.ವಿ. ಗುಂಡಪ್ಪನವರು ಭಗವದ್ಗೀತೆಯನ್ನು "ಜೀವನ ಧರ್ಮಯೋಗ" ಎಂದು ಕರೆದು ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ ಧರ್ಮ ಸಂಸ್ಥಾಪನೆಯ ಉದ್ದೇಶದಿಂದಲೇ ಅವತರಿಸಿದ (ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ) ಶ್ರೀಕೃಷ್ಣನು ಗೀತೆಯಲ್ಲಿ ಉಪದೇಶಿಸಿದ್ದು ಜಗತ್ತಿನ ಸ್ಥಿತಿಗೆ ಕಾರಣವಾದ ಧರ್ಮವನ್ನೇ. "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ವೇದವು ಜಗತ್ತಿನ ಸ್ಥಿತಿ-ಗತಿ-ರಕ್ಷಣೆಗೆ ಕಾರಣವಾದ ಧರ್ಮವನ್ನು ಉದ್ಘೋಷಿಸಿತ್ತೋ ಅದನ್ನೇ ಭಗವದ್ಗೀತೆಯು ಕ್ರೋಢೀಕರಿಸಿ ವಿಶ್ವಕ್ಕೇ ನೀಡಿದೆ.

ಭಗವದ್ಗೀತೆ ವೇದ ಮತ್ತು ಇತರ ಸ್ಮೃತಿಶಾಸ್ತ್ರಗಳ ಪ್ರಭುಸಂಹಿತಾ ರೂಪವಾಗಿ ಧರ್ಮವನ್ನು ಬೋಧಿಸುವುದಿಲ್ಲ. ಅಥವಾ ಕಾವ್ಯದ ಮೃದುಮಧುರಕಾಂತಾ ಸಮ್ಮಿತಾ ಮಾರ್ಗವನ್ನೂ ಅನುಸರಿಸುವುದಿಲ್ಲ. ಈ ಎರಡಕ್ಕೂ ಮಧ್ಯದ ಮಿತ್ರಾಭಿಭಾಷಣ ಸ್ವರೂಪದ ಮಿತ್ರ ಸಂಮಿತಾ ಮಾರ್ಗವನ್ನು ಅನುಸರಿಸುತ್ತದೆ. ಭಕ್ತೋಸಿ ಮೇ ಸಖಾ ಚೇತಿ... ಅರ್ಜುನ ! ನೀನು ನನ್ನ ಭಕ್ತ ಮತ್ತು ಗೆಳೆಯನಾದ್ದರಿಂದ ಹೇಳುತ್ತೇನೆ ಎಂದು ಜಗತ್ತಿನ ಸಮೂಹವನ್ನು ಮಿತ್ರಭಾವದಿಂದ ಕಂಡು ಬೋಧಿಸುತ್ತದೆ. ಆದ್ದರಿಂದ ನೇರವಾಗಿ ಧರ್ಮವನ್ನು ತಲೆಯಮೇಲೆ ಹೇರಿದಂತೆ ಹೇಳುವುದಕ್ಕೆ ಬದಲಾಗಿ ಜೀವಿಯಲ್ಲಿ ಸ್ವಾಭಾವಿಕವಾಗಿ ಇದ್ದ ಚಟುವಟಿಕೆಗಳನ್ನೇ ತನ್ನ ಹಿತಕ್ಕೆ ತಕ್ಕ ಹಾಗೆ ನೇರ್ಪಡಿಸುವ ಮಾರ್ಗಗಳನ್ನು ಹೇಳುತ್ತದೆ. ಹಾಗೆ ನೇರ್ಪಡಿಸುವುದನ್ನೇ 'ಯೋಗ' ಎಂದು ಕರೆದು ನಿನ್ನ ನಡೆ-ನುಡಿ-ಭಾವಗಳನ್ನು ಯೋಗವಾಗಿ ಪರಿವರ್ತಿಸು. "ಯೋಗಃ ಕರ್ಮಸುಕೌಶಲಮ್". ಕರ್ಮಮಾಡು, ಅದನ್ನು ಅರ್ಪಣಾಭಾವದಿಂದ ಮಾಡು. ಆಗ ಅದು ಯೋಗವಾಗುತ್ತದೆ. ಹೀಗೆ ಜೀವಿಯು ಅಭ್ಯುದಯ ಮತ್ತು ನಿಃಶ್ರೇಯಸ್ಸನ್ನು ಯೋಗಮಾರ್ಗದಿಂದ ಪಡೆಯುವಂತೆ ಮಾಡುತ್ತದೆ.

ಗೀತೆಯು ಧರ್ಮವನ್ನು ಕಟ್ಟಳೆಯನ್ನಾಗಿ ಮಾಡುವುದಿಲ್ಲ. "ಇದು ಧರ್ಮ, ಇದನ್ನೇ ಮಾಡು" "ಇದು ಅಧರ್ಮ ಇದನ್ನು ಮಾಡಬೇಡ" ಎಂದು ಆದೇಶಿಸದೇ,

"ಇದು ಧರ್ಮ – ಇದು ಅಧರ್ಮ" ಎಂದೂ ಹೇಳದೇ ಧರ್ಮಾಧರ್ಮದ ವಿವಿಧ ಆಯಾಮಗಳನ್ನು "ಯೋಗ"ದ ತಕ್ಕಡಿಯಲ್ಲಿ ತೂಗಿ "ನೋಡು" ಇವುಗಳ ಮೌಲ್ಯ, ಸ್ವರೂಪ, ಸಾಧನೆ ಹೀಗುಂಟು ಇದರಲ್ಲಿ ನಿನಗೆ ಹಿತವಾಗುವುದನ್ನು ನೀನೇ ಆಯ್ಕೆ ಮಾಡಿಕೋ ಎನ್ನುತ್ತದೆ. ಇದೇ ಬಗೆಯಲ್ಲಿ ಕರ್ಮ, ಭಕ್ತಿ, ಧ್ಯಾನ, ದೇವತಾಭಾವ, ಸಾಕಾರ, ನಿರಾಕಾರ, ದೈವೀಸಂಪತ್ತು, ಆಸುರೀಭಾವ, ತಪಸ್ಸು, ಜ್ಞಾನ, ವಿಜ್ಞಾನ, ಸತ್ವರಜಸ್ತಮಸ್ಗುಣಗಳ ನಡೆ–ನುಡಿ–ತಪಸ್ಸು, ಆಹಾರಗಳ ಎಲ್ಲ ಜೀವನೋದ್ಭವ, ಜೀವನಾವಶ್ಯಕಗಳನ್ನು ವರ್ಣಿಸುತ್ತದೆ. ಜೀವಿಯು ತಾನಾಗಿಯೇ ಧರ್ಮಿಷ್ಠನಾಗುವಂತೆ ಮಾಡುತ್ತದೆ. ಸೇರುವ ಗುರಿ ಒಂದೇ ಆದರೂ ಅದಕ್ಕೆ ನಾನಾ ಮಾರ್ಗಗಳನ್ನು ಸೂಚಿಸುತ್ತದೆ. ಬಾಹ್ಯಾಡಂಬರದ ಚಿತ್ರ ವಿಚಿತ್ರ ಅದ್ಭುತ ವಿಶ್ವರೂಪವನ್ನು ತೋರಿ ನಿಬ್ಬೆರಗುಗೊಳಿಸಿ, ಅಂತರಂಗದ ಆನಂದಮಯ ಚಿನ್ಮಯನ ನಿಜರೂಪವನ್ನು ಹೃದಯದಲ್ಲಿ ನೆಲೆಗೊಳಿಸಿ, ಜೀವಿಯು ತಾನಾಗಿಯೇ – "ನಷ್ಟೋ ಮೋಹಃ ಸ್ಮೃತಿರ್ಲಬ್ಧಾ" ಎಂದು ಉದ್ಗರಿಸಿ ಧರ್ಮದ ನೆಲೆಯಲ್ಲಿ ದೃಢವಾಗಿ ನಿಲ್ಲುವಂತೆ ಮಾಡುತ್ತದೆ ಭಗವದ್ಗೀತೆ.

ಭಗವದ್ಗೀತೆ ಯಾವುದೇ ನೂತನ ಧರ್ಮದ ಪರಿಕಲ್ಪನೆಯನ್ನು ಮಾಡುವುದಿಲ್ಲ. ಆದರೆ ಸನಾತನ ಧರ್ಮದಲ್ಲಿ ಕಾಲಾನುಗುಣವಾಗಿ ಸೇರುತ್ತ ಬಂದ ಹೊಟ್ಟುಗಳನ್ನು ಗಾಳಿಸಿ ತೆಗೆದು ಧರ್ಮ ಪರಿಷ್ಕರಣವನ್ನು ಮಾಡುತ್ತದೆ. ಪತ್ನಿಪುತ್ರಾದಿ ಸಹಿತ ಧರ್ಮವೃಷಭನ ರೂಪಕ–ಪರಿಕಲ್ಪನೆಯ ಧೃತಿ, ಕ್ಷಮಾ, ಅಸ್ತೇಯ, ಮೇಧಾ, ತಿತಿಕ್ಷಾ, ಶ್ರದ್ಧಾ, ದಯಾ ಮುಂತಾದ ಧರ್ಮದ ಎಲ್ಲ ಅಂಶಗಳನ್ನು ಒರೆಗೆ ಹಚ್ಚಿ, ಅವುಗಳಿಗೆ ಯುಕ್ತಸ್ಥಾನಗಳನ್ನು ಕಲ್ಪಿಸುತ್ತದೆ.

ಭಗವದ್ಗೀತೆಯ ಅತ್ಯಂತ ಪ್ರಮುಖವಾದ ಧರ್ಮರಕ್ಷಣೆಯ ಪರಿಕಲ್ಪನೆಯೆಂದರೆ ಧರ್ಮಕ್ಕೆ ಅಧ್ಯಾತ್ಮದ ಸುದೃಢ ನೆಲೆಗಟ್ಟನ್ನು ಕಲ್ಪಿಸಿಕೊಟ್ಟಿದ್ದು. ವೈದಿಕ ಕರ್ಮಕಾಂಡವು ಆಧ್ಯಾತ್ಮಿಕ ನೆಲೆಯನ್ನು ತಪ್ಪಿದಾಗ ಕೇವಲ ಸ್ವರ್ಗಭೋಗಫಲಪ್ರದವಾಗಿ ಪರಿಣಾಮಿಸಿತು. ಆದ್ದರಿಂದ ಅಂತತಃ ನಿಃಸಾರವಾಗಬಲ್ಲ ಪ್ರವೃತ್ತಿ ಧರ್ಮವನ್ನೂ ಅಧ್ಯಾತ್ಮಧರ್ಮದಲ್ಲಿ ಜೋಡಿಸಿ ಪ್ರವೃತ್ತಿಧರ್ಮವು ನಿತ್ಯನೂತನವಾಗಿ ನೆಲೆಗೊಳ್ಳುವಂತೆ ಮಾಡಿತು. ಒಟ್ಟಿನಲ್ಲಿ ಭಗವದ್ಗೀತೆ ಜೀವಿಯ ಜೀವನ ಯಾತ್ರೆಯು ಇಲ್ಲಿಗೂ ಸಲ್ಲುವ, ಅಲ್ಲಿಗೂ ಸಲ್ಲುವ, ಎಲ್ಲಿಯೂ ಸಲ್ಲುವಂತೆ ವಿಶ್ವೈಕಾತ್ಮತತ್ವದ ಆಧ್ಯಾತ್ಮಿಕ ಧರ್ಮಮಾರ್ಗವನ್ನು ನಿರ್ಮಿಸಿಕೊಟ್ಟಿದೆ.

ಪ್ರಜ್ಞಾವಾದ, ವೇದವಾದಗಳ ನಡುವಿನ ನಡೆ

– ಪ್ರೊ. ರಾಮಚಂದ್ರ ಜಿ. ಭಟ್ಟ (ಕೋಟೆಮನೆ)

ನಾವಿಂದು ಬಾಳುತ್ತಿರುವ ಜಗತ್ತು ಅನೇಕ ದ್ವಂದ್ವಗಳದ್ದು. ಏನನ್ನು ತೊಡಬೇಕು? ಏನನ್ನು ಬಿಡಬೇಕು? ಎಂದು ಹೆಜ್ಜೆ-ಹೆಜ್ಜೆಗೂ ದ್ವಂದ್ವವೇ. ಮೂರುವರೆ ದಶಕಗಳ ಕಾಲದಿಂದಲೂ ತರುಣಮನಸ್ಸುಗಳ ಒಡನಾಟದಲ್ಲಿ ನನ್ನ ಯಾತ್ರೆ ಸಂದಿದೆ. ಮುಗ್ಧಮನಸ್ಸಿನ ಹದಿಹರೆಯದ ಹುಡುಗರು ಕಲ್ಪನೆಯ ಆಕಾಶದಿಂದ ವಾಸ್ತವದ ಭೂಲೋಕಕ್ಕೆ ಬಂದು ತಲುಪುವಾಗ ಏನೇನೋ ಆಗುವುದುಂಟು. ತಾಯಿ-ತಂದೆಯರು, ಗುರು-ಹಿರಿಯರು ಎಂಬ ಶ್ರದ್ಧಾ-ಭಕ್ತಿಭಾವಯುತರಾದವರು ಉತ್ತಮ ಸಂಸ್ಕಾರ ಸಿಕ್ಕಾಗ ಒಳ್ಳೆಯದನ್ನೇ ನೋಡುತ್ತಾ ಪಾಲಿಸುತ್ತಾಮುನ್ನಡೆಯುವುದನ್ನು ನಾನು ಕಂಡಿದ್ದೇನೆ. ಮೊದಲೇ ಮನಸ್ಸಿನ ಮೂಲೆಯಲ್ಲಿ ದೋಷದ ವಾಸನೆ ಬೇರೂರಿದ್ದರೆ ಹದಿಹರೆಯದಲ್ಲಿ ಚಾಂಚಲ್ಯ, ಚಾಪಲ್ಯಗಳು ಮಿತಿಮೀರಿ ದಾರಿ ತಪ್ಪಿದ್ದನ್ನೂ ಕಂಡು ಅಸಹಾಯನಾದದ್ದೂ ಇದೆ. ಸಕಾಲದಲ್ಲಿ ದೋಷದ ಮೂಲವನ್ನು ಕಂಡುಹಿಡಿಯಲು ಸಾಧ್ಯವಾದಾಗ ಸೂಕ್ತಸಲಹೆಯಿಂದ ಮೇಲೆತ್ತಲು ಸಾಧ್ಯವೆಂಬ ಅನೇಕ ಉದಾಹರಣೆಗಳೂ ಇವೆ.

ಪಾರ್ಥಮಾನಸಿಕತೆಯ ಅನರ್ಥ:

ಕಲಿದ್ವಾಪರಯುಗಗಳ ವಿಚಿತ್ರ, ದುರ್ಬಲ ಮನಸ್ಸಿನ ಪಲಾಯನವಾದಿ, ಶೋಕಮೋಹದ ಮಹಾಮಿಶ್ರಣವನ್ನೇ ಭಗವದ್ಗೀತೆಯಲ್ಲಿ 'ವಿಷಾದ' ವೆಂದು ಕರೆಯಲಾಗಿದೆ. ಧನಂಜಯನಾದ ಅರ್ಜುನ ದೇವದತ್ತ ಶಂಖ ಊದುವಾಗ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಧರ್ಮಕ್ಕಾಗಿ ಯುದ್ಧಕ್ಕೆ ಸನ್ನದ್ಧನೆಂಬ ಎಚ್ಚರ ಹಾಗೂ ಜಾವಾಬ್ದಾರಿ ಹೊಂದಿದ್ದ. "ಧಾರ್ತರಾಷ್ಟ್ರಸ್ಯ ದುರ್ಬುದ್ಧೇಃ ಯುದ್ಧೇ ಪ್ರಿಯಚಿಕೀರ್ಷವಃ" ಎಂಬಾಗ ದುರ್ಯೋಧನಾದಿಗಳು ದುಷ್ಟರೆಂಬ ಪೂರ್ಣ ಅರಿವಿನವನೆಂದು ಸಾಬೀತು ಪಡಿಸಿಕೊಳ್ಳುತ್ತಾನೆ. ಆದರೇನು? ಆತನ ಮುಂದಿನ ಅವತಾರ ಬೇರೆಯೇ! ಅವನಂದುಕೊಂಡ ಶಾಶ್ವತವಾದ ಕುಲಧರ್ಮ ಮತ್ತು ಜಾತಿಧರ್ಮಗಳು ಮಹಾಭಾರತದ ಮಹಾತಾತ್ಪರ್ಯವಾದ ಯತೋಧರ್ಮಃ ತತೋ ಜಯಃ ಎಂಬ ಸನಾತನ ಧರ್ಮಸೂತ್ರದಿಂದ ಬಲುದೂರವಾದದ್ದೆಂದು ತಿಳಿಯದಾಯಿತು ಅವನಿಗೆ. ವಿವೇಕ ಮತ್ತು ವಿಜ್ಞಾನಗಳು ಕೈಕೊಟ್ಟವು. ಅಧರ್ಮವನ್ನೇ ಶಾಶ್ವತಧರ್ಮವೆಂದು ಬಗೆದ. ತನ್ನ

ಕುಲಮೋಹಕ್ಕೆ ಕುಲಧರ್ಮದ ಹೆಸರನಿಟ್ಟ. ತನ್ನ ಅಜ್ಞಾನದ ಹುಳುರೆಗೆ ತರ್ಕದ ಮುಲಾಮು ಹಚ್ಚುವ ಯತ್ನಮಾಡುತ್ತ ವರ್ಣಸಾಂಕರ್ಯವಾದದ ಧರ್ಮಶಾಸ್ತ್ರದ ಪ್ರವಚನದ ಕೌಶಲ ಮೆರೆದ. ಈ ಖಾಯಿಲೆ ಇಂದಿನ ಬುದ್ಧಿಜೀವಿಗಳಿಗೆ, ಸಂಶೋಧಕರಿಗೆ, ಪತ್ರಕರ್ತರಿಗೆ, ಮಾಧ್ಯಮಮಹಾಮಹಿಮರಿಗೆ ಪಾಠಮಾಡುವ ಶಿಕ್ಷಕವೃಂದಕ್ಕೆ ಒಟ್ಟಾರೆ ಶಿಕ್ಷಿತಸಮಾಜಕ್ಕೇ ಅಂಟಿಕೊಂಡ ಜಾಡ್ಯವಾಗಿ ಕಂಡುಬರುತ್ತಿದೆ. ಒಂದೆಡೆ ಪ್ರಜ್ಞಾವಾದದ ಡೊಂಬರಾಟವಾದರೆ ಇನ್ನೊಂದೆಡೆ ವೇದವಾದದ ಪರಲೋಕ ಚಿಂತನೆ, ತಾಪತ್ರಯುಚಿಂತನೆಗಳಿಂದ ಮುಡುಗೆಟ್ಟ, ನಿಂತನೀರಾದ ಕರ್ಮಕಾಂಡದ ಅಕಾಂಡತಾಂಡವವೂ ನಮ್ಮ ಸಮಾಜದ ಹಳಿ ತಪ್ಪಿಸುತ್ತಿದೆ.

ಪಾರ್ಥರ ಮನಸ್ಸಿಗೆ ಪಾರ್ಥಸಾರಥಿಯ ಪಾಥೇಯವೇನು ? :

ಐದುಸಾವಿರವರ್ಷಗಳ ಹಿಂದಿನ ಮಹಾಭಾರತದ ಕಾಲದಿಂದ ನಾವಿಂದು ಬಹಳ ದೂರ ಬಂದಿದ್ದೇವೆ. ಅಂದಿನ ಪಾರ್ಥ ತಾತ್ಕಾಲಿಕವಾಗಿ ಹೃದಯದೌರ್ಬಲ್ಯಕ್ಕೆ ಬಲಿಯಾಗಿದ್ದ. ಆದರೆ ಶ್ರೀಕೃಷ್ಣನ ದೀರ್ಘಕಾಲದ ಮೈತ್ರಿಯ ಛತ್ರಛಾಯೆ ಆತನ ಅಂತರಂಗವನ್ನು ಸ್ವಚ್ಛಗೊಳಿಸಿತ್ತು. ಆದ್ದರಿಂದ ಶ್ರೀಕೃಷ್ಣ ಆತ ಅವಚಿಕೊಂಡ ಅಜ್ಞಾನದ ಕವಚವನ್ನು ಸುಲಭವಾಗಿ ಕೆಲವೇ ಸೂಕ್ತಸಲಹೆಗಳನ್ನು ನೀಡಿ ದೂರಮಾಡಲು ಶಕ್ತನಾದ. ಆತ 'ಶೋಕಸಂವಿಗ್ನಮಾನಸ'ನಾಗಿದ್ದಾಗಲೂ ಗೀತೆಯೆಂಬ ಜೀವನದರ್ಶನವನ್ನು ಅರ್ಥಮಾಡಿಕೊಳ್ಳುವಲ್ಲಿ ಸತ್ಪಾತ್ರನಾಗಿದ್ದ. "ಮಯಾ ಪ್ರಮಾದಾತ್ ಪ್ರಣಯೇನ ಚಾಪಿ" ಎಂಬ ಉದ್ಗಾರವೊಂದು ಆತನ ಬಾಯಿಯಿಂದ ಹೊರಹೊಮ್ಮುತ್ತದೆ ವಿಶ್ವರೂಪದರ್ಶನದ ಅಂಚಿನಲ್ಲಿ. ಶ್ರೀಕೃಷ್ಣನೆಂದರೆ ಯಾರೆಂದು ತಿಳಿಯಲು ಆತ ಮೊದಲು ಶಕ್ತನಾಗಿರಲಿಲ್ಲ. ಕಾರಣ ಆತನ ಬಗ್ಗೆ ಇದ್ದ ಮೋಹ. 'ಹತ್ತಿರದ ಮಿತ್ರ'ನೆಂಬ ಪ್ರೀತಿಭಾವವೇ ಆತನ ಕಣ್ಣಿನ ಪೊರೆಯಾಗಿತ್ತು. "ಅತಿ ಪರಿಚಯಾತ್ ಅವಜ್ಞಾ" ತುಂಬ ನಿಕಟಪರಿಚಯದಿಂದ ಪುರಸ್ಕಾರಭಾವ ಕಡಿಮೆಯಾಗುತ್ತದೆ. ಇದು ನರರಾದ ನಮ್ಮ ಸಮಸ್ಯೆ. ನಾರಾಯಣ ನಮ್ಮಲ್ಲೇ ಇರುವಾಗಲೂ ಆತನನ್ನು ಗುರುತಿಸಲಾಗದೇ ಹೊರಗಡೆ ಗಡಿಬಿಡಿಯಿಂದ ಓಡಾಡುತ್ತಲೇ ಇರುತ್ತೇವೆ. ನಮ್ಮ ಹುಡುಗಾಟ ಬಹಿರ್ಮುಖವಾದದ್ದು. ಇಂಥ ನರಸ್ವಭಾವ ಸತ್ವ, ರಜಸ್ಸು ಮತ್ತು ತಮಸ್ಸೆಂಬ ಗುಣಗಣಗಳ ನಮ್ಮೊಳಗಿನ ಕುಣಿತದ ಪ್ರಭಾವ. ತನ್ನೊಳಗಿನ ನರತ್ವದ ದೌರ್ಬಲ್ಯವನ್ನು ಬೇಗನೇ ಹೋಗಲಾಡಿಸಿಕೊಂಡ ಪಾರ್ಥ "ನಷ್ಟೋ ಮೋಹಃ ಸ್ಮೃತಿಃ ಲಬ್ಧಾ" "ನನ್ನ ಮೋಹ ದೂರವಾಯಿತು, ನಾನಾರೆಂಬ ತಿಳಿವರಳಿತು" ಎನ್ನಲು ತಡಮಾಡಲಿಲ್ಲ. ರಣರಂಗದ ಸನ್ನಿವೇಶದಲ್ಲಿ ತನ್ನ ಸಂವಾದದ ಕೌಶಲದಿಂದ ಪಾರ್ಥನ ಅಪಾರ್ಥವನ್ನು ದೂರಮಾಡಿದ ಕೃಷ್ಣನ ಶ್ರೇಷ್ಠತೆಗೆ ಎಣೆಯಿಲ್ಲ. ಕೃಷ್ಣನ ಬುತ್ತಿಯನ್ನೆತ್ತಿಕೊಂಡ ಅರ್ಜುನನ ಶಿಷ್ಯತ್ವವೂ ಅಮೋಘವಾದದ್ದು. ಆತನ "ಪ್ರಪನ್ನತೆ" ಉದಾತ್ತವಾದದ್ದು. "ಶಿಷ್ಯಸ್ತೇಹಂ ಶಧಿಮಾಂ ತ್ವಂ ಪ್ರಪನ್ನಮ್" ನಾನು ನಿನ್ನ ಶಿಷ್ಯ. ನಿನಗೆ ಶರಣಾಗಿದ್ದೇನೆ. ಎಂಬ ಮಾತು ಇಂದಿನ ನಮಗೆ ಉತ್ತಮ ಬುತ್ತಿ. ಏನನ್ನೂ, ಯಾರನ್ನೂ ನಂಬಲಾಗದ ವಿಚಿತ್ರ ಮಾನಸಿಕತೆಯಿಂದ ಬಳಲುತ್ತಿದ್ದಾನೆ.

ಆಧುನಿಕ ಮಾನವ. ನಂಬಿಕೆಯ ಇಂಬನಾಂತು ಬಾಳುವ ಪಾತ್ರತೆಯೇ ನಮ್ಮಲ್ಲಿ ಸೊರಗಿ ಹೋಗುತ್ತಿದೆ. ಈ ಸ್ಥಿತಿಯಲ್ಲಿ ನಾಶದಲ್ಲಿರುವ ನಾರಾಯಣಾಂಶವನ್ನು ಅಥವಾ ಪಶುವಿನಲ್ಲಿರುವ ಪಶುಪತಿಯ ಅಂಶವನ್ನು ಎತ್ತಿ ತೋರಿಸುವ ಕೃಷ್ಣನ ಬುತ್ತಿಗೆ ಸೂರ್ಯಚಂದ್ರರಿರುವವರೆಗೆ ವಿಶ್ವಜನೀನ ಮಾನ್ಯತೆ ದೊರೆಯುತ್ತದೆ.

ಈ ಬುತ್ತಿ ನಮಗೆ ಸ್ಪಷ್ಟವಾಗುವುದು ಗೀತೆಯ 14 ಮತ್ತು 15 ನೇ ಅಧ್ಯಾಯಗಳಲ್ಲಿ. ಹದಿನಾಲ್ಕನೆ ಅಧ್ಯಾಯ ಗುಣತ್ರಯವಿಭಾಗಯೋಗವೆಂಬ ಹೆಸರನ್ನು ಹೊಂದಿದೆ.

ಮಾನವಬಾಳಿನಲ್ಲಿ ಜ್ಞಾನದ ಪ್ರಕಾಶ ಬೇಕು. ಇಂಥ ಪ್ರಕಾಶದಿಂದ ದೊರೆಯುವ ಸುಖವೇ ಮಾನವೀಯಸುಖ. ಇಂದು ಸುಖಬೇಕೆಂಬ ಓಟದಲ್ಲಿ ಅಜ್ಞಾನ ಮತ್ತು ಅನರ್ಥಗಳು ಹೆಚ್ಚುತಿವೆ. ಸತ್ವಗುಣ ಮನಸ್ಸನ್ನಾವರಿಸುತ್ತಲೇ ಆತನಲ್ಲಿ ಕಾಮ, ಕ್ರೋಧಾದಿಭಾವಗಳೂ ಜ್ಞಾನಪ್ರಕಾಶದಿಂದ ತೊಳೆಯಲ್ಪಟ್ಟು ಆತ ಸಮಾಜಕ್ಕೆ ಹಿತಕರನಾದ ಮಾನವನಾಗುತ್ತಾನೆ. "ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ಎಂಬ ಮಾತು ಸತ್ವಗುಣದ ನಿಜವಾದ ಪರಿಚಯ ನೀಡುತ್ತದೆ. ಲೋಕದಲ್ಲಿ ಇಂದು ಸತ್ವಗುಣವೆಂದರೆ 'ಸಪ್ಪೆತನ' ವೆಂಬ ತಪ್ಪುಗ್ರಹಿಕೆ ಇದೆ. ತಪ್ಪು, ಅಜ್ಞಾನಗಳು ತಮಸ್ಸಿನ ಪರಿಣಾಮ. ಇದು ಹೆಚ್ಚಾಗಿ ಇಂದು ಹದಿಹರೆಯದ ಮಕ್ಕಳು ಕುಸಿಯುತ್ತಿದ್ದಾರೆ. ಇಂದು ಜಗತ್ತಿನಲ್ಲೇ ಕಾಡುತ್ತಿರುವ ತೀವ್ರಸಮಸ್ಯೆಗಳಾದ ಹಿಂಸೆ ಮತ್ತು ವಿಕೃತಕಾಮಗಳಿಗೆ ನಾವಿಲ್ಲಿ ಮನೋವೈಜ್ಞಾನಿಕವಾದ ಉತ್ತರವನ್ನು ಪಡೆಯಬಲ್ಲೆವು. ಮನುಷ್ಯ ಸಮಾಜದ ಹಿತಕ್ಕಾಗಿ ದುಡಿಯಬೇಕೆಂಬ ಸಂದೇಶವಿಂದು ವಿದ್ಯಾರ್ಥಿವೃಂದಕ್ಕೆ ತಲುಪಬೇಕಾಗಿದೆ. "ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಮ್" ಎಂದು ಗೀತಾಚಾರ್ಯ ತಿಳಿಸುತ್ತಾನೆ. ಆಗ ತಾನೆ ಅರಳುತ್ತಿರುವ ಹದಿಹರೆಯದ ಮಕ್ಕಳ ಮನಸ್ಸಿನ ಉದಾತ್ತೀಕರಣಕ್ಕೆ ಬೇಕಾದ ಜ್ಞಾನಪಿಪಾಸೆ ಮತ್ತು ಹಿತಸಾಧಕಸುಖಗಳೇ ಈ ಗುಣದ ಮುಖ್ಯ ಲಕ್ಷಣ. ಇಂಥ ತಿಳಿವು ಶಾಲೆಗೆ ಹೋಗುವ ಮಕ್ಕಳಲ್ಲೇ ಬಿತ್ತಲ್ಪಡಬೇಕು. ಆದ್ದರಿಂದ ಇಂಥ ಬುತ್ತಿಯನ್ನು ನೀಡುವ ಗೀತೆಯ ಅಧ್ಯಾಯ ಶೈಕ್ಷಣಿಕಸ್ತರದಲ್ಲಿ ವಿಶೇಷಮಹತ್ವ ಪಡೆದಿದೆ.

ಸತ್ವಗುಣ ಮಾನವನನ್ನು ಗುಣಾತೀತ ಸ್ಥಿತಿಗೆ ಒಯ್ಯಬೇಕು. ಮನಸ್ಸಿನ ಒಳಪದರಗಳಲ್ಲಿ ಹುದುಗಿದ್ದ ಗಂಟುಗಳನ್ನೆಲ್ಲ ಬಿಡಿಸಿಕೊಳ್ಳುವ ಉಪಾಯವಿದು. ಈ ದಾರಿ ಮನುಷ್ಯನನ್ನು ದೇವಮಾನವ ಅಥವಾ ವಿಶ್ವಮಾನವನನ್ನಾಗಿ ಮಾಡುತ್ತದೆ.

ಹದಿನೈದನೇ ಅಧ್ಯಾಯದಲ್ಲಿ "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ" ಎಂಬ ಮಾತು ಆಧುನಿಕಯಂತ್ರ-ತಂತ್ರಾತ್ಮಕ ಜಗತ್ತಿಗೆ ಉತ್ತಮ ಬುತ್ತಿಯಾಗಿದೆ.

ನಾವೆಲ್ಲ ಪುರುಷರು. ಮನುಷ್ಯರ ಮುಂಡ(ತಲೆ) ಹೊತ್ತು ಭೂಮಿಗಿಳಿದವರೆಲ್ಲ ಪುರುಷರು. ಪುರುಷರೆಂದರೆ ಗಂಡಸರಲ್ಲ, ಮಾನವರು ಎಂದರ್ಥ. ಮಾನವರೆಲ್ಲರ ಮುಖ್ಯಸಾಧನಾಕೇಂದ್ರ ಹೃದಯ ಮತ್ತು ಅದರ ಮೇಲಿನ ಶರೀರ ಭಾಗ. ಅಲ್ಲೇ ಶ್ರದ್ಧೆ, ಮೇಧೆ, ಪ್ರಜ್ಞೆ, ಪ್ರತಿಭೆ, ಸಾಕ್ಷಿ ಮುಂತಾದ ಮಸ್ತಿಷ್ಕ ಮಹಾಶಕ್ತಿಗಳಡಗಿವೆ. ಆಗಲೇ

ಅಲ್ಲಿರುವುದನ್ನು ಯೋಗಜೀವನದಿಂದ ಜಾಗೃತಗೊಳಿಸಿಕೊಳ್ಳುವುದೇ ಪುರುಷೋತ್ತಮತ್ವದ ದಾರಿ. ಈ ಜಗಜ್ಜಾಲ ಮತ್ತು ಜೀವಜಾಲಗಳು ಪರಮಾತ್ಮನ ಅಂಶ ಎಂಬ ಭಾವವನ್ನು ಶೈಶವದಿಂದಲೇ ಮಾನವನ ಮನಸ್ಸಿನಲ್ಲಿ ನೆಡುವ ವ್ಯವಸ್ಥೆ ಮನೆಯೆಂಬ ಪಾಠಶಾಲೆಯಲ್ಲಿತ್ತು. ಟಿ.ವಿ., ಮೊಬೈಲ್‌ಗಳು ಈ ವ್ಯವಸ್ಥೆಯನ್ನು ನಾಶಗೆಡವಿದವು.

ಶಿಕ್ಷಣದ ಮೂಲಕ ಅಧಿಶೀಲ, ಅಧಿಚಿತ್ತ, ಅಧಿಪ್ರಜ್ಞಾ ಮೌಲ್ಯಶಿಕ್ಷಣವನ್ನು ರೂಪಿಸುವ ಯತ್ನವನ್ನು ಅಲ್ಲಲ್ಲಿ ಅನೇಕರು ಮಾಡುತ್ತಿದ್ದಾರೆ. ಕೆಲವೆಡೆ ಸರ್ಕಾರಗಳೂ ಇದಕ್ಕೆ ಪುಷ್ಟಿಕೊಡುತ್ತಿವೆ. ಶ್ರೀಮದ್ಭಗವದ್ಗೀತೆಯಲ್ಲಿರುವ ನರ–ನಾರಾಯಣದೃಷ್ಟಿಯು ಮತ–ಪಂಥಾತೀತವಾದದ್ದು.

ಗೀತೆಯ ಪ್ರಕಾರ ವಿಷ್ಣು, ಈಶ್ವರ ಮುಂತಾದ ಪದಗಳು Theory of every-thing ವಿಶ್ವಮೂಲದ ಏಕಸೂತ್ರಕ್ಕಿರುವ ಹಲವು ನಾಮಗಳು ಮಾತ್ರ. ಇಲ್ಲಿ ಪುರುಷೋತ್ತಮಸ್ಥಿತಿಯೆಂದರೆ "ಉತ್ತಮಃ ಪುರುಷಃ ತು ಅನ್ಯಃ ಪರಮಾತ್ಮೇತಿ ಉದಾಹೃತಃ" ಎಂಬಂತೆ ವಿಶ್ವವ್ಯಾಪಕವಾದ ಒಂದು 'ಸತ್ಯಸ್ಯ ಸತ್ಯ' ದ ವರ್ಣನೆ. ಎಲ್ಲಾ ಪಾಲಕರೂ ತಮ್ಮ ಮಕ್ಕಳು ವಿಜ್ಞಾನಿಗಳಾಗಲೆಂದು ಬಯಸುತ್ತಾರೆ. ಎಲ್ಲಾ ಗುರುಗಳೂ ತಮ್ಮ ವಿದ್ಯಾರ್ಥಿಗಳು ಯಶಸ್ವಿಗಳಾಗಲೆಂದು ಬಯಸುತ್ತಾರೆ. ಎಲ್ಲಾ ಉದ್ಯಮಪತಿಗಳು ತಮ್ಮ ಕಾರ್ಮಿಕರು ಕೌಶಲವುಳ್ಳವರಾಗಲೆಂದು ಬಯಸುತ್ತಾರೆ.

ಕಾರ್ಮಿಕತೆಗೂ ಧಾರ್ಮಿಕತೆಯೇ ಶ್ರೇಷ್ಠಮಂತ್ರ. ಇಲ್ಲಿ ಧಾರ್ಮಿಕತೆಯನ್ನು ಮತ–ಪಂಥಗಳ ಚೌಕಟ್ಟಿನಲ್ಲಿ ಕನ್ನಡಿಕಟ್ಟಿ ಮೊಳೆ ಹೊಡೆಯಬಾರದು. ಬೌದ್ಧಿಕತೆ ಎಂಬ ಹೆಸರಿನಲ್ಲಿ ನಾನಾ 'ಇಸಂ' ಗಳಿಗೆ ಮನಸೋತ ಆಧುನಿಕ ಮನಸ್ಸು ಗೀತೆಯಂಥ ವೈಶ್ವಿಕಚಿಂತನೆಯ ಆಕರಕ್ಕೂ ಮಸಿಯನ್ನು ಮೆತ್ತುತ್ತದೆ, ಇದು ದೌರ್ಭಾಗ್ಯ. ಗೀತೆಯಲ್ಲಿರುವುದು ಆತ್ಮಸೂತ್ರ, ಯಜ್ಞಸೂತ್ರ ಮತ್ತು ಯೋಗಸೂತ್ರಗಳು. ಇವು ಮಾನವಮಾತ್ರರ ಜೀವನಸೂತ್ರಗಳು.

ಯಜ್ಞವೆಂಬುದು ಪ್ರಕೃತಿಪ್ರೇಮಿ, ಜೀವಜಗತ್‌ಸಾಮರಸ್ಯಸೂತ್ರ. ಸಹಯಜ್ಞಾಃ ಪ್ರಜಾಃ – ಎಂಬ ಶ್ಲೋಕ ಮಾನವನೆಂಬ ಜೀವಿಯನ್ನು ಶ್ರೇಷ್ಠಜೀವಿಯನ್ನಾಗಿ ಮಾಡುವುದೇ ಯಜ್ಞವೆನ್ನುತ್ತದೆ. ಜಗತ್ತನ್ನೇ ದೇವನ ತಾಣವೆಂದು ಬಗೆದು, ಸಾಮರಸ್ಯದಿಂದ ಪಡೆದದ್ದಕ್ಕಿಂತ ಹೆಚ್ಚನ್ನು ಹಂಚುತ್ತ ಬದುಕುವುದು ಯಜ್ಞ. ಇದಕ್ಕೇ ಇನ್ನೊಂದು ಹೆಸರು ಯೋಗವೆಂದು. ಇದನ್ನು ಬಾಳಿನಲ್ಲಿ ತರಲು ಬೇಕಾದ ಆತ್ಮದರ್ಶನಕ್ಕೆ ಸಾಂಖ್ಯವೆಂದು ಹೆಸರು. ಮೈತ್ರೀ, ಕರುಣೆಗಳಿಂದ ಸಹಜೀವನ ನಡೆಸುವುದೇ ಭಕ್ತಿ. ಸಂಯಮದಿಂದ ಬಾಳುವುದೇ ರಾಜಯೋಗ. ಇದೆಲ್ಲ ಸೇರಿರುವ ವ್ಯಕ್ತಿಜೀವನವೇ ಯಜ್ಞ.

ಇಂಥ ಗೀತೆ ಪ್ರಗತಿಗೆ ವಿರುದ್ಧವಾಗಲು ಸಾಧ್ಯವೇ? ಸಂಪ್ರದಾಯ, ಪರಂಪರೆ, ಧರ್ಮ, ಯೋಗ ಮುಂತಾದವುಗಳ ಬಗ್ಗೆ ವಿಕೃತಪೂರ್ವಗ್ರಹದ ಉದ್ವೇಗ, ಆವೇಶ ನಿಲ್ಲಬೇಕು. ತಿಳಿವಿನ ಹೊನಲು ಹುಲಿಯಬೇಕು.

ವ್ಯಕ್ತಿತ್ವ ವಿಕಸನಕ್ಕೆ ಮನೋವೈಜ್ಞಾನಿಕ ಗೀತಾ ಸಂದೇಶ

ನಾವಿಂದು ವಿಜ್ಞಾನ-ಯುಗದಲ್ಲಿ ಬದುಕುತ್ತಿದ್ದೇವೆ. ಸದ್ಯೋಜಾತ ಶಿಶುವೂ ಕೂಡ ವಿಜ್ಞಾನಗತ ಪ್ರಾಣವಾಗುವಷ್ಟು ವಿಜ್ಞಾನ ನಮ್ಮಲ್ಲಿ ಹೆಣೆದುಕೊಂಡಿದೆ. ವಿಜ್ಞಾನದ ಪರಿಣಾಮವಾಗಿ ಕಂಡರಿಯದ, ಕೇಳರಿಯದ, ಊಹಿಸಲು ಅಸದಳವಾದ ಚಮತ್ಕಾರಗಳನ್ನು ಸೃಷ್ಟಿಸಿಕೊಂಡಿದ್ದೇವೆ. ಬೆರಳಂಚಿನಿಂದ ಬೇಕಾದದ್ದನ್ನು ಪಡೆಯುವಷ್ಟು ಯಾಂತ್ರಿಕ ಸಲಕರಣೆಗಳನ್ನು ಮನೆ-ಮನೆಗಳಲ್ಲೂ ರಾಶಿ ಹಾಕುತ್ತಿದ್ದೇವೆ. ಗಗನದೆತ್ತರಕ್ಕೆ ಹಾರಬಲ್ಲೆವು, ಅತಿದೂರಕ್ಕೆ ಓಡಬಲ್ಲೆವು. ಇಂಥ ಪವಾಡಮಯವಾದ ಈ ಯುಗದಲ್ಲಿ ಈ ಜಗತ್ತು ಹಾದುಹೋಗುತ್ತಿದೆ.

ಇದು ಒಂದು ಮುಖವಾದರೆ, ಇನ್ನೊಂದು ಮುಖ ಇದಕ್ಕಿಂತ ವಿರುದ್ಧವಾಗಿ ಕಾಣುತ್ತದೆ. ವಿವಿಧ ಬಗೆಯ ಯಂತ್ರೋಪಕರಣಗಳಿಗೆ ದಾಸರಾದ ಮನುಷ್ಯರು ದೈವದತ್ತವಾದ ತಮ್ಮ ಮಸ್ತಕ ಶಕ್ತಿಯನ್ನೇ ಕಳೆದುಕೊಂಡು ಯಂತ್ರದ ದಾಸಾನುದಾಸರಾಗುತ್ತಿದ್ದಾರೆ. ಪ್ರಕೃತಿ ಪ್ರೇಮಿ ಜೀವನ ವಿಧಾನವನ್ನು ತೊರೆದು ವಿಕೃತಿಯಿಂದ ತುಂಬಿದ, ಗೋಳಿನಿಂದ ತುಂಬಿದ ಬಾಳನ್ನು ತಾವೇ ಸ್ವಾಗತಿಸುತ್ತಿರುವಂತೆ ಜನತೆ ನಡೆದುಕೊಳ್ಳುತ್ತಿದೆ. ರೇಡಿಯೇಶನ್ ಉಗುಳುವ ಟಿ.ವಿ., ಮೊಬೈಲ್, ವಾಕ್‌ಶ್ರವಣ ಯಂತ್ರಗಳು, ತಂಗಳುಪೆಟ್ಟಿಗೆ (ಖಜಜಿಡಿಉಂಜಡಿಜಣಂಡಿ), ವಾಶಿಂಗ್‌ಮೆಶಿನ್ ಇತ್ಯಾದಿಗಳ ಮಧ್ಯದಲ್ಲಿಯೇ ಇಪ್ಪತ್ತನಾಲ್ಕು ಗಂಟೆಗಳ ನಮ್ಮ ಜೀವನ ಯಾತ್ರೆ ನಡೆಯುತ್ತಿದೆ. ಭೋಗೋಪಕರಣಗಳೆಲ್ಲವೂ ರೋಗೋಪಕರಣಗಳಾಗಿ ಇಡೀ ಜಗತ್ತು ಕಂಟಟಣ-ಣುಂಟಿ, ಖಚಿಜುಚಿಣುಂಟಿ, ಅಂಟಿಣಚಿಟುಟಿಚಿಣುಂಟಿ (ರೋಗಾಣುಗಳಿಂದ ತುಂಬಿರುವ ಸ್ಥಿತಿ) ಎಂಬ ಮೂರು "ಣುಂಟಿ" ವಿಷಗಳಿಂದ ಆವೃತವಾಗುತ್ತಿದೆ.

ಭ್ರಮೆಯ ಲೋಕದಲ್ಲಿ ವಿಜೃಂಭಿಸುತ್ತಿರುವ ನಾವು ಇದಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಇಡೀ ಭೂ-ಹೊರಪದರವನ್ನೇ ಕಬ್ಬಿಣ ಮತ್ತು ಪ್ಲಾಸ್ಟಿಕ್ ಅವಶೇಷಗಳಿಂದ ಹೊದಿಸುತ್ತಿದ್ದೇವೆ. ಭೂಮಿಯೊಳಗಿನ ಕಬ್ಬಿಣದ ಅದಿರು ಮತ್ತು ಪೆಟ್ರೋಲಿಯಂ ಇಷ್ಟು ದೊಡ್ಡ ಪರಿಮಾಣದಲ್ಲಿ ಭೂಮಿಯ ಮೇಲೆ ಬಳಸಲ್ಪಡುವುದು ಪ್ರಕೃತಿಗೆ ವಿರುದ್ಧವಾದ ಕೆಲಸ. ಕಬ್ಬಿಣದಿಂದ ಮಾಡಿದ ಯಂತ್ರಗಳು, ಅವುಗಳ ಚಾಲನೆಗಾಗಿ ಬಳಸುವ ಪೆಟ್ರೋಲಿಯಂ ಪದಾರ್ಥಗಳು ಇವೆರಡೂ ಈ ಯುಗದಲ್ಲಿ ನಾವು ಎದೆಯುಬ್ಬಿಸಿ ಹೇಳಿಕೊಳ್ಳುವ ಕೈಗಾರಿಕೀಕರಣ (?)ದ ಕೊಡುಗೆಗಳು, ಹೊಗೆ, ಧಗೆ, ವಿಕಾರಗಳ ಬಗೆಗಳಿಗೆ ಇವೇ ಕಾರಣಗಳು.

ಭೋಗವಾದವೆಂಬ ಮನೋಮಾಲಿನ್ಯದಿಂದ ನಾವಿಂದು ವಾಯುಮಾಲಿನ್ಯ, ಜಲಮಾಲಿನ್ಯ, ಪರಿಸರಮಾಲಿನ್ಯಗಳೆಂಬ ಪಿಡುಗುಗಳನ್ನು ಎದುರಿಸುತ್ತಿದ್ದೇವೆ. ಇಂತಿರುವ ಈ ಜಗತ್ತಿಗೆ ಭಾರತೀಯ ಪ್ರಾಚೀನ ಸಂಸ್ಕೃತಿಯ ಮೂಲಗಳಿಂದ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ಇಂದು ಸಾಗುತ್ತಿದೆ. ಎಲ್ಲ ಸಮಸ್ಯೆಗಳಿಗೂ ನಮ್ಮ ವಿಜ್ಞಾನದಲ್ಲಿ

ರಾಮಬಾಣವಿದೆಯೆಂದು ಬೀಗುವ ವಿಜ್ಞಾನಿಗಳು ಈಗ ಬಾಗುತ್ತಿದ್ದಾರೆ. ಇದೊಂದು ಮಾಗಿಯ ಕಾಲ. ಬೇರನ್ನು ಬಗೆದು ಮೂಲ ಸತ್ವವನ್ನು ಅರಿಯುವ ಕುತೂಹಲದ ಕಾಲ. ವಿಜ್ಞಾನದೊಡನೆ ಋಷಿವಾಕ್ಯವನ್ನು ಮೇಳವಿಸುವ ಕಾಲ. ಈ ಹಿನ್ನೆಲೆಯಲ್ಲಿ ಶ್ರೀಮದ್ಭಗವದ್ಗೀತೆ ನಮಗಾವ ಮಾರ್ಗ ತೋರಿಸುತ್ತದೆ ಎಂದು ಜಿಜ್ಞಾಸುಗಳನೇಕರು ಕಾತರದಿಂದ ಕೇಳುತ್ತಿದ್ದಾರೆ.

ಯಜ್ಞಸಂದೇಶ :

"ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ" ಈ ಭೂಮಿಯಲ್ಲಿ ಮಾನವನ ಹುಟ್ಟಿನೊಡನೆಯೇ ಯಜ್ಞವು ಮೈತಳೆದಿದೆ. ಅರ್ಥಾತ್ ಭಗವದ್ಗೀತಾ ಯಜ್ಞಸಂದೇಶ ಹೊತ್ತೇ ಮಾನವನೆಂಬ ಈ ಜೀವಿ ಭುವಿಗಿಳಿದಿದ್ದಾನೆ. ಪಂಚಮದ ಇಂಚರವನ್ನು ಸಹಜವಾಗಿಯೇ ಹೊಂದಿ ಕೋಗಿಲೆಯೊಂದು ಈ ಲೋಕಕ್ಕೆ ಹುಟ್ಟಿ ಬರುವಂತೆ ಈ ಮನುಷ್ಯ ಯಜ್ಞಮಯ ಜೀವನ ನಡೆಸಲೆಂದೇ ಭೂಮಿಗೆ ಬಂದಿದ್ದಾನೆ. ಯಜ್ಞವೆಂದರೆ ಸಮಷ್ಟಿ ದೃಷ್ಟಿಯೊಡನೆ ನಡತೆ ಎಂದರ್ಥ. "ಇಷ್ಟಾನ್ ಭೋಗಾನ್ ಹಿ ವೋ ದೇವಾಃ ದಾಸ್ಯಂತೇ ಯಜ್ಞಭಾವಿತಾಃ" ಎಂಬ ಶ್ರೀ ಮದ್ಭಗವದ್ಗೀತೆಯ ವಾಕ್ಯ ಸುತ್ತಲಿನ ಪರಿಸರದ ಬಗ್ಗೆ ಮಾನವನ ದೃಷ್ಟಿ ಹೇಗೆ ಇರಬೇಕೆಂಬ ಮಾರ್ಗ ತೋರುತ್ತದೆ. ಇಡೀ ಜಗತ್ತು ಈಶನ ವಾಸಸ್ಥಾನ ಇದರಲ್ಲಿ ಆತನ ಪ್ರತಿನಿಧಿಗಳಾದ ಅನೇಕ ದೇವತಾ ಶಕ್ತಿಗಳು ಕಾರ್ಯನಿರತವಾಗಿದ್ದಾವೆ. ಅವು ನಮ್ಮ ಚರ್ಮದ ಕಣ್ಣಿಗೆ ಕಾಣದೆ ಇರಬಹುದು. ಅಖಂಡ ಬ್ರಹ್ಮಾಂಡದಲ್ಲಿ ಮಾನವನ ಮಿತಿಗೆ ಸಿಗದಿರುವುದೇ ಹೆಚ್ಚು. ಇದನ್ನು 'ಆಧಿದೈವಿಕ' ಪ್ರಪಂಚವೆಂದು ನಮ್ಮವರು ಕರೆದರು. ಅಣುಕಣಗಳ ಸಮುದಾಯವಾದ ಸ್ಥೂಲಪ್ರಪಂಚಕ್ಕೆ 'ಆಧಿಭೌತಿಕ' ಪ್ರಪಂಚವೆಂದು ಹೆಸರು. ಅದರ ಒಳಶೋಧನಾತ್ಮಕವಾದ ಅಧ್ಯಯನಕ್ಕೆ ಭೌತವಿಜ್ಞಾನವೆಂದು ಹೆಸರು. "ಆಧಿದೈವಿಕ' ಶಕ್ತಿಗಳ ಬಗ್ಗೆ ಅರಿವನ್ನು ಹೆಚ್ಚಿಸಿಕೊಳ್ಳಲು ವೇದ-ವೇದಾಂಗಗಳನ್ನು ಬಿಟ್ಟರೆ ಇನ್ನಾವ ಮಾರ್ಗವೂ ಇಲ್ಲ. ಇಂತಹ 'ಆಧಿದೈವಿಕ' ವಿಜ್ಞಾನದ ಮುಖ್ಯ ಸೂತ್ರವೇ ಯಜ್ಞ, ನಾವು ಉಸಿರಾಡುವ ಗಾಳಿಯ ಹಿಂದೆ, ನಾವು ಉಪಯೋಗಿಸುವ ಬೆಂಕಿಯ ಹಿಂದೆ, ನಾವು ಓಡಾಡುವ ಭೂಮಿಯ ಹಿಂದೆ, ನಾವು ಕುಡಿಯುವ ನೀರಿನ ಹಿಂದೆ, ಗುಡುಗು-ಸಿಡಿಲು, ಮಳೆ-ಬೆಳೆ, ಋತು-ಸಂವತ್ಸರ, ಸೂರ್ಯ-ಚಂದ್ರರು ಇವೆಲ್ಲವುಗಳ ಹಿಂದೆ 'ಆಧಿದೈವಿಕ' ಶಕ್ತಿಗಳ ಸಂಚಾರವಿದೆ. ಇವೆಲ್ಲವೂ ನಮಗೆ ಇಷ್ಟೆಲ್ಲಾ ಅನುಕೂಲತೆ ಗಳನ್ನು ನೀಡಿವೆ. ಅಷ್ಟನ್ನೆಲ್ಲಾ ಅವುಗಳಿಂದ ಪಡೆದು ಅವರಿಗೆ ಇಷ್ಟವಾದದ್ದನ್ನೊಂದನ್ನು ಮಾಡದಿರಲು ಸಾಧ್ಯವೇ? ಅವರ ಇಷ್ಟ ಪೂರ್ತಿಗಾಗಿ ನಾವು ಮಾಡುವ ಕಾರ್ಯಕ್ಕೆ ಯಜ್ಞವೆಂದು ಹೆಸರು. ದೇವತಾ ಶಕ್ತಿಗಳು ನಮಗೆ ದೇಹವನ್ನು ನೀಡಿದ್ದಾವೆ. ಆ ದೇವತಾ ಶಕ್ತಿಗಳ ಪ್ರತಿನಿಧಿಗಳಾಗಿ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಮನ-ಬುದ್ಧಿಗಳು ಈ ದೇಹವೆಂಬ ಗುಡಿಯೊಳಗೆ ಸೇರಿಕೊಂಡು ಅದ್ಭುತ ಕಾರ್ಯಗಳನ್ನು ಮಾಡಿಸುತ್ತಿವೆ. ಈ ಹಿನ್ನೆಲೆಯಲ್ಲಿ ಅವುಗಳ ಬಳಕೆ ಹೇಗೆ?

ಇವುಗಳನ್ನು ಸುತ್ತಣ ಚರ-ಅಚರ ಜಗತ್ತಿಗೆ ಮಾರಕವಾಗಿ ಬಳಸಿದರೆ ಮನುಷ್ಯ ರಾಕ್ಷಸನಾಗುತ್ತಾನೆ. ಅವುಗಳನ್ನು ಉಪಕಾರಕವಾಗಿ ಬಳಸಿಕೊಂಡಾಗ ಆತ ದೇವರಾಗುತ್ತಾನೆ. "ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ" ಒಳ-ಹೊರ ಜಗತ್ತಿನಲ್ಲಿರುವ ದೇವತಾ ಶಕ್ತಿಗಳಿಗೆ ಪುಷ್ಟಿ ನೀಡುವಂತೆ ಬದುಕಿಗಾಗಿ ಸಮಷ್ಟಿ ಸೃಷ್ಟಿಗೆ ಪುಷ್ಟಿ ದೊರೆಯುತ್ತದೆ.

ಇಂಥ ಯಜ್ಞಗಳನ್ನು ಶ್ರೀಕೃಷ್ಣ ಐದಾಗಿ ವಿಂಗಡಿಸಿ ತೋರಿಸುತ್ತಾನೆ.

"ದ್ರವ್ಯಯಜ್ಞಾಸ್ತಪೋಯಜ್ಞಾಃ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶ್ರಿತವ್ರತಾಃ ॥"

ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯಯಜ್ಞ, ಜ್ಞಾನಯಜ್ಞವೆಂಬ ಯಜ್ಞಗಳ ಅನುಷ್ಠಾನವೇ ಸೃಷ್ಟಿಗೆ ಪೂರಕವಾದ, ಪೋಷಕವಾದ ವಿಧಾನ. ಇಲ್ಲಿ ತಪೋಯಜ್ಞವೆಂದರೆ : ಶಿಸ್ತು ಸಂಯಮಗಳಿಂದ ಬದುಕುವ ಪರಿ. ಪ್ರಕೃತಿ ಕೊಡುತ್ತದೆ ಎಂದು ಅದರ ರಸವನ್ನು ಹೀರಿ ಅತಿಭೋಗಿಯಾಗಿ ಬದುಕದೇ ಹದವರಿತು ಬಾಳುವುದೇ ಈ ಯಜ್ಞ ಯೋಗ. ಯಜ್ಞವೆಂದರೆ ನರನಾಗಿ ಹುಟ್ಟಿದ ನಾನು ನಾರಾಯಣನ ಅಂಶವೆಂದು ಭಾವಿಸುತ್ತಾ "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇ ಅರ್ಜುನ ತಿಷ್ಠತಿ" ಎಂಬಂತೆ ಸಕಲ ಅಂತರಂಗದಲ್ಲೂ ಈಶ ಚೈತನ್ಯವಿದೆಯೆಂದು ನಂಬಿ ನಡೆಯುವ, ಸಮಷ್ಟಿ ಹಿತದಲ್ಲಿ ವ್ಯಷ್ಟಿ ಹಿತವನ್ನು ಕಾಣುವ ಜೀವನ ನಂಬಿಕೆ ಮತ್ತು ಆಚರಣೆಗಳೇ ಈ ಯಜ್ಞವನ್ನು ಅನುಷ್ಠಾನ ಮಾಡುವ ರೀತಿ. ಸ್ವಾಧ್ಯಾಯ ಯಜ್ಞವೆಂದರೆ ಅರ್ಥ - ಕಾಮಗಳಿಗೆ ಮಾತ್ರ ಬಲಿಯಾಗದೆ ಧರ್ಮ-ಮೋಕ್ಷಗಳಿಗೆ ಒಲಿದು ಗಡಿಬಿಡಿಯಿಂದ ಬಿಡುಗಡೆಯ ಹಾದಿಗೆ ಕೊಂಡುಯ್ಯುವ ಸಚ್ಛಾಸ್ತ್ರಗ್ರಂಥಗಳ ಪಠಣವೇ ಈ ಯಜ್ಞ. ಆರೋಗ್ಯಕರ ಸಾಹಿತ್ಯವನ್ನು ಆಯ್ದು ಓದುತ್ತಾ ದಿನವೂ ಮಾಡುವ ಮಾನಸಿಕ ಸ್ನಾನಕ್ಕೆ ಈ ಹೆಸರು.

ಜ್ಞಾನಯಜ್ಞವೆಂದರೆ ಗುರುಮುಖದಿಂದ ಅಧ್ಯಯನ ನಡೆಸಿ ಶ್ರೇಷ್ಠ ಮೇಲ್ಪಂಕ್ತಿಯಿಂದ ಪ್ರಭಾವಿತನಾಗಿ ಅಂತರಂಗದ ಆಳದಿಂದ ಅರಿವನ್ನು ಅರಳಿಸಿಕೊಳ್ಳುವ ಪರಿ.

ಪೃಥ್ವಿಯೊಂದು ಬ್ರಹ್ಮಾಂಡದಲ್ಲಿರುವ ವಿಶಿಷ್ಟವಾದ ಜಾಗ. ಇಲ್ಲಿ ಸೂರ್ಯ ಮತ್ತು ಸೋಮಕಿರಣಗಳು ಒಂದು ವಿಶಿಷ್ಟ ಹದದಲ್ಲಿ ಮಿಶ್ರಗೊಂಡು ದ್ಯುಲೋಕದ ಕಡೆಯಿಂದ ಹರಿದು ಬರುತ್ತವೆ. ಈ ಎರಡು ವಿಧ ಕಿರಣಗಳ ಶಕ್ತಿಯನ್ನು ಅಳವಡಿಸಿ ಕೊಂಡಿರುವ ಅನೇಕ ಧಾನ್ಯ, ಹಣ್ಣು, ತರಕಾರಿ, ಧಾತುಗಳು ಈ ಭೂಮಿಯಲ್ಲಿ ಉಪಲಬ್ಧವಿದೆ. ಸೂರ್ಯಕಿರಣದ ತಾಪ ಹೆಚ್ಚಿದಂತೆ ಅದನ್ನು ತಣ್ಣಗಾಗಿಸಲು "ಓಜೋನ್" ಅನ್ನು ಸೃಷ್ಟಿಸಲು ಈ ಸಮಾಜದಲ್ಲಿ ಹೋಮಾನುಷ್ಠಾನವೆಂಬ ಒಂದು ಪದ್ಧತಿ ಮನೆ-ಮನೆಗಳಲ್ಲೂ ಇತ್ತು. ಯಜ್ಞ ಕುಂಡದಲ್ಲಿ ಹವಿಸ್ಸಾಗಿ ಅರ್ಪಿಸಲ್ಪಡುವ ಶುದ್ಧ ತಳಿ ಹಸುವಿನ ತುಪ್ಪ, ಮುತ್ತುಗದ ಸಮಿತ್ತು ಮುಂತಾದುವುಗಳಲ್ಲಿ ಸೋಮಕಿರಣ ಶಕ್ತಿಗಳು

ಅಡಕವಾಗಿವೆ. ಇಂತಹ ಹವಿಸ್ಸನ್ನು ಅರ್ಪಿಸಿ ಯಜ್ಞಾನುಷ್ಠಾನ ಮಾಡುವುದರಿಂದ ಸೃಷ್ಟಿಯ ಸಮತೋಲವನ್ನು ಕಾಪಾಡಿ ಕೊಳ್ಳಲು ಸಾಧ್ಯ. ಇದನ್ನೂ ಮೀರಿ 'ಸೋಮ'ವೆಂಬ ಒಂದು ಮಹಾಔಷಧದ ಬಳ್ಳಿ ಈ ನಾಡಿನಲ್ಲಿತ್ತು. ಆ ಬಳ್ಳಿಯ ರಸವನ್ನು ಅಗ್ನಿಗೆ ಹಾಕಿದಾಗ ಅದರಿಂದ ಬರುತ್ತಿದ್ದ ಧೂಮ ಸಕಲ ಜೀವರಾಶಿಗಳಿಗೆ ಪುಷ್ಟಿದಾಯಕವಾಗಿತ್ತು. ಇಂದು ಆ ಬಳ್ಳಿಯೇ ಇಲ್ಲವಾಗಿದೆ.

"ಅಗ್ನೌ ಪ್ರಾಸ್ತಾಹುತಿಃ ಸಮ್ಯಕ್ ಆದಿತ್ಯಂ ಉಪತಿಷ್ಠತೇ।
ಆದಿತ್ಯಾ ಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ॥"

(ಮನುಸ್ಮೃತಿ) ಎಂಬಂತೆ ಇಂತಹ ಸೋಮಕಿರಣ ಶಕ್ತಿಯೊನ್ನಳಗೊಂಡ ಪದಾರ್ಥಗಳನ್ನು ಅಗ್ನಿಮುಖದಲ್ಲಿ ಹವಿಸ್ಸಾಗಿ ಅರ್ಪಿಸುವುದರಿಂದ ಅದು ಶಾಂತ ಕಿರಣಗಳನ್ನು ಉತ್ಪಾದನೆ ಮಾಡಿ ಮಳೆಬೆಳೆಗೆ ಸಹಾಯವಾಗುತ್ತದೆ. ಇದರಿಂದ ಪ್ರಜಾಸಂತತಿ ಸಮೃದ್ಧವಾಗಿರುತ್ತದೆ ಎಂಬ ಮಾತು ಕೇಳಿಬರುತ್ತದೆ. ಇಂತಹ ಹೋಮದ ವಿಧಿವಿಧಾನಕ್ಕೆ ಹೆಸರು ದ್ರವ್ಯಯಜ್ಞವೆಂದು. ಗೀತೆಯಲ್ಲಿರುವ ಈ ಯಜ್ಞಸಂಸ್ಕೃತಿಯನ್ನು ಮತ್ತೆ ತರದಿದ್ದರೆ ಇಂದು ಭೂಮಿಯಲ್ಲಿ ಜೀವರಾಶಿಗೆ ಉಳಿಗಾಲವಿಲ್ಲ. ವಿಶ್ವ-ಉಷ್ಣೀಕರಣ ಎಂಬುದೊಂದು ನಾವು ಎದುರಿಸುತ್ತಿರುವ ಭಯಾನಕ ವೈಶ್ವಿಕ ಸಮಸ್ಯೆ. ನಾವೇ ಸೃಷ್ಟಿಸಿಕೊಂಡ ಯಂತ್ರಯುಗದ ಭಸ್ಮಾಸುರ ಸರ್ಪಕಿರಣವೆಂಬ (Altrovioletech rays) ತನ್ನ ಕೈಯನ್ನು ನಮ್ಮ ತಲೆಯ ಮೇಲಿಟ್ಟು ನಮ್ಮನ್ನು ಭಸ್ಮ ಮಾಡುತ್ತಿದ್ದಾನೆ. ಇಂಥ ಯುಗದಲ್ಲಿ ಶ್ರೀಮದ್ಭಗವದ್ಗೀತೆ ಹೇಳಿರುವ ಯಜ್ಞಸಂಸ್ಕೃತಿಗೆ ಪಕ್ಕಾಗುವುದೊಂದೇ ದಾರಿ.

ಯೋಗ ಸಂದೇಶ:

ನಿಜವಾದ ಶಾಸ್ತ್ರೀಯ ಹಿನ್ನೆಲೆಯಲ್ಲಿ ಯೋಗ ಮತ್ತು ಯಜ್ಞಗಳು ಬೇರೆಯಲ್ಲ. ಅತ್ಯಂತ ಪ್ರಾಚೀನವಾದ ಋಗ್ವೇದದಲ್ಲಿ ಯೋಗ-ಜೀವನಕ್ಕೆ ಯಜ್ಞವೆಂಬ ಶಬ್ದದ ಬಳಕೆಯಿದೆ. ಕಾಲಾಂತರದಲ್ಲಿ ಯೋಗಯಜ್ಞವೆಂಬ ಪದದ ಬಳಕೆಯೂ ಗೀತೆಯಲ್ಲಾಗಿದೆ. ಗೀತೆಯ ಪ್ರಕಾರ ಯೋಗವೆಂದರೆ ದುಃಖ ದುಮ್ಮಾನಗಳಿಂದ ತನ್ನನ್ನು ತಾನು ಬಿಡಿಸಿಕೊಳ್ಳುವುದು ಎಂಬ ಅರ್ಥವಿದೆ. ಸಮದೃಷ್ಟಿ ಎಂಬ ಅರ್ಥವಿದೆ. ಕಾರ್ಯಕೌಶಲ್ಯವೆಂಬ ಅರ್ಥವೂ ಇದೆ. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಿಗೂ ಬೇರೆ ಬೇರೆ ಯೋಗದ ಹೆಸರಿದೆ. ಇಡೀ ಭಗವದ್ಗೀತೆಗೆ ಯೋಗಶಾಸ್ತ್ರವೆಂಬ ಹೆಸರೂ ಇದೆ. ಇಷ್ಟೆಲ್ಲಾ ಹಿನ್ನೆಲೆಯಲ್ಲಿ ಯೋಗವನ್ನು ವ್ಯಾಖ್ಯಾನಿಸಬೇಕಾದಾಗ, ಯೋಗವನ್ನು ಅನೇಕರು ತಿಳಿದ ಹಾಗೆ ಆಸನ-ಪ್ರಾಣಾಯಾಮಗಳಿಗೆ ಸೀಮಿತಗೊಳಿಸಬಾರದು. ಭಗವದ್ಗೀತೆಯ ಪ್ರಕಾರ ನರನನ್ನು ನಾರಾಯಣನ ಜೊತೆ ಜೋಡಿಸುವುದೇ ಯೋಗ.

"ಯತ್ರ ಯೋಗೇಶ್ವಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥"

ಎಂಬ ಮಾತೇ ಈ ಜೋಡಣೆಯ ಯೋಗ ಸಂದೇಶವನ್ನು ನೀಡುತ್ತದೆ. ತನ್ನ ಜೀವನವನ್ನು ನಡೆಸಲು ಅನೇಕ ವಿಧ ಸಾಮಗ್ರಿ ಸಲಕರಣೆಗಳೆಂಬ ಬಿಲ್ಲು-ಬಾಣಗಳನ್ನು ಹಿಡಿದುಕೊಂಡು ಹೋರಾಟ ನಡೆಸುತ್ತಿರುವವನೇ ಇಲ್ಲಿ ನರ. ಈ ನರ ಹೀಗೆ ನರಳಾಡುತ್ತಿದ್ದರೆ ಕೊನೆ ಎಲ್ಲಿ? ಈತ ಯೋಗೇಶ್ವರನಾದ ನಾರಾಯಣನ ಹತ್ತಿರಕ್ಕೆ ಹೋಗಬೇಕು. ಅದಕ್ಕಿರುವ ದಾರಿಗೇ ಹೆಸರು ಯೋಗ. ಅವುಗಳನ್ನೇ ಮುಖ್ಯವಾಗಿ ಸಾಂಖ್ಯ ಯೋಗ, ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗ ಶಬ್ದಗಳಿಂದ ಹೆಸರಿಸುತ್ತಾರೆ. ಆಸನ-ಪ್ರಾಣಾಯಾಮ ಮುಂತಾದ ಎಂಟು ಅಂಗಗಳುಳ್ಳ ಯೋಗವನ್ನೇ ರಾಜಯೋಗವೆಂದು ಕರೆಯುವುದುಂಟು. ಆಸನಸಿದ್ಧಿ, ಮನಃಶುದ್ಧಿ, ಬುದ್ಧಿವೃದ್ಧಿಗಳು ಈ ಯೋಗಾನುಷ್ಠಾನದಿಂದ ಲಭ್ಯ. ಕರ್ಮಯೋಗವೆಂದರೆ ಪ್ರಕೃತಿಪ್ರೇಮಿ ಜೀವನ. ಯಾರನ್ನೂ ಹೀರದೆ ತಾನು ಇನ್ನೂ ಕಿರಿಯನೆಂದು ಬಾಗಿ, ಮನಸ್ಸಿನಿಂದ ಮಾಗಿ ಹಲವರಿಗೆ ಹಿತವಾಗುವಂತೆ ಬಾಳುವ ಶೈಲಿ. ಭಕ್ತಿಯೋಗವೆಂದರೆ ಪ್ರಶಾಂತ ಮನಸ್ಸನ್ನು ಶ್ರದ್ಧೆ ಮುಂತಾದ ಉದಾತ್ತ ಭಾವಗಳಿಂದ ತುಂಬಿ ಅವು ಉದಾತ್ತಗೊಳ್ಳುವ ಹಾಗೆ ಮಾಡುವುದು.

ಅಂತಿಮವಾಗಿ ಜ್ಞಾನಯೋಗವೆಂದರೆ ಶುದ್ಧ ಬ್ರಹ್ಮಜ್ಞಾನದಿಂದ, ಸಂಸಾರ ಬಂಧನದಿಂದ ಕಳಚಿಕೊಳ್ಳುವುದು. ಈ ಯೋಗ-ಸೂತ್ರವನ್ನು ಹೆಣೆಯುವಾಗ ಕೃಷ್ಣ ಸತ್ವ-ರಜ-ತಮೋಗುಣಗಳ ನೆಲೆಯಲ್ಲಿ ಮಾನವರನ್ನು ಗುರುತಿಸುವ ವಿಧಾನವನ್ನು ತೋರಿಸಿ ಕೊಟ್ಟಿದ್ದಾನೆ. ಅದನ್ನು ನಾವಿಂದು "Mind analyzing system" (ಮನಸ್ಸನ್ನು ವಿಶ್ಲೇಷಿಸುವ ವಿಧಾನವನ್ನಾಗಿ) ಈ ಕಾಲದಲ್ಲಿ ಬಳಸಿಕೊಳ್ಳಬಹುದು. ಭಗವದ್ಗೀತೆಯ ಈ ಯೋಗದಿಂದ, ಕಾಯುತ್ತಿರುವ, ಕುದಿಯುತ್ತಿರುವ ಮನಸ್ಸನ್ನು ಉಪಶಮನಗೊಳಿಸಲು ಸಾಧ್ಯ. ಇದನ್ನು ನಾವು "ಮನಸ್ಸನ್ನು ಶಾಂತಗೊಳಿಸುವ ವಿಧಾನ" (Mind Cooling Method) ಎಂಬುದಾಗಿ ಬಳಸಿಕೊಂಡು ಸ್ವ-ಪರಹಿತವನ್ನು ಸಾಧನೆ ಮಾಡಿಕೊಳ್ಳಬಹುದು. ಜಗತ್ತಿನಲ್ಲಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂಘಟನೆ-ಸಂಸ್ಥೆಗಳಲ್ಲಿ ಈ ದಿಕ್ಕಿನತ್ತ ಸಾಕಷ್ಟು ಶೋಧನೆ ಮತ್ತು ಪ್ರಯೋಗಗಳು ನಡೆದಿವೆ. ಇವೆಲ್ಲವೂ ಜನಸಾಮಾನ್ಯರ ದೈನಂದಿನ ಜಂಜಾಟ ಪರಿಹಾರಕ್ಕೆ ಮತ್ತು ಗಲೀಜು - ಗದ್ದಲ, ಗುಂಪುಗಾರಿಕೆ ಮುಂತಾದ ಸಮಸ್ಯಾಗ್ರಸ್ತ ಜನ ಸಮುದಾಯಕ್ಕೆ ವರದಾನವಾಗಿ ಸಿಗಬೇಕಾದ ಕಾಲ ಬಂದಿದೆ ಎಂದು ನಾನು ಭಾವಿಸುತ್ತೇನೆ.

ಗೀತೋಪದಿಷ್ಟ ರಾಜಧರ್ಮ

– ಶ್ರೀ ಎಸ್.ಆರ್. ರಾಮಸ್ವಾಮಿ

ಭಗವದ್ಗೀತೆಯ ಒಂದು ಪ್ರಸಿದ್ಧವಾದ ಧ್ಯಾನಶ್ಲೋಕ ಇದು:

ಭೀಷ್ಮದ್ರೋಣತಟಾ ಜಯದ್ರಥಜಲಾ ಗಾಂಧಾರ ನೀಲೋತ್ಪಲಾ ।
ಶಲ್ಯಗ್ರಾಹವತೀ ಕೃಪೇಣ ವಹನೀ ಕರ್ಣೇನ ವೇಲಾಕುಲಾ ॥
ಅಶ್ವತ್ಥಾಮ ವಿಕರ್ಣಘೋರಮಕರಾ ದುರ್ಯೋಧನಾವರ್ತಿನೀ ।
ಸೋತ್ತೀರ್ಣಾ ಖಲು ಪಾಂಡವೈರಣದೀ ಕೈವರ್ತಕಃ ಕೇಶವಃ ॥

"ಈ ಮಹಾನದಿಗೆ ಭೀಷ್ಮದ್ರೋಣರು ದಡಗಳು, ಜಯದ್ರಥನೇ ನೀರು, ಗಾಂಧಾರರಾಜನೇ ನೀಲಕಮಲ, ಶಲ್ಯನೇ ತಿಮಿಂಗಲ, ಕೃಪನೇ ಸೆಳವು, ಕರ್ಣನೇ ಮೇರೆಮೀರುವಿಕೆ, ಅಶ್ವತ್ಥಾಮ ವಿಕರ್ಣರೇ ಭೀಕರ ಮೊಸಳೆಗಳು, ದುರ್ಯೋಧನನೇ ಸುಳಿ, ಈ ದುರ್ಗಮ ನದಿಯನ್ನು ಪಾಂಡವರು ದಾಟಿದರು. ಅವರನ್ನು ದಾಟಿಸಿದವನು ಶ್ರೀಕೃಷ್ಣ."

ಕುರುಕ್ಷೇತ್ರ ಯುದ್ಧದ ಪಾತ್ರಗಳೆಲ್ಲ ವಿವಿಧ ಮನಃಪ್ರವೃತ್ತಿಗಳ ಮೂರ್ತೀಕರಣಗಳೆಂದು ಈ ವರ್ಣನೆಯಲ್ಲಿ ಧ್ವನಿತವಾಗಿದೆ. ಮಹಾಭಾರತವು ಕೇವಲ ಒಂದು ಯುದ್ಧ ಕಥನವಲ್ಲವೆಂದೂ ಬಹು ವಿಶಾಲವಾದ ಉದ್ದೇಶವನ್ನುಳ್ಳದೆಂದೂ ಆ ವಾಙ್ಮಯದ ವಿಸ್ತಾರದಿಂದಲೂ ಸಂಕೀರ್ಣತೆಯಿಂದಲೂ ಸ್ಫುಟಗೊಂಡಿದೆ.

ಕ್ಷಾತ್ರಪ್ರಶಂಸೆಯೂ ಯುದ್ಧಶೀಲತೆಯೂ ಹೊರನೋಟಕ್ಕೆ ಶಕ್ತ್ಯಾರಾಧನೆ ಎನಿಸಿದರೂ ವಾಸ್ತವದಲ್ಲಿ ಅದು ವಿಷಮತೆಯ ನಿವಾರಣೆಯಷ್ಟೆ ಸತ್ತ್ವರಜಸ್ತಮೋಗುಣಗಳ ಸ್ಪರ್ಧಾತ್ಮಕ ಪ್ರವೃತ್ತಿಯಿಂದಾಗಿ ಜಗತ್‌ಸ್ಥಿತಿ ಆಗಿಂದಾಗ ವಿಕ್ಷೇಪಗೊಳ್ಳುತ್ತಿರುತ್ತದೆ. ಆ ವಿಕ್ಷೇಪಕಾರಣಗಳನ್ನು ನಿವಾರಿಸಿ ಸ್ವಾಸ್ಥ್ಯವನ್ನು ಪುನಃಸ್ಥಾಪಿಸಬೇಕಾಗುತ್ತದೆ. ಈ ಪ್ರಯತ್ನವನ್ನೇ 'ಯುದ್ಧ'ವೆಂದು ಆಲಂಕಾರಿಕವಾಗಿ ವರ್ಣಿಸಲಾಗಿದೆ. 'ಕ್ರಾಂತಿ' ಎಂದರೂ ಅದೇ : ಕೇಂದ್ರಾಭಿಮುಖ ಕ್ರಮಣ. ಪಾರಮಾರ್ಥಿಕ ಸಾಧನೆಯೆಂದರೂ ಕೇಂದ್ರಾಧಿಷ್ಠಿತ ದೈವದೆಡೆಗಿನ ಪಯಣ. ಈ ತಥ್ಯವನ್ನು ಗ್ರಹಿಸಿದಲ್ಲಿ ಭಗವದ್ಗೀತೆಯ ಕರ್ಮಯೋಗ ಪ್ರತಿಪಾದನೆಯ ಸಾರ್ವತ್ರಿಕತೆ ಮನದಟ್ಟಾಗುತ್ತದೆ.

ಪ್ರತ್ಯೇಕ ವ್ಯಕ್ತಿಗಳ ವಿಹಿತ ಸ್ವಧರ್ಮಾಚರಣೆಯು ಅವರ ವಿಕಾಸಕ್ಕೆ ಆಧಾರವಾಗುವಂತೆ

ಲೋಕಸಂಸ್ಥಿತಿಗೆ ಪೂರಕವೂ ಆಗುತ್ತದೆ – ಎಂಬ ಭಗವದ್ಗೀತಾ ಬೋಧೆಯು ಕರ್ಮಯೋಗವೆನಿಸಿದೆ. ಈ ಸೂತ್ರೀಕರಣದಲ್ಲಿ ವೈಯಕ್ತಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಆಯಾಮಗಳು ಅಡಕವಾಗಿವೆಯಾದ ಕಾರಣದಿಂದ ಎಲ್ಲ ವರ್ಗಗಳೂ ಸ್ವಧರ್ಮನಿಷ್ಠವಾಗಿರುವಂತೆ ಸಮಾಜವನ್ನು ಜಾಗೃತಸ್ಥಿತಿಯಲ್ಲಿರಿಸುವುದು. ಈ ವ್ಯವಸ್ಥೆಗೆ ಭಂಗವೊದಗಿದಾಗ – ಅದು ಸಮಾಜದೊಳಗಿನಿಂದಾಗಲಿ ಬಹಿಃಶಕ್ತಿಗಳಿಂದಾಗಲಿ – ವಿಷಮತೆಯನ್ನೆದುರಿಸಿ ಸ್ವಾಸ್ಥ್ಯವನ್ನು ಸ್ಥಾಪಿಸುವುದೇ ಕ್ಷಾತ್ರಧರ್ಮ. ಹೀಗೆ ಎಲ್ಲ ಶಾಸನಕ್ಕೂ ಆಧಾರವಾದುದು ಕ್ಷಾತ್ರಧರ್ಮವೇ. ಶಾಸನವು ಸಾಮರ್ಥ್ಯಶಾಲಿಯಾಗಿದ್ದಾಗ ಮಾತ್ರ ಅಭ್ಯುದಯವು ಶಕ್ಯವಾಗುತ್ತದೆ. ಅಭ್ಯುದಯವೆಂದರೆ ಅಂತಃಸತ್ತ್ವದ ಅಧಿಕಾಧಿಕ ಪ್ರಕಟೀಕರಣವಷ್ಟೇ. ಸಮಾಜ ಅವ್ಯವಸ್ಥಿತವಾಗಿದ್ದಲ್ಲಿ ಈ ಪ್ರಕ್ರಿಯೆ ದುಃಸಾಧ್ಯ.

ಭಗವದ್ಗೀತೆಯನ್ನು ಹಿಂದಿನವರು ಪ್ರಮುಖವಾಗಿ ಪರಮಾರ್ಥ ಗ್ರಂಥವಾಗಿ ಕಂಡಿದ್ದರು. ಆ ಯುಗದಲ್ಲಿ ನೆಮ್ಮದಿಯನ್ನು ಕದಡುವ ವಿಕ್ಷೇಪಗಳು ಅಷ್ಟಾಗಿ ಇರದಿದ್ದದೂ ಇದಕ್ಕೆ ಕಾರಣವಾಗಿದ್ದೀತು. ಆದರೆ ಶತಮಾನಗಳು ಕಳೆದಂತೆ ಗೀತಾಬೋಧೆಯ ಹೆಚ್ಚಿನ ಆಯಾಮಗಳು ಅರಿವಿಗೆ ಬಂದವು. ಕಳೆದ ನೂರೈವತ್ತು – ಇನ್ನೂರು ವರ್ಷಗಳಲ್ಲಿ ದೀರ್ಘಕಾಲದಿಂದಿದ್ದ ನಂಬಿಕೆಗಳು ಶಿಥಿಲಗೊಂಡಿರುವುದರಿಂದಲೂ ಅವಶ್ಯವೆನಿಸಿರುವ ಸಾಂತ್ವನ–ಭರವಸೆಗಳ ಸ್ರೋತವಾಗಿ ಗೀತೆ ಜನರಿಗೆ ಕಂಡಿದೆ. ಇದರ ಲಭ್ಯತೆ ಗೀತೆಯಲ್ಲಿ ಹಿಂದಿನಿಂದ ಇದ್ದದ್ದೇ; ಪರಿವರ್ತನೆಯಾಗಿರುವುದು ಜನರ ಮನಃಸ್ಥಿತಿಯಲ್ಲಿ ಅಷ್ಟೇ. ಗೀತೆಯ ಸಾಮಗ್ರ್ಯದೃಷ್ಟಿಯೂ ದೇಶಕಾಲಾತೀತತೆಯೂ ಎಷ್ಟೋ ಹಿಂದೆಯೇ ಸಿದ್ಧಗೊಂಡಿವೆ. ಒಂದೊಂದು ಯುಗಕ್ಕೂ ಹೊಸಹೊಸ ಅರ್ಥವೈಶಿಷ್ಟ್ಯಗಳನ್ನು ಹೊಳೆಯಿಸುವುದು ಶ್ರೇಷ್ಠ ವಾಙ್ಮಯದ ಲಕ್ಷಣ. ಹಿಂದೆ ಮೋಕ್ಷಶಾಸ್ತ್ರವೆನಿಸಿದ್ದುದು ಈಗ ನಿತ್ಯಜೀವನ ಶಾಸ್ತ್ರವಾಗಿ ಹೊಮ್ಮಿರುವುದು ಈ ಭೂಮಿಕೆಯಲ್ಲಿ.

ಧರ್ಮಸಂಸ್ಥಾಪನೆಯೇ ಗೀತಾಬೋಧೆಯ ಹೃದ್ಭಾಗವಾಗಿರುವುದರಿಂದ ಸಹಜವಾಗಿಯೇ ತಿಲಕ್, ಗಾಂಧಿ ಮೊದಲಾದವರನ್ನು ಗೀತೆ ವಿಶೇಷವಾಗಿ ಆಕರ್ಷಿಸಿತು. ವಿದೇಶಿ ದಬ್ಬಾಳಿಕೆಯನ್ನು ವಿರೋಧಿಸುವುದು ವ್ಯಾವಹಾರಿಕ ಅನಿವಾರ್ಯತೆಯಾಗಿರುವಂತೆ ಧಾರ್ಮಿಕ ಕರ್ತವ್ಯವೂ ಆಗಿದೆ ಎಂಬ ಜಾಗೃತಿಯನ್ನು ಜನಮಾನಸದಲ್ಲಿ ಮೂಡಿಸಲು ಗೀತೆಯು ಉಪಸ್ತಂಭವಾಯಿತು.

ಭಗವದ್ಗೀತೆಯ ಉಗಮವಾದದ್ದು ರಣರಂಗದಲ್ಲಿ ಎಂಬುದು ಆಕಸ್ಮಿಕವಲ್ಲ. ಅದಕ್ಕೆ ಚೋದಕವಾದದ್ದು ದೈವ–ಆಸುರ ಪ್ರವೃತ್ತಿಗಳ ನಡುವಣ ನಿತ್ಯಸಂಘರ್ಷ. ಈ ಸಂಘರ್ಷವಾದರೋ ಎಲ್ಲ ಕಾಲದಲ್ಲಿಯೂ ಇರುವಂಥದ್ದು. ಆದ್ದರಿಂದ ಅದರ ನಿರ್ವಹಣೆಗೆ ಬೇಕಾದ ವಿವೇಕವನ್ನು ಸದಾ ಅರಸುತ್ತಿರಬೇಕಾಗುತ್ತದೆ. ಇದಕ್ಕೆ ಸ್ಫುಟವಾದ

ಪಥದರ್ಶನ ಲಭ್ಯವಿರುವುದು ಭಗವದ್ಗೀತೆಯಲ್ಲಿ. ಇದರಿಂದಾಗಿ ಅದಕ್ಕೆ ಲಭಿಸಿರುವ ಆದರಣೀಯತೆ.

ಲೋಕಸಂಸ್ಥಿತಿಯೂ ಜೀವಹಿತ ಸಾಧನೆಯೂ ಸಾಧ್ಯವಾಗುವುದು ಧರ್ಮದಿಂದಲೇ. ಶಾಶ್ವತಸತ್ಯದ ಆನ್ವಯಿಕ ಆಚರಣೆಯೇ ಧರ್ಮವೆನಿಸಿರುವುದು. ಶಾಂತಿಸ್ಥಾಪನೆಗೆ ಯುದ್ಧವು ಅನಿವಾರ್ಯವೆಂದಾದಲ್ಲಿ ಯುದ್ಧದ ಆಚರಣೆ ನಿರ್ದುಷ್ಟ ಮಾತ್ರವಲ್ಲ, ಯುದ್ಧ ವಿಮುಖತೆ ಪಾಪಕಾರಿಯೇ ಆಗುತ್ತದೆ ಎಂಬುದು ಸ್ಪಷ್ಟವಿದೆ. ಇದು ಅಂತರಂಗದಲ್ಲಿ ನಿರಂತರ ಸಾಗುವ ಸತ್ಪ್ರವೃತ್ತಿ – ದುಷ್ಪ್ರವೃತ್ತಿಗಳ ತಾಕಲಾಟದ ನಿರ್ವಹಣೆಗೂ ಅನ್ವಯಿಸುತ್ತದೆಂಬುದು ಸ್ವತಸ್ಸಿದ್ಧವೇ ಆಗಿದೆ.

ಮನುಷ್ಯ ಜೀವನವಿಡೀ ಕುರುಕ್ಷೇತ್ರವೇ. ಅಂಥ ಸಂಗ್ರಾಮ ಪ್ರತಿ ವ್ಯಕ್ತಿಯ ಅಂತರಂಗದಲ್ಲಿ ಸದಾ ನಡೆದಿರುತ್ತದೆ ; ಬಾಹ್ಯ ಯುದ್ಧ ಅದರ ವ್ಯಾವಹಾರಿಕ ಅಭಿವ್ಯಕ್ತಿಯಷ್ಟೆ. ಅದನ್ನು ನಿಯಂತ್ರಿಸಬಹುದೇ ಹೊರತು ನಿವಾರಿಸಲಾಗದು. ಬಾಹ್ಯಜೀವನ ಸಂದರ್ಭದಲ್ಲಿ ಈ ನಿಯಂತ್ರಣವನ್ನು ಸಾಧಿಸುವುದರಲ್ಲಿ ವ್ಯಕ್ತಿಗಳ ಪಾತ್ರವಿರುವಂತೆ ಪ್ರಭುತ್ವದ ಪಾತ್ರವೂ ಇರುತ್ತದೆ. ರಾಷ್ಟ್ರದ ರಕ್ಷಣೆಗಾಗಿಯೆ ವಿಶೇಷವಾಗಿ ವ್ಯವಸ್ಥಿತವಾಗಿರುವುದು ಕ್ಷತ್ರಿಯವರ್ಗ. ಕ್ಷತ್ರಿಯವರ್ಗದಿಂದ ಸ್ವಧರ್ಮಪಾಲನೆಯಾದಾಗಲೇ ಇಡೀ ಸಮಾಜ ನೆಮ್ಮದಿಯಿಂದಿರುವುದು ಶಕ್ಯ. ಈ ಚಿರಕಾಲೀನ ತಥ್ಯವನ್ನೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಪುನರ್ನಿರೂಪಿಸಿರುವುದು. ಕ್ಷಾತ್ರದ ಮೂಲಕವೇ ಬ್ರಾಹ್ಮವು ಪರಿಪಾಲಿತಾಗಬಲ್ಲದು. "ತಸ್ಮಾತ್ ಕ್ಷತ್ರಾತ್ ಪರಂ ನಾಸ್ತಿ" ಎಂದು ಬೃಹದಾರಣ್ಯಕೋಪನಿಷತ್ ಆರಂಭದಲ್ಲಿಯೇ ಸೂಚಿಸಿದೆ. ಐಹಿಕ – ಆಮುಷ್ಮಿಕಗಳ ನಡುವಣ ಸಮನ್ವಯ ತಪ್ಪಿದಾಗಲೆಲ್ಲ ರಾಷ್ಟ್ರಜೀವನದ ಹಿನ್ನಡೆಯಾಗಿದೆಯೆಂಬುದು ಇತಿಹಾಸ ಸಿದ್ಧವಾಗಿದೆ.

ಪಾಶ್ಚಾತ್ಯರ ಕಲ್ಪನೆಯಲ್ಲಿ ರಾಷ್ಟ್ರೀಯತೆಯೆಂಬುದು ವ್ಯವಹಾರಾಧಿಷ್ಠಿತ. ಭಾರತೀಯ ಕಲ್ಪನೆಯ ರಾಷ್ಟ್ರತ್ವದಲ್ಲಿ ಕರ್ಮ, ಭಕ್ತಿ, ಜ್ಞಾನ – ಈ ಮೂರು ಆಯಾಮಗಳೂ ಸೇರಿವೆ. ಅಧ್ಯಾತ್ಮದ ನೆಲೆಯ ಮೇಲೆ ನಿಂತ ರಾಷ್ಟ್ರವಾದವನ್ನು ಬೋಧಿಸಿರುವುದು ಭಗವದ್ಗೀತೆ. ವಿಚಲಿತನಾಗಿದ್ದ ಅರ್ಜುನನು ಶ್ರೀಕೃಷ್ಣನ ಬೋಧೆಯನ್ನು ಗ್ರಹಿಸಿದಾಗ ಮೋಹ ಅಸ್ತಂಗತವಾಯಿತು. ಜ್ಞಾನದ ಉದಯವಾಯಿತು ; ಯೋಗೇಶ್ವರ ಕೃಷ್ಣನ ಮತ್ತು ಧನುರ್ಧಾರಿ ಅರ್ಜುನನ ಐಕ್ಯವಾಗಿ ಲೋಕಕಲ್ಯಾಣವಾಯಿತು.

ಗೀತೆಯ ಕೇಂದ್ರ ಬೋಧನೆ ಸ್ವಭಾವನಿಯತ – ಸ್ವಧರ್ಮಾಚರಣೆ ಎಂಬುದು ಸುವಿದಿತ. ಗುಣಕರ್ಮಾನುಗುಣ ವರ್ಣ ವ್ಯವಸ್ಥೆಯೂ ಗೀತೆಯಲ್ಲಿ ಪ್ರಸ್ಥಾಪಿತವಾಗಿದೆ. ಸಕಲ ಜನರೂ ಸ್ವಧರ್ಮನಿಷ್ಠರಾಗಲಿ ಎಂಬುದು ಕೇವಲ ಸುವ್ಯವಸ್ಥಾಪೇಕ್ಷೆಯಿಂದ ನಿರ್ದಿಷ್ಟವಾಗಿಲ್ಲ; ಅದಕ್ಕೆ ತಾತ್ತ್ವಿಕ ಹಿನ್ನೆಲೆ ಇದೆ. 'ಸಹಜಕರ್ಮ' ಪ್ರಸ್ತಾವದಲ್ಲಿ ವಿವಕ್ಷಿತವಾದದ್ದು ಕೇವಲ ವಂಶೀಯತೆಯಲ್ಲ. ಪ್ರತಿಯೊಬ್ಬರ ಸ್ವಭಾವವೂ ಪೂರ್ವಜನ್ಮಗಳ

ಫಲಿತವಾಗಿರುತ್ತದೆ ; ಪ್ರಕೃತ ಜನ್ಮಸಂದರ್ಭಗಳು ಸಂಗತವಾದರೂ ನಿರ್ಣಯಕಗಳಲ್ಲ. ಸ್ವಭಾವದಿಂದ ಕರ್ಮಾಚರಣೆ ; ತ್ರೈಗುಣ್ಯದಿಂದ ಕರ್ಮನಿಶ್ಚಯ. ನಿಯತಕರ್ಮದಲ್ಲಿ ಸ್ವಧರ್ಮ ಗೀತೆಯಲ್ಲಿ ಪ್ರಶಂಸೆಗೊಂಡಿರುವುದೇ ಹೊರತು ರೂಢ ಸಮಾಜ ರಚನೆಯ ಊರ್ಜಿತತೆಗಾಗಿ ಅಲ್ಲ. ಮಾನವನ ಬಾಹ್ಯಜೀವನವೂ ಆಚರಣೆಯೂ ಅವನ ಅಂತಃಸ್ವಭಾವಾನು ಗುಣವಾಗಿರಬೇಕೆಂಬುದು ಆಧಾರತತ್ತ್ವ. ಇದೇ ಸಮಾಜ ಸಂಸ್ಥಿತಿಯ ಮತ್ತು ಉತ್ಕರ್ಷದ ಮಾರ್ಗ. ಎಲ್ಲ ಆಚರಣೆಯೂ ಜ್ಞಾನಪೂರ್ವಕವಾಗಿ ನಡೆಯಬೇಕೆಂದೂ ಇದರಿಂದ ಧ್ವನಿತವಾಗುತ್ತದೆ. ಈ ಪ್ರಕೃತಿ-ಸಮತೋಲನದಲ್ಲಿ ಕ್ಷೋಭೆಯುಂಟಾದಾಗ ಯುದ್ಧಾದಿ ವಿಧಾನಗಳನ್ನು ಬಳಸಿಯಾದರೂ ಸಮತೋಲನವನ್ನು ಪುನಃಸ್ಥಾಪಿಸಬೇಕಾಗುತ್ತದೆ – ಎಂಬುದು ಪ್ರಕೃತಕಾಲಕ್ಕೂ ಸಂಗತವಾದ ಗೀತಾಸಂದೇಶ.

ಭಗವದ್ಗೀತೆಯಲ್ಲಿ ಸಾರ್ವಕಾಲಿಕತೆ

ಶ್ರೀಕೃಷ್ಣನದು ಪೂರ್ಣಾವತಾರ ಅಂತ ನಮ್ಮ ಪಾರಂಪಾರಿಕ ವಿಶ್ವಾಸವಿದೆ. ಮನುಷ್ಯನ ಪ್ರವೃತ್ತಿ ವಿಕಟತೆಗಳ ಎದುರಿನಲ್ಲಿ ಆತ್ಯಂತಿಕ ಧರ್ಮದ ಸಂಸ್ಥಾಪನೆ ಒಬ್ಬ ಅವತಾರ ಪುರುಷನಿಂದ ಹೇಗೆ ಆಯಿತು ಎಂಬುದನ್ನು ಶ್ರೀಕೃಷ್ಣಚರಿತ್ರೆಯಲ್ಲಿ ಕಾಣುತ್ತೇವೆ. ಭಾಗವತದಲ್ಲಿ ಶ್ರೀಕೃಷ್ಣನದೇ ಮಾತಿದೆ :

ಬ್ರಹ್ಮನ್ ಧರ್ಮಸ್ಯ ವಕ್ತಾಹಂ ಕರ್ತಾ ತದನುಮೋದಿತಾ ।
ತಚ್ಛಿಕ್ಷಯಂಲ್ಲೋಕಮಿಮಂ ಆಸ್ಥಿತಃ ಪುತ್ರ ಮಾ ಖಿದ ॥ X 69.40

ಜನರಿಗೆ ಶಿಕ್ಷಣ ಕೊಡುವುದಕ್ಕಾಗಿಯೇ ನಾನು ನಿಂತಿದ್ದೇನೆ – ಅಂತ ಕೃಷ್ಣ ನಾರದರಿಗೆ ಹೇಳುತ್ತಾನೆ. ಆ ಶಿಕ್ಷಣವಷ್ಟೂ ಹರಳು ಗಟ್ಟಿರುವುದು ಭಗವದ್ಗೀತೆಯಲ್ಲಿ – ಶ್ರೀಕೃಷ್ಣ

ಬದುಕು ಘಟನಾಪೂರ್ಣವಾದದ್ದು ಮತ್ತು ಬಹುಸ್ತರೀಯವಾದ್ದು. ಅವನ ಜೀವನದ ಮಿಕ್ಕೆಲ್ಲ ಸಾಧನೆಗಳನ್ನು ಪಕ್ಕಕ್ಕಿಟ್ಟರೂ ಅವನಿಗೆ ಅತ್ಯುಜ್ಜ್ವಲ ದೀಪಧಾರಿಯ ಸ್ಥಾನವನ್ನು ದೃಢಪಡಿಸುವುದಕ್ಕೆ ಭಗವದ್ಗೀತೆಯೊಂದೇ ಸಾಕಾಗುತ್ತದೆ. "The Gita is the heart's heart of the Mahabharatha" ಎಂದು ವಿ. ಎಸ್. ಸುಕ್ಥಂಕರ್ ಹೇಳುತ್ತಿದ್ದರು. ಭಗವದ್ಗೀತೆಯನ್ನು ಲೋಕಕ್ಕೆ ಕೊಡುವುದಕ್ಕಾಗಿಯೇ ಮಹಾಭಾರತದ ರಚನೆಯಾಯಿತು ಅಂದರೆ ತಪ್ಪಾಗಲಾರದು – ಅಂತಲೂ ಅವರೊಮ್ಮೆ ಹೇಳಿದ್ದರು.

ಶ್ರೀಕೃಷ್ಣ ಎಂದು ಗೀತೆಯಲ್ಲಿ ಸಂಬೋಧನೆಗೊಂಡಿರುವುದು ಸ್ವಯಂ ಪರಮಾತ್ಮನೇ. ಅರ್ಜುನನ ಸಂದಿಗ್ಧತೆಯನ್ನು ನಿಮಿತ್ತ ಮಾಡಿಕೊಂಡು ಲೋಕೋದ್ಧಾರಕ್ಕಾಗಿ ಜಗಜ್ಜೀವನದ ಮೂಲಭೂತ ಪ್ರಶ್ನೆಗಳಿಗೆ ಶ್ರೀಕೃಷ್ಣ ಸಮಾಧಾನ ನೀಡಿದ್ದಾನೆ. ಅದನ್ನು ಮನಸ್ಸು-ಆತ್ಮದ ನಡುವಣ ಸಂವಾದವೆಂದು ಬೇಕಾದರೂ ಭಾವಿಸಬಹುದು. ಈ

ಸರ್ವಕಾಲಿಕತೆ ಇರುವುದರಿಂದಲೇ ಈಚಿನ ದಿನಗಳಲ್ಲಿ ಅರ್ಥಶಾಸ್ತ್ರ (Economics), ವ್ಯವಸ್ಥಾಪನಾಶಾಸ್ತ್ರ (Management) ಮೊದಲಾದ ಅನ್ಯಾನ್ಯ ಭಗವದ್ಗೀತೆಯಲ್ಲಿ ಸೂತ್ರೀಕರಣಗಳನ್ನು ಅನ್ವಯಿಸುವ ಪ್ರಯತ್ನಗಳಾಗಿವೆ.

ಇವತ್ತು 'ವ್ಯಕ್ತಿತ್ವ ವಿಕಾಸ' ಎಂಬ ಹೆಸರಿನಲ್ಲಿ ದೊಡ್ಡ ಉದ್ಯೋಗ ಪಡಕೊಳ್ಳುವುದು ಹೇಗೆ, ಪ್ರಮೋಷನ್ ಪಡೆಯುವುದು ಹೇಗೆ – ಇಂಥವನ್ನೆಲ್ಲ ಹೇಳಿಕೊಡುತ್ತಾರೆ. ಅದು ತಪ್ಪೇನಲ್ಲ, ಆದರೆ ಸಮಗ್ರವಲ್ಲ. ನಿಜವಾದ ವ್ಯಕ್ತಿತ್ವವಿಕಾಸವೆಂದರೆ ದೈಹಿಕ, ಮಾನಸಿಕ, ಬೌದ್ಧಿಕ – ಹೀಗೆ ಸರ್ವಾಂಗೀಣ ಬೆಳವಣಿಗೆ. ಅದಕ್ಕೆ ಗೀತೆ ಮಾರ್ಗದರ್ಶನ ಮಾಡುತ್ತದೆ.

ಗೀತೆಯಲ್ಲಿ ಸ್ವರ್ಗ–ನರಕ, ಜನ್ಮಾಂತರ, ಸ್ವಧರ್ಮ ಆಚರಣೆಯ ಶ್ರೇಷ್ಠತೆ, ಜ್ಞಾನ–ಕರ್ಮ, ಸಂಬಂಧ, ಈಶ್ವರ ಸಾಕ್ಷಾತ್ಕಾರ ವಿಧಾನ ಯೋಗಿಯ ಲೋಕಹಿತ ದೃಷ್ಟಿ, ಉಪಾಸನೆ ಅಥವಾ ಸಾಧನೆಯ ಬೇರೆಬೇರೆ ರೂಪಗಳು ಮೊದಲಾದ ಅಂಶಗಳಂತೂ ಇದ್ದೇ ಇವೆ.

ಆದರೆ ನಿತ್ಯಜೀವನದಲ್ಲಿ ದಕ್ಷತೆಗೆ ಅವಶ್ಯಕವಾದ ಆಹಾರ–ವಿಹಾರ ನಿಯಮಗಳು, ಜಗತ್ತಿನೊಡನೆ ಹೇಗೆ ವರ್ತಿಸಬೇಕೆಂಬ ನಯ– ಇಂಥ ಹತ್ತಾರು ಸಂಗತಿಗಳನ್ನು ನೇರವಾಗಿಯೆ ಗೀತೆ ಬೋಧಿಸಿದೆ.

ಭೌತಿಕ ಉನ್ನತಿಯನ್ನು ಭಗವದ್ಗೀತೆ ತಿರಸ್ಕರಿಸಿಲ್ಲ. ಪ್ರತಿಯಾಗಿ ಭೌತಿಕ ಜೀವನವನ್ನು ಅಲಕ್ಷ್ಯ ಮಾಡುವುದನ್ನು ಅದು ಖಂಡಿಸಿದೆ. ಗೀತೆ ಹೇಳಿರುವುದು ಎಲ್ಲ ಪ್ರಗತಿಯೂ ಧರ್ಮದ ಚೌಕಟ್ಟಿನಲ್ಲಿ ನಡೆಯಬೇಕು ಎಂದು. ಪಾಶ್ಚಾತ್ಯರಲ್ಲಿ ಭೌತಪ್ರಗತಿಯೂ ಧಾರ್ಮಿಕ ಚಿಂತನೆಯೂ ಪ್ರತ್ಯೇಕವಾಗಿ ಇದ್ದವು ; ಆದ್ದರಿಂದ ಸಂಘರ್ಷ ತಲೆದೋರಿತು. ಭಗವದ್ಗೀತೆ ಬಾಹ್ಯಜೀವನ, ಅಂತರಂಗದ ಜೀವನ – ಎರಡನ್ನೂ ಸಮನ್ವಯ ಮಾಡಿದೆ. ಹೀಗೆ ಗೊಂದಲ ಇಲ್ಲ. ಜೀವನವಷ್ಟೂ ದೇವರ ಉಪಾಸನೆ ಎಂದುಕೊಂಡಾಗ ಜೀವನ ಹೆಚ್ಚು ಉದಾತ್ತವಾಗುತ್ತದೆ, ಹೆಚ್ಚು ದಕ್ಷವೂ ಆಗುತ್ತದೆ. ಹೀಗೆ ಭಗವದ್ಗೀತೆಯಿಂದ ನಮಗೆ ಸಿಗುವುದು ವೈರಾಗ್ಯದ ಬೋಧನೆಯಷ್ಟೇ ಅಲ್ಲ, ಸಾರ್ಥಕ ಜೀವನದ ರೀತಿಯ ಬೋಧನೆ. ಇದರಿಂದಾಗಿಯೇ ಗೀತೆ ಎಲ್ಲ ಚಿಂತನಧಾರೆಗಳವರಿಗೂ ಪ್ರಿಯವಾಗಿರುವುದು.

ಭಾರತೀಯರೇನೊ ಸಂಪ್ರದಾಯ ಶ್ರದ್ಧೆಯಿಂದ ಭಗವದ್ಗೀತೆಯನ್ನು ಗೌರವಿಸುತ್ತಾರೆ ಎಂದು ಕೆಲವರು ಹೇಳಬಹುದು. ಆದರೆ ಭಾರತೀಯ ಸಂಸ್ಕೃತಿಯ ಮತ್ತು ಪರಂಪರೆಯ ಹಿನ್ನೆಲೆಯಿಂದ ಅಸಂಖ್ಯ ಪಾಶ್ಚಾತ್ಯ ಚಿಂತಕರನ್ನೂ ಅದು ತನ್ನ ಕಡೆಗೆ ಸೆಳೆದುಕೊಂಡಿದೆ ಎಂಬುದನ್ನು ಗಮನಿಸಿದರೆ ಗೀತೆಯ ವಿಶೇಷತೆ ಮನದಟ್ಟಾಗುತ್ತದೆ. ಒಂದೆರಡು ಉದಾಹರಣೆಗಳನ್ನು ನೋಡೋಣ.

ಭಗವದ್ಗೀತೆಯ ಮೊತ್ತಮೊದಲ ಇಂಗ್ಲಿಷ್ ಅನುವಾದ ಮಾಡಿದವನು ಚಾರ್ಲ್ಸ್ ವಿಲ್ಕಿನ್ಸ್ ಎಂಬಾತ. ಅದರ ಹಿನ್ನೆಲೆ ಸ್ವಾರಸ್ಯಕರ. ಅದು ಆದದ್ದು ಈಗ್ಗೆ 225 ವರ್ಷ ಹಿಂದೆ. ಗೀತೆಯ ಬಗ್ಗೆ ಸ್ಥಳೀಯರಿಂದ ಕೇಳಿದ ಮೊದಲ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್ ಎಷ್ಟು ಪ್ರಭಾವಗೊಂಡನೆಂದರೆ ಅವನು ಚಾರ್ಲ್ಸ್ ವಿಲ್ಕಿನ್ಸ್‌ನನ್ನು ಸಂಸ್ಕೃತ ಕಲಿಯುವಂತೆ ಪ್ರೇರಣೆ ಮಾಡಿದ. ವಿಲ್ಕಿನ್ಸ್ ಸಂಸ್ಕೃತ ಕಲಿತು ಗೀತೆಯನ್ನು ಇಂಗ್ಲಿಷಿಗೆ ಅನುವಾದ ಮಾಡಿದ "The Bhagavad Gita : Dialogue of Krishna and Arjuna" ಎಂಬ ಹೆಸರಿನಲ್ಲಿ ಅದು ಲಂಡನ್ನಿನಲ್ಲಿ 1785ರಲ್ಲಿ ಪ್ರಕಾಶವಾಯಿತು. ಅದು ಭಾರತೀಯವಲ್ಲದ ಭಾಷೆಯ ಮೊದಲ ಅನುವಾದ. ಅದು ಬಂದ ಮೇಲೆ ಎಲ್ಲ ಯೂರೋಪಿನ ಭಾಷೆಗಳಿಗೂ ಅನುವಾದ ಆಯಿತು. ವಿಲ್ಕಿನ್ಸ್ ಮಾಡಿದ ಅನುವಾದಕ್ಕೆ ಸ್ವಯಂ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನೇ ಮುನ್ನುಡಿ ಬರೆದ. ಅದರಲ್ಲಿ ಅವನು ಹೇಳಿದ :

"This work (Gita) will survive when the British dominion in India shall have long ceased to right, and when the sources it once yielded of wealth and power are lost to remembrance."

ಭಗವದ್ಗೀತೆ ಯೂರೋಪಿಯನ್ನರ ಮೇಲೆ ಬೀರಿದ ಪ್ರಭಾವದಿಂದಾಗಿ ಅಲ್ಪ ಕಾಲದಲ್ಲಿ ಪ್ರಮುಖ ಸಂಸ್ಕೃತ ಗ್ರಂಥಗಳೆಲ್ಲ ಯೂರೋಪಿನ ಭಾಷೆಗಳಿಗೆ ಅನುವಾದ ಆಗತೊಡಗಿದವು.

Nathamiel Smith ಎಂಬಾತನಿಗೆ ಬರೆದ ಪತ್ರದಲ್ಲಿ ವಾರನ್ ಹೆಸ್ಟಿಂಗ್ಸ್ ತುಂಬಾ ಅರ್ಥಪೂರ್ಣವಾದ ಮಾತನ್ನು ಹೇಳಿದ :

"I hesitate not to pronounce the Geeta, a performance of great originality, of a sublimity of conception, reasoning, and diction, almost unequalled and a single exception, among all the known religious of mankind, of theology accurately corresponding with that of the christian dispensation, and more powerfully illustrating its fundamental doctriness."

ಭಗವದ್ಗೀತೆಯಿಂದ ಪ್ರಭಾವಿತನಾದ ಅಮೆರಿಕದ ರಾಲ್ಸ್ ತತ್ತ್ವಶಾಸ್ತ್ರಜ್ಞ ವಾಲ್ಡೋ ಎಮರ್ಸನ್ ಅಲ್ಲಿಂದಾಚೆಗೆ ಕ್ರೈಸ್ತಮತದ ನಿಲವುಗಳನ್ನು ತ್ಯಜಿಸಿ ಕರ್ಮಸಿದ್ಧಾಂತದ ಪ್ರತಿಪಾದನೆ ಮಾಡತೊಡಗಿದ. ಎಷ್ಟುಮಟ್ಟಿಗೆ ಎಂದರೆ ಎಮರ್ಸನ್ ಕ್ರೈಸ್ತಮತವಿರೋಧಿಯಾಗಿಬಿಟ್ಟನೆಂದೂ ಕೆಲವರು ಟೀಕೆ ಮಾಡತೊಡಗಿದರು.

ಹೆನ್ರಿ ಡೇವಿಡ್ ಥೋರೋ ಒಮ್ಮೆ ಎಮರ್ಸನ್‌ನ ಮನೆಯಲ್ಲಿ ಅತಿಥಿಯಾಗಿ ಕೆಲವು ದಿನಗಳು ಇದ್ದ. ಅಲ್ಲಿ ಒಂದು ಕಪಾಟಿನಲ್ಲಿ ನಾಲ್ಕಾರು ವಿವಿಧ ಧರ್ಮಗ್ರಂಥಗಳು

ಇದ್ದವು. ಅವನ್ನೆಲ್ಲ ಪರಶೀಲಿಸಿದಾಗ ಥೋರೋ ಆಶ್ಚರ್ಯರಾಗಿ ಅತಿಶಯವಾಗಿ ಆಕರ್ಷಿತನಾದದ್ದು ಭಗವದ್ಗೀತೆಯಿಂದ. ಕಡೆಯ ವರ್ಷಗಳಲ್ಲಿ ನದಿಯೊಂದರ ದಡದಲ್ಲಿ ಕುಟೀರ ಮಾಡಿಕೊಂಡು ಯೋಗಾಭ್ಯಾಸವನ್ನೂ ಮಾಡತೊಡಗಿದ ಥೋರೋ. "ಅನಾಸಕ್ತಿಯೋಗ" ದ ಶ್ರದ್ಧಾವಂತ ಉಪಾಸಕನಾದ.

19ನೇ ಶತಮಾನದ ಶ್ರೇಷ್ಠ ಪಾಶ್ಚಾತ್ಯ ಚಿಂತಕರಾದ ಥಾಮಸ್ ಕಾರ್ಲೆಲ್, ವಾಲ್ಟ್ ವ್ಹಿಟಮನ್, ಮ್ಯಾಥ್ಯೂ ಆರ್ನಾಲ್ಡ್ ಮೊದಲಾದವರ ಬರಹಗಳಲ್ಲಿ ಭಗವದ್ಗೀತೆಯ ಪ್ರಭಾವದ ಪ್ರತಿಫಲನವನ್ನು ಕಾಣುತ್ತೇವೆ. ವರ್ಡ್ಸ್‌ವರ್ತ್ ಮೊದಲಾದ ಪ್ರಸಿದ್ಧ ಕವಿಗಳೂ ಗೀತೆಯ ಅನುವಾದ ಓದಿ ಪ್ರಭಾವಗೊಂಡಿದ್ದರು.

ಖ್ಯಾತ ಫ್ರೆಂಚ್ ಚಿಂತಿಕ ರೋಮಾರೋಲಾ ಹೇಳುತ್ತಾನೆ : "ನಾನು ಯೂರೋಪಿನ ಮತ್ತು ಏಷ್ಯದ ಎಲ್ಲ ಧರ್ಮಗಳನ್ನು ಅಧ್ಯಯನ ಮಾಡಿದ್ದೇನೆ. ಆದರೆ ಸರ್ವಶ್ರೇಷ್ಠ ಧರ್ಮ ಎಂದು ನನಗನಿಸಿರುವುದು ಹಿಂದೂ ಧರ್ಮ... ಭವಿಷ್ಯಕಾಲದಲ್ಲಿ ಇಡೀ ಜಗತ್ತು ಹಿಂದೂ ಧರ್ಮದ ಮುಂದೆ ತಲೆಬಾಗಿಸಬೇಕಾಗುತ್ತದೆ".

ತುಂಬಾ ದರ್ಪಿಷ್ಠ ಎನಿಸಿಕೊಂಡಿದ್ದ ವೈಸರಾಯ್ ಲಾರ್ಡ್ ವಿಲಿಂಗಡನ್ ಅಂಥವನೂ ಉದ್ಗಾರ ಮಾಡಿದ್ದ : "ಭಾರತದಲ್ಲಿ ಅರಮನೆ-ಮಹಲುಗಳಲ್ಲಿ ಇರುವವರಾಗಲಿ ಮುರುಕು ಗುಡಿಸಲುಗಳಲ್ಲಿ ಇರುವವರಾಗಲಿ – ಎಲ್ಲರೂ ಶೀಲಸಂಪನ್ನರಾಗಿರುವುದನ್ನು ಕಾಣುತ್ತೇವೆ. ಈ ಗುಣ ಇಡೀ ಹಿಂದೂ ಜನಾಂಗದಲ್ಲಿ ರಕ್ತಗತವಾಗಿದೆ. ಅನ್ಯಾಯ ಕಂಡಾಗ ಅವರು ಪ್ರತಿಭಟಿಸಬಹುದು. ಆದರೆ ಎಂತಹ ಸನ್ನಿವೇಶದಲ್ಲಿಯೂ ಅವರಲ್ಲಿ ಕರುಣೆ, ಸಹಾನುಭೂತಿ ಮೊದಲಾದ ಗುಣಗಳು ಇದ್ದೇ ಇರುತ್ತವೆ."

"ಧಾರ್ಮಿಕತೆ, ಪ್ರಸನ್ನತೆ, ನ್ಯಾಯಪ್ರಿಯತೆ, ಸತ್ಯಭಕ್ತಿ, ದೈವಭಕ್ತಿ, ಕೃತಜ್ಞತೆ – ಇವು ಹಿಂದೂ ಜನರಲ್ಲಿ ಉಜ್ವಲವಾಗಿರುತ್ತವೆ – ಎಂದಿದ್ದ ಸಾಮ್ಯಾಯೆಲ್ ಜಾನ್ಸನ್.

ಖ್ಯಾತ ಇಂಗ್ಲಿಷ್ ನಾಟಕಕಾರ ಬರ್ನಾಡ್ ಷಾ ಹೇಳುತ್ತಾನೆ : "ಮನುಷ್ಯ ಜೀವನದ ಸಹಜಸ್ವರೂಪವನ್ನು ನಾವು ಕಾಣುವುದು ಭಾರತೀಯರಲ್ಲಿ. ಅವರಲ್ಲಿ ಕೃತ್ರಿಮತೆ ಇಲ್ಲ. ದೈವಾಂಶ ಭಾರತೀಯರ ಮುಖಮಂಡಲದಲ್ಲಿ ಎದ್ದು ಕಾಣುತ್ತದೆ".

ಕಳೆದು ಎಂದರೆ 20ನೇ ಶತಮಾನದ ಅಗ್ರಶ್ರೇಣಿಯ ಆಂಗ್ಲ ಕವಿಗಳಾದ ಟಿ. ಎಸ್. ಎಲಿಯಟ್, ಡಬ್ಲಯೂ. ಬಿ. ಯೀಟ್ಸ್, ಮೊದಲಾದವರು ಗೀತೆ – ಉಪನಿಷತ್ತುಗಳಿಂದ ಪ್ರಭಾವಿತರಾಗಿದ್ದುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ.

ಹಿಂದಿನ ಕಾಲದಲ್ಲಿ ವೇದಾಂತದಲ್ಲಿ ಆಸಕ್ತಿ ಇದ್ದವರಷ್ಟೇ ಭಗವದ್ಗೀತೆಯ ಅಧ್ಯಯನ ಮಾಡುತ್ತಿದ್ದರು. ಆದರೆ ಈಚಿನ ಕಾಲದಲ್ಲಿ ದೈನಂದಿನ ಜೀವನದ ಎಲ್ಲ ಸನ್ನಿವೇಶಗಳಿಗೂ

ಭಗವದ್ಗೀತೆಯಿಂದ ಮಾರ್ಗದರ್ಶನ ಲಭ್ಯ ಇದೆ – ಎಂದು ಎಲ್ಲರ ಅನುಭವಕ್ಕೆ ಬಂದಿದೆ. ರಾಜಕಾರಣಿಗಳಿರಲಿ, ಉದ್ಯಮಪತಿಗಳಿರಲಿ, ವರ್ತಕರಿರಲಿ, ಸಂನ್ಯಾಸಿಗಳಿರಲಿ, ಅಧ್ಯಾತ್ಮ ಸಾಧಕರಿರಲಿ, ವಿದ್ಯಾರ್ಥಿಗಳಿರಲಿ, ಗೃಹಸ್ಥರಿರಲಿ – ಎಲ್ಲರಿಗೂ ಗೀತೆಯಿಂದ ಲಾಭವಿದೆ. ಏಕೆಂದರೆ ಗೀತೆ ಜ್ಞಾನಪ್ರದಾಯಿನಿಯಾದದ್ದು. ಜ್ಞಾನಶಕ್ತಿಯಿಂದಲೇ ಇಚ್ಛಾಶಕ್ತಿಯೂ ಕ್ರಿಯಾಶಕ್ತಿಯೂ ಹುಟ್ಟುವುದು. ಗೀತೆಯ ವಾಕ್ಯಗಳು ಹಿಂದಿನವೇ ಇದ್ದರೂ ನಮ್ಮ ಮನಸ್ಸಿನ ಯೋಗ್ಯತೆ ಹೆಚ್ಚಿದ ಹಾಗೆಲ್ಲ ಗೀತೆಯಲ್ಲಿ ಹೊಸ ಹೊಸ ಅರ್ಥಗಳು ನಮಗೆ ತೋರುತ್ತ ಹೋಗುತ್ತದೆ. ಇದು ಗೀತೆಯ ವಿಶೇಷ. ಒಂದು ಸಾಮಾನ್ಯ ಕಥೆಯೋ ನಾಟಕವೋ ಒಂದು ಸಲ ಓದಿದರೆ ಮುಗಿಯಿತು. ಭಗವದ್ಗೀತೆ ಇಡೀ ಜೀವಮಾನ ನಮ್ಮ ಜೊತೆಯಲ್ಲಿ ಸ್ನೇಹಿತನ ಹಾಗೆ ಇರುತ್ತದೆ.

ಅಹಂಕಾರ ಅತಿಯಾಗಿ ಬೆಳೆಯುವುದರಿಂದಲಲೇ ವ್ಯಕ್ತಿಜೀವನವೂ ಸಾಮಾಜಿಕ ಜೀವನವೂ ಅವ್ಯವಸ್ಥಿತವಾಗುವುದು. ಆದ್ದರಿಂದ ಅಹಂಕಾರವನ್ನು ನಿಯಂತ್ರಣ ಮಾಡಿಕೊಳ್ಳುವ ವಿಧಾನಗಳನ್ನು ಗೀತೆ ತಿಳಿಸಿಹೇಳಿದೆ.

ಎಲ್ಲರೂ ತಮ್ಮ ಅಹಂಕಾರಗಳಿಗೆ ಒಂದಷ್ಟು ಕಡಿವಾಣ ಹಾಕಿಕೊಂಡರೆ ಜಗತ್ತಿನಲ್ಲಿ ವ್ಯಕ್ತಿ–ವ್ಯಕ್ತಿ ಸಂಬಂಧ ಉದಾತ್ತ ರೀತಿಯದಾಗುತ್ತದೆ, ಜಗತ್ತು ಸುಂದರವಾಗುತ್ತದೆ, ಶಾಂತಿಮಯವಾಗುತ್ತದೆ.

ಎಲ್ಲರೂ ಅವರವರಿಗೆ ವಿಹಿತವಾದ ಕರ್ತವ್ಯಗಳನ್ನು ಪೂರ್ಣ ಮನಸ್ಸಿಟ್ಟು ದಕ್ಷತೆಯಿಂದ ಮಾಡಬೇಕು ಎಂದು ಗೀತೆ ಹೇಳಿದೆ: "ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ॥

ಇಡೀ ಸಮಾಜದಲ್ಲಿ ಇಂತಹ ಕರ್ತವ್ಯಪ್ರಜ್ಞೆ ದೃಢವಾಗಿ ಇದ್ದ ಕಾಲದಲ್ಲಿ – ಈಗ್ಗೆ 200 – 300 ವರ್ಷ ಹಿಂದೆ ಸರಕಾರಕ್ಕೆ ಬಹಳ ಕಡಿಮೆ ಕೆಲಸ ಇರುತ್ತಿತ್ತು.

ವೇದಗಳೂ ಉಪನಿಷತ್ತುಗಳೂ ಎಲ್ಲರಿಗೂ ಅರ್ಥವಾಗುವಂಥವಲ್ಲ. ಅವುಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪಂಡಿತರ ಸಹಾಯ ಅನಿವಾರ್ಯ. ಆದರೆ ಗೀತೆಯನ್ನು ಆಸಕ್ತರು ಯಾರು ಓದಿದರೂ ಒಂದಷ್ಟು ಅರ್ಥ ಆಗುತ್ತದೆ ; ಮನನ–ಚಿಂತನೆ ಮಾಡಿದ ಹಾಗೆಲ್ಲ ಹೆಚ್ಚು ಹೆಚ್ಚು ಸೂಕ್ಷ್ಮ ಅರ್ಥಗಳು ಮನವರಿಕೆಯಾಗುತ್ತವೆ. ಆದ್ದರಿಂದಲೇ ಗೀತೆಯನ್ನು "ಪ್ರಪನ್ನ ಪಾರಿಜಾತಾಯ" – "ಶರಣರಿಗೆ ಕಲ್ಪವೃಕ್ಷ" ಅಂತೆಲ್ಲ ಧ್ಯಾನಶ್ಲೋಕಗಳಲ್ಲಿ ವರ್ಣಿಸಿದ್ದಾರೆ. "ಗೀತಾ ಜ್ಞಾನಮಯೀ ಗಂಗಾ, ಪುನಾತಿ ಭುವನತ್ರಯಮ್" "ಗೀತೆಯು ಉದಾತ್ತ ಜ್ಞಾನದ ಗಂಗಾನದಿ ; ಇದು ಎಲ್ಲ ಲೋಕವನ್ನೂ ಪಾವನಗೊಳಿಸುತ್ತದೆ".

ಈಗ್ಗೆ ಕೆಲವು ತಿಂಗಳ ಹಿಂದೆ ಇದೇ ಬೆಂಗಳೂರಿನ ಬನಶಂಕರಿ 2ನೇ

ಹಂತದಲ್ಲಿರುವ ವೆಂಕಟೇಶಮೂರ್ತಿ ಎಂಬ ದಂಪತಿಗಳ ಭೇಟಿ ಆಯಿತು. ಅವರು ಏನೇನೊ ಜಟಿಲ ಸಮಸ್ಯೆಗಳಲ್ಲಿ ಸಿಕ್ಕಿಕೊಂಡು 12-13 ವರ್ಷ ನರಳಿದ್ದರು. ಹತಾಶರಾಗಿ ಸಮಾಧಾನಕ್ಕಾಗಿ ಪ್ರತಿ ದಿನ ಶ್ರದ್ಧೆಯಿಂದ ಗೀತಾಪಾರಾಯಣ ಮಾಡತೊಡಗಿದರು. ಕಡೆಗೆ ಪವಾಡವೆಂಬಂತೆ ಅವರ ಸಮಸ್ಯೆಗಳು ಪರಿಹಾರವಾಗಿ ಶಾಂತಿ ದೊರೆಯಿತು. ಅವರಿಗೆ ಭಗವದ್ಗೀತೆಯಲ್ಲಿ ಶ್ರದ್ಧೆ ಇನ್ನೂ ಹೆಚ್ಚಾಯಿತು. ಅವರು ಅರ್ಥಸಹಿತ ಗೀತೆಯ ಸಾವಿರಾರು ಪ್ರತಿಗಳನ್ನು ಸ್ವಂತ ಖರ್ಚಿನಲ್ಲಿ ಮುದ್ರಣಮಾಡಿ ಈಗಲೂ ನೂರಾರು ಜನ ಆಸಕ್ತರಿಗೆಲ್ಲ ಉಚಿತವಾಗಿ ಹಂಚುತ್ತಿದ್ದಾರೆ. ಇಂಥ ಅನುಭವಗಳು ಬಹಳ ಇವೆ.

ಈಗ್ಗೆ ಹದಿನೈದು ವರ್ಷ ಹಿಂದೆ ಭಾರತದಿಂದ ಟರ್ಕಿ ದೇಶಕ್ಕೆ ಪ್ರವಾಸಕ್ಕಾಗಿ ಹೋಗಿದ್ದ ಲೇಖಕ - ಅಂಕಣಕಾರ ಸಮೀದ್ ನಖ್ವಿ ಅವರಿಗೆ ಆಶ್ಚರ್ಯ ಕಾದಿತ್ತು. ಮುಸ್ಲಿಂ ದೇಶವಾದ ಟರ್ಕಿಯ ಪ್ರಧಾನಮಂತ್ರಿ ಃಣಟಜಟಣ ಇಟಜತುಣ ಹೇಳಿದ : ತನಗೆ ವಿಷಮ ಸನ್ನಿವೇಶ ಗಳೊದಗಿದಾಗಲೆಲ್ಲ ಭಗವದ್ಗೀತೆಯಿಂದ ನೆರವು ದೊರೆತಿದೆ ಎಂದು. ಆತ ಸಂಸ್ಕೃತ ಭಾಷೆಯನ್ನು ಕಲಿತು ತನ್ನ ಸ್ವಂತ ಉಪಯೋಗಕ್ಕಾಗಿ ಗೀತೆಯ ಅನೇಕ ಭಾಗಗಳನ್ನು ಅಲ್ಲಿಯ ಸ್ಥಳೀಯ ಭಾಷೆಗೆ ಅನುವಾದ ಮಾಡಿ ಇಟ್ಟುಕೊಂಡಿದ್ದ. ರಾಷ್ಟ್ರದ ರಕ್ಷಣೆಗಾಗಿ ಯುದ್ಧದಲ್ಲಿ ತೊಡಗುವ ಪ್ರಸಂಗಗಳು ಬಂದಾಗ ಆತನಿಗೆ ಗೀತೆಯ ಕರ್ತವ್ಯಾಚರಣೆಯ ಬೋಧನೆ ನೆರವಿಗೆ ಬಂದಿತ್ತು. ಆ ಪ್ರಧಾನ ಮಂತ್ರಿ ಹೇಳಿದ : "I am still translating it for my own self-education (Gita) shows me the means of solvıng certaın political problems. And I keep adding to my translations." ಆತ ರವೀಂದ್ರನಾಥ ಠಾಕೂರರ 'ಗೀತಾಂಜಲಿ'ಯನ್ನೂ ಟರ್ಕಿಷ್ ಭಾಷೆಗೆ ಅನುವಾದ ಮಾಡಿ ಪ್ರಕಟಮಾಡಿದ್ದಾನೆ.

ಮೌಲ್ಯವಂತವಾದ ಜ್ಞಾನಕ್ಕೆ ಮತೀಯ ಅಥವಾ ರಾಜಕೀಯ ಗಡಿಗಳು ಇರುವುದಿಲ್ಲ, ಎನ್ನುವುದಕ್ಕೆ ಇದೊಂದು ಉತ್ತಮ ಉದಾಹರಣೆ.

"ದುರ್ಗೇಶ ನಂದಿನಿ", 'ಆನಂದಮಠ" ಮೊದಲಾದ ಶ್ರೇಷ್ಠ ಬಂಗಾಳಿ ಕಾದಂಬರಿಗಳನ್ನು ಬರೆದ ಬಂಕಿಮಚಂದ್ರ ಚಟರ್ಜಿ ಅವರು ಮೊದಮೊದಲು ವಿಚಾರವಾದಿಗಳಾಗಿದ್ದವರು ಕ್ರಮೇಣ ಅಧ್ಯಯನದಿಂದಲೂ, ಚಿಂತನೆಯಿಂದಲೂ ಆಸ್ತಿಕರಾಗಿ ಪರಂಪರೆಯ ಸಾಹಿತ್ಯದ ಪ್ರಶಂಸಕರಾದರು. ಎಷ್ಟು ಮಟ್ಟಿಗೆ ಅವರು ಸನಾತನ ಧರ್ಮದ ಪ್ರಖರ ಪ್ರತಿಪಾದಕರಾದರೆಂದರೆ, ಅವರು ಅಂತ್ಯಕಾಲದಲ್ಲಿ ಕಾಯಿಲೆ ಮಲಗಿದ್ದಾಗ ಆಗಿನ ಪ್ರಸಿದ್ಧ ವೈದ್ಯ ಮಹೇಂದ್ರಲಾಲ್ ಸರ್ಕಾರ್ ಬಂಕಿಮರಿಗೆ ಹೇಳಿದರು - 'ಔಷಧಿ ತೆಗೆದುಕೊಳ್ಳದಿದ್ದರೆ ನೀವು ಉಳಿಯುವುದಿಲ್ಲ' ಎಂದು. ಬಂಕಿಮಚಂದ್ರರು "ನಾನು ಔಷಧಿ ತೆಗೆದುಕೊಳ್ಳುತ್ತಿದ್ದೀನಲ್ಲ?" ಎಂದರು. "ಎಲ್ಲಿ ಔಷಧಿ?" ಎಂದು ಮಹೇಂದ್ರಲಾಲ್ ಸರ್ಕಾರ್ ಕೇಳಿದಾಗ ಬಂಕಿಮರು ಪಕ್ಕದ ಮೇಜಿನ ಕಡೆಗೆ ಬೆರಳು ಮಾಡಿತೋರಿಸಿದರು. ಅಲ್ಲಿ ಇದ್ದದ್ದು ಭಗವದ್ಗೀತೆ!

ಹಲವು ಸಾವಿರ ವರ್ಷಗಳ ಹಿಂದೆ ಶ್ರೀಕೃಷ್ಣ ನೀಡಿದ ಬೋಧನೆ ಇವತ್ತಿಗೂ ಹೇಗೆ ಲಕ್ಷಾಂತರ ಜನರಿಗೆ ಸಾಂತ್ವನ ಕೊಡುತ್ತಿದೆ ಎಂಬುದಕ್ಕೆ ಮತ್ತೊಂದು ಈಚಿನ ಉದಾಹರಣೆ ನೋಡೋಣ.

ಈಗ್ಗೆ 12 ವರ್ಷ ಹಿಂದೆ ಹಿಮಾಲಯದ ಶಿಖರದಲ್ಲಿ ಕಾರ್ಗಿಲ್ ಯುದ್ಧ ನಡೆಯಿತು. ಟೋಲೊಲಿಂಗ್ ಎಂಬ ಆಯಕಟ್ಟಾದ ಪರ್ವತಪ್ರದೇಶವನ್ನು ಗೆದ್ದುಕೊಳ್ಳುವುದರಲ್ಲಿ ಅತ್ಯಂತ ಶೌರ್ಯವನ್ನು ಪ್ರದರ್ಶಿಸಿದವನು 31 ವರ್ಷದ ಮೇಜರ್ ಪದ್ಮಪಾಣಿ ಆಚಾರ್ಯ. ರಜಪುಟಾನಾ ಸೈನಿಕ ಪಡೆಯವನು. 3 ವರ್ಷ ಹಿಂದೆ ತಾನೆ ಮದುವೆಯಾಗಿದ್ದ. ಇನ್ನು ಮೂರು ತಿಂಗಳಲ್ಲಿ ತಂದೆ ಆಗುವವನಿದ್ದ. ಕಾರ್ಗಿಲ್ ಯುದ್ಧದಲ್ಲಿ ಪ್ರಾಣತೆತ್ತು ಆತ ವೀರಸ್ವರ್ಗ ಸೇರಿದ. ಮರಣಕ್ಕೆ ಒಂದು ವಾರ ಮುಂಚೆ ಆತ ತಂದೆಗೆ ಬರೆದ ಪತ್ರದಲ್ಲಿ ಆತ ಹೇಳಿದ್ದ :

"ಶತ್ರುಗಳ ಮೇಲೆ ಆಕ್ರಮಣಕ್ಕೆ ನಾವು ಸಿದ್ಧರಾಗುತ್ತಿದ್ದೇವೆ. ನೀವು ಯಾರೂ ಚಿಂತೆ ಮಾಡುವುದು ಬೇಡ. ಯುದ್ಧದಲ್ಲಿ ಏನು ಆಗುತ್ತದೆ ಎಂಬುದು ನಮ್ಮ ಕೈಗಳಿಗೆ ಮೀರಿದ್ದು. ಆದರೆ ನಾವು ಸತ್ತರೂ ಉದಾತ್ತ ಗುರಿಗೋಸ್ಕರ ತಾನೆ ! ಭಗವದ್ಗೀತೆಯಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಹೇಳಿಯೇ ಇದ್ದಾನಲ್ಲ – "ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯ ಸೇ ಮಹೀಮ್ । ತಸ್ಮಾದುತ್ತಿಷ್ಠ ಕೌಂತೇಯ, ಯುದ್ಧಾಯ ಕೃತ ನಿಶ್ಚಯಃ" – ಅಂತ. ಸತ್ತರೆ ಸ್ವರ್ಗ, ಗೆದ್ದರೆ ಕೀರ್ತಿ, ರಾಜ್ಯ. ಹೀಗಿರುವಾಗ ಮನಸ್ಸಿಗೆ ಚಿಂತೆ ಏಕೆ?" ಪ್ರಾಣವನ್ನು ಪಣವಾಗಿಟ್ಟು ಯುದ್ಧದಲ್ಲಿ ಹೋರಾಡುವ ಸೈನಿಕರಿಗೂ ಆತ್ಮವಿಶ್ವಾಸವೂ ಶೌರ್ಯವಂತಿಕೆಯೂ ಭಗವದ್ಗೀತೆಯಿಂದ ಲಭ್ಯವಾಗುತ್ತಿರುವುದನ್ನು ನೋಡಿಯಾದರೂ ನಾವು ಭಗವದ್ಗೀತೆಯನ್ನು ಗೌರವಿಸೋಣ.

ಜಗತ್ತಿನ ಇತರ ಚಿಂತನಧಾರೆಗಳು ಕಷ್ಟಪಟ್ಟು ಕಂಡುಕೊಳ್ಳಲು ಯತ್ನಿಸುತ್ತಿರುವ ಜೀವನತತ್ತ್ವಗಳನ್ನು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಭಗವದ್ಗೀತೆ ನಮಗೆ ತಿಳಿಸಿಕೊಟ್ಟಿದೆ.

ಯಾವುದಾದರೂ ದೇಶದ ಅಥವಾ ಜನಾಂಗದ ಪರಿಚಯ ಹೇಳಬೇಕಾದಾಗ ಅದರ ಭೌತಿಕ ಸಾಧನೆ, ಸಮಾಜ ವ್ಯವಸ್ಥೆ, ಸಾಹಿತ್ಯ ಕಲೆ – ಮೊದಲಾದ ಅಂಶಗಳನ್ನು ಪ್ರಸ್ತಾಪಿಸುವುದಾಗುತ್ತದೆ. ಆದರೆ ಇಂತಹ ಅಂಶಗಳಲ್ಲಿ ಮೇಲ್ಮೆ ಸಾಧಿಸಿದ್ದರೂ ಯಾವುದೊ ಒಂದು ನಾಗರಿಕತೆ ಉಳಿಯುತ್ತದೆ ಎಂಬ ಭರವಸೆ ಇಲ್ಲ. ಕಳೆದ ಐದಾರು ಸಾವಿರ ವರ್ಷಗಳಲ್ಲಿ ನಷ್ಟವಾಗಿ ಹೋಗಿರುವ ನಾಲ್ಕಾರು ನಾಗರಿಕತೆಗಳು ಭೌತ ಮಟ್ಟದಲ್ಲಿ ಉನ್ನತಿ ಸಾಧಿಸಿದ್ದವೇ. ಆದರೆ ಅವು ಯಾವುದೂ ಉಳಿದಿಲ್ಲ. ಆದರೆ ಅರಣ್ಯಗಳಲ್ಲಿ ಕುಳಿತು ಉದಾತ್ತ ಚಿಂತನೆ ಮಾಡುತ್ತಿದ್ದ ಋಷಿಮುನಿಗಳು ರೂಪಿಸಿದ ಭಾರತೀಯ ಸಂಸ್ಕೃತಿ ಹತ್ತು ಸಾವಿರ ವರ್ಷಗಳಾದ ಮೇಲೂ ನಷ್ಟವಾಗದೆ ಉಳಿದಿದೆ. ಇದಕ್ಕೆ ಕಾರಣ ವೇದ– ಉಪನಿಷತ್ತುಗಳು ಮತ್ತು ಅವುಗಳ ಸಾರ ರೂಪವಾದ ಭಗವದ್ಗೀತೆ.

ಈಗ್ಗೆ ಐದಾರು ವರ್ಷ ಹಿಂದೆ (2007) ಕಾಶಿಯಲ್ಲಿದ್ದ ಒಂದು ದೇವಸ್ಥಾನಕ್ಕೆ ಸಂಬಂಧಿಸಿದ ಮೊಕದ್ದಮೆಯೊಂದರಲ್ಲಿ ತೀರ್ಪು ನೀಡುತ್ತಾ ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶ ಶ್ರೀವಾಸ್ತವ ಎಂಬುವರು ಪ್ರಾಸಂಗಿಕವಾಗಿ ನಮ್ಮ ದೇಶಕ್ಕೆ ರಾಷ್ಟ್ರಧ್ವಜ, ರಾಷ್ಟ್ರಗೀತೆ ಮೊದಲಾದ ಲಾಂಛನಗಳಿರುವಂತೆ ಭಗವದ್ಗೀತೆಯನ್ನು 'ರಾಷ್ಟ್ರೀಯ ಧರ್ಮಶಾಸ್ತ್ರಗ್ರಂಥ' ವೆಂದು ಪರಿಗಣಿಸಬೇಕು – ಎಂದು ಅಭಿಪ್ರಾಯ ವ್ಯಕ್ತಮಾಡಿದ್ದರು. ಆ ಸಲಹೆಯನ್ನು ಸರ್ಕಾರ ಮಾನ್ಯ ಮಾಡಲಿ ಬಿಡಲಿ, ಜನಮಾನಸದಲ್ಲಂತೂ ಗೀತೆಗೆ ಮೂರ್ಧನ್ಯ ಸ್ಥಾನ ಸಾವಿರಾರು ವರ್ಷಗಳ ಹಿಂದೆಯೇ ಬಂದುಬಿಟ್ಟಿದೆ. ಬಗೆದಷ್ಟೂ ಹೆಚ್ಚುಹೆಚ್ಚು ಬೆಳಕು ಗೀತೆಯಿಂದ ಹೊಮ್ಮುತ್ತದೆ. ಭಗವದ್ಗೀತಾಗಾನಂ ಲೋಗರ – ಚೇತಃಕ್ಲೇಶಗಳ ಕಳೆದು ಶಾಂತಿಯ ಕುಡುಗುಂ – ಎಂಬ ಡಿ.ವಿ.ಜಿ. ಯವರ ಮಾತು ಸ್ಮರಣೀಯ.

ಗೀತೆಯಲ್ಲಿ ನಿರ್ವಹಣಾ ಶಾಸ್ತ್ರದ ಹೊಳಹುಗಳು

– ಡಾ. ಎಂ. ಪ್ರಭಾಕರ ಜೋಶಿ

1. ಭಗವದ್ಗೀತೆಯು ಮೂಲತಃ ಒಂದು ವೇದಾಂತಸಾರ ಗ್ರಂಥವಾಗಿ, ಉಪನಿಷತ್ಸಾರವಾಗಿ ಪರಿಕಲ್ಪಿತವಾದ ಜ್ಞಾನಸಂಕಲನವಾದರೂ, ಅದನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡಿದ್ದಾರೆ. ಅದು ಇನ್ನೂ ಹೊಸ ಹೊಸ ಹೊಳಹುಗಳಲ್ಲಿ ತೀರ ಭಿನ್ನವಾದ ಅನ್ವಯಗಳನ್ನು ಬಿಟ್ಟುಕೊಡುತ್ತಲೇ ಇದೆ. ರಾಜನೀತಿ, ಯುದ್ಧ-ಶಾಂತಿ, ಸ್ವಾತಂತ್ರ್ಯ ಹೋರಾಟ, ಯೋಗ, ಜೀವನ, ಸುಭಾಷಿತ, ಸಮಾಜಶಾಸ್ತ್ರ – ಹೀಗೆ ಬೇರೆ ಬೇರೆ ಕೋನಗಳಿಂದ ನೋಡುವವರಿಗೆ ಆ ಆ ದೃಷ್ಟಿಯ ನೋಟಗಳು ಅಲ್ಲಿ ದೊರಕಿವೆ. ಸಾಹಿತ್ಯ ದೃಷ್ಟಿಯ ವಿಶ್ಲೇಷಕರಿಗೂ, ಅದೂ ಅಲ್ಲಿ ದೊರೆತಿದೆ. ಹೀಗೆ ಗೀತೆ ಒಂದು ಬಹುವರ್ಣ ಮಾಯಾಲೋಕ, ಕೆಲಿಡೋಸ್ಕೋಪ್, ನಿರ್ವಹಣಾಶಾಸ್ತ್ರ (Management) ದೃಷ್ಟಿಯಿಂದ ಗೀತೆಯ ಕೆಲವಂಶಗಳನ್ನು ಗಮನಿಸುವುದು ಈ ಚಿಕ್ಕ ಟಿಪ್ಪಣಿಯ ಉದ್ದೇಶ.

2. ನಿರ್ವಹಣವೆಂದರೇನು ? ಒಂದು ಗುಂಪಿನ ಉದ್ದಿಶ್ಯ ಚಟುವಟಿಕೆಗಳ ವ್ಯವಸ್ಥಿತವಾದ ಆಡಳಿತಾತ್ಮಕ, ಸಂವಿಧಾನಾತ್ಮಕ ಮುನ್ನಡೆಸುವಿಕೆ. ಲಭ್ಯ ಸಂಪನ್ಮೂಲ, ಮಾನವಶಕ್ತಿ, ಯಂತ್ರ ತಂತ್ರಾದಿಗಳನ್ನು ಒಂದು ಘಟಕವಾಗಿಸಿ ಉದಿಷ್ಟ ಫಲಕ್ಕಾಗಿ ದುಡಿಯುವಂತೆ ಮಾಡುವ ವ್ಯವಸ್ಥೆ. ಯೋಚನೆ, ಯೋಜನೆ, ನಿರ್ಣಯ, ಅನ್ವಯ, ನಿರ್ದೇಶನ, ಜನಸಂಪತ್ತಿನ ವ್ಯವಸ್ಥೆ, ಸಮನ್ವಯ, ಪ್ರೇರಣೆ, ಸಮಸ್ಯೆ ನಿವಾರಣೆ, ನಿಯಂತ್ರಣ, ಗುರಿಗಳ ನಿರ್ಧಾರ, ಸಂಶೋಧನೆ, ಮೌಲ್ಯಮಾಪನ, ವಿಮರ್ಶೆ, ಪರಿಷ್ಕರಣ – ಹೀಗೆ ಹತ್ತಾರು ಮುಖಗಳು, ಕೆಲಸಗಳೂ, ವಿಭಾಗಳೂ ನಿರ್ವಹಣಾಶಾಸ್ತ್ರದಲ್ಲಿವೆ. ಮಾನವ ಜೀವನದಷ್ಟೇ ಈ ಶಾಸ್ತ್ರವೂ ಹಳತು. ಮಾನವನೇಕೆ ? ಪಕ್ಷಿಪ್ರಾಣಿಗಳಲ್ಲೂ ಉಂಟು. ಉದಾ : ಜೇನುಗೂಡಿನಲ್ಲಿ, ಪಕ್ಷಿ ಪ್ರಾಣಿ ಸಮೂಹದಲ್ಲಿ, ಇರುವೆಗಳಲ್ಲಿ ಕಾಣುವ ಸಾಮುದಾಯಿಕ ಮ್ಯಾನೇಜ್‌ಮೆಂಟ್.

ಗೀತೆಯಲ್ಲಿ ಈ ಶಾಸ್ತ್ರದ ಹೊಳಹು ಏನಿದೆ ಎಂದು ಗಮನಿಸಿದರೆ ಕಾಣುವ ವಿಚಾರ – ಗೀತೆ ಮುಖ್ಯವಾಗಿ ಮೂರು ರೀತಿಗಳಲ್ಲಿ ನಿರ್ವಹಣವನ್ನು ಉಪದೇಶಿಸಿದೆ.

1) ಆಪತ್ತಿನ ನಿರ್ವಹಣೆ, ತುರ್ತುಸಮಸ್ಯಾ ನಿವಾರಣೆ (Crisis Management)

2) ಪ್ರೇರಣೆ – Motivation – ಇದರಲ್ಲಿ ಆಧ್ಯಾತ್ಮಿಕ, ಲೌಕಿಕ, ನೈತಿಕ, ಧಾರ್ಮಿಕ (ವರ್ಣ ಆಶ್ರಮ ಸಹಿತ) ವಿಚಾರಗಳ ಸೂಚಕ ಪ್ರೇರಣ ವಿಚಾರಗಳು. 3) ಸ್ವನಿವರ್ಹಣೆ (Self Management)ನ ಪಾಠಗಳು. ಇವುಗಳಿಗೆ ಅಂತರ್ಗತವಾಗಿ ವಿಚಾರ ನಿರ್ವಹಣೆ, ಜ್ಞಾನನಿರ್ವಹಣೆ, ಚರ್ಚೆ, ವಿಮರ್ಶೆ ಮೊದಲಾದುವು ಬಂದಿವೆ.

3. ಮೊದಲಾಗಿ ಅರ್ಜುನನಿಗೆ ಬಂದದ್ದು ವಿಷಾದರೂಪಿ ಸಂದೇಹ, ಗೊಂದಲ, ಪಾಪಭೀತಿ, ಕಿಂಕರ್ತವ್ಯ ದಿಗ್ಭ್ರಮೆ, ಬಂಧು-ಪ್ರೇಮ – ಇವೆಲ್ಲ ಕೂಡಿದ ತುರ್ತು ಸಂಕಷ್ಟ (Crisis) ತಪ್ಪಲ್ಲ. ಒಳ್ಳೆಯವರಿಗೇ ಇದೆಲ್ಲ ಬರುವುದು, ಧಾರ್ಮಿಕರಿಗೇ ಬರುವುದು. ದುರ್ಯೋಧನನಿಗೆ ಇದು ಬಂದಿಲ್ಲ, ಸರಿ, ಆದರೆ – ಕೃಷ್ಣ ಹೇಳುವ ಸಮಾಧಾನ (Solution) ಇದು :

ಇದು ಪ್ರಜ್ಞಾವಾದ (ಪ್ರಜ್ಞಾವಾದಾಂಶ್ಚಭಾಷಸೇ) ತಿಳಿದವನಂತೆ, ತಾನೇ ಎಲ್ಲದಕ್ಕೆ ಹೊಣೆ ಎಂಬಂತೆ ಹೊತ್ತುಕೊಂಡು ಮಾತಾಡುವುದು, ಪರಿಸ್ಥಿತಿ, ಒಟ್ಟು ಸಂದರ್ಭ, ಕರ್ತವ್ಯ, ಸಾಮಾಜಿಕನೀತಿ, ಇವುಗಳ ನೆಲೆಯಲ್ಲಿ ಸಾಮೂಹಿಕವಾಗಿ ತಾನು ಮಾಡಬೇಕಾಗಿರುವ ಯುದ್ಧದ ಬಗೆಗೆ ಅತಿ ಕನಿಕರ ಸ್ವಾನುಕಂಪ (Sclfpity) ವ್ಯರ್ಥ ಮತ್ತು 'ಅಸ್ಥಾನ'ದ ಕಾರುಣ್ಯ ಮೂಲಕ ಕರ್ತವ್ಯ ಲೋಪ, ವ್ಯರ್ಥ ಜಿಜ್ಞಾಸೆ ಧರ್ಮ ಸಂಮೂಢಚೇತಾಃ – ಅದೂ ತೀರ ಅವೇಳೆಯಲ್ಲಿ, ಕೊನೆಯ ಗಳಿಗೆಯಲ್ಲಿ. ಅದಕ್ಕೆಯೇ ಶ್ರೀಕೃಷ್ಣ ಹೇಳುವುದು – ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ? ಎಲ್ಲಿಂದ ಬಂತಪ್ಪ ಇದು. ಈ ವಿಷಮಕಾಲದಲ್ಲಿ, ಪಕ್ಷದ ಆತ್ಮವಿಶ್ವಾಸ ವರ್ಧಿಸಬೇಕಾದಾಗ, ಹೀಗೆ ನೀನು ಪರಾವೃತ್ತನಾದರೆ? ಅನಾರ್ಯಜುಷ್ಟ ಅಸ್ವ ರ್ಗ್ಯ ಅಕೀರ್ತಿಕರವಾಯಿತಲ್ಲ ! ಹೀಗೆ ಚಾಟಿ ಏಟಿನಂತೆ ಬಡಿದೆಬ್ಬಿಸಿ, ಪ್ರೀತಿಯಿಂದ ಬೋಧಿಸಿ ಬಂದ ಸಂಕಟನಿರ್ವಹಣೆ ಮಾಡುತ್ತಾನೆ ಶ್ರೀಕೃಷ್ಣ. ಮೊದಲು ಅರ್ಜುನನ ಸಂಕಟಕ್ಕೆ ಪೂರ್ಣ ನಿವಾರಣೆ, ಗುಡಿಸಿಹಾಕುವಿಕೆ, ಆ ಬಳಿಕ ಸವಿವರ ಸಮಾಧಾನ, ವಿಶಾಲ ಪರಿವೇಶದಲ್ಲಿ ತಾತ್ವಿಕ ವಿವರಯುಕ್ತ ಬೋಧೆ, Emergency and Long term Solution.

4. ಗೀತೆಯ ಉದ್ದಕ್ಕೂ ಇರುವುದು – ಪ್ರೇರಣೆ, ಪ್ರೋತ್ಸಾಹ, ಹೆದರಬೇಡ, ಕಂಗೆಡಬೇಡ, ನಾನಿದ್ದೇನೆ, ಮುನ್ನುಗ್ಗು ಎಂಬ ದೈವಿಕ ಸ್ಫೂರ್ತಿ, ಊತುಟಿಜ ಟಂಣುತಚಿಣ- ಾಟಿಂ ಜಿಂಡಿಥಿಜ, ಹೀಗಾಗಿಯೇ – ಗೀತೆ ರಾಜಕಾರಣಿಗಳಿಂದ ಹಿಡಿದು ಯೋಗಿಗಳ ತನಕ, ರಾಜನಿಂದ ಹಿಡಿದು ಸಂನ್ಯಾಸಿಯವರೆಗೆ, ಕಾಲ, ದೇಶಾತೀತವಾಗಿ ವಿವಿಧ ಪ್ರೇರಣೆಗಳನ್ನು ನೀಡುತ್ತಾ ಬಂದಿದೆ, ಹಿಂದೂ, ಇಂದೂ, ಮುಂದೂ. ಹತೋವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾಭೋಕ್ಷ್ಯಸೇ ಮಹೀಂ; ಸುಖಿನಃ ಕ್ಷತ್ರಿಯಾಃಪಾರ್ಥ ಲಭಂತೇ ಯುದ್ಧಮೀದೃಶಮ್ 'ಸಮದುಃಖ ಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ' 'ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ' 'ನ ತ್ವಂ ಶೋಚಿತುಮರ್ಹಸಿ' 'ಯೋಗಸ್ಥಃ ಕುರು

ಕರ್ಮಾಣಿ' 'ಮಾಮನುಸ್ಮರ ಯುದ್ಧಚ' 'ನೇಹಾಭಿಕ್ರಮನಾಶೋಸ್ತಿ..' ಅಪಿಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಗ್ ಸಾಧುರೇವ ಸಮಂತವ್ಯಃ ! – ಹೀಗೆ ಎಲ್ಲೆಡೆ ಆಶ್ವಾಸನೆ, (Assurance) ಪ್ರೋತ್ಸಾಹ (Encouragement) ಪ್ರೇರಣೆ (Motivation) ತುಂಬಿ ಕಾಣುತ್ತದೆ ಗೀತೆಯ ಪುಟಪುಟದಲ್ಲಿ ಎನ್ನಬಹುದು. ಗೀತೆ Motivation ನ ಕೈಪಿಡಿ ಎನ್ನಬಹುದು.

5. ಅರ್ಜುನನಿಗೆ ತನ್ನನ್ನು ತಾನು ಹೇಗೆ ನಿರ್ವಹಿಸಿಕೊಳ್ಳಬೇಕು ಎಂಬ ಸಮಸ್ಯೆಯೇ ಇಲ್ಲಿ ಮೂಲ. Problem of Self Management ಅದಕ್ಕುತ್ತರವಾಗಿ ಗೀತೆಯಲ್ಲಿ ಅನೇಕ ಅಂಶಗಳಿವೆ. ಅಲ್ಲಲ್ಲಿ ಅರ್ಜುನನ ಪ್ರಶ್ನೆಗಳು – ಶಿಷ್ಯಸ್ತೇಹಂ ಶಾಧಿಮಾಂ ತ್ವಾಂ ಪ್ರಪನ್ನಂ (ನಿನ್ನ ಶಿಷ್ಯ ನಾನು, ಶರಣನು ತಿಳಿಹೇಳು) ಸ್ಥಿತ ಪ್ರಜ್ಞಸ್ಯ ಕಾ ಭಾಷಾ (ಸ್ಥಿತಪ್ರಜ್ಞನ ಲಕ್ಷಣ ಏನು?) ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ (ವಿರುದ್ಧವೆಂಬಂತಿರುವ ಮಾತುಗಳಿಂದ ಗೊಂದಲ ವಾಗಿದೆ), ಸಂನ್ಯಾಸ, ಕರ್ಮ ಗಳಲ್ಲಾವುದು ಶ್ರೇಷ್ಠ ? ಚಾಂಚಲ್ಯ ಯಾಕೆ ಬರುತ್ತದೆ ? ಪಾಪಾಚರಣೆಯ ಮೂಲವೇನು ? ನಿನ್ನ ವಿಭೂತಿ ರೂಪಗಳು ಯಾವುವು ? – ಹೀಗೆ ಉದ್ದಕ್ಕೂ ಪ್ರಾಮಾಣಿಕ ಜಿಜ್ಞಾಸೆ. ಅದಕ್ಕೆ ಕೃಷ್ಣನ ಪ್ರಥಕ್ ಪ್ರಥಕ್ ಉತ್ತರ. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ, ಸಾಂಖ್ಯ, ಧ್ಯಾನ, ವಿಜ್ಞಾನ, ವಿಭೂತಿಯೋಗ, ವಿಶ್ವರೂಪದರ್ಶನ – ಹೀಗೆ ಜ್ಞಾನದ ವಿತರಣೆ, Knowledge Management.

ಇದರ ಪರಮೋಚ್ಚ ಬಿಂದು – ಕೇಳುಗನಿಗೆ, ಶಿಷ್ಯನಿಗೆ ನೀಡಿದ ಸ್ವಾತಂತ್ರ್ಯ – 'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾಕುರು' ಎಲ್ಲವನ್ನೂ ಸರಿಯಾಗಿ ವಿಮರ್ಶಿಸಿ ಹೇಗೆ ತೋರುತ್ತದೋ ಹಾಗೆ ಮಾಡು ! ಹೇರಿಕೆ ಇಲ್ಲ, ಇದೇ ನಿರ್ವಹಣಾ ರಹಸ್ಯ.

ಜೊತೆಗೆ ಒಂದು ಅಲಿಪ್ತಭಾವದ ಎಳೆ, ಉದ್ದಕ್ಕೂ ಕಾಣುತ್ತದೆ. 'ಯೋಗಸ್ಥ ಕುರು ಕರ್ಮಾಣಿ ಸಂಗಂಸ್ತ್ಯಕ್ತ್ವಾ' – ಮಾಫಲೇಷು ಕದಾಚನ' – ಯೋಗ ದೃಷ್ಟಿಯಿಂದ, ಸಮಚಿತ್ತದಿಂದ, ಫಲದಲ್ಲಿ ಅಭಿನಿವೇಶವಿಲ್ಲದೆ ಕರ್ಮವನ್ನು ಗೈಯಬೇಕು. ಹೀಗಿದ್ದರೆ ನಿರಾಸೆ ಆಗುವುದಿಲ್ಲ. ಕರ್ಮಕ್ಕೆ ಪೂಜೆಯ ಸ್ಥಾನ – ಕರ್ಮಯೋಗ. ಸ್ವಕರ್ಮಣಾನಮಭ್ಯರ್ಚ ಸಿದ್ಧಿಂ ವಿಂದತಿ ಮಾನವಃ" ಎಲ್ಲದಕ್ಕೂ ಪ್ರೇರಕವಾದುದನ್ನೇ ಜಗತ್ತಿನಲ್ಲಿ ಕಂಡು, ಸ್ವಕರ್ಮದಿಂದ ಅದನ್ನು ಪೂಜಿಸಿದಾತನಿಗೆ ಯಶಸ್ಸು ಸಿದ್ಧಿ. ಗೀತೆಯ ಮಧ್ಯಭಾಗದಲ್ಲಿ ವಿಶ್ವರೂಪ. ಅದರ ಅರ್ಚನೆ, ಸೇವೆಯೇ ನಿಜದ ಜೀವನ ನಿರ್ವಹಣೆ, ಖಜಿಜ ಒಚಿಟಿಚಿರಿಜಟಜಟಣ ಎಂಬ ರೂಪಕ, ಧ್ವನಿ.

ಇದರೊಂದಿಗೆ – ಆಹಾರ, ವ್ಯಾಯಾಮ, ಯುಕ್ತಾಹಾರ ವಿಹಾರ ವಿವೇಕ, ಯಜ್ಞದ ವಿವಿಧ ರೂಪಗಳ ಉಪದೇಶ – ಹೀಗೆ ಜೀವನ ವಿವರದ ವಿವರಗಳು

ಬರುತ್ತವೆ. ಲೌಕಿಕ ಅಧ್ಯಾತ್ಮಗಳ ಸಮನ್ವಿತ ವ್ಯವಸ್ಥಿತ ನಿರ್ವಹಣಕ್ಕೆ ಬೇಕಾದ ಜ್ಞಾನ ಬೀಜದ ವಿಸ್ತರಣವೇ ಗೀತೆ.

ಕೃಷ್ಣನ ಯೋಗೇಶ್ವರತ್ವ – ಜ್ಞಾನ, ನಾಯಕತ್ವ, ಔನ್ನತ್ಯ, ಅರ್ಜುನನ ಧನುರ್ಧರತ್ವ, ಕ್ರಿಯಾಶಕ್ತಿ, ಸಂಪನ್ಮೂಲ, ಯತ್ನ ಸೇರಿದಾಗಲೇ – ಶ್ರೀ ವಿಜಯ, ಐಶ್ವರ್ಯ ಶಾಶ್ವತವಾದ ನೀತಿಗಳ ಸಿದ್ಧಿ.

ಯತ್ರಯೋಗೇಶ್ವರಃ ಕೃಷ್ಣೋ ಯತ್ರಪಾರ್ಥೋ ಧನುರ್ಧರಃ ।
ತತ್ರಶ್ರೀ ತತ್ರಶೀರ್ವಿಜಯೋಭೂತಿ ರ್ಧ್ರುವಾನೀತಿರ್ಮತಿರ್ಮಮ ॥

ಇದು ಸಮಗ್ರ ಸಾತ್ತ್ವಿಕ ಮ್ಯಾನೇಜ್‌ಮೆಂಟಿನ ದಿವ್ಯಸೂತ್ರ.

‘ಭಗವದ್ಗೀತೆ’ ತಿಳಿಸುವ ಕಾರ್ಯ-ಕಾರಣ ಸಂಬಂಧ

– ದ್ವಿವೇದೀವಿದ್ವಾನ್ ಕೊರ್ಗಿ ವೆಂಕಟೇಶ್ವರ ಉಪಾಧ್ಯಾಯ

“ಭಗವದ್ಗೀತಾ ಕಿಂಚಿದಧೀತಾ ಗಂಗಾಜಲಲವಕಣಿಕಾ ಪೀತಾ ।
ಸಕೃದಪಿ ಯಸ್ಯ ಮುರಾರಿ ಸಮರ್ಚಾ ತಸ್ಯ ಯಮಃ ಕಿಂ ಕುರುತೇ ಚರ್ಚಾಮ್ ॥”

‘ಭಗವದ್ಗೀತೆಯನ್ನು ಒಂದಿನಿತಾದರೂ ಓದಿದ್ದರೆ, ಗಂಗಾ ಜಲವನ್ನು ಒಂದು ಹನಿಯಾದರೂ ಕುಡಿದಿದ್ದರೆ, ಒಮ್ಮೆಯಾದರೂ ಮುಕುಂದನ ಪಾದಾರವಿಂದವನ್ನು ಪೂಜಿಸಿದ್ದರೆ, ಆತನೊಂದಿಗೆ ಯಮನ ವಾದವಿಲ್ಲ’ – ಎಂಬ ಪ್ರಸಿದ್ಧ ಉಕ್ತಿಯಿದೆ.

“ಕಷ್ಟವನ್ನು ಕಳೆದುಕೊಳ್ಳುವುದಕ್ಕೆ, ಕರ್ಮ ರಹಸ್ಯವನ್ನು ತಿಳಿದುಕೊಳ್ಳುವುದಕ್ಕೆ, ಕತ್ತಲ ಕೋಣೆಯಿಂದ ಹೊರಬರುವುದಕ್ಕೆ, ಜೀವನ ಜ್ಯೋತಿರ್ಮಯವಾಗುವುದಕ್ಕೆ, ಹೃದಯ ಹಗುರಾಗುವುದಕ್ಕೆ, ಸಂಸಾರ ಸಹ್ಯವಾಗುವುದಕ್ಕೆ, ಚಿಂತೆಯ ಹುತ್ತವಾದ ಚಿತ್ತವು ಪ್ರಸನ್ನತೆಯ ಪಯೋನಿಧಿಯಾಗುವುದಕ್ಕೆ, ನೂರಾರು ಶಾಸ್ತ್ರಗಳನ್ನು ಓದಬೇಕಾಗಿಲ್ಲ. ಭಗವದ್ಗೀತೆಯ ಅರ್ಥವನ್ನು ಪರಿಭಾವಿಸಿದರೆ ಸಾಕು. ಗೀತೆ ಕಷ್ಟದ ಕಡಲನ್ನು ದಾಟಿಸುವ ಹಡಗು. ಅರಿವಿರದ ಕತ್ತಲಲ್ಲಿ ಕಂಗೆಟ್ಟು ಹಾದಿತಪ್ಪಿದವರಿಗೆ ತಪ್ಪು ಹಾದಿ ಹಿಡಿದವರಿಗೆ ಗುರಿಯತ್ತ ದಾರಿತೋರುವ ದೀಪಶಿಖೆ. ಭವದ ಬೇಗೆಯಿಂದ ಬೆಂದು ನೊಂದವರಿಗೆ ತಂಪೆರೆವ ಬೆಳದಿಂಗಳು. ಜೀವರಿಗೆ ಪ್ರಕೃತಿಗನುಗುಣವಾಗಿ ಚಿಕಿತ್ಸೆಯನ್ನು ನೀಡುವ ಸರ್ವರೋಗ ರಸಾಯನ. ಇಂತಹ ಗೀತೆಗೆ ಬಾಲಗಂಗಾಧರ ತಿಲಕರು ಇಟ್ಟ ಹೆಸರು “ಕರ್ಮ ಯೋಗಶಾಸ್ತ್ರ”.

ಆತನೊಬ್ಬ ಆಳು, ಬೆಳಗಿನಿಂದ ಬೈಗಿನ ತನಕ ದುಡಿಯುತ್ತಾನೆ. ಮಳೆ ಬಿಸಿಲುಗಳಿಗೆ ಮೈಗೊಡುತ್ತಾನೆ. ಅವನ ಕೈಗೆ ಸಿಕ್ಕುವುದೂ ದಕ್ಕುವುದೂ ಹತ್ತೋ ನೂರೋ ರೂಪಾಯಿಯು. ಮಡದಿ, ಮಕ್ಕಳ ಹೊಟ್ಟೆಗೋ ಹಿಟ್ಟಿಗೋ ಸಾಲದ ಮುಷ್ಟಿ. ಸಂಪಾದನೆ ಅಷ್ಟೇ. ಆತನೊಬ್ಬ ಅಧಿಕಾರಿ. ತಿರುಗುವ ಗಾಳಿ ಬೀಸಣಿಗೆಯ ಕೆಳಗೆ ಮಾಳಿಗೆಯಲ್ಲಿ ಮೆತ್ತನೆಯ ಪೀಠದಲ್ಲಿ ಕುಳಿತು ಹತ್ತಾರು ಪತ್ರಗಳಿಗೆ ಸಹಿ ಹಾಕುತ್ತಾನೆ. ಹಣೆಯಲ್ಲಿ ಹನಿ ಬೆವರಿಲ್ಲ. ಮಳೆ ಬಿಸಿಲುಗಳು ಮೈ ಮುಟ್ಟುವುದಿಲ್ಲ. ಆದರೆ ಅವನ ಗಳಿಕೆ ಸಾವಿರ ಸಾವಿರ ಸಂಖ್ಯೆ. ಬೆವರಿಳಿಸಿ ದುಡಿಯುವವನಿಗೆ ಬಡತನ. ಹನಿಬೆವರಿಳಿಸದವನಿಗೆ ಸಿರಿತನ. ಆದರೂ ಈ ಆಳು ಆತನನ್ನು ಕಂಡು ಕರುಬುವುದಿಲ್ಲ. ಸಿಟ್ಟಿಗೇಳುವುದಿಲ್ಲ ಏಕೆ? ಇದು ಲೋಕ ದೃಶ್ಯ.

ವ್ಯಕ್ತಿಯೊಬ್ಬ ಅನುಭವಿಸುವ ಆಪದ್ವಿಪತ್ತು, ಕಷ್ಟಕಾರ್ಪಣ್ಯ, ದುಃಖದುಮ್ಮಾನ, ಭೋಗಭಾಗ್ಯ, ಸೌಖ್ಯ ಸೌಕರ್ಯ, ಸಂಪತ್ಸಮೃದ್ಧಿಗಳು ಅವನವನ ಪೂರ್ವ ಜನ್ಮಾರ್ಜಿತ ಕರ್ಮದಿಂದ ಬರುವಂತಹವು ಎಂಬ ಬಲವಾದ ನಂಬುಗೆಯೇ ಕಾರಣ. ಆತನ ಅಸೂಯಾಪನಯನಕ್ಕೂ, ದ್ವೇಷ ದಹನಕ್ಕೂ, ಸ್ವಾತ್ಮಸಮಾಧಾನಕ್ಕೂ ಈ ಕರ್ಮ ಸಿದ್ಧಾಂತವೇ ಹೇತು. ದೇವರು-ಕರ್ಮ-ಪುನರ್ಜನ್ಮ ಈ ಮೂರು ಒಟ್ಟಿಗೇ ಇರುವಂತಹವು. ಬಿತ್ತಿದಂತೆ ಬೆಳೆ. ನಿನ್ನೆಯ ಬೆಳೆ ಇಂದಿನ ಉಣಿಸು. ಇಂದಿನ ಬೆಳೆ ನಾಳೆಯ ಉಣಿಸು. "ನಾಭುಕ್ತಂ ಕ್ಷೀಯತೇ ಕರ್ಮ" ಅವರು ಬೇಯಿಸಿದ್ದು ಅವರಿಗೆ. ಕರ್ಮವನ್ನು ಅನುಭವಿಸಿಯೇ ಮುಗಿಸಬೇಕು. ಜೋಳ ಬೆಳೆದವ ರಾಗಿಯನ್ನು ಉಣ್ಣಲಾರ. ಗಂಜಿ ಬೇಯಿಸಿ ಅನ್ನವನ್ನುಣ್ಣಬೇಕೆಂದರೆ ಹೇಗೆ? ಕದನ್ನವನ್ನಟ್ಟು ಪರಮಾನ್ನವನ್ನು ಬಯಸುವಂತಿಲ್ಲ. ಇದೇ ಪ್ರಾರಬ್ಧ. ಇದೇ ಪ್ರಾಚೀನ. "ಸುಖಸ್ಯ ದುಃಖಸ್ಯ ನ ಕೋಪಿ ದಾತಾ ಪರೋದದಾತೀತಿ ಕುಬುದ್ಧಿರೇಷಾ । ಅಹಂ ಕರೋಮೀತಿ ವೃಥಾಭಿಮಾನಃ ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ ॥"

ಸುಖವೋ ದುಃಖವೋ ಬೇರೊಬ್ಬರಿಂದುಂಟಾಗುತ್ತದೆಂಬುದು ದುರುಕ್ತಿ. ನನ್ನಿಷ್ಟದಂತೆ ಎಲ್ಲವೂ ನಡೆಯುತ್ತದೆಂಬುದು ದುರಹಂಕಾರ. ಜೀವರ ಬಾಳನ್ನು ಕರ್ಮ ಆಳುತ್ತದೆ. "ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈಃ ಗುಣೈಃ"

ನಾವಿರುವ ಪ್ರಪಂಚ ಹಾಗೂ ಸುತ್ತಣ ಪರಿಸರವನ್ನು ಕಿರುಗಣ್ಣಿನಿಂದ ನಿರುಕಿಸಿದರೆ ಮೇಲಿನ ಮಾತಿನ ಅಂತರಂಗದ ಅರಿವಾಗುತ್ತದೆ.

ಬಡ್ಡಿಯ ವ್ಯವಹಾರದಿಂದ ಬೊಜ್ಜನ್ನು ಬೆಳೆಸಿಕೊಂಡ ಬಕಾಸುರರು, ತಂದೆ ಗಳಿಸಿದ ಸಂಪತ್ತನ್ನು ಗುಣಯೋಗ್ಯತೆಗಳಿಲ್ಲದೇ ದುರ್ವ್ಯಯ ಮಾಡುವ ಮಕ್ಕಳು, ಸುಳ್ಳು, ಮೋಸ, ಲಂಚ, ವಂಚನೆಗಳಿಂದ ಆಢ್ಯ ಪದವಿಯನ್ನು ಪಡೆಯುವವರು, ಪ್ರಾಮಾಣಿಕತೆಗಾಗಿ ಪೀಡೆಗೊಳಗಾದವರು, ಸತ್ಯಕ್ಕಾಗಿ ಸೆರೆಮನೆ ಸೇರಿದವರು, ನ್ಯಾಯಕ್ಕಾಗಿ ನಿರ್ದಯತೆಗೆ ಆಹುತಿಯಾದವರು, ಉದಾರಿಗಳಾಗಿ ಭಿಕಾರಿಯಾದವರು ನಮ್ಮ ಕಣ್ಣಮುಂದೆ ಕಾಣಿಸುತ್ತಾರೆ. ಏಕೆ ಹೀಗೆ ಎಂದರೆ ಅದಕ್ಕಿರುವ ಉತ್ತರ ಒಂದೇ : ಜನ್ಮಾಂತರದ ಕರ್ಮ.

ಭೌತಿಕ ಪ್ರಪಂಚದಲ್ಲಿದ್ದ ಕಾರ್ಯಕಾರಣ ಸಂಬಂಧವು ನಿತ್ಯ ಹಾಗೂ ಅನಿವಾರ್ಯವೆಂಬ ನಿಯಮವೇ ನೈತಿಕ ಪ್ರಪಂಚದಲ್ಲಿ ಕರ್ಮವಾದವೆನಿಸುತ್ತದೆ.

ಈ ವಾದವನ್ನು ಒಪ್ಪದೇ ಹೋದರೆ ಸಮಾನ ಸ್ಥಿತಿಗತಿ ಯೋಗ್ಯತಾ ಸಂಪನ್ನರೆಲ್ಲ ಸಮಾನ ಸುಖಿಗಳಾಗಬೇಕಾಗುತ್ತದೆ. ಆದರೆ ನಾವು ಕಾಣುವ ಪ್ರಪಂಚ ಹೀಗಿಲ್ಲ. ಆರೋಗ್ಯವಂತ ದಂಪತಿಗಳಿಗೆ ಕುರುಡ-ಕುಂಟ-ರೋಗಿಷ್ಠ ಸಂತಾನ, ಧೀಮಂತರಿಗೆ ಮಂದಬುದ್ಧಿಯ ಮಕ್ಕಳು, ಶಿಷ್ಟರಿಗೆ ದುಷ್ಟಪುತ್ರರು, ಶೀಲವಂತರ ಮಕ್ಕಳು ನಡತೆಗೆಡುವುದು

– ಈ ಮುಂತಾದ ಸಂಗತಿಗಳು ನಾವು ಕರ್ಮವಾದವನ್ನು ಒಪ್ಪುವಂತೆ ನಿರ್ಬಂಧಿಸುತ್ತವೆ. ಧೃತರಾಷ್ಟ್ರನ ಆದೇಶದಂತೆ ದ್ಯೂತಕ್ಕೆ ಕರೆಯಲು ಬಂದ ವಿದುರನಲ್ಲಿ ಯುಧಿಷ್ಠಿರ ಹೇಳಿದ ಮಾತು. "ದೈವಂ ಹಿ ಪ್ರಜ್ಞಾಂ ಮುಷ್ಣಾತಿ" ಪ್ರಾಚೀನ ಕರ್ಮ ಎಂತಹವರ ಮತಿಗೂ ಮಂಕು ತರುತ್ತದೆ. ಕರ್ಮದ ಶಕ್ತಿ ಅಂತಹುದು.

ನಮ್ಮ ಈಗಿನ ಸ್ಥಿತಿಗತಿಗಳಿಗೆ ಕಾರಣವಾದ ಜೀವರಿಗೆ ಒಂದಿನಿತೂ ಸ್ವಾತಂತ್ರ್ಯವನ್ನೂ ಕೊಡದ ಈ ಕರ್ಮವನ್ನು ಕಟ್ಟಿಕೊಂಡು ಆಗಬೇಕಾದುದೇನು? ಕರ್ಮವನ್ನೇ ಬಿಟ್ಟುಬಿಡೋಣವೆಂದರೆ ನಾವು ಕರ್ಮವನ್ನು ಬಿಡಬಹುದೋ ಏನೋ ಕರ್ಮವಂತೂ ನಮ್ಮನ್ನು ಬಿಡುವುದಿಲ್ಲ.

"ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್" ಯಾವ ಕೆಲಸವನ್ನೂ ಮಾಡದೇ ಸುಮ್ಮನುಳಿಯುವುದು ಯಾರಿಂದಲೂ ಸಾಧ್ಯವಿಲ್ಲ. "ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ" ಏನೂ ಮಾಡದೇ ಸುಮ್ಮನುಳಿಯುವುದಕ್ಕೆ ಸಾಧ್ಯವಿಲ್ಲವೆಂದ ಮೇಲೆ ಏನು ಮಾಡಬೇಕೋ ಅದನ್ನೇ ಮಾಡಬೇಕಾದುದು ವಿಹಿತ.

"ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ ।
ನ ಪಾಪಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ ॥"

ಎಲ್ಲರಿಗೂ ಪುಣ್ಯಕರ್ಮದ ಫಲಬೇಕು, ಪುಣ್ಯಬೇಡ. ಪಾಪದ ಫಲವನ್ನು ಯಾರೂ ಬಯಸುವುದಿಲ್ಲ. ಆದರೆ ಪಾಪ ಮಾಡುವುದನ್ನು ಬಿಡುವುದಿಲ್ಲ. ಇದು ಸಂಸಾರಿಗಳ ಸಾಮಾನ್ಯ ಸ್ಥಿತಿ.

ಕಬ್ಬು ಕಹಿಯಾಗುವುದಿಲ್ಲ. ಅಮೃತ ವಿಷವಾಗುವುದಿಲ್ಲ. ಹಾಲು ಹುಳಿಯಾಗಿರುವುದಿಲ್ಲ. "ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ" ಲೇಸ ಮಾಡಿದವ ನಾಶವಾಗುವುದಿಲ್ಲ. ನಮ್ಮ ತಲೆಗೆ ನಮ್ಮದೇ ಕೈ. ನಾವೇ ನಮ್ಮ ಬಾಳಶಿಲ್ಪಿಗಳು. "ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ" ನನಗೆ ನಾನೇ ನೆಂಟ. ನನಗೆ ನಾನೇ ಶತ್ರು. ನಾನು ಒಳಿತನ್ನು ಮಾಡಿದರೆ ನನಗೂ ಒಳಿತಾಗುತ್ತದೆ. "ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ" "ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ" ದೇಶ–ಕಾಲ–ಪಾತ್ರ ವರ್ಣವರ್ಗೋಚಿತವಾದ ಕರ್ಮವನ್ನೇ ಮಾಡಬೇಕು. ಮನಬಂದಂತೆ ಗೈದರೆ ಮಾಧವ ಮೆಚ್ಚ. ಮೀನು ಬದುಕುವುದಕ್ಕೆ ಬೇಕಾದುದು ನೀರು; ಹಾಲಲ್ಲ.

ಕೋಗಿಲೆ ಹಾಡಬೇಕು, ನವಿಲು ನರ್ತಿಸಬೇಕು, ಹಾವು ಹೆಡೆಯಾಡಿಸಬೇಕು, ಹಕ್ಕಿ ಹಾರಬೇಕು, ಜಿಂಕೆ ಓಡಬೇಕು. ಇದು ಸಹಜ. ಹಾಡುವವ ಕುಣಿದರೆ, ಕುಣಿಯುವವ ಹಾಡಿದರೆ ಆಭಾಸ, ಅನರ್ಥ. "ಯೋಗಃ ಕರ್ಮಸು ಕೌಶಲಮ್" ಕರ್ಮ ಒಂದು ಕ್ರೀಡೆಯಾಗಬೇಕೇ ವಿನಾ ಪೀಡೆಯಾಗಕೂಡದು.

ಕರ್ಮವು ಬಂಧಕವೋ ಮೋಚಕವೋ ಎಂದರೆ ಎರಡೂ ಹೌದು. “ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ” ಸಮರ್ಪಣ ಭಾವವಿಲ್ಲದೇ ಮಾಡಿದ ಕರ್ಮವು ನಮ್ಮನ್ನು ಈ ಲೋಕಕ್ಕೆ ಬಿಗಿದು ಕಟ್ಟುತ್ತದೆ.

ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಬೀಗ ಹಾಕುವುದಕ್ಕೂ ತೆರೆಯುವುದಕ್ಕೂ ಕೀಲಿ ಕೈ ಒಂದೇ. ಕರ್ಮದ ಕಟ್ಟನ್ನು ಕರ್ಮದಿಂದಲೇ ಕಳಚಿಕೊಳ್ಳಬೇಕು. ಕರ್ಮದ ಕೋಟೆ ಕೋಟಲೆಗಳಿಂದ ಪಾರಾಗಲು ಬಿಡಬೇಕಾದ್ದು – ಕರ್ಮವನ್ನಲ್ಲ; ಕರ್ಮಫಲವನ್ನು “ಮಾ ಕರ್ಮ ಫಲಹೇತುರ್ಭೂಃ” ಕಣ್ಣು ಇರಬೇಕಾದ್ದು – ಉದ್ಯೋಗದ ಮೇಲೆ; ಸಂಬಳದ ಮೇಲಲ್ಲ. ದುಡಿದು ಗಳಿಸುವುದು ಸರಿ; ಗಳಿಸುವುದಕ್ಕಾಗಿ ದುಡಿಯುವುದು ಸರಿಯಲ್ಲ.

“ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ । ಅಸಕ್ತೋ ಹ್ಯಾಚರನ್ಕರ್ಮ ಪರಮಾಪ್ನೋತಿ ಪೂರುಷಃ ॥”

ಕೈಗೆ ಎಣ್ಣೆ ಸವರಿಕೊಂಡು ಹಲಸಿನ ತೊಳೆ ಬಿಡಿಸಿದಂತೆ ಕರ್ಮ ಗಂಟಾಗದಂತೆ, ನಂಟಾಗದಂತೆ, ಅಂಟಾಗದಂತೆ ಕರ್ಮ ಮಾಡಬೇಕು. ಕರ್ತವ್ಯ ಬುದ್ಧಿಯಿಂದ ಕರ್ಮವನ್ನು ಮಾಡಬೇಕು. ಸಂನ್ಯಾಸಿಯಾದರೂ ಲೋಕ ಸಂಗ್ರಹಾರ್ಥವಾಗಿ ಕರ್ಮವನ್ನು ಮಾಡಲೇಬೇಕು. ನೂಲಿನಂತೆ ಸೀರೆ. ತಾಯಿಯಂತೆ ಮಗು. ಅರಸನಂತೆ ಆಳು. ಚಿಕ್ಕವರು ದೊಡ್ಡವರನ್ನು ಅನುಸರಿಸುತ್ತಾರೆ; ಅನುಕರಿಸುತ್ತಾರೆ ಈ ಎಚ್ಚರ ಹಿರಿಯರಿಗೆ ಬೇಕು.

“ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ। ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥” ಗೀತಾಚಾರ್ಯನ ವಚನವಿದು.

ಕರ್ಮವು ದ್ವಿವಿಧ. ಪ್ರಾಕೃತ ಹಾಗೂ ಸ್ವಕೃತ. ಉಸಿರಾಟ, ನಿದ್ರೆ, ಆಕಳಿಕೆ ಮುಂತಾದವು ಪ್ರಾಕೃತ ಕರ್ಮಗಳು. ಬುದ್ಧಿ ಪೂರ್ವಕವಾಗಿ ಮಾಡುವಂತಹವು ಸ್ವಕೃತ ಕರ್ಮಗಳು. ಅವುಗಳೂ ಇಬ್ಬಗೆ. ದುಷ್ಕರ್ಮ ಹಾಗೂ ಸತ್ಕರ್ಮ. ಪರಿಣಾಮದಲ್ಲಿ ದುಷ್ಕರ್ಮವು ದುಃಖವನ್ನೂ, ಸತ್ಕರ್ಮವು ಸುಖವನ್ನೂ ಕೊಡುತ್ತವೆ.

ಸದಸದ್ವಿವೇಚನೆಯಿಂದ ವಿಹಿತವಾದ ಕರ್ಮವನ್ನು ಮಾಡುವ ಸಾಮರ್ಥ್ಯ ಹಾಗೂ ಆನುಕೂಲ್ಯಗಳಿರುವುದು ಮನುಷ್ಯನಿಗೆ ಮಾತ್ರ ಕರ್ಮಾನುಸಾರ ಸುಖ ದುಃಖಾದಿಗಳನ್ನು ಮಾನವ ಅನುಭವಿಸಬೇಕಾಗಿದ್ದರೂ ಅವುಗಳ ಪ್ರಭಾವವನ್ನು ತಗ್ಗಿಸಿಕೊಳ್ಳುವ ತಿದ್ದಿಕೊಳ್ಳುವ ಅವಕಾಶ ಮಾನವನಿಗೆ ಇದ್ದೇ ಇದೆ. ಬಿಸಿಲು, ಮಳೆ, ಗಾಳಿಗಳನ್ನು ಬಾರದಂತೆ ತಡೆಯುವುದು ಅಸಾಧ್ಯವಾದರೂ ಕೊಡೆ, ಕಂಬಳಿ, ಮಾಡು, ನೆರಳು ಮುಂತಾದ ಪ್ರತ್ಯುಪಾಯ ಪರಿಹಾರಗಳನ್ನು ಮಾನವ ಮಾಡಬಲ್ಲ. ಇಂತಹ ಪರಿಮಿತವಾದ ಸ್ವಾತಂತ್ರ್ಯ ಮಾನವ ಜೀವರಿಗೆ ಇರುವುದರಿಂದಲೇ ತಕ್ಕ ಶಾಸ್ತ್ರೋಪದೇಶ.

"ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ।
ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ॥"

ಶಾಸ್ತ್ರದ ಶೃಂಖಲೆಯನ್ನು ಕಿತ್ತೊಗೆದು, ಸೊಕ್ಕಿದ ಆನೆಯಂತೆ ದಿಕ್ಕುಗೆಟ್ಟು ನಡೆದರೆ ವಿನಾಶ ಕಟ್ಟಿಟ್ಟ ಬುತ್ತಿ. ಯಾವುದು ಗ್ರಾಹ್ಯ, ಯಾವುದು ಅಗ್ರಾಹ್ಯ, ಯಾವುದು ಕಾರ್ಯ, ಯಾವುದು ಅಕಾರ್ಯವೆಂಬುದಕ್ಕೆ ಶಾಸ್ತ್ರವೇ ಪರಮ ಪ್ರಮಾಣ. ಆಸೆಗೆ ಅಂಟಿಕೊಳ್ಳದೇ ಆರಾಧನಾ ಬುದ್ಧಿಯಿಂದ ಕರ್ಮಮಾಡುವುದೇ ಕರ್ಮಯೋಗ. ಇದು ಶ್ರೀಮದ್ ಭಗವದ್ಗೀತೆ ನಮಗೀವ ಸಂದೇಶ.

ಭಗವದ್ಗೀತೆ ಹಾಗೂ ಆಯುರ್ವಿಜ್ಞಾನ

– ವೈದ್ಯ ಸಾಂಬಮೂರ್ತಿ ಗಾಯತ್ರಿ

ಉದ್ದೇಶ ಒಂದೇ!

ಗೀತೆ ಹಾಗೂ ಆಯುರ್ವೇದಗಳ ಉದ್ದೇಶ ಒಂದೇ– ಅದೆಂದರೆ 'ಸಮತ್ವದ ಸಾಧನೆ' "ಸಮತ್ವಂ ಯೋಗಮುಚ್ಯತೇ"ಎಂದು ಗೀತೆ ಉಸುರಿದರೆ "ಧಾತುಸಾಮ್ಯ ಕ್ರಿಯಾ ಚೋಕ್ತಾ ತಂತ್ರಸ್ಯಾಸ್ಯ ಪ್ರಯೋಜನಂ" ಎಂಬುದು ಆಯುರ್ವಿಜ್ಞಾನಿಗಳ ಮಾತು.

ಗಾತ್ರದಲ್ಲಿ ಗಜಅಜಗಳಿದ್ದಂತೆ! :

ಆಯುರ್ವೇದವೆಂದರೆ ಬೃಹತ್ರಯೀಗಳೆಂಬ 3 ಗ್ರಂಥಗಳು. ಚರಕ, ಸುಶ್ರುತ ಸಂಹಿತೆಗಳು ಹಾಗೂ ಅಷ್ಟಾಂಗ ಹೃದಯ ಒಟ್ಟು ಸುಮಾರು 25000 ಶ್ಲೋಕಗಳು, 426 ಅಧ್ಯಾಯಗಳು.

ಗೀತೆಯೆಂದರೆ 18 ಅಧ್ಯಾಯಗಳು, 700 ಶ್ಲೋಕಗಳು.

ಪುರುಷ ವಿವೇಚನೆ:

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ । ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ (ಗೀತೆ 15)

ಉತ್ತಮ ಪುರುಷಸ್ತ್ವನ್ಯಃ ಪರಮಾತ್ಮೇತಿ ಉದಾಹೃತಃ । ಯೋಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ಕ್ಷರ ಪುರುಷ, ಅಕ್ಷರ ಪುರುಷ ಹಾಗೂ ಉತ್ತಮ ಪುರುಷನೆಂಬ ತ್ರಿವಿಧ ಪುರುಷ ಕಲ್ಪನೆ ಗೀತೆಯದ್ದು.

ಕ್ಷರ ಪುರುಷ – ಚಿಕಿತ್ಸಾ ಪುರುಷ ! :

ಅಸ್ಮಿನ್ ಶಾಸ್ತ್ರೇ ಪಂಚಮಹಾಭೂತ ಶರೀರಿ ಸಮವಾಯಃ ಪುರುಷಃ, ತಸ್ಮಿನ್ ಕ್ರಿಯಾ, ಸೋಽಧಿಷ್ಠಾನಂ ..... (ಸು.ಸೂ.1)

ಪಂಚಮಹಾಭೂತಗಳು ಹಾಗೂ ಆತ್ಮಗಳಿಂದ ಕೂಡಿದ ಷಡ್ಧಾತ್ವಾತ್ಮಕ ಪುರುಷನೇ ಚಿಕಿತ್ಸಾ ಪುರುಷ, ನಾಶವಾಗಬಲ್ಲ ಕ್ಷರ ಪುರುಷ ಈತನೇ.

ಅಕ್ಷರ ಪುರುಷ– ರಾಶಿ ಪುರುಷ :

ಚತುರ್ವಿಂಶಕ ಪುರುಷನೇ ದೇಹ ಪಂಚತ್ವ ಹೊಂದಿದಾಗ ಶರೀರ ಬಿಟ್ಟು ಹೊರಡುವನು.

ಚಾತುರ್ವಿಂಶತಿಕಃ ಸ್ಮೃತಃ ! ಮನೋದಶೇಂದ್ರಿ0ಯಾಣ್ಯರ್ಥಾಃ ಪ್ರಕೃತಿಶ್ಚಾಷ್ಟಧಾತುಕೀ। 1 (ಚ.ಶಾ.1)

ಅವ್ಯಕ್ತ, ಮಹಾನ್, ಅಹಂಕಾರ, ಪಂಚತನ್ಮಾತ್ರಗಳು 8 ಮೂಲ ಪ್ರಕೃತಿಗಳು, 10 ಇಂದ್ರಿ0ಯಗಳು, ಇಂದ್ರಿ0ಯಾರ್ಥಗಳು ಹಾಗೂ ಮನಸ್ಸು ಈ 24 ತತ್ವಗಳೇ ತನ್ಮಾತ್ರೆಗಳಿಂದ ಉತ್ಪನ್ನವಾದ ಮಹಾಭೂತಗಳು ಪಂಚತ್ವ ಹೊಂದಿದಾಗ ಶರೀರ ಬಿಡುತ್ತವೆ. ಮೋಹ, ಇಚ್ಛೆ, ದ್ವೇಷಗಳ ಕಾರಣ ಪುನಃ ಪುನಃ ಶರೀರವನ್ನು ಪಡೆ0ಯುತ್ತವೆ.

ಪುರುಷೋರಾಶಿಸಂಜ್ಞಸ್ತು ಮೋಹೇಚ್ಛಾದ್ವೇಷಕರ್ಮಜಃ । 53 (ಚ.ಶಾ.2)

ಉತ್ತಮ ಪುರುಷ – ಚೈತನ್ಯಪುರುಷ :

ಚೇತನಾಧಾತುರಪ್ಯೇಕ: ಸ್ಮೃತಃ ಪುರುಷ ಸಂಜ್ಞಕಃ॥ (ಚ,ಶಾ2–16)

ಮೋಹೇಚ್ಛಾದ್ವೇಷಗಳು (ರಜಸ್ತಮಸ್ಸುಗಳು) ಇಲ್ಲವಾದಾಗ ಮುಕ್ತಿ ಏಕ ಧಾತುಕ ಪುರುಷ, ಉತ್ತಮ ಪುರುಷನೇ ಆಗುತ್ತಾನೆ.

ಮೋಕ್ಷೋರಜಸ್ತಮೋಽಭಾವಾತ್ ಬಲವತ್ಕರ್ಮಸಂಕ್ಷ0ಯಾತ್। ವಿಯೋಗಃ ಸರ್ವಸಂಯೋಗ್ಯೈರಪುನರ್ಭವ ಉಚ್ಯತೇ॥ (42 ಚ. ಶಾ.1)

ಪ್ರಭವೋ ನ ಹ್ಯನಾದಿತ್ವಾದ್ವಿದ್ಯತೇಪರಮಾತ್ಮನಃ॥ (ಚ.ಸಾ.1–53)

ಅನಾದಿಪುರುಷೋ ನಿತ್ಯಃ॥ (ಚ.ಶಾ.–1–59)

ನಾತ್ಮನಃ ಕರಣಾಭಾವಾಲ್ಲಿಂಗಮಪ್ಯುಪಲಭ್ಯತೇ। ಸ ಸರ್ವಕರಣಾ0ಯೋಗಾನ್ಮುಕ್ತ ಇತ್ಯಭಿಧೀ0ಯತೇ॥ (22 ಚ.ಶಾ 5)

ತ್ರಯೋಪಸ್ತಂಭಗಳು! :

ತ್ರ0ಯ ಉಪಸ್ತಂಭಾಃ ಇತಿ– ಆಹಾರಃ, ಸ್ವಪ್ನೋ, ಬ್ರಹ್ಮಚ0ರ್ಯಮಿತಿ; (ಚ.ಸೂ 11–35)

ಆಹಾರ, ನಿದ್ರೆ, ಬ್ರಹ್ಮಚರ್ಯೆಗಳೆಂಬ ಮೂರು ವಿಷ0ಯಗಳು ಬದುಕೆಂಬ ನಾಲ್ಕು ಸ್ತಂಭಗಳ ಮನೆಗೆ (ಶರೀರ, ಇಂದ್ರಿ0ಯ, ಮನಸ್ಸು ಹಾಗೂ ಆತ್ಮ) 3 ಉಪಸ್ತಂಭಗಳಿದ್ದಂತೆ.

ಶರೀರ ಇಂದ್ರಿ0ಯಗಳಿಗೆ "ಆಹಾರವೂ, ಇಂದ್ರಿ0ಯ ಮನಸ್ಸುಗಳಿಗೆ "ನಿದ್ರೆ0ಯೂ ಹಾಗೂ ಮನಸ್ಸು–ಆತ್ಮಗಳಿಗೆ "ಬ್ರಹ್ಮಚರ್ಯೆ0ಯೂ ಉಪಸ್ತಂಭಗಳಾಗಿವೆ.

"ಬ್ರಹ್ಮಚರ್ಯೆ0ಯೆಂದರೆ ಸುಶ್ರುತ ಸಂಹಿತೆ0ಯ ಟೀಕಾಕಾರರಾದ ಡಲ್ಹಣರು ಹೇಳುವಂತೆ "ವೇದಾಧ್ಯಯನಂ, ಇಂದ್ರಿ0ಯ ಸಂ0ಯಮೋ ವಾ. ಚಕ್ರಪಾಣಿ ಹೇಳುವಂತೆ ಬ್ರಹ್ಮಣೇ ಮೋಕ್ಷಾ0ಯ ಚರ್ಯಂ ಬ್ರಹ್ಮಚರ್ಯಂ ಉಪಸ್ಥನಿಗ್ರಹಾದಿ".

ಬೃಹಿ-ವೃದ್ಧೌ ಧಾತುವಿನಿಂದ ಉತ್ಪನ್ನವಾದದ್ದು 'ಬ್ರಹ್ಮ' ಅಂದರೆ, ದೊಡ್ಡದು"ಎಂಬರ್ಥ. ಚರ-ಶಬ್ಧಕ್ಕೆ ಗತಿ, ಭಕ್ಷಣವೆಂಬ ಅರ್ಥಗಳಿವೆ.

ಅಂದರೆ, ಗತಿಶೀಲವಾದ ಬ್ರಹ್ಮರೂಪವಾದ ಬದುಕಿನಲ್ಲಿ ಹಿತ-ಅಹಿತ, ಸುಖದುಃಖಗಳಿಗಾಗಿ ವಿವೇಚನಾಪರವಾದಪ್ರವೃತ್ತಿ0ಯೇ ಚ0ರ್ಯಾ. ಮನಸ್ಸಿನ ಪ್ರವೃತ್ತಿಗಳು ಆತ್ಮವನ್ನು 0ಯಾವ ನೇರಮಾರ್ಗದಲ್ಲಿ ಸಂಪರ್ಕಿಸುವುದೋ ಅದೇ ಮಾರ್ಗದಲ್ಲಿ ಶರೀರ, ಇಂದ್ರಿ0ಯಗಳ ಕೆಲವು ಪ್ರವೃತ್ತಿಗಳೂ ಆತ್ಮನನ್ನು ಸಂಪರ್ಕಿಸುತ್ತವೆ.

ಈ ಮಾರ್ಗವೇ ಶರೀರ, ಇಂದ್ರಿ0ು, ಮನಸ್ಸು, ಆತ್ಮಗಳ ವ್ಯಾಪಕ ಸಂಪರ್ಕಕೊಂಡಿ0ಯಾದ್ದರಿಂದ ಇದನ್ನು ಬ್ರಹ್ಮಚರ್ಯೆ"ಎನ್ನಲಾಗಿದೆ.

ಒಟ್ಟಿನಲ್ಲಿ 'ಬ್ರಹಚರ್ಯೆ' ಎಂಬುದು ದೇಹ, ಇಂದ್ರಿ0ಯ ಮನಸ್ಸುಗಳು ಆತ್ಮನನ್ನು ಸಂಪರ್ಕಿಸುವ ನೀತಿ ಸಂಹಿತೆಗಳು ಎಂಬುದೇ ಸಾರಾಂಶ.

ಆಹಾರದ ಕುರಿತು ದ್ರವದ್ರವ್ಯವಿಜ್ಞಾನ, ಅನ್ನಸ್ವರೂಪ ವಿಜ್ಞಾನ, ತಸ್ಯಾಶಿತೀ0ಯ, ವಿವಿಧಾ ಶೀತಪೀತಿ0ಯಗಳೆಂಬ ಅನೇಕ ಅಧ್ಯಾ0ಯಗಳಲ್ಲಿ ವಿಪುಲವಾದ ಜ್ಞಾನರಾಶಿ ಬೃಹತ್ರಯೀಗಳಲ್ಲಿದೆ.

ನಿದ್ರೆ, ಸ್ವಪ್ನ, ಅವುಗಳ ಪ್ರಕಾರಗಳ ಕುರಿತು ಶಾರೀರ ಸ್ಥಾನ, ಸೂತ್ರಸ್ಥಾನಗಳಲ್ಲಿ ಸಾಕಷ್ಟು ವಿಜ್ಞಾನವಿದೆ.

ಗೀತೆ0ಯಲ್ಲಿ, 0ಯೋಗ 0ಯಾರಿಗೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ,

ನಾ ತ್ಯಶ್ನತಸ್ತು0ಯೋಗೋsಸ್ತಿ, ನ ಚೈಕಾಂತಮನಶ್ನತಃ। ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ॥16 (ಗೀತೆ 6)

0ಯುಕ್ತಾಹಾರ ವಿಹಾರಸ್ಯ 0ಯುಕ್ತ ಚೇಷ್ಟಸ್ಯಕರ್ಮಸು। 0ಯುಕ್ತ ಸ್ವಪ್ನಾವಬೋಧಸ್ಯ 0ಯೋಗೋಭವತಿದುಃಖಹಾ॥ 17(ಗೀತೆ 6)

ಆಹಾರ, ನಡವಳಿಕೆಗಳು ಹಾಗೂ ನಿದ್ರೆ 0ಯೋಗ್ಯವಾಗಿದ್ದಲ್ಲಿ ಮಾತ್ರ 0ಯೋಗವೆನ್ನುತ್ತಾ ಮೇಲೆಹೇಳಿದ ಆ0ಯುರ್ವೇದದ ಗ್ರಂಥಗಳನ್ನು "0ಯುಕ್ತವೆಂದರೇನು? ಎಂದು ಹುಡುಕಲು ಸೂಚನೆ ಇದೆ.

ಬ್ರಹ್ಮಚರ್ಯೆ0ಯ ಕುರಿತು ಗೀತೆ0ಯಲ್ಲಿ ನೇರವಾದ ಶಬ್ಧಬಳಕೆ0ಯಿಲ್ಲದಿದ್ದರೂ,

ಶಕ್ನೋತೀಹೈವ 0ಯಃ ಸೋಢುಂ ಪ್ರಾಕ್ ಶರೀರ ವಿಮೋಕ್ಷಣಾತ್। ಕಾಮಕ್ರೋಧೋದ್ಭವಂ ವೇಗಂ ಸ 0ಯುಕ್ತಃ ಸ ಸುಖೀ ನರಃ॥

ಎಂಬ ವ್ಯಾಖ್ಯಾನದಲ್ಲಿ ಸೂಚ್ಯಾರ್ಥದಲ್ಲಿ ಬ್ರಹ್ಮಚರ್ಯೆಯ ಉಲ್ಲೇಖವಿದೆ.

ವೈಶ್ವಾನರರೂಪೀ ಭಗವಂತ! :

ಪ್ರತಿ ಜೀವಿಯಶರೀರದಲ್ಲೂ ಭಗವಂತ ಸ್ವತಃ ನೆಲೆಸಿದ್ದು ತಿಂದ ಆಹಾರವನ್ನು ಪಚನಮಾಡಿ ಶರೀರಧಾತುಗಳನ್ನಾಗಿ ಪರಿವರ್ತಿಸುತ್ತಾನೆ ಎಂಬುದು ಒಂದು ಆಶ್ಚರ್ಯವಲ್ಲವೇ?! ಗೀತೆಯಲ್ಲಿ ನೋಡಿ;

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ। ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ॥ 14 (ಗೀತೆ 15)

ಸುಶ್ರುತ ಸಂಹಿತೆಯಲ್ಲಿ

ಜಾಠರೋ ಭಗವಾನಗ್ನಿರೀಶ್ವರೋಽನ್ನಸ್ಯಪಾಚಕಃ। ಸೌಕ್ಷ್ಮ್ಯಾದ್ರಸಾನಾದದಾನೋ ವಿವೇಕ್ತುಂ ನೈವಶಕ್ಯತೇ॥ 27

ಪ್ರಾಣಾಪಾನ ಸಮಾನೈಸ್ತು ಸರ್ವತಃ ಪವನೈಸ್ತ್ರಿಭಿಃ। ಧ್ಮಾಯತೇ ಪಾಲ್ಯತೇ ಚಾಪಿ ಸ್ವಾಂ ಸ್ವಾಂ ಗತಿಮವಸ್ಥಿತೈಃ॥28 (ಸು. ಸೂ.35)

ಜಾಠರಾಗ್ನಿಯು ಸ್ವತಃ ಭಗವಂತನೇ ಆಗಿದ್ದು, ಅನ್ನದ ಪಚನವನ್ನು ಮಾಡುವವನು. ಸೂಕ್ಷ್ಮವಾದ ಈ ಕಾರ್ಯ ದರ್ಶನಕ್ಕೆ ಅಲಭ್ಯ. ಪ್ರಾಣಾಪಾನ ಸಮಾನಗಳೆಂಬ ತ್ರಿವಿಧ ವಾಯುಗಳಿಂದ ಈ ಧ್ಮಾನ ಹಾಗೂ ಶರೀರ ಧಾತುಪಾಲನೆಯ ಕಾರ್ಯನಡೆಯುತ್ತದೆ.

ದುಃಖದ ಮೂಲ ಒಂದೇ! :

ರೋಗದ ಮೂಲವನ್ನು ಗೀತೆ ಹಾಗೂ ಆಯುರ್ವೇದ ಒಂದೇ ರೀತಿಯಲ್ಲಿ ವಿವರಿಸುತ್ತವೆ. ಅಷ್ಟಾಂಗ ಹೃದಯದಲ್ಲಿ ರೋಗಕ್ಕೆ ಕಾರಣವಾದ ದಶವಿಧ ಪಾಪಗಳನ್ನು ಹೇಳಿದ್ದಾರೆ.

ಹಿಂಸಾಸ್ತೇಯಾನ್ಯಥಾಕಾಮಂ ಪೈಶುನ್ಯಂ ಪರುಷಾನೃತೇ। ಸಂಭಿನ್ನಾಲಾಪಂವ್ಯಾಪಾದಂ ಅಭಿಧ್ಯಾಂ ದೃಗ್ವಿಪರ್ಯಯಂ॥
ಪಾಪಂ ಕರ್ಮೇತಿ ದಶಧಾ ಕಾಯವಾಙ್ಮಾನಸೈಃ ತ್ಯಜೇತ್॥ (ಅ.ಹೃ.ಸೂ 2)

ರಾಗಾದಿರೋಗಾನ್ ಸತತಾನುಷಕ್ತಾನ್ ಅಶೇಷಕಾಯಃ ಪ್ರಸೃತಾನಶೇಷಾನ್।
ಔತ್ಸುಕ್ಯಮೋಹಾರತಿದಾನ್ ಜಘಾನ ಯೋಽಪೂರ್ವವೈದ್ಯಾಯ ನಮೋಽಸ್ತು ತಸ್ಮೈ॥

ನಿರಂತರವಾಗಿ ಅಂಟಿಕೊಂಡಿರುವ ಸರ್ವಶರೀರ ವ್ಯಾಪಕವಾದ ಉದ್ವೇಗ, ಮೋಹ, ಅಶಾಂತಿಗಳಿಗೆ ಕಾರಣವಾದ ರಾಗ, ದ್ವೇಷ, ಕಾಮ, ಕ್ರೋಧ, ಮದ ಮತ್ಸರಗಳೆಂಬ ಕಾರಣಗಳನ್ನು ಗೆದ್ದ ಅಪೂರ್ವ ವೈದ್ಯನಿಗೆ ನಮಸ್ಕಾರ.

ಅಷ್ಟಾಂಗ ಹೃದಯದ ಈ ಪ್ರಾರ್ಥನಾ ಶ್ಲೋಕದಲ್ಲಿ ರೋಗಗಳ ಮೂಲಕಾರಣದ ವಿಶ್ಲೇಷಣೆ ಸೂಚ್ಯವಾಗಿದೆ.

ಚರಕಸಂಹಿತೆಯಲ್ಲೂ ರೋಗಗಳ ಉತ್ಪತ್ತಿಯ ಮೂಲಕಾರಣಗಳನ್ನು ಲೋಭ, ಅಭಿದ್ರೋಹ ಹಾಗೂ ಕ್ರೋಧವೆಂಬ 3ನ್ನು ಗುರುತಿಸಿದ್ದಾರೆ.

ತತ್ರಪ್ರಥಮತಃ ಏವ ತಾವದಾದ್ಯಾನ್‌ಲೋಭಾಭಿದ್ರೋಹಕೋಪ ಪ್ರಭವಾನಷ್ಟೌ ವ್ಯಾಧೀನ್ನಿದಾನ ಪೂರ್ವೇಣ ಕ್ರಮೇಣ ವ್ಯಾಖ್ಯಾಸ್ಯಾಮಃ॥ (ಚ. ನಿ, 1-15)

ಗೀತೆಯಲ್ಲಿ ಕರ್ಮಯೋಗದಲ್ಲಿ ಮನುಷ್ಯನು ಯಾವ ಕಾರಣಗಳಿಂದ ಬಲವಾಗಿ ಸೆಳೆಯಲ್ಪಟ್ಟು ತಪ್ಪುಮಾಡಿ ತೊಂದರೆಗೀಡಾಗುತ್ತಾನೆ? ಎಂಬ ಪ್ರಶ್ನೆಗೆ,

ಕಾಮಏಷ ಕ್ರೋಧಏಷ ರಜೋಗುಣ ಸಮುದ್ಭವಃ। ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ॥ 37(ಗೀತೆ 3-37)

ಎಂದು ಉತ್ತರಿಸುತ್ತಾನೆ.

ಗೀತೆ ಹಾಗೂ ಆಯುರ್ವೇದದಲ್ಲಿ ಯೋಗ :

ಗೀತೆ ಭಕ್ತಿಯೋಗ, ಸಾಂಖ್ಯಯೋಗ, ಕರ್ಮಯೋಗ ಹಾಗೂ ರಾಜಯೋಗಗಳೆಂಬ ನಾಲ್ಕು ಮಾರ್ಗಗಳನ್ನು ಮುಕ್ತಿಮಾರ್ಗಗಳೆಂದು ಪ್ರತಿಬಿಂಬಿಸಿದೆ. 2ನೇ ಅಧ್ಯಾಯದಲ್ಲಿ ಸಾಂಖ್ಯಯೋಗವನ್ನೂ 3ನೇ ಅಧ್ಯಾಯದಲ್ಲಿ ಕರ್ಮಯೋಗವನ್ನೂ 6ರಲ್ಲಿ ರಾಜಯೋಗವನ್ನೂ ಹಾಗೂ 12ರಲ್ಲಿ ಭಕ್ತಿಯೋಗವನ್ನೂ ವಿಶಿಷ್ಟವಾಗಿ ವರ್ಣಿಸಿದೆ. ಆಯುರ್ವಿಜ್ಞಾನದಲ್ಲಿ ಚರಕಸಂಹಿತೆಯ ಶಾರೀರಸ್ಥಾನ ಒಂದನೇ ಅಧ್ಯಾಯದಲ್ಲಿ ಯೋಗದ ಕುರಿತು ಉಲ್ಲೇಖವಿದೆ.

ಯೋಗೇ ಮೋಕ್ಷೇ ಚ ಸರ್ವಾಸಾಂ ವೇದನಾನಾಮವರ್ತನಂ । ಮೋಕ್ಷೇ ನಿವೃತ್ತಿರ್ನಿಃಶೇಷೋ ಯೋಗೋ ಮೋಕ್ಷಃ ಪ್ರವರ್ತಕಃ॥

ಎಲ್ಲಾ ರೀತಿಯ ವೇದನೆಗಳ ನಾಶ ಯೋಗ ಹಾಗೂ ಮೋಕ್ಷಗಳಲ್ಲಿ ಉಂಟಾಗುತ್ತದೆ. ಮೋಕ್ಷದಲ್ಲಿ ನಿಃಶೇಷವಾಗಿ ವೇದನೆಗಳ ನಾಶ ಉಂಟಾದರೆ ಯೋಗವು "ಮೋಕ್ಷಪ್ರವರ್ತಕ" ಎಂಬ ಮಾತನ್ನು ಹೇಳಿದ್ದಾರೆ.

ಧ್ಯಾನ ಹೇಗೆ ಮಾಡಬೇಕು? :

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯ ಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥

ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥(ಗೀತೆ-6)

ಹೀಗೆ ಮನಸ್ಸನ್ನು ಅಂತರ್ಮುಖಗೊಳಿಸಿ ಪರಮಾತ್ಮನಲ್ಲಿ ನೆಲೆಗೊಳಿಸಿ ಧ್ಯಾನಿಸುವ ವಿಧಾನ ಗೀತೆಯಲ್ಲಿದೆ.

ಚರಕಸಂಹಿತೆ0ುಲ್ಲಿ 0ೋಗದ ವಿಧಾನದ ವರ್ಣನೆ ನೋಡಿ :

ಆತ್ಮೇಂದ್ರಿ0ುಮನೋಽರ್ಥಾನಾಂ ಸನ್ನಿಕರ್ಷಾತ್ ಪ್ರವರ್ತತೇ ।
ಸುಖದುಃಖಮನಾರಂಭಾದಾತ್ಮಸ್ಥೇ ಮನಸಿ ಸ್ಥಿರೇ ॥ 138॥
ನಿವರ್ತತೇ ತದುಭ0ುಂ ವಶಿತ್ವಂ ಚೋಪಜಾ0ುತೇ ।
ಸಶರೀರಸ್ಯ 0ೋಗಜ್ಞಾಸ್ತಂ 0ೋಗಂ ಋಷ0ೋ ವಿದುಃ ॥139॥

ಆತ್ಮ, ಇಂದ್ರಿಯ, ಮನಸ್ಸು ಹಾಗೂ ವಿಷಯಗಳ ಸಾಮೀಪ್ಯದಿಂದ ಸುಖ ದುಃಖಗಳು. ಈ ಸಾಮೀಪ್ಯಕ್ಕೆ ಆರಂಭ ಕೊಡದಿದ್ದಾಗ ಹಾಗೂ ಆತ್ಮನಲ್ಲಿ ಮನಸ್ಸನ್ನು ಸ್ಥಿರಗೊಳಿಸಿದಾಗ ಈ ಸುಖ ದುಃಖಗಳೆರಡೂ ಇಲ್ಲವಾಗುವ ಕಾರಣ ಇಂದ್ರಿಯಗಳು ವಶಕ್ಕೊಳಗಾಗುತ್ತವೆ. ಆಗ ಸಶರೀರವಾಗಿಯೇ ಪುರುಷನು ಮುಕ್ತನೆನಿಸುತ್ತಾನೆ. ಇದಕ್ಕೆ ಯೋಗವೆನ್ನುತ್ತಾರೆ. ಹೀಗೆ ಶುದ್ಧಸತ್ವ ಹೊಂದುವ ಯೋಗಿಗೆ ದೊರಕುವ ಅಷ್ಟೈಶ್ವರ್ಯಗಳ ಕುರಿತು ಇಲ್ಲಿ ಮಾಹಿತಿ ಲಭ್ಯ.

ಆವೇಶಶ್ಚೇತಸೋಜ್ಞಾನಂ ಅರ್ಥಾನಾಂ ಛಂದತಃ ಕ್ರಿ0ುಾ ।
ದೃಷ್ಟಿಃ ಶ್ರೋತ್ರಃ ಸ್ಮೃತಿರ್ಜ್ಞಾನಂ ಇಷ್ಟತಶ್ಚಾಪ್ಯದರ್ಶನಂ ॥{ಚ.ಶಾ.1}

ಇದೇ ವಿಷಯ ಗೀತೆಯಲ್ಲಿ ಹೇಗಿದೆ ನೋಡಿ !

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ 0ೋಽರ್ಜುನ ।
ಸುಖಂ ವಾ 0ುದಿ ವಾ ದುಃಖಂ ಸ 0ೋಗೀ ಪರಮೋ ಮತಃ ॥

ಆತ್ಮನಲ್ಲಿ ಮನಸ್ಸು ಸ್ಥಿರವಾದಾಗ ಯೋಗಿಯು ಸುಖ ದುಃಖಗಳನ್ನು ಒಂದೇ ತೆರನಾಗಿ ನೋಡುತ್ತಾನೆ. ಅಂಥವನೇ ಶ್ರೇಷ್ಠ ಯೋಗಿಯು.

ಇದೋ ಮುಕ್ತಿ ಮಾರ್ಗ ! :

ದೈವೀ ಸಂಪದ್ವಿಮೋಕ್ಷಾಯ" ಎನ್ನುತ್ತಾ ಶ್ರೀ ಕೃಷ್ಣನು ದೈವ ಸಂಪತ್ತನ್ನು ಹೀಗೆ ವಿವರಿಸಿದ್ದಾರೆ.

ಅಭಯಮ್ ಸತ್ವ ಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ । ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ ।

ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾಂತಿರಪೈಶುನಂ ॥

ದಯಾಭೂತೇಷ್ವಲೋಲುಪತ್ವಂ ಮಾರ್ದವಂ ಹ್ರೀರಚಾಪಲಂ । ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ॥

ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ।

ಇದು ಗೀತೆಯ ಮುಕ್ತಿ ಮಾರ್ಗ.

ಚರಕಸಂಹಿತೆಯಲ್ಲಿ ನೋಡಿ ! :

ಸತಾಮುಪಾಸನಂ ಸಮ್ಯಗಸತಾಂ ಪರಿವರ್ಜನಂ ।
ವ್ರತಚ0ುರ್ಯೌಪವಾಸೌ ಚ ನಿ0ುಮಾಶ್ಚ ಪೃಥಗ್ವಿಧಾಃ ॥

ಧಾರಣಂ ಧರ್ಮಶಾಸ್ತ್ರಾಣಾಂ ವಿಜ್ಞಾನಂ ವಿಜನೇ ರತಿಃ ।
ವಿಷ0ುೇಷ್ವರತಿರ್ಮೋಕ್ಷೇ ವ್ಯವಸಾ0ುಃ ಪರಾ ಧೃತಿಃ ॥

ಕರ್ಮಣಾಮಸಮಾರಂಭಃ ಕೃತಾನಾಂ ಚ ಪರಿಕ್ಷ0ುಃ ।
ನೈಷ್ಕ್ರಮ್ಯಮನಹಂಕಾರಃ ಸಂ0ುೋಗೇ ಭ0ುದರ್ಶನಂ ॥

ಮನೋಬುದ್ಧಿಸಮಾಧಾನಮರ್ಥತತ್ವ ಪರೀಕ್ಷಣಂ ।
ತತ್ವಸ್ಮೃತೇರುಪಸ್ಥಾನಾತ್ ಸರ್ವಮೇತತ್ ಪ್ರವರ್ತತೇ॥{ಚ.ಶಾ.1}

ಸಜ್ಜನರ ಸಹವಾಸ
ದುರ್ಜನರ ಪರಿತ್ಯಾಗ
ವ್ರತೋಪವಾಸಗಳು
ನಿ0ುಮಗಳ ಪಾಲನೆ
ಧರ್ಮಶಾಸ್ತ್ರಾನುಸರಣೆ
ವಿಜ್ಞಾನದ ಚಿಂತನೆ
ಏಕಾಂತದಲ್ಲಿ ಸುಖ
ವಿಷ0ುಗಳಲ್ಲಿ ಅನಾಸಕ್ತಿ
ಮೋಕ್ಷಕ್ಕಾಗಿ ಪ್ರವೃತ್ತಿ
ಉತ್ಕೃಷ್ಟ ಪ್ರ0ುತ್ನ
ಹೊಸ ಕೆಲಸಗಳ ಅನಾರಂಭ
ಆರಂಭಿಸಿದ ಕಾ0ುರ್ಗಳ ಪೂರ್ತಿ.
ಕರ್ಮರಾಹಿತ್ಯ
ಅಹಂಕಾರರಾಹಿತ್ಯ
ಸಂ0ುೋಗಕ್ಕೆ ಭ0ು

ಮನಸ್ಸು ಬುದ್ಧಿಗಳನ್ನು ಪರೀಕ್ಷಿಸಿ ತತ್ವವನ್ನು ಸದಾ ಸ್ಮರಣೆಯಲ್ಲಿಟ್ಟುಕೊಂಡಾಗ ಇದು ಸಾಧ್ಯವಾಗುತ್ತದೆ.

ಗೀತೆ ಹಾಗೂ ಆ0ುುರ್ವೇದದಲ್ಲಿ ಚಿಕಿತ್ಸೆ ! :

ತ್ರಿವಿಧಮೌಷಧಮಿತಿ–ದೈವವ್ಯಪಾಶ್ರ0ುಂ, 0ುುಕ್ತಿವ್ಯಪಾಶ್ರ0ುಂ, ಸತ್ವಾವಜ0ುಶ್ಚ.

ತತ್ರ ದೈವವ್ಯಪಾಶ್ರಯಂ–ಮಂತ್ರೌಷಧಿ, ಮಣಿ, ಮಂಗಲ, ಬಲ್ಯುಪಹಾರ, ಹೋಮ, ನಿಯಮ,

ಪ್ರಾ0ುಶ್ಚಿತ್ತೋಪವಾಸ, ಸ್ವಸ್ತ್ಯ0ುನ, ಪ್ರಣಿಪಾತಗಮನಾದಿ,
0ುುಕ್ತಿವ್ಯಪಾಶ್ರ0ುಂ– ಪುನರಾಹಾರಔಷಧ ದ್ರವ್ಯಾಣಾಂ 0ುೋಜನಾ
ಸತ್ವಾವಜ0ು:– ಪುನ: ಅಹಿತೇಭ್ಯೋರ್ಥೇಭ್ಯೋ ಮನೋನಿಗ್ರಹ॥54॥ (ಚರಕ ಸೂತ್ರ,11)

1. ದೈವವ್ಯಪಾಶ್ರ0ಯ ಚಿಕಿತ್ಸೆ :

ಮಂತ್ರ, ಮಣಿಧಾರಣ, ಮಂಗಲಕರ್ಮಗಳು, ಬಲಿ ಉಪಹಾರ, ದಾನ, ಹೋಮ, ನಿಯಮಗಳ ಪಾಲನೆ, ಪ್ರಾಯಶ್ಚಿತ್ತ, ಉಪವಾಸಗಳ ಆಚರಣೆ, ಸ್ವಸ್ತಿ ಮಂತ್ರಗಳ ಪಠಣ. ಸಾಷ್ಟಾಂಗ ನಮಸ್ಕಾರ, ತೀರ್ಥ0ಯಾತ್ರೆ ಇವು ದೈವ ವ್ಯಪಾಶ್ರ0ಯ ಚಿಕಿತ್ಸೆಗಳು.

ದೈವವೆಂದರೆ ಅದೃಷ್ಟಈ ಅದೃಷ್ಟವನ್ನಾಧರಿಸಿ ಆಚರಿಸುವ ಕರ್ಮಗಳು.

ಗೀತೆ0ಯಲ್ಲಿ,

ಪತ್ರಂ ಪುಷ್ಪಂ ಫಲಂತೋ0ಯಂ 0ಯೋ ಮೆ ಭಕ್ತ್ಯಾ ಪ್ರ0ಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರ0ಯತಾತ್ಮನಃ॥26॥ (ಗೀತೆ-9)

0ಯತ್ಕರೋಷಿ 0ಯದಶ್ನಾಸಿ 0ಯಜ್ಜುಹೋಷಿದದಾಸಿ0ಯತ್।
0ಯತ್ತಪಸ್ಯಸಿ ಕೌಂತೇ0ಯ ತತ್ಪುರುಷ್ವ ಮದರ್ಪಣಂ॥27॥ (ಗೀತೆ-9)

0ಯೇ ಭಜಂತಿ ತುಮಾಂ ಭಕ್ತ್ಯಾಮಯಿ ತೆ ತೇಷು ಚಾಪ್ಯಹಂ ॥29॥

ಹೀಗೆ “ಭಕ್ತಿ0ಯೋಗ”ದ ಮೂಲಕ ಅದೃಷ್ಟವಾದ ದೈವದ ಅನುಗ್ರಹ ಪಡೆದು ರೊಗ ಮುಕ್ತಿಗೆ ಮಾಡುವ ಚಿಕಿತ್ಸಾ ಕ್ರಮಗಳು. ಚರಕ ಟೀಕಾಕಾರ ಚಕ್ರಪಾಣಿ ಹೇಳುವಂತೆ “ಮಂತ್ರಾದ0ಯೋ ಹಿದೈವಪ್ರಭಾವಾದೇಹ ವ್ಯಾಧಿಹರಾಃ॥ ಇದನ್ನೇ ಏಕೆ ಮೊದಲು ಹೇಳಿದರು? ಎಂಬ ಮಾತಿಗೆ, ಚಕ್ರಪಾಣಿ □ ಅತ್ರ ದೈವವ್ಯಪಾಶ್ರ0ಯಮಾದಾವುಕ್ತಂ ಆಶುವ್ಯಾಧಿಹರತ್ವೇನ। ಅಂದರೆ , ಮಂತ್ರ ಚಿಕಿತ್ಸೆ, ಚಿಕಿತ್ಸೆಗಳಲ್ಲೇ ಪ್ರಬಲವಾದದ್ದು ಎಂಬರ್ಥ ಇಲ್ಲಿ ಕಾಣಬರುತ್ತದೆ.

2. 0ಯುಕ್ತಿವ್ಯಪಾಶ್ರ0ಯ ಚಿಕಿತ್ಸೆ :

ರೋಗಹರವಾದಂತಹ ಆಹಾರ, ಔಷಧ ಚಿಕಿತ್ಸಾ ಕ್ರಮಗಳ ಜೊಡಣೆ0ಯೇ 0ಯುಕ್ತಿವ್ಯಪಾಶ್ರ0ಯ ಚಿಕಿತ್ಸೆ.

ಶರೀರ ಪ್ರಧಾನವಾದ ಬದುಕಿನಲ್ಲಿ ಕಂಡು ಬರುವ ವಿಕೃತಿ0ಯನ್ನು ಕಾರಣಕ್ಕೆ ವಿರುದ್ಧವಾದ ಉಪಕ್ರಮಗಳ ಮೂಲಕ ಚಿಕಿತ್ಸೆ ಮಾಡಿ ರೋಗಿ0ಯನ್ನು ಸ್ವಸ್ಥನನ್ನಾಗಿ ಮಾಡುವ ದ್ರವ್ಯ ,ಅದ್ರವ್ಯ0ಯುಕ್ತ ಚಿಕಿತ್ಸೆ0ಯೇ 0ಯುಕ್ತಿವ್ಯಪಾಶ್ರ0ಯವಾಗಿದೆ.ಇದು ಆ0ಯುರ್ವೇದ ಮೂಲ ವಿಷ0ಯ “ಭೂತೇಭ್ಯೋ ಹಿ ಪರಂ 0ಯಸ್ಮಾತ್ ನಾಸ್ತಿ ಚಿಂತಾ ಚಿಕಿತ್ಸಿತೇ”ಎಂಬ ಸುಶ್ರುತರ ವಾಕ್ಯದಂತೆ ವಿಶಿಷ್ಟವಾಗಿ 0ಯುಕ್ತಿವ್ಯಪಾಶ್ರ0ಯ0ಯವೇ ಪ್ರಧಾನವಾಗಿ ಆ0ಯುರ್ವೇದ ಗ್ರಂಥಗಳಲ್ಲಿ ವಿವೇಚನೆ ಕಂಡು ಬರುತ್ತದೆ. ಗೀತೆ0ಯಲ್ಲಿ ಈ ವಿಷ0ಯದ ವ್ಯಾಪ್ತಿ ಬಹುತೇಕ ಇಲ್ಲವೆನ್ನಬಹುದು. ತ್ರ0ಯೋಪಸ್ತಂಭಗಳಲ್ಲಿ ಒಂದಾದ ನಿದ್ರೆ, ಆಹಾರಗಳು 6ನೇ ಅಧ್ಯಾ0ಯದಲ್ಲಿ ಹೇಳಿರುವ ವಾಕ್ಯವೊಂದು 0ಯೋಗದ ಮೊದಲು ಶರಿರದ ತ0ಯಾರಿ ಕುರಿತು ಸಾರಾಂಶ ರೂಪದಲ್ಲಿದೆ.

0ುಕ್ತಾಹಾರ ವಿಹಾರಸ್ಯ 0ುಕ್ತ ಚೇಷ್ಟಸ್ಯ ಕರ್ಮಸು।
0ುಕ್ತ ಸ್ವಪ್ನಾವಭೋಧಸ್ಯ 0ೋಗೋ ಭವತಿ ದು:ಖ ಹಾ॥17॥ (ಗೀತೆ-6)

ಸತ್ವಾವಜ0ು ಚಿಕಿತ್ಸೆ :

ಪುನ: ಅಹಿತೇಭ್ಯೋ ಅರ್ಥೇಭ್ಯೋ ಮನೋ ನಿಗ್ರಹ:॥

ಅಹಿತವಾದ ಇಂದ್ರಿಯಾರ್ಥಗಳಲ್ಲಿ ಮುಳುಗಿದ ಮನಸ್ಸನ್ನು ನಿಗ್ರಹಿಸಿ ಹಿತವಾದ ಅರ್ಥದಲ್ಲಿ ನಿಯೋಜನೆಯೇ ಸತ್ವಾವಜಯವಾಗಿದೆ.

ಸತ್ವೇನ ರಜಸ್ತಮಸಿ ಅವಜೀಯತೇ ಇತಿ ಸತ್ವಾವಜಯ:" ಎಂಬುದು ಇಲ್ಲಿ ಅರ್ಥಪೂರ್ಣವಾಗಿದೆ. ರಜಸ್ತಮಸ್ಸುಗಳನ್ನು ನೇರವಾಗಿ ಗೆಲ್ಲಲಾಗದು.ಸತ್ವವೃದ್ಧಿಮಾಡುವ ಮೂಲಕವೇ ರಜಸ್ತಮಸ್ಸುಗಳನ್ನು ಇಲ್ಲವಾಗಿಸಬಹುದು ಎಂಬುದು ಇಲ್ಲಿ ತಂತ್ರವಾಗಿದೆ.

ವಾಗ್ಭಟರು ಹೇಳುವಂತೆ :

ಧೀಧೈ0ುಾತ್ಮಾದಿ ವಿಜ್ಞಾನಂ ಮನೋದೋಷೌಷಧಂ ಪರಂ॥

ಜ್ಞಾನವನ್ನು ನೀಡುವುದು, ಧೈರ್ಯ ಕೊಡುವುದು,ಆತ್ಮಜ್ಞಾನದ ಅರಿವು ಮೂಡಿಸುವುದೇ ಮನೋದೋಷಕ್ಕೆ ಔಷಧ ಅರ್ಥಾತ್. "ಛಿಂಣಾಟಿಜಟಟುಟಿಂ" ಮಾಡುವುದೇ ಚಿಕಿತ್ಸೆ.

ಚರಕರು ಹೇಳುವಂತೆ :

ಮಾನಸಂ ಪ್ರತಿ ಭೈಷಜ್ಯಂ ತ್ರಿವರ್ಗಸ್ಯಾನ್ವವೇಕ್ಷಣಂ।
ತದ್ವಿದ್ಯ ಸೇವಾ ವಿಜ್ಞಾನಂ ಆತ್ಮಾದೀನಾಂ ಚ ಸರ್ವಶ:॥47॥ (ಚ.ಸೂ.11-47)

ಧರ್ಮ,ಅರ್ಥ,ಕಾಮಗಳ ಅನ್ವೇಷಣ,ಸ್ವ ವಿದ್ಯೆಗೆ ಸಂಬಂಧಿಸಿದ ಆಚಾರ್ಯರ ಉಪಾಸನೆ(ಅವರ ಮಾರ್ಗದರ್ಶನ) ಹಾಗೂ ಆತ್ಮಜ್ಞಾನ, ಅರ್ಥಾತ್ ತಾನು ಯಾರು? ತನ್ನ ಶಕ್ತಿಯೇನು? ಕರ್ತವ್ಯವೇನು?ಎಲ್ಲಿಂದ ಬಂದೆ? ಎಲ್ಲಿಗೆ ಹೋಗು ಬೇಕಾಗಿದೆ? ತನ್ನ ಶಕ್ತಿಯೇನು? ಇತ್ಯಾದಿಗಳ ಜ್ಞಾನದಿಂದ ರಜಸ್ಸುತಮಸ್ಸುಗಳನ್ನು ಕಡಿಮೆ ಮಾಡಿ ಗುಣಪಡಿಸಬಹುಹು.

ಸುಶ್ರುತರು ಹೇಳುವಂತೆ :

ಉನ್ಮಾದೇಷು ಚ ಸರ್ವೇಷು ಕು0ುಾತ್ ಚಿತ್ತಪ್ರಸಾದನಂ॥

"ಶೋಕ ಶಲ್ಯ ವ್ಯಪನಯೇತ್," ಎಲ್ಲಾ ರೀತಿಯ ಮಾನಸಿಕ ವ್ಯಾಧಿಗಳಲ್ಲೂ "ಚಿತ್ತಪ್ರಸಾದನವೇ ಮಾಡಬೇಕಾದ ಮುಖ್ಯ ಚಿಕಿತ್ಸೆ. ಕೇವಲ ಮಾನಸಿಕ ವ್ಯಾಧಿಯಲ್ಲಿ ಶೋಕವೆಂಬ ಶಲ್ಯವನ್ನು ಕಿತ್ತುಹಾಕಬೇಕು ಎಂದು ತನ್ನದೇ ಶಸ್ತ್ರ ಚಿಕಿತ್ಸೆಯ ಭಾಷೆಯಲ್ಲಿ ಹೇಳಿದ್ದಾನೆ. ಆಯುರ್ವೇದದ ಈ ಸತ್ವಾವಜಯ ಚಿಕಿತ್ಸೆ ಯನ್ನೇ ಗೀತೆ ವಿಸ್ತೃತವಾಗಿ ವ್ಯಾಖ್ಯಾನಿಸುತ್ತದೆ.

ಇಡೀ ಗೀತೆ ಒಂದು ಮಾನಸಿಕ ಚಿಕಿತ್ಸೆ0ು ವ್ಯಾಖ್ಯಾನ ! :

ಕೂಲಂಕಷ ಅಧ್ಯ0ುನ ಮಾಡಿದಾಗ ತಿಳಿ0ುುವುದೇನೆಂದರೆ,"ಸ್ಮೃತಿಭ್ರಂಶವೆಂಬ ಪ್ರಜ್ಞಾಪರಾಧ ಕಾರಣ "ಅತತ್ವಾಭಿನಿವೇಶವೆಂಬ ತತ್ವ ವಿಸ್ಮೃತಿ ಸ್ವರೂಪದ ವ್ಯಾಧಿಪೀಡಿತನಾದ ಅರ್ಜುನನಿಗೆ ಶಾಸ್ತ್ರೋಕ್ತ ಚಿಕಿತ್ಸಾ ವಿಧಾನದಲ್ಲಿ ಶೀಕೃಷ್ಣನೆಂಬ ವೈದ್ಯ ಮಾಡಿದ ಶೋಕ ಶಲ್ಯ" ನಿವಾರಣೆ0ಯಾಗಿದೆ. ಜೊತೆಗೆ ಈ ಚಿಕಿತ್ಸೆ0ು ಸಂದರ್ಭದಲ್ಲಿ ಈ ವಿಧಾನದ ವಿಸ್ತೃತವಾದ ಹರಹುಗಳನ್ನು ಹೊರತೆಗೆದು ಉಣಬಡಿಸಿದ ಕೀರ್ತಿ ಗ್ರಂಥಕರ್ತೃವಾದ ವ್ಯಾಸರದ್ದಾಗಿದೆ."ಸ್ಮೃತಿಭ್ರಂಶ"ದ ವ್ಯಾಖ್ಯಾನವನ್ನು

ತತ್ವಜ್ಞಾನೇ ಸ್ಮೃತಿ0ರ್ುಸ್ಯ ರಜೋ ಮೋಹಾವೃತಾತ್ಮನ:।
ಭ್ರಶ್ಯತೇ ಸ ಸ್ಮೃತಿಭ್ರಂಶ: ಸ್ಮರ್ತವ್ಯೋಹಿಸ್ಮೃತೌ ಸ್ಥಿತಂ॥101॥ ಚ.ಶಾ.1

ರಜೋ ಮೋಹಗಳಿಂದ ಆವೃತನಾದವನು ತತ್ವಜ್ಞಾನ ಸ್ಮರಣೆಯಿಂದ ಭ್ರಷ್ಟನಾಗುವುದೇ "ಸ್ಮೃತಿಭ್ರಂಶ" ರೂಪದ ಪ್ರಜ್ಞಾಪರಾಧ.

ಅರ್ಜುನನಿಗೆ ಆದದ್ದು ಅತತ್ವಾಭಿನಿವೇಶ! :

"ಅ ತತ್ವಾಭಿನಿವೇಶ"ವೆಂದರೆ, 0ುುಕ್ತವಲ್ಲದ್ದನ್ನು ತತ್ವವೆಂದು ತಿಳಿ0ುುವುದು.ಚರಕರು ಪುರುಷವಿಚ0ು ಶಾರೀರದಲ್ಲಿ ವಿವರಿಸಿದಂತೆ ಅರ್ಜುನನಿಗೆ ಆದದ್ದು ವಿಪ್ರತ್ಯ0ು.

"ಕಾ0ರ್ುಕಾ0ರ್ು ಹಿತಾಹಿತ ಶುಭಾಶುಭ ವಿಷ0ುೇಷು ವಿಪರೀತಾಭಿನಿವೇಶೋ ವಿಪ್ರತ್ಯ0ು:"

ಕಾ0ರ್ು,ಅಕಾ0ರ್ು,ಹಿತ,ಅಹಿತ,ಶುಭ,ಅಶುಭಗಳ ವಿವೇಚನೆ0ುನ್ನುಸರಿ0ಾಗಿ ಮಾಡಲಾಗದೇ ಅಕಾ0ರ್ುವನ್ನು ಕಾ0ರ್ುವೆಂದೂ ಅಹಿತವನ್ನು ಹಿತವೆಂದೂ ಅಶುಭವನ್ನು ಶುಭವೆಂದೂ ದೃಢವಾಗಿ ತಿಳಿ0ುುವುದು ವಿಪ್ರತ್ಯ0ುವಾಗಿದೆ.

ಈ ಅತತ್ವಾಭಿನಿವೇಶ"ಉಂಟಾಗುವ ವಿಧಾನವನ್ನು ಚರಕರು ಹೀಗೆ ಹೇಳೀದ್ದಾರೆ..........

ಹೃದ0ುಂ ಸಮುಪಾಶ್ರಿತ್ಯ ಮನೋ ಬುದ್ಧಿವಹಾ: ಸಿರಾ:।
ದೀಷಾ: ಸಂದೂಷ್ಯ ತುಷ್ಯಂತಿ ರಜೋ ಮೀಹಾ ವೃತಾತ್ಮನ:॥8॥

ರಜಸ್ತಮೋಭ್ಯಂ ವೃದ್ಧಾಭ್ಯಾಂ ಬುದ್ಧೌ ಮನಸಿ ಚಾ ವೃತೇ।
ಹೃದ0ುೇ ವ್ಯಾಕುಲೇ ದೋಷೈರಥ ಮೂಢೋಲ್ಪ ಚೇತನ:॥9॥

ವಿಷಮಾಂ ಕುರುತೇ ಬುದ್ಧಿಂ ನಿತ್ಯಾನಿತ್ಯೇ ಹಿತಾಹಿತೇ।
ಅತತ್ವಾಭಿನಿವೇಶಂ ತಮಾಹುರಾಪ್ತಾ ಮಹಾಗದಮ್॥10॥ (ಚ.ಚಿ.10)

ರಜಸ್ಸು,ತಮಸ್ಸುಗಳು ಹೆಚ್ಚಾಗಿ,ಹೃದ0ುವನ್ನು ಆವರಿಸಿರಲು, ಪ್ರಕುಪಿತವಾದ ದೋಷಗಳು ಮನೋಬುದ್ಧಿವಹಸಿರೆಗಳ ಮೂಲಕ ಹೃದ0ುವನ್ನು ಪ್ರವೇಶಿಸಿ ಬುದ್ಧಿ

ಹಾಗೂ ಮನಸ್ಸುಗಳನ್ನು ಆವರಿಸಿ ಹೃದಯವನ್ನು ವ್ಯಾಕುಲಗೊಳಿಸುತ್ತವೆ. ಹೀಗೆ ದಿಗ್ಭ್ರಾಂತವಾದ ಮನಸ್ಸುಳ್ಳ ವ್ಯಕ್ತಿಯು ಮೂಢನಾಗಿ ಚೈತನ್ಯವಿಲ್ಲದಂತಾಗಿ ನಿತ್ಯ,ಅನಿತ್ಯ,ಹಿತ,ಅಹಿತವಾದ, ವಿಷಯಗಳಲ್ಲಿ ವಿಷಮವಾಗಿ ವರ್ತಿಸತೊಡಗುತ್ತದೆ. ಇದನ್ನು "ಅತತ್ವಾಭಿನಿವೇಶ"ವೆಂಬ ಮಹಾವ್ಯಾಧಿಯೆಂದು ತಿಳಿಸಲಾಗಿದೆ.

ಅತತ್ವಾಭಿನಿವೇಶಕ್ಕೆ ಚಿಕಿತ್ಸೆಯೇನು? :

ಸುಹೃದಶ್ಚಾನು ಕೂಲಾಸ್ತಂ ಸ್ವಾಪ್ತಾ ಧರ್ಮಾರ್ಥವಾದಿನ:।
ಸಂಯೋಜಯೇಯುರ್ವಿಜ್ಞಾನಧೈರ್ಯಸ್ಮೃತಿಸಮಾಧಿಭಿ:॥63॥ (ಚ.ಚಿ.10)

ಅನುಕೂಲನೂ ಆಪ್ತನೂ,ಧರ್ಮಾರ್ಥಗಳನ್ನು ತಿಳಿದವನೂ ಆದ ಗೆಳೆಯನಿಂದ (ಮಿತ್ರನಂತೆ ವರ್ತಿಸುವ ವೈದ್ಯನಿಂದ) ವಿಜ್ಞಾನ, ಧೈರ್ಯ, ಸ್ಮೃತಿ, ಸಮಾಧಿಗಳಿಂದ ಪ್ರಕೃತಿಗೆ ಮರಳಿ ಯೋಜಿಸಬೇಕು.

ಆಯುರ್ವೇದ ಹೇಳುವಂತೆ, ನಾರಜಸ್ಕಂ ಪ್ರವರ್ತತೇ।

ಬದುಕಿಗೆ ರಜಸ್ಸು ತಮಸ್ಸುಗಳೂ ಬೇಕು.(ರಜಸ್ಸಿಲ್ಲದೆ ಯುದ್ಧ ಮಾಡಲು ಹೇಗೆ ಸಾಧ್ಯ?) ಆದರೆ, ಅವೆರಡೂ ಸತ್ವದ ಅಧೀನದಲ್ಲಿರಬೇಕು. ಅರ್ಜುನನಿಗೆ ಆದದ್ದಾದರೂ ಇದೇ. ತಮಸ್ಸು ಹೆಚ್ಚಾಗಿ ಸತ್ವರಜಸ್ಸುಗಳನ್ನು ಕಡೆಗಾಣಿಸಿ ಮೋಹದ ಆವರಣವಾಗಿ ಕುಳಿತು ಬಿಡುತ್ತಾನೆ.

ವಿಸೃಜ್ಯ ಸಶರಂ ಚಾಪಂ ಶೋಕ ಸಂವಿಗ್ನ ಮಾನಸ:".

ಹೀಗೆ ಶೋಕದಲ್ಲಿ ಮುಳುಗಿದ ಅರ್ಜುನನ ಶೋಕ ಶಲ್ಯವನ್ನು ನಿವಾರಣೆ ಮಾಡುವ ಬಗೆ ಹೇಗೆ? ಇಂತಹ ಸನ್ನಿವೇಶಗಳಲ್ಲಿ ರಜಸ್ಸು ತಮಸ್ಸುಗಳನ್ನು ನೇರವಾಗಿ ನಿಯಂತ್ರಿಸುವುದು ಸರಿಯಾದ ಕ್ರಮವಲ್ಲ, ಸತ್ವದ ಗುಣ ವರ್ಧನೆಯ ಮೂಲಕ ರಜಸ್ಸು ತಮಸ್ಸುಗಳ ಪ್ರಭಾವವನ್ನು ನಿಗ್ರಹಿಸುವುದು ಜಾಣತನ. ಚರಕರ ಮಾತಿನಂತೆ, ಈ ಚಿಕಿತ್ಸೆಗೆ ದಾರಿ ಚಿಕಿತ್ಸೆಯ 9ನೇ (ಉನ್ಮಾದ) ಅಧ್ಯಾಯದಲ್ಲಿದೆ.

ಚಿಕಿತ್ಸಾ ಸೂತ್ರವೇನು? :

ತರ್ಜನಂ ತ್ರಾಸನಂ ದಾನಂ ಹರ್ಷಣಂ ಸಾಂತ್ವನಂಭಯಂ।
ವಿಸ್ಮಯೋ ವಿಸ್ಮೃತೇಹೇತೋ: ನಯಂತಿ ಪ್ರಕೃತಿಂ ಮನ:॥31॥ (ಚ.ಚಿ.9)

ಬೈಯುವುದು, ಹಿಂಸಿಸುವುದು, ಇಷ್ಟವಾದ ವಸ್ತುಗಳಾನ್ನು ಕೊಡುವುದು, ಹರ್ಷಗೊಳಿಸುವುದು,ಸಮಾಧಾನ ಮಾಡುವುದು, ಭಯಪಡಿಸುವುದು, ವಿಸ್ಮಯಗೊಳಿಸುವುದು. ಈ ವಿಧಾನಗಳಿಂದ ವಿಸ್ಮೃತಿಯ ಕಾರಣಗಳಿಂದ ಮನಸ್ಸನ್ನು ಹೊರತಂದು ಪ್ರಕೃತಿಯಲ್ಲಿ ನಿಯೋಜನ ಮಾಡಬೇಕು.

ಈ ಸೂತ್ರವನ್ನು ದೇಶ, ಕಾಲ, ವ್ಯಕ್ತಿಗಳಿಗನುಸಾರ ಬೇರೆ ಬೇರೆಯಾಗಿ ಯುಕ್ತಿಯುಕ್ತವಾಗಿ ಅಳವಡಿಸಬೇಕು ಮೋಹಾವಿಷ್ಟನಾಗಿ, ಏನು ಮಾಡಬೇಕೆಂದು

ತಿಳಿ0ಯದೇ ಇದ್ದ ಅರ್ಜುನನಿಗೆ ಶ್ರೀ ಕೃಷ್ಣನು ಮಾಡಿದ ಚಿಕಿತ್ಸಾ ವಿಧಾನವೇ ಗೀತೆ0ಯೆಂಬ ಈ ಮೋಡಿ ಮಾತು.

ಸಾಂತ್ವನ ಚಿಕಿತ್ಸೆ :

ಗೀತೆಅಧ್ಯಾ0ಯ 1, ಶ್ಲೋಕ 28 ರಿಂದ 46ರ ವರೆಗಿನ ಅರ್ಜುನ ಶೋಕ ಪೂರ್ಣವಾದಂಥ ಮಾತಿಗೆ ಕೃಷ್ಣನ ಸಾಂತ್ವನ ವಿಧಾನ, ಗೀತೆ0ಯ 3ನೇ ಅಧ್ಯಾ0ಯದ 2, 3ನೇ ಶ್ಲೋಕಗಳಲ್ಲಿ..............

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ।
ಅನಾ0ರ್ಯಜುಷ್ಟಮಸ್ವರ್ಗ್ಯಂ ಅಕೀರ್ತಿಕರಮರ್ಜುನ॥2॥

ಕ್ಲೈಬ್ಯಂ ಮಾಸ್ಮ ಗಮ: ಪಾರ್ಥನೈತತ್ತ್ವ0ಯ್ಯುಪಪದ್ಯತೇ।
ಕ್ಷುದ್ರಂ ಹೃದ0ಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠಪರಂತಪ॥3॥

ಆದರೆ, ಈ ಮಾತುಗಳಿಗೆ ಅರ್ಜುನ ಜಗ್ಗಲಿಲ್ಲ, ಇನ್ನೂ ವಾದಿಸುತ್ತಲೇ ಹೋಗಿತ್ತಾನೆ. ನಾನು ಗುರುಗಳಿಗೆ, ಬಂಧುಗಳಿಗೆ ಹೊಡೆ0ಯಲಾರೆ, ಪಾಪಬರುತ್ತದೆ, ಪ್ರ0ಯೋಜನವೇನು? ಇತ್ಯಾದಿ ಇತ್ಯಾದಿ....

ದಾನ ಚಿಕಿತ್ಸೆ :

ಈಗ ಕೃಷ್ಣ ವಸ್ತು ಸ್ಥಿತಿ0ಯ ನಿರೂಪಣೆಗಾಗಿ ಜ್ಞಾನವನ್ನು ಕೊಡುತ್ತಾನೆ. ವಸ್ತುತ: ಆತ್ಮನಿಗೆ ಮರಣವಿಲ್ಲ. ಒಂದು ವೇಳೆ ಮರಣವೆಂದರೂ ತಪ್ಪಲಾಗದ್ದಕ್ಕೆ ಶೋಕವೇಕೆ? ಇತ್ಯಾದಿ "ಅಶೋಚ್ಯಾನಸ್ವಶೋಚಸ್ತ್ವಂ""ವಾಸಾಂಸಿ ಜೀರ್ಣಾನಿ"

ನೈನಂ ಛಿಂದಂತಿ ಶಸ್ತ್ರಾಣಿ" "ಜಾತಸ್ಯ ಹಿ ಧ್ರುವೋ ಮೃತ್ಯು:"

ಇತ್ಯಾದಿ 2ನೇ ಅಧ್ಯಾ0ಯದ 11ನೇ ಶ್ಲೋಕದಿಂದ 30 ರವರೆಗೆ ತಿಳಿಸಿ ಹೇಳಲು ಪ್ರ0ಯತ್ನ ಪಡುತ್ತಾನೆ.

ತರ್ಜನ-ತ್ರಾಸನ ಚಿಕಿತ್ಸೆ :

ಕಡೆಗೆ ಮಾನಸಿಕವಾದ ಹಿಂಸೆ0ಯಾಗುವಂತೆ ಬೈದು ಮಾತನಾಡುತ್ತಾನೆ.

"ಸ್ವಧರ್ಮಮಪಿಚಾವೇಕ್ಷ್ಯ ನ ವಿಕಂಪಿತು ಮರ್ಹಸಿ"
ಧರ್ಮ್ಯಾದ್ಧಿ 0ಯುದ್ಧಾಚ್ಛ್ರೇ0ಯೋನ್ಯತ್ ಕ್ಷತ್ರಿ0ಯಸ್ಯ ನ ವಿದ್ಯತೇ।
"ಸ್ವಧರ್ಮಂಕೀರ್ತಿಂಚ ಹಿತ್ವಾ ಪಾಪಮವಾಪ್ಸ್ಯಸಿ"
ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇಽವ್ಯ0ಯಾಮ್।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ॥34॥

ಭ0ಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾ:।
0ಯೇಷಾಂಚತ್ವಂಬಹುಮತೋಭೂತ್ವಾ0ಯಾಸ್ಯಸಿ ಲಾಘವಂ॥35॥

ಅವಾಚ್ಯವಾದಾಂಶ್ಚಬಹೂನ್ ವದಿಷ್ಯಂತಿ ತವಾಹಿತಾ:। ನಿಂದಂತಸ್ತವ ಸಾಮರ್ಥ್ಯಂತತೋದು:ಖತರಂ ನು ಕಿಂ।36॥

ಈ ವಾದಗಳಿಂದ ಅರ್ಜುನನಲ್ಲಿ ಭಯ ಹುಟ್ಟಿಸಿ ತಮಸ್ಸನ್ನು ಗೆಲ್ಲುವ,ಮೋಹದಿಂದ ಬಿಡಿಸುವ ಪ್ರಯತ್ನ ನಡೆಯುತ್ತದೆ.

ಹರ್ಷಣ ಚಿಕಿತ್ಸೆ :

ಇದು ನಿನಗೆ ಸಿಕ್ಕಿರುವ ಒಂದು ಸದವಕಾಶ.ಕ್ಷತ್ರಿಯರಿಗೆ ಇದು ಸ್ವರ್ಗದ್ವಾರ. ನಿನಗೆ, "ಸ್ವರ್ಗ" ಅಥವಾ "ರಾಜ್ಯ" 2ರಲ್ಲೊಂದು ಸಿಗುತ್ತದೆಂಬ ಆಸೆತೋರಿಸಿ ಖುಷಿಪಡಿಸಿ ಸತ್ವ ರಜಗಳ ವೃದ್ಧಿಗೆ ಪ್ರಯತ್ನ ಮಾಡುತ್ತಾನೆ.

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಂ।
ಸುಖಿನ: ಕ್ಷತ್ರಿಯಾ: ಪಾರ್ಥ ಲಭಂತೇ ಯುದ್ಧಮೀದೃಶಂ॥36॥

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತ ನಿಶ್ಚಯ:॥37॥

ಆತ್ಮವಿಜ್ಞಾನ(ದಾನ ಚಿಕಿತ್ಸೆ-3) :

ಈ ಎಲ್ಲಾವಿಧಾನಗಳಿಂದ ಅರ್ಜುನನ ಸ್ಥಿತಿ ಪೂರ್ತಿ ಬದಲಾಗದಿದ್ದರೂ ತನ್ನ ಹಿಂದಿನ ವಾದದ ಮಂಡನೆಯನ್ನು ನಿಲ್ಲಿಸಿ

"ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ।
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ॥"

ಎಂಬ ವಾಕ್ಯಗಳ ಮೂಲಕ ಕೃಷ್ಣನ ಮಾತಿಗೆ ಸ್ಪಂದಿಸುತ್ತಾನೆ.

ಈಗ ಕೃಷ್ಣನು ಕರ್ಮ,ಕರ್ಮಫಲ,ಸನ್ಯಾಸ ಇತ್ಯಾದಿ ವಿಷಯಗಳ ಕುರಿತು 3-4ನೇಯ ಅಧ್ಯಾಯಗಳಲ್ಲಿ ಇನ್ನಷ್ಟು ಬದಲಾದ ಅರ್ಜುನ

ಸರಿ ತಪ್ಪುಗಳ ವಿಮರ್ಶಾತ್ಮಕ ಪ್ರಶ್ನೆಗಳನ್ನುಕೇಳತೊಡಗುತ್ತಾನೆ. ಅವುಗಳಿಗೆಲ್ಲಾ ಉತ್ತರಿಸುತ್ತಾ ಆತ್ಮಜ್ಞಾನವನ್ನೂ ಮರಣೋತ್ತರ ವಿಜ್ಞಾನವನ್ನೂ, ಧ್ಯಾನ, ರಾಜಯೋಗ ವಿಧಾನಗಳನ್ನು ಕಲಿಸುತ್ತಾನೆ. ಇದು ದಾನ ಚಿಕಿತ್ಸೆಯ 2ನೇ ವಿಧಾನ. ಇಷ್ಟೆಲ್ಲಾ ಆದರೂ ಆರ್ಜುನನಲ್ಲಿ ಪೂರ್ಣಸುಧಾರಣೆ ಕಾಣಲಿಲ್ಲ. ಆದರೆ ಜ್ಞಾನದ ಉತ್ಪತ್ತಿಯಾದರೂ ಇನ್ನೂ ಸಂಶಯ ಉಳಿಯುತ್ತದೆ.

"ಮೋಹೋಯಂ ವಿಗತೋ ಮಮ" 11ನೇಅಧ್ಯಾಯದ ಮೊದಲನೇ ಶ್ಲೋಕದಲ್ಲಿ ಹೇಳಿದರೂ ದ್ರಷ್ಟುಮಿಚ್ಛಾಮಿ ತೇ ರೂಪಂ ಐಶ್ವರಂ ಪುರುಷೋತ್ತಮ॥

"ನೀನು ಪ್ರತ್ಯಕ್ಷ ದರ್ಶನ ನೀಡಿದಾಗಲೇ ನನಗೆ ಪೂರ್ಣನಂಬಿಕೆ" ಎಂಬ ಮಾತಿನಿಂದ ಸಂಶಯವನ್ನು ವ್ಯಕ್ತಪಡಿಸುತ್ತಾನೆ. ಆಗ, ದಿವ್ಯವಾದ ಚಕ್ಷುಸ್ಸನ್ನು ನೀಡಿ ತನ್ನ ದಿವ್ಯ ರೂಪವನ್ನು ಶ್ರೀ ಕೃಷ್ಣಕಾಣಿಸುತ್ತಾನೆ.

6. ವಿಸ್ಮ0ು ಚಿಕಿತ್ಸೆ :

ಪರಮಾತ್ಮನ ಅದ್ಭುತವಾದ ವಿಶ್ವರೂಪದರ್ಶನವನ್ನು ಮಾಡಿಸುತ್ತಾನೆ. 10ನೇ ಅಧ್ಯಾ0ುದದರೆಗೆ ಮಾಡಿದ ಪ್ರ0ುತ್ನದಿಂದ ಸತ್ವವೃದ್ಧಿ0ಾಗಿದ್ದರೂ ರಜಸ್ಸು, ತಮಸ್ಸುಗಳನ್ನು ನಿಗ್ರಹಿಸುವಷ್ಟು ಸಮರ್ಥವಾಗುವುದಿಲ್ಲ. ಈಗ ವಿಶ್ವರೂಪ ದರ್ಶನವನ್ನು ಕಂಡ ಅರ್ಜುನನಿಗೆ ಹರ್ಷ, ಭ0ು, ಭೀತಿಗಳು ಏಕ ಕಾಲದಲ್ಲಿ ಹುಟ್ಟಿ ಸಂಪೂರ್ಣ ಶರಣಾಗುತ್ತಾನೆ.

"ಸಗದ್ಗಭೀತಭೀತ: ಪ್ರಣಮ್ಯ॥" "ಪಶ್ಯಾಮಿದೇವಾಂಸ್ತವದೇವದೇಹೇ" ಯಿಂದ "ತ್ವ0ಾ ತತಂ ವಿಶ್ವಮನಂತರೂಪ ॥" 15 ರಿಂದ38 ರವರೆಗೆ ಭಕ್ತಿ0ುತವಾದ ಶರಣಾಗತಿ ವ್ಯಕ್ತಿವಾಗುತ್ತದೆ.

"ನಮೋ ನಮಸ್ತೇಸ್ತು ಸಹಸ್ರಕೃತ್ವ: ಪುನಶ್ಚಭೂ0ೋಪಿ ನಮೋ ನಮಸ್ತೇ ॥39॥
ನಮ: ಪುರಸ್ತಾದಥ ಪೃಷ್ಠತಸ್ತೇ ನಮೋಸ್ತುತೇ ಸರ್ವತ ಏದ ಸರ್ವ॥

ವಾಕ್ಯಗಳು ಪೂರ್ಣ ಶರಣಾಗತಿ0ು ಲಕ್ಷಣಗಳು ಹೀಗೆ ವಿಸ್ಮ0ು ಚಿಕಿತ್ಸೆಯಿಂದ ವಿಸ್ಮೃತಿ ನಾಶವಾಗುತ್ತದೆ. ಆದರೂ ಪುನಃ ವಿಸ್ಮೃತಿ0ಾಗದಂತೆ, ಅಪುನರ್ಭವ ಚಿಕಿತ್ಸೆಗಾಗಿ ಮುಂದಿನ ಅಧ್ಯಾ0ುಗಳಲ್ಲಿ ವಿಶೇಷವಾಗಿ ಗುಣತ್ರ0ುಗಳು, ಮೋಕ್ಷಜ್ಞಾನ ಕುರಿತು ವಿವರಣೆ ಮುಂದುವರಿ0ುತ್ತದೆ.

ಚಿಕಿತ್ಸೆ0ು ಸಾಫಲ್ಯ! :

ಗೀತೆ0ು ಕಡೆ0ುಲ್ಲಿ 18ನೇ ಅಧ್ಯಾ0ುದಲ್ಲಿ ಕೃಷ್ಣ ಚಿಕಿತ್ಸೆ0ು ಫಲತೆ0ು ಕುರಿತು ಸಂಶ0ು ಪರಿಹಾರಕ್ಕಾಗಿ ಪ್ರಶ್ನೆ ಮಾಡುತ್ತಾನೆ.

ಕಚ್ಚಿದೇತಚ್ಛ್ರುತಂ ಪಾರ್ಥತ್ವ0ೈಕಾಗ್ರೇಣ ಚೇತಸಾ।
ಕಚ್ಚಿದಜ್ಞಾನ ಸಂಮೋಹ: ಪ್ರನಷ್ಟಸ್ತೇ ಧನಂಜ0ು॥72॥ (ಗೀತೆ-18)

ನೀನು ಏಕಾಗ್ರ ಚಿತ್ತದಿಂದ ಎಲ್ಲವನ್ನೂ ಕೇಳಿದೆ0ಾ? ನಿನ್ನ ಅಜ್ಞಾನದಿಂದ ಕೂಡಿದ ಮೋಹ ನಾಶವಾಯಿತೇ? ಇದಕ್ಕೆ ಅರ್ಜುನ ನಿಶ್ಚ0ುವಾದ ಸಫಲತೆ0ುನ್ನು ಈ ವಾಕ್ಯಗಳಲ್ಲಿ ಹೇಳುತ್ತಾನೆ.

ನಷ್ಟೋ ಮೋಹ: ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮ0ಾಚ್ಯುತ।
ಸ್ಥಿತೋಸ್ಮಿ ಗತ ಸಂದೇಹ: ಕರಿಷ್ಯೇ ವಚನಂ ತವ ॥73॥

ಮೋಹನಷ್ಟವಾಯಿತು, ಸ್ಮೃತಿ ಪ್ರಾಪ್ತಿ0ಾಯಿತು, ಸಂದೇಹ ನಿವಾರಣೆ0ಾಯಿತು ಎನ್ನುತ್ತಾನೆ.

ಇದೊಂದು ಮಾನಸಿಕ ಚಿಕಿತ್ಸಾ ಕೈಪಿಡಿ :

ಒಟ್ಟಿನಲ್ಲಿ ಮಾನಸಿಕಚಿಕಿತ್ಸೆ0ು ವಿವಿಧ ಹರಹುಗಳನ್ನು ವಿಸ್ತರಿಸಿ ತಿಳಿಸುವ ನಾಟಕ ಇಲ್ಲಿ ಕಂಡು ಬರುತ್ತದೆ.

0ಯತ್ರ0ಯೋಗೇಶ್ವರ: ಕೃಷ್ಣೋ 0ಯತ್ರ ಪಾರ್ಥೋಧನುರ್ಧರ:।
ತತ್ರ ಶ್ರೀರ್ವಿಜ0ಯೋಭೂತಿರ್ಧ್ರುವಾ ನೀತಿರ್ಮತಿರ್ಮಮ॥

ಎಂಬ ಮಾತಿನ ಮೂಲಕ ಕೃಷ್ಣಾರ್ಜುನರು ಕೇವಲ ಉಪಲಕ್ಷಣವಾಗಿದ್ದು ಜಗತ್ತಿನ ಎಲ್ಲ ಮಾನಸಿಕ ರೋಗಿಗಳ ಚಿಕಿತ್ಸೆಗಾಗಿ ಮನೋವೈದ್ಯರರ ಉಪ0ಯೋಗಕ್ಕೆ ಇದು ಸಂಪೂರ್ಣ ಕೈ ಪಿಡಿ ಎನಿಸುತ್ತದೆ.

ಶ್ರೀ ಕೃಷ್ಣಾರ್ಪಣಮಸ್ತು

ಗೀತೆ ರೂಪಿಸಿದ ಪ್ರಪತ್ತಿ

– ಪ್ರೊ. ಕೆ.ಎಸ್. ಕಣ್ಣನ್

ಅಭಿನಂದ್ಯ ಅಭಿಯಾನ:

ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನವು ಕೈಗೊಂಡಿರುವ ಶ್ರೀಭಗವದ್‌ಗೀತಾ ಅಭಿಯಾನವು ಒಂದು ಶ್ರೇಷ್ಠ ಜ್ಞಾನಯಜ್ಞವಾಗಿದ್ದು, ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಕ್ಕೂ, ಪರ್ಯವಸಾನದಲ್ಲಿ ಭಾರತಕ್ಕೂ ವಿಶ್ವಕ್ಕೂ ಹಿತವನ್ನುಂಟುಮಾಡುವುದಾಗಿದೆ. ಇದರ ದಿವ್ಯ ನೇತೃತ್ವವನ್ನು ವಹಿಸಿರುವ ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳಿಗೆ ಇಡೀ ಸಮಾಜವೇ ಕೃತಜ್ಞವಾಗಿರಬೇಕು.

ಗೀತೆಯ ಹಿರಿಮೆ:

ಮಹಾಭಾರತದ ಒಂದು ಭಾಗ (ಮಹಾಭಾರತ 6–25 ರಿಂದ 6–42) ವಾದ ಗೀತೆಯ ಹಿರಿಮೆಯನ್ನು ಎಷ್ಟು ಹೇಳಿದರು ಕಡಿಮೆಯೇ. ಶಂಕರಭಗವತ್ಪಾದರು ಅದನ್ನು "ಸಮಸ್ತ–ವೇದಾರ್ಥ–ಸಾರ–ಸಂಗ್ರಹ–ಭೂತ"ವೆಂದು ಹೇಳಿರುವರೆಂದರೆ ಎಲ್ಲವನ್ನೂ ಹೇಳಿದಂತೆಯೇ. ಗೀತೆಯು ತನ್ನನ್ನು ಉಪನಿಷತ್ತು–ಬ್ರಹ್ಮವಿದ್ಯೆ–ಯೋಗಶಾಸ್ತ್ರವೆಂದು ನಿರ್ದೇಶಿಸಿಕೊಂಡಿದೆ. ಗೀತೆಯೊಂದು "ಧರ್ಮ್ಯಸಂವಾದ" (ಗೀತೆ 18–70), ಅದ್ಭುತವೂ ರೋಮಾಂಚಕವೂ (18–74) ಆಗಿರುವ ಪರಗುಹ್ಯಯೋಗ (18–75), ಅದರ ಅಧ್ಯಯನವು ಜ್ಞಾನಯಜ್ಞ (18–70) ; ಶ್ರವಣವು ಶುಭ–ಲೋಕ–ಪ್ರಾಪಕ (18–71), ಗೀತೆಯು ಸಾಕ್ಷಾದ್ ಯೋಗೇಶ್ವರ ಕೃಷ್ಣನ ಕಥನ (18–75).

ಗೀತೆಯ ಹಿನ್ನೆಲೆ:

ಗೀತಾಶಾಸ್ತ್ರದ ಅವತಾರದ ಹಿನ್ನೆಲೆಯನ್ನು ಶ್ರೀ ಯಾಮುನಾಚಾರ್ಯರು ತಮ್ಮ ಗೀತಾರ್ಥ ಸಂಗ್ರಹದಲ್ಲಿ (ಶ್ಲೋ. 5) ಸೊಗಸಾಗಿ ಮೂಡಿಸಿದ್ದಾರೆ.

"ಅಸ್ಥಾನ–ಸ್ನೇಹ–ಕಾರುಣ್ಯ–ಧರ್ಮಾಧರ್ಮ–ಧಿಯಾಽಽಕುಲಮ್ ।
ಪಾರ್ಥಂ ಪ್ರಪನ್ನಮ್ ಉದ್ದಿಶ್ಯ ಶಾಸ್ತ್ರಾವತರಣಂ ಕೃತಮ್ ॥

ಮೈತ್ರಿ–ಕರುಣೆಗಳು ಜೀವನದಲ್ಲಿ ಬೇಕು ; ಆದರೆ ಅಸ್ಥಾನದಲ್ಲಿ ಬಾರದು.

ಇದಕ್ಕೆ ಹಿನ್ನೆಲೆಯಾಗಿ ಧರ್ಮಾಧರ್ಮ ವಿವೇಕವಿರಬೇಕು. ಅರ್ಜುನನಿಗೆ ಅದಿರಲಿಲ್ಲ. ಮೊದಮೊದಲು ಪ್ರಜ್ಞಾವಾದದ ಭಾಷಣ (ಗೀತೆ 2-11)ವನ್ನು ಮಾಡಿದನಾದರೂ, ಭವರೋಗವೈದ್ಯನಾದ ಶ್ರೀಕೃಷ್ಣನು ಆತನ ಹೃದಯದೌರ್ಬಲ್ಯ (ಗೀತೆ 2-3)ವನ್ನು ಗುರುತಿಸಿ, ಮೋಹಾಪಹಾರಕ ವಾದ ಜ್ಞಾನಭೈಷಜ್ಯವನ್ನು ಕರುಣಿಸಿದನು. ಏಕೆಂದರೆ ಪಾರ್ಥನು ಮೊದಲು ಅಹಂಕಾರದಿಂದ 'ನಾನು ಯುದ್ಧಮಾಡೆ' ಎಂದನಾದರೂ (ಗೀತೆ 2-9, 18-59) ತನ್ನ ಮನೋಭ್ರಮಣವನ್ನು ತಾನೇ ಗುರುತಿಸಿಕೊಂಡು (ಗೀತೆ 1-30), "ಯಾವುದು ಶ್ರೇಯಸ್ಸೆಂಬುದನ್ನು ಹೇಳು, ಧರ್ಮದ ವಿಷಯದಲ್ಲಿ ನನಗೆ ಚೇತೋಮೋಹವಾಗಿದೆ, ನಾನು ಶಿಷ್ಯ, ನಿನ್ನಲ್ಲಿ ಪ್ರಪನ್ನ(ಶರಣಾಗತ), ನನಗೆ ಶಾಸನ ಮಾಡು" ಎಂಬ ಅಭಿಪ್ರಾಯದ ಮಾತನ್ನು ಹೇಳಿದ (ಗೀತೆ 2-7). ಶಾಧಿ ಮಾಂತ್ವಾಂ ಪ್ರಪನ್ನಮ್ ॥ ಹೀಗೆ ಪ್ರಪತ್ತಿಮಾಡಿ ಕೊಂಡ ಅರ್ಜುನನು ಭಕ್ತನೂ ಸಖನೂ ಆದ ಕಾರಣ (ಗೀತೆ 4-3), ಕೃಷ್ಣನು ಆತನಿಗೆ ಯೋಗಮಾರ್ಗೋಪದೇಶವನ್ನು ಮಾಡಿದ. ಭಗವಂತನ ಸರ್ವಭೂತ ಸುಹೃದ್ (ಗೀತೆ 5-29) ಭಾವವನ್ನು ನೆನೆಸಿಕೊಂಡು ಆತನಲ್ಲಿ ಭಕ್ತಿ-ಪ್ರಪತ್ತಿಗಳನ್ನು ಮಾಡಿದ ಯಾರಿಗಾದರೂ ಶ್ರೀಕೃಷ್ಣನ ದಿವ್ಯೋಪದೇಶವು ಲಭ್ಯವೇ ಸರಿ.

ಬಂಧನ ಸ್ವರೂಪ :

ಜೀವನದಲ್ಲಿ ಕಾಲಚಕ್ರವುರುಳಿದಂತೆ ನಮಗೆ ಗೋಚರವಾಗುವುದು ಒಂದೇ. ಸುಖದುಃಖಚಕ್ರ - "ಚಕ್ರವತ್ ಪರಿವರ್ತಂತೇ ದುಃಖಾನಿ ಚ ಸುಖಾನಿ ಚ" ಸುಹೃತ್ತಾದ ಭಗವಂತನನ್ನು ಸುಖದಲ್ಲಿ ಮರೆಯುತ್ತೇವೆ. ದುಃಖದಲ್ಲಿ ಜರೆಯುತ್ತೇವೆ. ನಮ್ಮ ದೃಷ್ಟಿ ಸಂಕುಚಿತ. ನಮ್ಮ ಚರ್ಮಚಕ್ಷುಸ್ಸಿಗೆ ಕಾಣುವುದು ಬರೀ ಶರೀರ. ಆದರೆ ಜೀವನ ಸ್ಥಿತಿ-ಭೋಗ-ಉತ್ಕ್ರಮಣಾದಿದಶೆಗಳನ್ನು ಜ್ಞಾನ ಚಕ್ಷುಸ್ಸಿದ್ದವರು ಕಾಣುವರು (ಗೀತೆ 15-11) ; ಯೋಗಿಗಳೂ ಪ್ರಯತ್ನಪಟ್ಟರೆ ನೋಡಬಲ್ಲರು, ನಾವು ಪ್ರಯತ್ನಪಟ್ಟೂ ಕಾಣಲಾರೆವು (ಗೀತೆ 15-11)

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥ (15-10)

ನಮ್ಮ ಸ್ಥಿತಿ-ಗತಿಗಳೇ ಅಗೋಚರವಾಗಿರುವಾಗ ನಮ್ಮ ಯೋಗ-ಕ್ಷೇಮಗಳನ್ನು ಅದೆಂತು ಅರಿತೇವು, ಬಂಧ-ಮೋಕ್ಷಗಳನ್ನೇನು ಅರಿತೇವು ? ಬಲ್ಲವನು ಯೋಗೇಶ್ವರ, ಆತನು ಕೊಡುವ ಅರಿವಿನಂತೆ, ಪ್ರಕೃತಿಜವಾದ ತ್ರಿಗುಣಗಳು ದೇಹದಲ್ಲಿ ದೇಹಿಯನ್ನು ಬಂಧಿಸುವುವು (ಗೀತೆ 14-5) :

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮ್ ಅವ್ಯಯಮ್ ॥

ನಾವು ಮಾಡುವ ಕರ್ಮವು ಯಜ್ಞಕ್ಕಾಗಿ ಆದಲ್ಲಿ ಸರಿ ; ಇಲ್ಲದಿದ್ದರೆ ಅದುವೇ ಬಂಧನ (ಗೀತೆ 3–9)

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।

ಬರೀ ಅಸುರೀ ಸಂಪತ್ತನ್ನೇ ಸಂಪಾದಿಸಿಕೊಂಡರೆ ಬಂಧನವು ಸಿದ್ಧ (ಗೀತೆ 16–5)

ದೈವೀ ಸಂಪದ್ ವಿಮೋಕ್ಷಾಯ ನಿಬಂಧಾಯಾಸುರೀ ಮತಾ ॥

ಅಷ್ಟೇ ಅಲ್ಲ, ಆಸುರವಾದ ಹುಟ್ಟೂ, ಜನ್ಮಪರಂಪರೆಯೂ, ಅಧಮವಾದ ಗತಿಯೂ ಘಟಿಸುವುವೇ (ಗೀತೆ 16–20) ;

ಆಸುರೀಂ ಯೋನಿಮ್ ಆಪನ್ನಾಃ ಮೂಢಾಃ ಜನ್ಮನಿ ಜನ್ಮನಿ ।
ಮಾಮ್ ಅಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥

ಆದರೆ ಜೀವನು 'ಪರಾ ಶಾಂತಿ'ಗೂ 'ಶಾಶ್ವತಸ್ಥಾನ'ಕ್ಕೂ ಅರ್ಹನು ; ಸರ್ವಭವದಿಂದಲೂ ಈಶ್ವರನಲ್ಲಿ ಶರಣಾಗತಿ ಮಾಡಿದಲ್ಲಿ ಆತನ ಪ್ರಸಾದದಿಂದ ಅವನ್ನು ಪಡೆಯಬಲ್ಲನು (ಗೀತೆ 18–62)

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್–ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥

ದೇವನನ್ನು ಅರಿಯುವುದೆಂತು ? :

ಭಗವಂತನ ಧಾಮವು ಎಂತಿರುವುದೆಂದೇ ನಾವರಿಯೆವು. ಸೂರ್ಯಚಂದ್ರಾಗ್ನಿಗಳ ಬೆಳಕು ಅಲ್ಲಿ ಸಲ್ಲದು ; ಅಷ್ಟು ಪರಮವದು (ಗೀತೆ 15–6) ;

ನ ತದ್ ಭಾಸಯತೇ ಸೂರ್ಯಃ, ನ ಶಶಾಂಕಃ ನ ಪಾವಕಃ ।
ಯದ್‌ಗತ್ವಾ ನ ನಿವರ್ತಂತೇ ತದ್ ಧಾಮ ಪರಮಂ ಮಮ ॥

ಭಗವಂತನೆಂದರೆ ಕ್ಷರವನ್ನೂ ಅಕ್ಷರವನ್ನೂ ಮೀರಿದ 'ಪುರುಷೋತ್ತಮ'ನೇ; ಹಾಗೆಂಬುದಾಗಿಯೇ ಲೋಕದಲ್ಲೂ ವೇದದಲ್ಲೂ ಆತನಿಗೆ ಪ್ರಥೆಯಿರುವುದು (ಗೀತೆ 15–18)

ಯಸ್ಮಾತ್ ಕ್ಷರಮ್ ಅತೀತ್ಯೋಽಹಮ್ ಅಕ್ಷರಾದ್ ಅಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥

ಅಂತಹ ಹಿರಿದಾದ ತತ್ತ್ವವು ಎಲ್ಲರಿಗೂ ಗೋಚರಿಸಿಬಿಡುವಂತಹುದೇ ? ಅವ್ಯಯವೂ ನಿರತಿಶಯವೂ ಆದ ಪರಭಾವವನ್ನು ಅಬುದ್ಧಿಗಳೂ ಮೂಢರೂ ಆದ ನಾವು, ಅದುವೇ ತಾನೆ ಎದುರಿಗೆ ಬಂದರೂ ಗುರುತಿಸಲಾರೆವು ! ಯೋಗಮಾಯೆಯ ಸಮಾವರಣವು ಅದನ್ನು ಮರೆಮಾಚುವುದೇ ! (ಗೀತೆ 7–25).

ನಾಹಂ ಪ್ರಕಾಶಃ ಸರ್ವಸ್ಯ ಯೋಗ–ಮಾಯಾ–ಸಮಾವೃತಃ ।

ಮೂಢೋಯಂ ನಾಭಿಜಾನಾತಿ ಲೋಕೋ ಮಾಮ್ ಅಜಮ್ ಅವ್ಯಯಮ್ ॥

ಈ ಜಗತ್ತೆಲ್ಲವೂ ತ್ರಿಗುಣಮಯವಾದ ಭಾವಗಳಿಂದ ಮೋಹಗೊಂಡಿದೆ. ಭಗವಂತನು ಆ ಭಾವಗಳನ್ನು ಮೀರಿರುವವನು. ತ್ರಿಗುಣಮಯಿಯಾದ ಮಾಯೆಯ ಕಾರಣದಿಂದಾಗಿ ಜಗತ್ತಿಗೆ ಭಗವಂತನ ಅಭಿಜ್ಞಾನವಾಗಲಾರದು. ದಾಟಲಾರದ ಮಾಯೆಯನ್ನು ದಾಟಬೇಕೆಂದರೆ ಇರುವ ಮಾರ್ಗವೊಂದೇ : ಭಗವಂತನಲ್ಲೇ ಪ್ರಪತ್ತಿ ಮಾಡುವುದು (ಗೀತೆ 7–15) ;

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮ್ ಏವ ಯೋ ಪ್ರಪದ್ಯಂತೇ ಮಾಯಮ್ ಏತಾಂ ತರಂತಿ ತೇ ॥

ಭಗವತ್–ಪ್ರೀತಿ :

ನಿಮಗೆ ಯಾರನ್ನಾದರೂ ಕಂಡರೆ ತುಂಬ ಇಷ್ಟವಾಗುವುದಾದರೆ, ಅಂತಹವರಿಗೆ ಒಳ್ಳೆಯದಾಗಲೆಂದು ಆಸೆಪಡುತ್ತೇವೆ. ಹಿತವಚನವನ್ನು ಹೇಳುತ್ತೇವೆ, ಎಂತಹ ಗುಟ್ಟನ್ನಾದರೂ ಅವರಿಗೆ ತಿಳಿಸಿಯೇವು, ಭಗವಂತನ ಪರಿಯೂ ಇದುವೇ. ಇಷ್ಟನಾದ ಅರ್ಜುನನಿಗೆ ಹಿತವಾದ ಮಾತು (ಗೀತೆ 18–64)

ಸರ್ವಗುಹ್ಯತಮಃ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥

ಪ್ರಿಯರಾದವರಲ್ಲಿ ಸುಳ್ಳಾಡುವೆವೇ ? ಮಿಥ್ಯಾಪ್ರತಿಜ್ಞೆಯನ್ನು ಮಾಡುವೆವೆ ? ಎಂದೂ ಇಲ್ಲ. ಸತ್ಯಸಂಧನಾದ ಭಗವಂತನಿಗೂ ಇದು ಅನ್ವಿತವೇ. "ನನ್ನಲ್ಲೇ ಮನಸ್ಸಿಡು. ನನ್ನ ಭಕ್ತನಾಗು ; ನಿನ್ನ ಯಜನ–ವಂದನಗಳನ್ನು ನನಗೆ ಸಲ್ಲಿಸು. ಆಗಿದೋ ನನ್ನನ್ನೇ ಹೊಂದುವೇ ಪ್ರಿಯನಾದ ನಿನ್ನಲ್ಲಿ ಸತ್ಯವಾದ ನನ್ನ ಪ್ರತಿಜ್ಞೆಯಿದು" (ಗೀತೆ 18–65)

ಮನ್ಮನಾ ಭವ ಮದ್‌ಭಕ್ತೋ ಮದ್‌ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿಮೇ ॥

ಲೋಕದಲ್ಲಿ ನಮಗೆ ಎಷ್ಟು ಮಂದಿ ನಿಜವಾದ ಪ್ರೀತಿಯನ್ನು ತೋರಿಸುವರೋ ಇಲ್ಲವೋ, ಆದರೆ ತಾಯಿ–ಮಿತ್ರ–ತಂದೆಯರು ಸ್ವಭಾವತಃ ಹಿತರಾದವರು ; ಮಿಕ್ಕವರು ಕಾರ್ಯಕಾರಣಾನುಸಾರಿಯಾಗಿ, ಅಷ್ಟೆ – ಎನ್ನುವ ಮಾತಿದೆ (ಹಿತೋಪದೇಶ 1–35)

ಮಾತಾ ಮಿತ್ರಂ ಪಿತಾ ಚೇತಿ ಸ್ವಭಾವಾತ್ ತ್ರಿತಯಂ ಹಿತಮ್ ।
ಕಾರ್ಯಕಾರಣತಶ್ಚಾನ್ಯೇ ಭವಂತಿ ಹಿತಬುದ್ಧಯಃ ॥

ಆದರೆ ಭಗವಂತನಲ್ಲಿ ಈ ಮೂವರ ಪ್ರೀತಿಯೂ ದೊರಕುವುದು. ಭಗವಂತನೇ ಹಾಗೆಂದು ಹೇಳಿಕೊಳ್ಳುತ್ತಾನೆ (ಗೀತೆ 9–17)

ಪಿತಾಹಮ್ ಅಸ್ಯ ಜಗತೋ ಮಾತಾ ಧಾತಾ ಪಿತಾಮಹಃ

ತಂದೆಯೂ ಗುರುವೂ ಆಗಿ ಸಖನಂತೆಯೂ ಪ್ರಿಯನಂತೆಯೂ ಇರುವವನು ಭಗವಂತನೆಂಬುದನ್ನು ಅರ್ಜುನನೂ ಗುರುತಿಸುತ್ತಾನೆ (ಗೀತೆ 11–43) ;

ಪಿತಾಸಿ ಲೋಕಸ್ಯ ಚರಾಚರಸ್ಯ ।
ತ್ವಮಸ್ಯ ಪೂಜ್ಯಶ್ಚ ಗುರುರ್ ಗರೀಯಾನ್ ॥ ಹಾಗೂ (11–44) ;
"ಪಿತೇವ ಪುತ್ರಸ್ಯ ಸಖೇವ ಸಖ್ಯುಃ । ಪ್ರಿಯಃ ಪ್ರಿಯಾಯ ..."

ಭಗವಂತನು ದುರ್ಲಭನೆನ್ನುವುದೂ ದಿಟವೇ, ಆದರೆ ಆತನು ಸುಲಭನೂ ಹೌದು. ಹಾಗೆಂದು ಭಗವಂತನೇ ಹೇಳುತ್ತಾನೆ. ಯಾರಿಗೆ ಸುಲಭ? "ಏಕಚಿತ್ತದಿಂದ ಯಾರು ನನ್ನನ್ನು ಸದಾ ಸ್ಮರಿಸುವರೋ ಅಂತಹ ನಿತ್ಯಯುಕ್ತರಾದ ಯೋಗಿಗಳಿಗೆ ನಾನು ಸುಲಭ" (ಗೀತೆ 8–14)

ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥

ಇಂತಹ ಏಕಚಿತ್ತತೆಯಾದರೂ ಪ್ರಪನ್ನನ ಲಕ್ಷಣವೇ ಸರಿ.

ಪ್ರೀತಿ–ಸಂಪಾದನ :

ಈ ಅನನ್ಯಚಿಂತನವನ್ನು ಹೀಗೆ ನಿತ್ಯಾಭಿಯುಕ್ತರಾಗಿ ನಾವು ಮಾಡಿದಲ್ಲಿ, ನಮ್ಮ ಯೋಗಕ್ಷೇಮವನ್ನು ಭಗವಂತನೇ ನೊಡಿಕೊಳ್ಳುವನು. ಆ ಭರವಸೆಯನ್ನಾದರೂ ಭಗವಂತನೇ ಕೊಟ್ಟಿರುವನು (ಗೀತೆ 9–22)

ಅನನ್ಯಾಃ ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಪ್ರೀತಿಯ ಲಕ್ಷಣಗಳು ಆರೆಂದು ನೀತಿಜ್ಞರು ಹೇಳುವರು (ಪಂಚತಂತ್ರ 2–51, 4–13)

ದದಾತಿ ಪ್ರತಿ ಗೃಹ್ಣಾತಿ ಗುಹ್ಯಮ್ ಆ ಖ್ಯಾತಿ ಪೃಚ್ಛತಿ ।
ಭುಂಕ್ತೇ ಭೋಜಯತೇ ಚೈವ ಷಡ್‌ವಿದಂ ಪ್ರೀತಿಲಕ್ಷಣಮ್ ॥

ಪ್ರೀತಿಯಿರುವವರಿಗೆ ಏನನ್ನಾದರೂ ಕೊಡುತ್ತಿರುತ್ತೇವೆ. ಭಗವಂತನಿಗೇನನ್ನು ? ಒಂದು ಎಲೆ ಸಾಕು, ಒಂದು ಹಣ್ಣಾದೀತು. ಬರೇ ನೀರಾದರೂ ಸರಿಯೇ – ಆದರೆ ಕೊಡುವುದನ್ನು ಭಕ್ತಿಯಿಂದ ಕೊಡಬೇಕು. "ಶುದ್ಧಚಿತ್ತರು ಭಕ್ತಿಯಿಂದ ಒಪ್ಪಿಸುವುದನ್ನು ನಾನು ಸ್ವೀಕರಿಸುತ್ತೇನೆ ಎನ್ನುತ್ತಾನೆ, ಶ್ರೀಕೃಷ್ಣ (ಗೀತೆ 9–26)

ಪತ್ರಂ ಪುಷ್ಪಂ ಫಲಂತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯು ಪಹೃತಂ ಅಶ್ನಾಮಿ ಪ್ರಯತಾತ್ಮನಃ ॥

ನಾವು ಮಾಡುವುದೆಲ್ಲವನ್ನೂ – ತಿನ್ನುವುದನ್ನೂ, ಯಜ್ಞದಾನ ತಪಸ್ಸುಗಳನ್ನು ಭಗವಂತನಿಗರ್ಪಿಸಿದರೆ ಕರ್ಮಬಂಧನ ಗಳಿಂದ ಬಿಡುಗಡೆ (ಗೀತೆ 9–27)

ಯತ್‌ಕರೋಷಿ ಯದ್ ಅಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದ್-ಅರ್ಪಣಮ್ ॥

ನಮಗೆ ಲೌಕಿಕ ಸೌಕರ್ಯಗಳು ಎಷ್ಟಿರುವುವೋ ಇಲ್ಲವೋ, ನಮ್ಮ ಮನೋಬುದ್ಧಿಗಳನ್ನು ಆತನಲ್ಲಿ ನೆಲೆಗೊಳಿಸಿದರೆ ಆತನಲ್ಲಿಯೇ ನಮ್ಮ ವಾಸವೆಂಬುದು ಸಿದ್ಧ (ಗೀತೆ 12-8), ಹಾಗೆಯೇ ಅವ್ಯಭಿಚಾರವಾದ ಭಕ್ತಿಯೋಗದಿಂದ ಆತನ ಸೇವೆ ಮಾಡಿದರೆ, ತ್ರಿಗುಣಗಳನ್ನು ಮೀರಿ ಬ್ರಹ್ಮಭೂಯಕ್ಕೆ ಯೋಗ್ಯರಾಗುತ್ತೇವೆ. (ಗೀತೆ 14-26)

ಮಾಂ ಚ ಯೋವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥

ಜೀವನವು ದುಃಖಮಯವಾಗಿ ದುಸ್ತರವಾಗಿರಬಹುದು. ಆದರೆ ಭಗವಚ್ಚಿತ್ತನಾಗಿದ್ದಲ್ಲಿ ಭಗವತ್ ಪ್ರಸಾದದಿಂದ ಸಮಸ್ತ ದುರ್ಗಗಳನ್ನು ದಾಟಬಹುದು (ಗೀತೆ 18-58)

ಅಭೇದ್ಯ ಚಕ್ರಕವಲ್ಲ :

ಪಾಪವು ಯಾರಿಗೆ ಕ್ಷೀಣವಾಗಿದೆಯೋ ಅವರೇ ಭಗವಂತನನ್ನು ಭಜಿಸುವರೆಂಬ ಮಾತಿದೆ (ಗೀತೆ 7-28) ;

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವಂದ್ವಮೋಹ ನಿರ್ಮುಕ್ತಾಃ ಭಜಂತೇ ಮಾಂ ದೃಢವ್ರತಾಃ ॥

ಇದಕ್ಕೆ ಪ್ರತಿಯಾಗಿ, ಭಗವಂತನನ್ನೇ ಶರಣುಹೊಂದಿದವರ ಪಾಪಗಳಿಂದೆಲ್ಲ ಭಗವಂತನು ಬಿಡುಗಡೆ ಮಾಡುವನೆಂಬುದೂ ಇದೆ (ಗೀತೆ 18-66)

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ, ಮಾ ಶುಚಃ ॥

ಹಾಗಿದ್ದರೆ ಯಾವುದು ಮೊದಲು ? – ಎಂಬ ಚಿಂತೆಗೀಡಾಗಬೇಕಿಲ್ಲ.

ಒಂದು ವಸ್ತುವನ್ನು ಪೂರ್ಣವಾಗಿ ಅರಿಯುವುದನ್ನು ಸಂಸ್ಕೃತದಲ್ಲಿ "ಯಚ್ಚ ಯಾವಚ್ಚ" ಅರಿಯುವುದೆನ್ನುತ್ತಾರೆ – "ಏನು, ಎಷ್ಟು". ಭಗವಂತನನ್ನು ಸಹ ಹಾಗೆ "ಯಶ್ಚ ಯಾವಾಂಶ್ಚ" ಅರಿಯಲು ಶಕ್ಯವುಂಟೆಂದು ಕೃಷ್ಣನೇ ಹೇಳುತ್ತಾನೆ (ಗೀತೆ 18-55) ಭಕ್ತ್ಯಾ ಮಾಮ್ ಅಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ॥

ಗೀತಾಮೃತದೋಹನ ಮಾಡಿದವನೂ ಜ್ಞಾನಮುದ್ರೆಯಿಂದ ಕೂಡಿರುವವನೂ ಆದ ಶ್ರೀಕೃಷ್ಣನು ತನ್ನಲ್ಲಿ ಪ್ರಪತ್ತಿ ಮಾಡಿದವರಿಗೆ ಪಾರಿಜಾತದಂತಿರುವವನೆಂದು ಹೇಳುವ ಗೀತಾಧ್ಯಾನಶ್ಲೋಕವೊಂದರೊಂದಿಗೆ ಈ ಲೇಖನವನ್ನು ಭಗವದರ್ಪಣ ಮಾಡುತ್ತೇವೆ.

ಪ್ರಪನ್ನ ಪಾರಿಜಾತಾಯ ತೋತ್ರವೇತ್ರೈಕಪಾಣಯೇ ।
ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ ॥

–: ಕೃಷ್ಣಾರ್ಪಣಮ್ :–

ಗೀತೆಯ ಮೌಲ್ಯ

– ಡಾ. ಮೈಖೇಲ್

ಶ್ರೀಮದ್ಭಗವದ್ಗೀತೆ ಮನುಕುಲದ ಸರ್ವತೋಮುಖ ಏಳಿಗೆಯನ್ನು ಸಾಧಿಸಬಲ್ಲ ಖಚಿತ, ಸುಲಭ, ಸಾರ್ವಕಾಲಿಕ ಮತ್ತು ಸಾರ್ವದೇಶಿಕ ಪರಮಸತ್ಯಗಳನ್ನು ತನ್ನೊಡಲಲ್ಲಿರಿಸಿಕೊಂಡಿರುವ ಅದ್ಭುತ ಆಧ್ಯಾತ್ಮಿಕ ಗ್ರಂಥರತ್ನ. ಚಿಕ್ಕ, ಚೊಕ್ಕ, ಸರಳರೀತಿಯ ಗೀತೆಯ ಬೋಧನೆಗಳು ಮನಸ್ಸು, ಬುದ್ಧಿ ಮತ್ತು ಹೃದಯಗಳನ್ನು ಸೂರೆಗೊಳ್ಳುತ್ತವೆ ; ತನ್ನೆಡೆಗೆ ಸೆಳೆದುಕೊಳ್ಳುತ್ತವೆ. ಈ ಬೋಧನೆಗಳು ಆತ್ಮನಿಗಾಗಿ ಪರಮಾತ್ಮನ ಪ್ರೇಮಗೀತೆಯಾಗಿದೆ. ಹಾಗೆಂದೇ ಇದು ಭಗವದ್ಗೀತೆ. ಈ ಗೀತೆಯ ಮಾಧುರ್ಯವನ್ನು ಸವಿದು ಆನಂದಿಸುವವರು ದಿಟಕು ಧನ್ಯರು.

ಗೀತೆಯ ಮೌಲ್ಯ ಅನಿರ್ವಚನೀಯ. ಅದೇನಿದ್ದರೂ ಅನುಭವಗಮ್ಯ. ಅದು ಅನುಭವಿಸಿದವರ ಜೀವನದಲ್ಲಿ ಅಭಿವ್ಯಕ್ತವಾಗು ವಂಥಹದ್ದು. ಏಕೆಂದರೆ ಗೀತೆಯ ಸಂದೇಶದ ತಿರುಳಿನ ಮಹಾತ್ಮೆ ಅದರ ಅಳವಡಿಸುವಿಕೆ ಮತ್ತು ಅನುಭವಿಸುಕೆಯಲ್ಲಿಯೇ ಅರಿವಿಗೆ ಬರುವಂಥಹದ್ದು. ಗೀತೆಯ ತತ್ತ್ವಗಳು ವ್ಯಕ್ತಿಯ ಅಂತರಂಗವನ್ನು ಮೊದಲು ಬೆಳಗಿಸಿ, ತದನಂತರ ಬಹಿರಂಗವನ್ನು ಬೆಳಗಿಸುತ್ತವೆ. ಇಲ್ಲೇನಿದ್ದರೂ ಮೊದಲು ಆತ್ಮಸಾಕ್ಷಾತ್ಕಾರ, ಆತ್ಮಾನುಭವ, ನಂತರ ತತ್ಪರಿಣಾಮವಾದ ಯಜ್ಞರೂಪೀ ಬದುಕಿನ ಅನಾವರಣ ಮತ್ತು ತನ್ಮೂಲಕ ಲೋಕಸಂಗ್ರಹ. ಈ ಬದುಕಿನ ಅಲೌಕಿಕ ಆನಂದದ ಅನುಭೂತಿಯ ಅಭಿವ್ಯಕ್ತಿಯೇ ಶ್ರೀಮದ್‌ಭಗವದ್ಗೀತೆ. ಇದನ್ನು ಗೀತೆ ಸ್ಥಿತಪ್ರಜ್ಞ, ಕರ್ಮಯೋಗಿ, ಯೋಗಾರೂಢ, ಜ್ಞಾನಿ, ಭಕ್ತ, ಗುಣಾತೀತರ ಕುರಿತು ಹಾಡಿದಾಗ ಸ್ಪಷ್ಟಪಡಿಸುತ್ತದೆ. ಈ ಆನಂದ ಅಲೌಕಿಕವಾದರೂ ಅದು ಲೋಕವನ್ನು ಬಿಟ್ಟು ಇರುವುದಿಲ್ಲ. ಏನಿದ್ದರೂ ಗೀತೆಯ ಬೋಧನೆ, ಈ ದೇಹದಲ್ಲಿದ್ದು, ಅದರ ಇತಿಮಿತಿಯೊಳಗೆ ನಾವು ನಮ್ಮ ಮತ್ತು ಇತರರ ಬದುಕನ್ನು ಬೆಳಕಾಗಿಸುತ್ತ ಜೀವನ್ಮುಕ್ತರಾಗಿ, ತನ್ಮೂಲಕ ಪರಮಮುಕ್ತಿಯ ಕಡೆಗೆ ಸಾಗುವುದಾಗಿದೆ. ಹಾಗೆಂದೇ ಗೀತೆಯ ಹಾಡು ಸರ್ವರಿಗೂ ಮುದ ನೀಡುತ್ತ ಪ್ರೀತಿಯಿಂದ ತನ್ನೆಡೆಗೆ ಆಕರ್ಷಿಸುತ್ತದೆ.

ಗೀತೆಯು ಮಾನವ ಸ್ವಭಾವದ ಹತ್ತು ಹಲವು ಮಜಲುಗಳನ್ನು ವಿಶ್ಲೇಷಿಸಿ, ಪರಿಪೂರ್ಣತೆಯೆಡೆಗೆ ಸಾಗುವ ಬಗೆಯನ್ನು ತಿಳಿಸುತ್ತದೆ. ಹೀಗೆ ಮಾಡುವಾಗ ಅದು

ದೇಹದ ನಶ್ವರತೆ ಮತ್ತು ದೇಹದಲ್ಲಿರುವ ಆತ್ಮದ ನಿತ್ಯತೆಯನ್ನು ಆಧಾರವಾಗಿರಿಸಿದೆ. ದೇಹಾತ್ಮಬೇಧವನ್ನು ಒಪ್ಪದೇ ಗೀತೆಯ ಬೋಧನೆ ಅರ್ಥವಾಗುವುದು ಕಷ್ಟ. ಅದು ನಮ್ಮ ಮುಂದಿಡುವ ಪರಿಪೂರ್ಣತೆ ನಿತ್ಯ ನಿರಂಜನಸ್ವರೂಪಿಯಾದ ಆತ್ಮನ ಅರಿವಿನಲ್ಲಿ ಮಾತ್ರ ಹೊಂದಲು ಸಾಧ್ಯವಾಗುವಂಥದ್ದು. ಆತ್ಮಕೇಂದ್ರಿತ ಬದುಕನ್ನೇ ಗೀತೆ ಬೋಧಿಸುತ್ತದೆ. ಅದು ದೇಹಕೇಂದ್ರಿತ ಬದುಕಿನ ಸ್ವರೂಪದ ನಿರೂಪಣೆ ಮಾಡುತ್ತಾ ಅದರ ನಿರುಪಯುಕ್ತತೆಯನ್ನು, ಅಧೋಗತಿ ಯನ್ನು ಮತ್ತು ವಿನಾಶವನ್ನು ತಿಳಿಸುತ್ತದೆ. ಗೀತೆಯ ಎರಡನೆಯ ಅಧ್ಯಾಯದಲ್ಲಿ ಆತ್ಮನ ಸ್ವರೂಪ, ಪ್ರಭಾವ, ನಿತ್ಯತೆ ಇತ್ಯಾದಿಗಳನ್ನು ಸೊಗಸಾಗಿ ವಿವರಿಸಲಾಗಿದೆ. ಆತ್ಮನ ಅಮರತ್ವವನ್ನು ಅರಿತವನು ಮಾತ್ರ ಪರಮಸತ್ಯದೆಡೆಗೆ ಉನ್ಮುಖನಾಗಿ ದೇಹದಿಚ್ಛೆಗಳನ್ನು ತೊರೆಯಬಲ್ಲ. ಅಂತಹವನಿಗೆ ಇಂದ್ರಿಯ ಸುಖಗಳು ಅಲ್ಪವಾಗುತ್ತವೆ ; ಆತ್ಮಾನಂದ ಮಹತ್ತಾಗುತ್ತದೆ. ಆಗಲೇ ಅವನು ಭೋಗವನ್ನು ಬಿಟ್ಟು ಯೋಗಿಯಾಗುತ್ತಾನೆ ; ಸಮತ್ವವನ್ನು ಹೊಂದಿ ನಿಷ್ಕಾಮಕರ್ಮಿಯಾಗಿ ಸಮಾಧಿಯಲ್ಲಿ ಅಚಲ ಬುದ್ಧಿಯುಳ್ಳವನಾಗುತ್ತಾನೆ.

ಇದಕ್ಕೆ ವಿರುದ್ಧವಾಗಿ ದೇಹಕೇಂದ್ರಿತ ಬದುಕು ವ್ಯಕ್ತಿಯನ್ನು ವಿಷಯ ಸುಖಗಳೆಡೆಗೆ ಒಯ್ದು ಕ್ರಮೇಣ ಸರ್ವನಾಶದೆಡೆಗೆ ಒಯ್ಯುತ್ತದೆಂಬುದನ್ನು ಗೀತೆ ಸುಂದರವಾಗಿ, ಪರಿಪರಿಯಾಗಿ ತಿಳಿಸುತ್ತದೆ. ಇಂದ್ರಿಯಗಳು ಮನಸ್ಸಿನೊಡಗೂಡಿ ವಿಷಯ ವಸ್ತುಗಳ ಭೋಗಲಾಲಸೆಯಲ್ಲಿ ನಿರತವಾಗುವಾಗ ಬದುಕು ಅಧೋಗತಿಯನ್ನು ಹೊಂದುತ್ತದೆ. ಪಾಪದ ಕೂಪಕ್ಕೆ ಬೀಳುತ್ತದೆ. ಇಷ್ಟವಿಲ್ಲದಿದ್ದರೂ ಮಾಡಬಾರದ್ದನ್ನೇ ಮಾಡುವ ಅಸಹಾಯಕ ಸ್ಥಿತಿಯನ್ನು ಹೊಂದುತ್ತದೆ. ಇದರ ಪರಿಣಾಮ ಘೋರ ಪತನ, ದಾರುಣ ಅವಸ್ಥೆ, ನಿರಂತರ ದಾಸ್ಯ, ಮತ್ತು ಭಯಾನಕ ಬಂಧನ. ದೇಹಕೇಂದ್ರಿತ ಬದುಕಿಗೆ ಕಾರಣವಾದ ಗುಣಗಳನ್ನು ಸ್ಪಷ್ಟಾತಿಸ್ಪಷ್ಟವಾಗಿ, ಗೀತೆಯ ತುಂಬೆಲ್ಲ ವಿವರಿಸಲಾಗಿದೆ. ವಿಶೇಷವಾಗಿ ವಿಷಯಸುಖಾಸಕ್ತಿ (2:62–63), ಪಾಪನಿಮಿತ್ತ (3:36–40), ಗುಣತ್ರಯಗಳ ವಿವರಣೆ (ಅಧ್ಯಾಯ 14) ಮತ್ತು ಅಸುರೀ ಗುಣಗಳ ವಿವರಣೆಯ (16:7–23) ಸಂದರ್ಭಗಳಲ್ಲಿ ಅತ್ಯಂತ ಮನೋಜ್ಞವಾಗಿ ಮಾಡಲಾಗಿದೆ. ಪಾಪದ ಮೂಲಬೇರು ಎಲ್ಲಿದೆ ಮತ್ತು ಅದು ಹೇಗೆ ವ್ಯಕ್ತಿಯ ಬದುಕನ್ನು ಭ್ರಷ್ಟಗೊಳಿಸಿ, ಇಡಿಯ ಸಮಾಜವನ್ನು ವಿನಾಶಗೊಳಿಸುತ್ತದೆಂಬುದನ್ನು ಇಲ್ಲಿ ನಾವು ಕಾಣುತ್ತೇವೆ.

ಇಂದು ನಮ್ಮನ್ನೆಲ್ಲಾ ಭಯಾಕುಲರನ್ನಾಗಿಸುತ್ತಿರುವ ಎಲ್ಲ ಸ್ತರಗಳಲ್ಲಿನ ಅಧಃಪತಿತ ಧಾರ್ಮಿಕ, ನೈತಿಕ ಮತ್ತು ಆತ್ಮಿಕ ಮೌಲ್ಯಗಳಿಗೆ ಕಾರಣ ಈ ದೇಹಕೇಂದ್ರಿತ ಬದುಕೇ. ಇದರಲ್ಲಿ ನೆಲೆನಿಂತ ವ್ಯಕ್ತಿಯ ಬದುಕಿನ ಏಕಮೇವ ಗುರಿ ದೇಹದಿಚ್ಛೆಗಳನ್ನು ಪೂರೈಸುವುದು ; ತನ್ಮೂಲಕ ಸುಖವನ್ನು ಹೊಂದುವುದು. ಇದಕ್ಕಾಗಿಯೆ ಅವನ ಪ್ರಯತ್ನವೆಲ್ಲವೂ. ಈ ಪ್ರಯತ್ನದಲ್ಲಿ ಅವನು ಭ್ರಷ್ಟನಾಗುತ್ತಾನೆ ; ದುಷ್ಟ ನಾಗುತ್ತಾನೆ. ಏಕೆಂದರೆ ದೇಹಸುಖಗಳು ವ್ಯಕ್ತಿಯನ್ನು ಸ್ವಾರ್ಥಿಯನ್ನಾಗಿ ಮಾಡಿ, ಸ್ವಾರ್ಥಕೇಂದ್ರಿತ

ಬದುಕಿನೆಡೆಗೆ ತಳ್ಳುತ್ತವೆ. ಅಂತಹ ವ್ಯಕ್ತಿ ಕಾಮ, ಕ್ರೋಧ, ಲೋಭ, ಅಹಂಕಾರ, ಮಮಕಾರಾದಿಗಳಿಂದ ನಿಯಮಿತನಾಗಿ ಭಯಾನಕ ಬಂಧನಕ್ಕೆ ಸಿಲುಕುತ್ತಾನೆ. ಅಜ್ಞಾನದ ಕಗ್ಗತ್ತಲೆಯಲ್ಲಿ ಇರುತ್ತಾನೆ. ಸತ್ಯಾಸತ್ಯ, ಧರ್ಮಾಧರ್ಮ, ಗುಣಾವಗುಣ, ಸೌಂದರ್ಯಾಸೌಂದರ್ಯ–ಇತ್ಯಾದಿಗಳ ಅರಿವು ಅವನಿಗಿರದು. ಅವನ ಈ ಸ್ಥಿತಿ ಅತ್ಯಂತ ಶೋಚನೀಯ ಮಾತ್ರವಲ್ಲ ಅವನು ತನಗೂ ತನ್ನ ಸುತ್ತಮುತ್ತಲಿನ ಜಗತ್ತಿಗೂ ಮಹಾವ್ಯಾಧಿ ಭೂತನಾಗಿರುತ್ತಾನೆ. ಈ ಪರಿಯ ಘೋರ ದುಃಸ್ಥಿತಿಯನ್ನು ಮತ್ತು ಅದರ ಕಾರಣವನ್ನು ನಮಗೆ ಗೀತೆ ಅದ್ಭುತವಾಗಿ ತಿಳಿಸುತ್ತದೆ.

ಮೇಲಿನ ಭಯಾನಕ ಭ್ರಷ್ಟತೆಯ ಬವಣೆಯನ್ನು ನೀಗಿಸುವ ನಿಖರ ಮಾರ್ಗವನ್ನು ಗೀತೆ ನಮಗೆ ಅತ್ಯಂತ ಸರಳ ಸುಂದರ ಶೈಲಿಯಲ್ಲಿ ಸುಸ್ಪಷ್ಟಗೊಳಿಸಿದೆ. ಅದುವೇ ಆತ್ಮಕೇಂದ್ರಿತ ಬದುಕು. ಸರಿಸಾಟಿಯಿಲ್ಲದ ಸಹಜ, ಸತ್ವಯುತ, ಸಾಯುಜ್ಯ ಹೊಂದಿದ ಬದುಕು. ಅರಿವಿನ ಅನಂತತೆಯ ಅವಿಚ್ಛಿನ್ನತೆಯಲ್ಲಿ ನಲಿದಾಡುವ ಬದುಕು. ಈ ಬದುಕನ್ನು ಜಗತ್ತಿಗೆ ತಿಳಿಸುವುದೇ ಗೀತೆಯ ಬೋಧನೆಯ ನಿಜಸಾರ ; ಪರಮ ಉದ್ದೇಶ. ಪ್ರತಿಯೊಬ್ಬ ವ್ಯಕ್ತಿಯ ಬದುಕು ಇಂತಾದಾಗಲೇ ಇಡಿಯ ಜಗತ್ತು ಬಂಧಮುಕ್ತವಾಗಿ, ಸ್ವಾತಂತ್ರ್ಯದ, ನಿರಹಂಕಾರ, ನಿರ್ಮಮ–ಬದುಕಿನ ಅನಂತ ಆನಂದವನ್ನು ಈ ಭುವಿಯಲ್ಲಿಯೇ ಅನುಭವಿಸಿ ಆನಂದಿಸುವ ಭಾಗ್ಯ ಸಾಧ್ಯವಾಗುವುದು. ಹೀಗಾಗಲು ಖಂಡಿತಾ ಸಾಧ್ಯ ಎನ್ನುವುದೇ ಗೀತೆಯ ಪರಮಸಂದೇಶ.

ಇಂತಾಗಲು ನಾವು ಭಗವಂತನಿಗೆ ಮೊಟ್ಟಮೊದಲು ಸಂಪೂರ್ಣವಾಗಗಿ ನಮ್ಮನ್ನು ಸಮರ್ಪಿಸಿಕೊಳ್ಳಬೇಕು. ಅವನನ್ನು ನಮ್ಮ ಪೂರ್ಣಶಕ್ತಿಯಿಂದಲೂ, ಪೂರ್ಣಮನಸ್ಸಿನಿಂದಲೂ, ಪೂರ್ಣಹೃದಯದಿಂದಲೂ ಪ್ರೀತಿಸಬೇಕು. ಅವನೇ ನಮ್ಮ ಸರ್ವಸ್ವವಾಗಬೇಕು. ಗೀತೆಯ ತುಂಬೆಲ್ಲ ಪರಮಾತ್ಮ ತನ್ನನ್ನು ಪ್ರೀತಿಸುವಂತೆ ಪರಿಪರಿಯಾಗಿ ಹೇಳಿದ್ದಾನೆ. ಮಾತ್ರವಲ್ಲ ಪ್ರೀತಿಸುವ ಪ್ರತಿಯೊಬ್ಬನ ಯೋಗಕ್ಷೇಮವನ್ನು ನೋಡಿಕೊಳ್ಳುವ ಭರವಸೆಯನ್ನು ನೀಡುತ್ತಾ, ಅವರೆಲ್ಲ ಅವನಲ್ಲಿ ಒಂದಾಗುವರೆಂದು ತಿಳಿಸಿದ್ದಾನೆ. ಪ್ರೀತಿಸುವ ಹೃದಯಗಳಿಗೆ ಭಗವಂತನು ಅವರಲ್ಲಿ ತನ್ನ ಇರವಿನ ಅರಿವನ್ನು ಕೊಡುತ್ತಾ ಇನ್ನೂ ಹೆಚ್ಚು ಪ್ರೀತಿಸುವ, ಪ್ರೀತಿಸಿ ಆನಂದಿಸುವ, ಆನಂದಿಸಿ ಅವನೊಂದಿಗೆ ನಲಿಯುವ, ನಲಿತು ಬೆರೆಯುವ, ಬೆರೆತು ಒಂದಾಗುವ ಅನಂತ ಸೌಭಾಗ್ಯವನ್ನು ಕರುಣಿಸುತ್ತಾನೆ. ಇಂತಾದ ಹೃದಯ ಪ್ರೇಮದ ಸೆಲೆ, ಶಾಂತಿಯ ನೆಲೆ ಮತ್ತು ಅಭ್ಯುದಯದ ಆಗರವಾಗುತ್ತದೆ. ಆಗ ಎಲ್ಲೆಲ್ಲೂ ಪ್ರೇಮೋತ್ಸವ, ಶಾಂತಿಯಸಾಗರ, ಸಮೃದ್ಧ ಸಮೃದ್ಧಿ.

ಭಗವಂತನಲ್ಲಿ ಶರಣಾಗತನಾಗಿ, ಅವನನ್ನು ಪ್ರೀತಿಸುವ ಪ್ರತಿಯೊಬ್ಬನನ್ನು ಅವನೊಳಗೇ ಇರುವ ಪರಮಾತ್ಮ ಕೈಹಿಡಿದು ಸತ್ಯಪಥದಿ ನಡೆಸಿ, ತನ್ನ ಅರಿವನ್ನು ನೀಡಿ, ಜ್ಞಾನಿಯನ್ನಾಗಿಸುತ್ತಾನೆ. ಕರ್ತವ್ಯಗಳನ್ನು ಕರ್ಮಯೋಗಿಯಾಗಿ

ನಿರ್ವಹಿಸುವಂತೆಮಾಡಿ, ನಿಷ್ಕಾಮಕರ್ಮಿಯನ್ನಾಗಿಸುತ್ತಾನೆ. ಆಗ ಕಾಮಕ್ರೋಧಾದಿಗಳಿಗೆ, ಅಹಂಕಾರ ಮಮಕಾರಗಳಿಗೆ ಅವಕಾಶವಿಲ್ಲದಂತಾಗಿ ಭ್ರಷ್ಟಚಾರಾದಿಗಳ ಬೇರುಗಳು ನಾಶವಾಗುತ್ತವೆ. ಎಲ್ಲೆಲ್ಲೂ ಆಗ ಕರ್ಮಗಳು ಸಮಷ್ಟಿಹಿತ ಸಾಧನೆಯ ಯಜ್ಞಗಳಾಗುತ್ತವೆ ; ಲೋಕ ಕಲ್ಯಾಣವನ್ನು ಉಂಟುಮಾಡುತ್ತವೆ. ತನ್ನನ್ನು ಪ್ರೀತಿಸುವ ಪ್ರತಿಯೊಬ್ಬನೂ ತನ್ನಂತೆ ಸಮಸ್ತ ಸೃಷ್ಟಿಯನ್ನು ಪ್ರೀತಿಸುವಂತೆ ಮಾಡುತ್ತಾನೆ. ಅಲ್ಲಿ ಉಚ್ಚ ನೀಚ ಭಾವಗಳಿಗೆ ಅವಕಾಶವಿಲ್ಲ. ಎಲ್ಲರಲ್ಲೂ ಸಮಭಾವ, ಸಮಪ್ರೀತಿ. ಏಕೆಂದರೆ ಎಲ್ಲರಲ್ಲಿಯೂ ಭಗವಂತನಿದ್ದಾನೆ. ಹಾಗೆಂದೇ ದೇವರನ್ನು ಪ್ರೀತಿಸುವವರು ಯಾರನ್ನೂ ದ್ವೇಷಿಸಲಾರ ಎಂಬುದನ್ನು ಗೀತೆ ಸ್ಪಷ್ಟಾತಿಸ್ಪಷ್ಟವಾಗಿ ಸಾರಿ ಹೇಳಿದೆ. ಹೀಗೆ ಭಗವಂತನಲ್ಲಿ ನೆಲೆಗೊಂಡವರ ಬದುಕಿನ ಭವ್ಯತೆ, ದಿವ್ಯತೆಯನ್ನು ಗೀತೆ ಸ್ಥಿತಪ್ರಜ್ಞ, ಕರ್ಮಯೋಗಿ, ಯೋಗಾರೂಢ, ಜ್ಞಾನಿ, ಭಕ್ತ, ಗುಣಾತೀತರ ಲಕ್ಷಣದಲ್ಲಿ ವಿವರಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ ಗೀತೆಯ ಸಂದೇಶ ಅದ್ಭುತ, ಅಮೂಲ್ಯ ಮತ್ತು ಅಮರವಾದುದು. ಅದು ಕೇವಲ ಒಂದು ಆದರ್ಶ ಮಾತ್ರವಲ್ಲ. ಅದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಬರುವಂಥಹದ್ದು. ಸಾವಿರಾರು ವರ್ಷಗಳಿಂದಲೂ ಆನ್ವಯಿಕತೆಯೇ ಅದರ ಶಕ್ತಿಯ ರಹಸ್ಯ. ಹಾಗೆಂದೇ ಅದರ ಬೋಧನೆ ಸಾರ್ವದೇಶಿಕ ಮತ್ತು ಸಾರ್ವಕಾಲಿಕ. ಗೀತೆಯ ಬೋಧನೆ ಇಂದು ದೇಹಕೇಂದ್ರಿತ ಬದುಕಿನ ಸುಳಿಯಲ್ಲಿ ಸಿಕ್ಕು ವಿನಾಶದ ದಾರಿಯಲ್ಲಿ ಸಾಗುತ್ತಿರುವ ಪ್ರತಿಯೊಬ್ಬರಿಗೆ, ಸಮಾಜಕ್ಕೆ ದೇಶಕ್ಕೆ ಆತ್ಮಕೇಂದ್ರಿತ ಬದುಕನ್ನು ಬದುಕುತ್ತ ರಕ್ಷಣೆಹೊಂದುವ ದಾರಿಯನ್ನು ತೆರೆದಿರಿಸಿದೆ. ಈ ದಾರಿಯಲ್ಲಿ ನಡೆದರೆ ಶಾಂತಿ ಸಮಾಧಾನದ ಪರಮಾನಂದ ಬದುಕು ಇಹಪರಗಳೆರಡರಲ್ಲೂ ಲಭ್ಯವೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಭಗವದ್ಗೀತೆಯಲ್ಲಿ ಯೋಗ

ಡಾ. ಎಚ್.ವಿ. ನಾಗರಾಜರಾವ್

ಭಗವದ್ಗೀತೆಯು ಜ್ಞಾನ, ಭಕ್ತಿ, ಕರ್ಮ ಮುಂತಾದ ಹಲವು ವಿಷಯಗಳನ್ನು ಪ್ರತಿಪಾದಿಸುವುದಾದರೂ ವಿಶಿಷ್ಟವಾಗಿ, ವ್ಯಾಪಕವಾಗಿ ಅದು ನಿರೂಪಿಸುವುದು ಯೋಗವನ್ನು ಎಂಬುದು ನಿಷ್ಪಕ್ಷಪಾತವಾಗಿ ಓದುಗರಿಗೆ ಸ್ಪಷ್ಟವಾಗಿ ತಿಳಿಯುತ್ತದೆ. ಮಹಾಭಾರತದಲ್ಲಿ ಗೀತೆಯ ಅಧ್ಯಾಯಗಳಿಗೆ ಹೆಸರುಗಳನ್ನು ಕೊಟ್ಟಿಲ್ಲವಾದರೂ, ಸಂಪ್ರದಾಯಾನುಗತವಾಗಿ ಈಗ ಗೀತೆಯ ಒಂದೊಂದು ಅಧ್ಯಾಯವನ್ನು ಒಂದೊಂದು ಯೋಗವೆಂದೇ ಕರೆಯುವ ರೂಢಿ ಬೆಳೆದುಬಂದಿದೆ. ಅರ್ಜುನನು ವಿಷಣ್ಣನಾಗಿ ಕೈಚೆಲ್ಲಿ ಕುಳಿತುಕೊಳ್ಳುವ ವರ್ಣನೆಯ ಅಧ್ಯಾಯವನ್ನು 'ಅರ್ಜುನ ವಿಷಾದ ಯೋಗ' ಎಂದು ಕರೆಯುತ್ತಾರೆ. ಇದರಿಂದ ಗೀತೆಯಲ್ಲಿ ಯೋಗಕ್ಕೆ ಕೊಟ್ಟಿರುವ ಪ್ರಾಧಾನ್ಯ ವ್ಯಕ್ತವಾಗುತ್ತದೆ. ಭಗವದ್ಗೀತೆಯನ್ನು ಉಪದೇಶಿಸಿದ ಭಗವಾನ್ ಶ್ರೀಕೃಷ್ಣನು 'ಯೋಗೇಶ್ವರ'. ಅವನೇ ಜಗತ್ತಿನ ಪ್ರಥಮ ಯೋಗಗುರು. ಇದನ್ನು ಗ್ರಂಥದಲ್ಲೇ ನೋಡುತ್ತೇವೆ.

"ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥" (4.1)

ಕೃಷ್ಣನು ಯಾವ ಯೋಗವನ್ನು ಬೋಧಿಸಿದ್ದನೋ, ಯಾವುದು ರಾಜರ್ಷಿಗಳ ಪರಂಪರೆಯಲ್ಲಿ ಬೆಳೆದುಬಂದಿತ್ತೋ, ಅದು ಕಾಲ ಮಹಿಮೆಯಿಂದ ನಷ್ಟವಾಗಿತ್ತು. ಅದನ್ನು ಪುನರುಜ್ಜೀವನಗೊಳಿಸಿದವನೂ ಶ್ರೀಕೃಷ್ಣನೇ ಎಂದು ಗೀತೆಯಿಂದಲೇ ತಿಳಿದುಕೊಳ್ಳುತ್ತೇವೆ.

"ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ । (4.2)
ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ ॥" (4.3)

ಯೋಗದ ಸ್ವರೂಪವೇನು ಎಂಬುದನ್ನು ಬೇರೆ ಬೇರೆ ದೃಷ್ಟಿಗಳಿಂದ ಹಲವು ವಿಧಗಳಲ್ಲಿ ಭಗವದ್ಗೀತೆಯು ನಿರೂಪಿಸುತ್ತದೆ.

'ಸಮತ್ವಂ ಯೋಗ ಉಚ್ಯತೇ'

ಪ್ರಯತ್ನದ ಸಿದ್ಧಿ–ಅಸಿದ್ಧಿಗಳಲ್ಲಿ, ಎಂದರೆ ಸಾಫಲ್ಯ ವೈಫಲ್ಯಗಳಲ್ಲಿ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳುವುದು ಯೋಗ.

'ಯೋಗಃ ಕರ್ಮಸು ಕೌಶಲಮ್'

ಕರ್ಮಗಳಲ್ಲಿ ಕುಶಲತೆಯೇ ಯೋಗ. ಕುಶಲತೆ ಎಂದರೆ ಆ ಕರ್ಮಗಳು ಬಂಧಕವಾಗದಂತೆ ಆಚರಿಸುವುದು. ಯೋಗಿಗಳು ಕರ್ಮಗಳನ್ನು ಆಚರಿಸುವಾಗ ಅವುಗಳ ಫಲದಲ್ಲಿ ಆಸಕ್ತರಾಗಿರುವುದಿಲ್ಲ. ಕರ್ಮದ ಫಲದಲ್ಲಿ ಆಸಕ್ತಿಯನ್ನಿಡದೆ ಭಗವದರ್ಪಣ ಬುದ್ಧಿಯಿಂದ ಅವರು ಆಚರಿಸುವುದರಿಂದ ಅವರಿಗೆ ಆತ್ಮಶುದ್ಧಿ ಉಂಟಾಗುತ್ತದೆ.

"ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ"

ಎಂದು ಗೀತೆಯು ತಿಳಿಸಿರುವುದು ಈ ದೃಷ್ಟಿಯಿಂದಲೇ.

ಗೀತೆಯು ಕೊಟ್ಟಿರುವ ಇನ್ನೊಂದು ಯೋಗ ಲಕ್ಷಣ ಇಂತಿದೆ:

"ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥
ಸುಖಮಾತ್ಯಂತಿಕಂ ಯತ್ತದ್ ಬುದ್ಧಿಗ್ರಾಹ್ಯಮತೀಂದ್ರಿಯಮ್ ।
ವೇತ್ತಿ ಯತ್ರ ನ ಚೈವಾಯಂ ಸ್ಥಿರಶ್ಚಲತಿ ತತ್ತ್ವತಃ ॥
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥
ತಂ ವಿದ್ಯಾದ್ ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ॥"

ಯೋಗಾಭ್ಯಾಸದಿಂದ ನಿಯಂತ್ರಿತವಾದ ಮನಸ್ಸು ಒಂದು ಸ್ಥಿತಿಯಲ್ಲಿ ವಿರಾಮವನ್ನು ಹೊಂದುತ್ತದೆ. ಅದರಲ್ಲಿ ಯೋಗಿ ತನ್ನನ್ನು ತಾನೇ ಕಂಡು ಸಂತುಷ್ಟನಾಗಿರುತ್ತಾನೆ. ಪರಮ ಸ್ವರೂಪದ, ಬುದ್ಧಿಯಿಂದ ಗ್ರಾಹ್ಯವಾಗಿದ್ದರೂ ಅತೀಂದ್ರಿಯವಾದ ಸುಖವನ್ನು ಆ ಸ್ಥಿತಿಯಲ್ಲಿ ಅರಿತುಕೊಳ್ಳುತ್ತಾನೆ. ತತ್ತ್ವದ ಅರಿವನ್ನು ಹೊಂದಿ ಅದರಿಂದ ಯೋಗಿ ಚಲಿಸುವುದಿಲ್ಲ. ಅದನ್ನು ಪಡೆದ ಮೇಲೆ ಬೇರೆ ಯಾವ ಲಾಭವನ್ನೂ ಅದಕ್ಕಿಂತ ದೊಡ್ಡದೆಂದು ಪರಿಗಣಿಸುವುದಿಲ್ಲ. ಆ ಸ್ಥಿತಿಯಲ್ಲಿದ್ದಾಗ ಎಂಥ ತೀವ್ರವಾದ ದುಃಖವೂ ಯೋಗಿಯನ್ನು ಬಾಧಿಸದು. ಅಂಥ ದುಃಖಸಂಯೋಗದ ವಿಯೋಗವನ್ನು ಯೋಗವೆಂದು ತಿಳಿಯಬೇಕು.

ಇದರಿಂದ ಂಯೋಗ ಎನ್ನುವುದು ತಾರ್ಕಿಕರು ಹೇಳುವ ದುಃಖಧ್ವಂಸರೂಪವಾದ ಮೋಕ್ಷದಂತೆ ನಿಷೇಧಾತ್ಮಕವಲ್ಲ. ಅದು ಪರಮ ಅಥವಾ ಆತ್ಯಂತಿಕ ಸುಖರೂಪ ಎಂಬುದು ಸ್ಪಷ್ಟವಾಗುತ್ತದೆ. ಯೋಗವು ಸಂಯೋಗವೆಂದು ಹಲವರು ಹೇಳಿದ್ದಾರೆ.

"ಸಂಯೋಗೋ ಯೋಗ ಇತ್ಯುಕ್ತೋ ಜೀವಾತ್ಮಪರಮಾತ್ಮನೋಃ"

ಆದರೆ ಇಲ್ಲಿ ದುಃಖಸಂಯೋಗವಿಯೋಗವೇ ಯೋಗ ಎಂದು ಹೇಳಿ ಯೋಗದ ವೈಶಿಷ್ಟ್ಯವನ್ನು ಸಾರಲಾಗಿದೆ.

ಯೋಗಿಗಳನ್ನು ಭಗವದ್ಗೀತೆಯು ಆರುರುಕ್ಷು, ಆರೂಢ ಎಂದು ಎರಡು ವಿಧಗಳಲ್ಲಿ ವಿಭಜಿಸಿದೆ. ಆರುರುಕ್ಷು ಎಂದರೆ ಯೋಗವನ್ನು ಸಾಧಿಸಲು ಅಪೇಕ್ಷಿಸಿರುವ ಸಾಧಕ. ಅವನಿನ್ನೂ ಗುರಿಯನ್ನು ತಲುಪಿಲ್ಲ. ಆರೂಢನು ಯೋಗದಲ್ಲಿ ಸಿದ್ಧಿಯನ್ನು ಪಡೆದಿರುವವನು.

"ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥" (6.3)

ಆರುರುಕ್ಷುವಾದ ಯೋಗಿಗೆ ಫಲಾಭಿಸಂಧಿರಹಿತವಾದ ಕರ್ಮವೇ ಸಾಧನ. ಯೋಗಾರೂಢನಿಗಾದರೋ ಶಮ (ಶಾಂತಿ, ಸಂನ್ಯಾಸ)ವೇ ಮೋಕ್ಷಸಾಧನ. ಆದ್ದರಿಂದ ಆರಂಭಾವಸ್ಥೆಯಲ್ಲಿ ಚಿತ್ತಶುದ್ಧಿಗಾಗಿ ಕರ್ಮಗಳು. ಸಿದ್ಧಾವಸ್ಥೆಯಲ್ಲಿ ಶಾಂತಿಮಯವಾದ ಸಂನ್ಯಾಸ ಎಂದು ಭಗವದ್ಗೀತೆಯು ವಿಧಿಸಿದೆ.

ಸಾಧಕರ ಅರ್ಹತೆಯನ್ನೂ ಯೋಗ್ಯತೆಯನ್ನೂ ಅವಲಂಬಿಸಿ ಯೋಗವು ನಾನಾವಿಧ. ಭಗವದ್ಗೀತೆಯ ಮೂಲಶ್ಲೋಕಗಳಲ್ಲೇ ಹಲವು ಯೋಗಗಳ ಹೆಸರೂ ನಿರೂಪಣೆಯೂ ಇದೆ ಎಂಬುದನ್ನು ನಾವು ಮರೆಯಬಾರದು.

"ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್" ಎಂಬಲ್ಲಿ ಜ್ಞಾನಯೋಗ, ಕರ್ಮಯೋಗ ಎಂಬ ಎರಡು ಯೋಗಗಳನ್ನು ಹೇಳಿದ್ದಾರೆ. ಬುದ್ಧಿ ಪ್ರಧಾನರಾದವರಿಗೆ ಜ್ಞಾನಯೋಗ, ಕ್ರಿಯಾಪ್ರಧಾನರಾದವರಿಗೆ ಕರ್ಮಯೋಗ. ಜ್ಞಾನಯೋಗವನ್ನೇ ಬ್ರಹ್ಮಯೋಗವೆಂಬ ಹೆಸರಿನಿಂದ ಕರೆದಿದ್ದಾರೆ.

"ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ" (5.21)

ಬುದ್ಧಿಯೋಗ ಎಂದರೂ ಜ್ಞಾನಯೋಗವೇ. ಬುದ್ಧಿಯೋಗ ಎಂಬ ಶಬ್ದವು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಬಂದಿದೆ.

"ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।"

ಭಕ್ತಿಯೋಗವೆಂದು ಪ್ರಸಿದ್ಧವಾದ ಹನ್ನೆರಡನೆಯ ಅಧ್ಯಾಯದಲ್ಲಿ ಅಭ್ಯಾಸಯೋಗ ಎಂಬ ಪದವನ್ನು ಭಗವಂತನೇ ಬಳಸಿದ್ದಾನೆ.

"ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿಮಯಿ ಸ್ಥಿರಮ್ ।"
"ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥" (12.9)

ಹೀಗೆ ನಾನಾ ವಿಧವಾದ ಯೋಗಗಳನ್ನು ಪ್ರತಿಪಾದಿಸಿರುವುದರಿಂದಲೇ ಭಗವದ್ಗೀತೆಯನ್ನು ಯೋಗಶಾಸ್ತ್ರ ಎಂದು ಕರೆದಿದ್ದಾರೆ. ಯೋಗಿಗಳು ಯಾವ ಆಹಾರವನ್ನು ತಿನ್ನಬೇಕು, ಹೇಗೆ ಲೋಕದಲ್ಲಿ ವ್ಯವಹರಿಸಬೇಕು, ಹೇಗೆ ಮಾತನಾಡಬೇಕು, ಯಾವ ಮನೋಭಾವವನ್ನು ಹೊಂದಿರಬೇಕು ಎಂಬುದನ್ನೆಲ್ಲ ಭಗವದ್ಗೀತೆ ವಿಶದವಾಗಿ ತಿಳಿಸುತ್ತದೆ.

"ನಾತ್ಯಶ್ನತಸ್ತು ಯೋಗೋಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥"

'ಅತಿಯಾಗಿ ಆಹಾರವನ್ನು ಸೇವಿಸುವವನಿಗೂ ಅತ್ಯಲ್ಪ ಆಹಾರವನ್ನು ಸೇವಿಸುವವನಿಗೂ ಹೆಚ್ಚು ನಿದ್ದೆ ಮಾಡುವವನಿಗೂ, ನಿದ್ದೆಯನ್ನೇ ಮಾಡದಿರುವವನಿಗೂ ಯೋಗವು ಅಸಾಧ್ಯ'

"ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥"

'ಯೋಗ್ಯವಾದಷ್ಟು ಆಹಾರವನ್ನು ಸೇವಿಸಿ ವಿಹರಿಸುವವನಿಗೆ, ಕರ್ಮಗಳಲ್ಲಿ ಸರಿಯಾದ ಪ್ರಯತ್ನ ಮಾಡುವವನಿಗೆ, ಎಷ್ಟು ಬೇಕೋ ಅಷ್ಟೇ ನಿದ್ದೆ ಮಾಡಿ ಏಳುವವನಿಗೆ ಯೋಗವು ದುಃಖವನ್ನು ನಿವಾರಿಸುವುದು.' ಯೋಗಿಗೆ ಸಾತ್ತ್ವಿಕಾಹಾರವು ಯೋಗ್ಯ. ಅದರ ಲಕ್ಷಣವನ್ನೂ ಭಗವದ್ಗೀತೆ ತಿಳಿಸಿದೆ.

"ಆಯುಸ್ಸತ್ತ್ವ ಬಲಾರೋಗ್ಯಸುಖಪ್ರೀತಿವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾಃ ಆಹಾರಾಃ ಸಾತ್ತ್ವಿಕಪ್ರಿಯಾಃ ॥"

ಆಯುಸ್ಸನ್ನೂ, ಸತ್ತ್ವವನ್ನೂ, ಬಲವನ್ನೂ, ಆರೋಗ್ಯವನ್ನೂ, ಸುಖವನ್ನೂ, ಪ್ರೀತಿಯನ್ನೂ ಬೆಳೆಸುವ, ರಸಭರಿತವೂ, ಸ್ನೇಹ (ಜಿಡ್ಡು) ಉಳ್ಳದ್ದೂ, ಸ್ಥಿರವೂ, ಪ್ರಿಯವೂ ಆದ ಆಹಾರವು ಸಾತ್ತ್ವಿಕರಿಗೆ ಇಷ್ಟ. ತಾಮಸ ಮತ್ತು ರಾಜಸ ಆಹಾರಗಳನ್ನು ಯೋಗಿ ಪರಿತ್ಯಜಿಸಬೇಕು. ಯಾವುದನ್ನೂ ಅತಿಯಾಗಿ ತಿನ್ನಬಾರದು. 'ಲಘ್ವಾಶೀ (ಮಿತಾಹಾರ) ಎಂಬ ಪದವನ್ನೂ ಗೀತೆಯು ಬಳಸಿದೆ.

ಭಗವದ್ಗೀತೆಯು ಬೋಧಿಸಿದ ಯೋಗವನ್ನು ಮುಂದಿನ ಅನೇಕ ಮುನಿಗಳು ವಿಸ್ತರಿಸಿ ವಿವರಿಸಿದರು. ಪತಂಜಲಿ ಮುನಿಗಳು ಯೋಗ ಸೂತ್ರಗಳನ್ನು ರಚಿಸಿ ಯೋಗಕ್ಕೆ ನಿಶ್ಚಿತ ರೂಪವನ್ನಿತ್ತರು. ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ-ಧಾರಣಾ-ಧ್ಯಾನ-ಸಮಾಧಿ ಎಂಬ ಎಂಟು ಅಂಗಗಳನ್ನು ಅವರು ನಿರೂಪಿಸಿದ ಕಾರಣದಿಂದ ಅಷ್ಟಾಂಗಯೋಗ ಎಂಬ ಹೆಸರು ಪ್ರಚಲಿತವಾಯಿತು. ಆಧುನಿಕ ಕಾಲದಲ್ಲಿ ಆಸನ ಎಂಬ ಒಂದು ಅಂಗವೇ ಪ್ರಾಧಾನ್ಯವನ್ನು ಪಡೆದು ಯೋಗ ಎಂಬ ಹೆಸರಿನಿಂದ ಪ್ರಚಲಿತವಾಗಿದೆ. ಯೋಗದ ಪೂರ್ಣ ರೂಪವನ್ನು ಜನರಿಗೆ ಪರಿಚಯಿಸಲು ಭಗವದ್ಗೀತೆಯ ಅಧ್ಯಯನ ಆವಶ್ಯಕ. ಶ್ರೀಕೃಷ್ಣನನ್ನು ಗೋಪೀವಸ್ತ್ರಾಪಹಾರಕ, ನವನೀತಚೋರ ಎಂದಷ್ಟೇ ಅರಿತುಕೊಂಡರೆ ಸಾಲದು, ಅವನು ಯೋಗೇಶ್ವರ, ಯೋಗಾಚಾರ್ಯ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ನಿಜವಾದ ಅರ್ಥದಲ್ಲಿ ಯೋಗಿಯು ಉಳಿದ ಎಲ್ಲರಿಗಿಂತಲೂ ಹೆಚ್ಚು. ಆದ್ದರಿಂದ 'ಯೋಗಿಯಾಗು' ಎಂಬುದೇ ಅರ್ಜುನನಿಗೆ ಶ್ರೀಕೃಷ್ಣನ ಪರಮಸಂದೇಶ.

"ತಪಸ್ವಿಭ್ಯೋಧಿಕೋ ಯೋಗೀ ಜ್ಞಾನಿಭ್ಯೋಪಿ ಮತೋಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ ॥" (6.46)

ಗೀತೆಯ ಅಧ್ಯಾಯ ಶೀರ್ಷಿಕೆ

– ವಿದ್ವಾನ್ ಗಂಗಾಧರ ವಿ. ಭಟ್

ಗೀತೆಯ ಪಾತ್ರ : ಶ್ರೀಮದ್ಭಗವದ್ಗೀತೆ ವಿಶ್ವದ ಗ್ರಂಥಕಾಶಿಯಲ್ಲಿ ಗುರುತಿಸಿರುವ ಗುರುತಮ ಕೃತಿ. ಅಧ್ಯಯನಶೀಲರಿಗೆ ಈ ಕೃತಿಯಲ್ಲಿ ವಿಪುಲವಾದ ಅವಕಾಶ ತೆರೆದಿದೆ. ಅವರವರ ಮನೋಭೂಮಿಕೆಯ ನೆಲೆಯಲ್ಲಿ ಈ ಕೃತಿಗೆ ಸ್ವೀಕೃತಿಯೊಡನೆಯೇ ತಿರಸ್ಕೃತಿಯು ದೊರೆತಿರುವುದನ್ನು ಉಪೇಕ್ಷಿಸುವಂತಿಲ್ಲ. ತಿರಸ್ಕಾರಪರರಾಗಲಿ ಪುರಸ್ಕಾರಪರರಾಗಲಿ ಈ ಗ್ರಂಥದ ನಿರೂಪಣಾ ಮೋಡಿಗೆ ಮನಸೋತಿರುವುದಂತೂ ನಿಚ್ಚಳ. ಮಹಾಭಾರತದ ಒಂದು ತುಣುಕಾದ ಈ ಗ್ರಂಥ ವಿಷಯದೃಷ್ಟಿಯಿಂದ ವಿಶ್ವಕೋಶದ ಪರಿಪೂರ್ಣ ಲಕ್ಷಣವನ್ನು ಹೊಂದಿದೆ. ಗೀತೆ ಒಂದು ಸುವರ್ಣಪಾತ್ರೆ. ಪಾತ್ರೆಯಲ್ಲಿ ಏನಿದೆ ಎಂಬುದನ್ನು ಅರಿಯಲಾರದವರು ಸುವರ್ಣ ಸೆಳತಕ್ಕೆ ಒಳಗಾಗಿ ಗೀತೆಯನ್ನು ಬಯಸುತ್ತಾರೆ. ಗ್ರಂಥದ ನಿರೂಪಣಾ ತಂತ್ರ ಮನನೀಯವಾಗಿದೆ. ಈ ಗ್ರಂಥ ಹದಿನೆಂಟು ಅಧ್ಯಾಯಗಳಲ್ಲಿ ರೂಪುಗೊಂಡಿದೆ.

ಅಧ್ಯಯನ ಸೌಲಭ್ಯಕ್ಕಾಗಿಯೇ ಅಧ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ. ಇಡಿಯನ್ನು ಬಿಡಿಬಿಡಿಯಾಗಿ ಹಿಡಿದಿಟ್ಟುಕೊಳ್ಳುವ ಘನವಾದ ಉದ್ದೇಶ ಅಧ್ಯಾಯ ಪ್ರಕಲ್ಪನೆಯಲ್ಲಿದೆ. ಬಿಡಿಯನ್ನು ಇಡಿಯಲ್ಲಿ ಗ್ರಹಿಸಿ ಧರಿಸುವ, ಪ್ರತಿಯೊಂದು ಬಿಡಿಯನ್ನು ಪರಸ್ಪರ ಜೋಡಿಸಿ ಇಡಿಯಾಗಿಸುವ ಸಮಗ್ರದರ್ಶನವಿಧಿ ಅಧ್ಯಾಯರಚನೆಯ ಮೂಲೋದ್ದೇಶ. ಅಧ್ಯಾಯವನ್ನು ಪ್ರಥಮಾದಿ ಸಂಖ್ಯೆಗಳಿಂದಲೇ ವಿಭಜಿಸುವ ಸಾಧಾರಣ ಸರಳ ವಿಧಾನವಿದ್ದರೂ, ಅದರೊಂದಿಗೆ ಪ್ರತಿಯೊಂದು ಅಧ್ಯಾಯಕ್ಕೊಂದು ಶೀರ್ಷಿಕೆ – ತಲೆಬರಹ ನೀಡಿರುವುದು ಶ್ರೀಮದ್ಭಗವದ್ಗೀತೆಯ ವಿಶೇಷಗಳಲ್ಲೊಂದು. ಈ ಶೀರ್ಷಿಕೆಯ ಅಗತ್ಯವೇನು ? ಇದಕ್ಕೇನಾದರೂ ಮಹತ್ವವಿದೆಯೋ ಎಂಬ ಕುತೂಹಲವೇ ಈ ಬರವಣಿಗೆಯ ಭೂಮಿಕೆ. ಗ್ರಹಣ ಸೌಲಭ್ಯಕ್ಕೋಸ್ಕರ ಅಧ್ಯಾಯದ ಶೀರ್ಷಿಕೆಯನ್ನು ಅನುಕ್ರಮವಾಗಿ ಉಲ್ಲೇಖಿಸಿಕೊಳ್ಳುವುದು ಅವುಗಳ ಔಚಿತ್ಯದ ಅನ್ವೇಷಣೆಗೆ ಅನುಕೂಲಕರ.

ಅಧ್ಯಾಯ	ಗೀತಾಶೀರ್ಷಿಕೆ	ಡಿ.ವಿ.ಜಿ. ಶೀರ್ಷಿಕೆ
1.	ಅರ್ಜುನವಿಷಾದಯೋಗಃ	ಪ್ರಾಕೃತಕಾರುಣ್ಯಯೋಗ
2.	ಸಾಂಖ್ಯಯೋಗಃ	ತತ್ತ್ವವಿವೇಕಯೋಗ

3.	ಕರ್ಮಯೋಗಃ	ಸ್ವಧರ್ಮಯೋಗ
4.	ಜ್ಞಾನಕರ್ಮಸಂನ್ಯಾಸಯೋಗಃ	ನಿರ್ಲೇಪಕರ್ಮಯೋಗ
5.	ಸಂನ್ಯಾಸಯೋಗಃ	ಕರ್ಮಜ್ಞಾನಸಾಮರಸ್ಯಯೋಗ
6.	ಧ್ಯಾನಯೋಗಃ	ಧ್ಯಾನಾಭ್ಯಾಸಯೋಗ
7.	ಜ್ಞಾನವಿಜ್ಞಾನಯೋಗಃ	ಜಗಜ್ಜೀವೇಶ್ವರಯೋಗ
8.	ಬ್ರಹ್ಮಾಕ್ಷರನಿರ್ದೇಶಯೋಗಃ	ಪ್ರಣವಾರ್ಥಯೋಗ
9.	ರಾಜವಿದ್ಯಾರಾಜಗುಹ್ಯಯೋಗಃ	ಬ್ರಹ್ಮಜಗತ್ಸಂಬಂಧಯೋಗ
10.	ವಿಭೂತಿಯೋಗಃ	ಈಶ್ವರವೈಭವಯೋಗ
11.	ವಿಶ್ವರೂಪದರ್ಶನಯೋಗಃ	ವಿಶ್ವರೂಪಸಂದರ್ಶನಯೋಗ
12.	ಭಕ್ತಿಯೋಗಃ	ಭಕ್ತಿಸೋಪಾನಯೋಗ
13.	ಕ್ಷೇತ್ರಕ್ಷೇತ್ರಜ್ಞವಿಭಾಗಯೋಗಃ	ಪ್ರಕೃತಿಪುರುಷವಿವೇಕಯೋಗ
14.	ಗುಣತ್ರಯವಿಭಾಗಯೋಗಃ	ತ್ರಿಗುಣತಂತ್ರಜಾಗರೂಕಯೋಗ
15.	ಪುರುಷೋತ್ತಮಯೋಗಃ	ಅಶ್ವತ್ಥಮೂಲೋಪಾಸಾನಯೋಗ
16.	ದೈವಾಸುರಸಂಪದ್ವಿಭಾಗಯೋಗಃ	ದೈವಾಸುರಭೇದವಿವೇಕಯೋಗ
17.	ಶ್ರದ್ಧಾತ್ರಯವಿಭಾಗಯೋಗಃ	ಶ್ರದ್ಧಾತ್ರಯವಿವೇಕಯೋಗ
18.	ಮೋಕ್ಷಸಂನ್ಯಾಸಯೋಗಃ	ತದೇಕಶರಣತಾಯೋಗ

ಕನ್ನಡ ಗೀತಾ ಓದುಗರಿಗೆ ಡಿ.ವಿ. ಗುಂಡಪ್ಪನವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗವೆಂಬ ಗೀತಾವ್ಯಾಖ್ಯಾನ ಪರಿಚಿತ. ಇಲ್ಲಿ ಪೂಜ್ಯ ಡಿವಿಜಿಯವರು ಪ್ರತಿ ಅಧ್ಯಾಯಕ್ಕೂ ಒಂದು ಶೀರ್ಷಿಕೆಯನ್ನು ಸ್ವಲ್ಪ ವಿಭಿನ್ನವಾಗಿ ನೀಡಿದ್ದಾರೆ. ಇಲ್ಲಿ ಇವರೆಡರ ಔಚಿತ್ಯ ಚರ್ಚೆ ಪ್ರಸ್ತುತ. ಆದರೆ ವ್ಯಾಪಕವಾದ ಚರ್ಚೆ ಸಾಧ್ಯವಿಲ್ಲ. ಸಾಧುವೂ ಅಲ್ಲ. ಆದ್ದರಿಂದ ಪ್ರಧಾನವಾಗಿ ಮೂಲಗೀತಾಶೀರ್ಷಿಕೆಯ ಔಚಿತ್ಯವನ್ನೇ ವಿಮರ್ಶಿಸೋಣ.

ಗೀತೆಯನ್ನು ಆದ್ಯಂತವಾಗಿ ಓದುವುದು, ಅದೂ ಒಂದೇ ಕಾಲದಲ್ಲಿ ಎಲ್ಲರಿಗೂ ಸಾಧ್ಯವಿಲ್ಲ. ಪಾರಾಯಣಪರಂಪರೆಯಲ್ಲಿ ಗೀತಾಪಠಣವಾದರೂ ಅರ್ಥಾನಸಂಧಾನ ದುಷ್ಕರ. ಆದ್ದರಿಂದ ಅರ್ಥಾನುಸಂಧಾನಪೂರ್ವಕ ಪಠಣ ಸಾಧ್ಯವಿಲ್ಲದವರಿಗೆ ಈ ಶೀರ್ಷಿಕೆಗಳೇ ಗೀತಾರ್ಥದ ತಿರುಳನ್ನು ನೀಡುವಷ್ಟು ಸಮರ್ಥವಾಗಿವೆ. ಅರ್ಥಾನುಸಂಧಾನಪೂರ್ವಕ ಪಠಣಸಮರ್ಥರಿಗೂ ಗೀತೆಯ ನಡೆಯನ್ನು ಯಥಾವತ್ತಾಗಿ ಧಾರಣೆಮಾಡಿಕೊಂಡು, ಸ್ಮೃತಿಪಟಲದಲ್ಲಿ ಮೂಡಿಸಿಕೊಳ್ಳಲು ಸಹಕಾರಿಯಾಗಿದೆ.

ಅರ್ಜುನನ ವಿಷಾದದಿಂದ ಪ್ರಾರಂಭವಾದ ಗೀತೆ ಅರ್ಜುನನ ಪ್ರಸನ್ನತೆಯೊಂದಿಗೆ ಮುಗಿದಿದೆ. ಯೋಧನೋರ್ವನು ರಣರಂಗದಿಂದ ವ್ಯಾವೃತ್ತನಾಗಲು ಬಯಸಿದವನನ್ನು ರಣೋತ್ಸಾಹದೊಂದಿಗೆ ವಿವೇಕಿಯಾದ ಯೋಧನನ್ನಾಗಿ ಮಾರ್ಪಡಿಸಿದ ವಿಸ್ಮಯ ಗೀತೆಯ ಹೆಗ್ಗಳಿಕೆ. ನಿವೃತ್ತಿಯನ್ನು ಆದಿಯಿಂದಲೂ ಬೋಧಿಸಿ ಪ್ರವರ್ತಿಸುವಂತೆ ಆದೇಶಿಸಿ, ಮನೋಮುಕುರದಲ್ಲಿ ನಿವೃತ್ತಿಯ ನಿಚ್ಚಳ ನಿಲುವನ್ನು ಪ್ರತಿಬಿಂಬಿಸಿಕೊಂಡೇ ವಿಷಣ್ಣನಾದ ಅರ್ಜುನನು ಪ್ರಸನ್ನನಾದ ಪರಿ, ವಿಷಾದಸುಳಿಯಲ್ಲಿ ಸಿಲುಕಿದ ಪ್ರತಿಯೋರ್ವನಿಗೂ ಪಥ್ಯವಾಗುವುದೇ ಗೀತೆಯ ಚುಂಬಕತೆಗೆ ಕಾರಣ.

ಮನಸ್ಸೇ ಮಾನವನ ಏಳುಬೀಳುಗಳ ಮೂಲ. ವ್ಯಕ್ತಿತ್ವದ ವಿಕಾಸಕ್ಕೆ ಮನಸ್ಸು ವಿಷಾದದ ಕಾರ್ಮುಗಿಲಿನಿಂದ ಮಂಕಾಗುವುದು ಬಾಧಕ. ಮಂಕಾದ ಮನಸ್ಸು ಮುದುಡುತ್ತದೆ, ಬಾಡುತ್ತದೆ. ಮಂಕಾದ ಮನಸ್ಸಿನಲ್ಲಿ ವಿವೇಕೋದಯವಾದಂತೆಲ್ಲ ಕಾರ್ಮುಗಿಲು ಸಡಿಲಾಗಿ ಕರಗುತ್ತಾ ಕರಗುತ್ತಾ ಮುದುಡಿದ ಮನಸ್ಸು ಅರಳುವ ಪ್ರಕ್ರಿಯೆಗೆ ಒಳಪಡುತ್ತದೆ. ಅದರೊಂದಿಗೆ ತಾತ್ತ್ವಿಕ ವಿಚಾರಧಾರೆಯ ಪ್ರಭಾವದಿಂದ ಪ್ರಜ್ಞೆಯು ಪರಿಪಕ್ವಗೊಂಡು ಬಾಡುತ್ತಿರುವ ಮನಸ್ಸು ನಳನಳಿಸುತ್ತದೆ. ಈ ರೀತಿಯ ಮನೋವೈಜ್ಞಾನಿಕ ತಥ್ಯದ ಆನ್ವಯಿಕತೆಯನ್ನು ಗೀತೆಯು ಒಳಗೊಂಡಿದೆ. ವೇದಾಂತದ ಪ್ರಸ್ಥಾನತ್ರಯದಲ್ಲಿ ಉಪನಿಷತ್ತುಗಳು ಸತ್ಯವನ್ನು ಸರಳವಾಗಿ ಅನಲಂಕೃತಿಯಿಂದ ಉದ್ಗರಿಸಿವೆ. ಉದ್ಧೃತ ಸತ್ಯಗಳ ಕಂಟಕೋದ್ಧಾರಕ್ಕಾಗಿ 'ವಾದ'ದ ಆವರಣದಿಂದ ಸತ್ಯದ ದೃಢೀಕರಣವನ್ನು ಬ್ರಹ್ಮಸೂತ್ರಗಳಲ್ಲಿ ಕಾಣುತ್ತೇವೆ. ಸತ್ಯವನ್ನು ಹೇಳಿಕೆಗೆ – ಕೇಳಿಕೆಗೆ ಮಾತ್ರ ಮೀಸಲಿಡದೇ ನಿಜಜೀವನದ ಸನ್ನಿವೇಶದಲ್ಲಿ ಅಳವಡಿಸುವ ಸಾಧ್ಯತೆಯನ್ನು ಗೀತೆಯು ನಮ್ಮ ಕಣ್ಮುಂದಿಡುತ್ತದೆ. ಅದರಲ್ಲೂ ಪ್ರಾಣವನ್ನೇ ಪಣಕ್ಕಿಡಬೇಕಾದ ಘೋರ ಸಮರ ಸನ್ನಿವೇಶದಲ್ಲಿ ಎಂಬುದು ನಮ್ಮನ್ನು ಸೆಳೆಯದಿರದು.

ಗೀತಾಸೂತ್ರ : ಜೀವಿಗಳ ದೈನಂದಿನ ಸಂಗಾತಿ ವಿಷಾದ. ವಿಷಾದ ಪ್ರಸಾದದ ಬದ್ಧವೈರಿ. ಪ್ರಸಾದ ಜೀವಿಗಳ ಪರಮಗಮ್ಯ. ಅಂಥ ಪ್ರಸನ್ನತೆಗೆ ವಿಷಾದವನ್ನು ಉತ್ತರಿಸುವುದು ಅತ್ಯಗತ್ಯ. ಪ್ರಸನ್ನತೆಗೆ ಮಾರಕವಾದ ವಿಷಾದವನ್ನು ಬೇರುಸಹಿತ ಕಿತ್ತೆಸೆಯಲು ಸಾಧ್ಯವೆಂಬ ಪ್ರಕ್ರಿಯೆಯ ಪ್ರಯೋಗ ಪ್ರಣಾಲಿಕೆಯನ್ನು ಗೀತೆಯ ಶೀರ್ಷಿಕೆಯಲ್ಲಿ ಕಾಣುತ್ತೇವೆ.

ನಿಜವಾದ ರಣರಂಗ ಕುರುಕ್ಷೇತ್ರವಲ್ಲ. ಅರ್ಜುನನ ಅಂತಃಕರಣ. ಅಷ್ಟೇ ಅಲ್ಲ. ನಮ್ಮೆಲ್ಲರ ಅಂತಃಕರಣವೇ ಒಂದು ರಣಕಣ. ಆದ್ದರಿಂದಲೇ 'ಅರ್ಜುನವಿಷಾದ' ಯೋಗವೆಂಬ ಮೊದಲನೆಯ ಅಧ್ಯಾಯದ ಶೀರ್ಷಿಕೆ. ವಿಷಾದದ ಯೋಗ–ಸಂಬಂಧವಾದ ತಕ್ಷಣ ವೈರಾಗ್ಯ ಅವತರಿಸುತ್ತದೆ. ಇದು ಸ್ಥಾಯಿಯಲ್ಲ. ವೈರಾಗ್ಯ ಉಪಾದೇಯ. ಅಂಥ ವಿರಕ್ತತೆಗೆ ಒಂದು ಸಂವಿಧಾನವಿದೆ. ಆ ಸಂವಿಧಾನವೇ ಅನುಕ್ರಮವಾಗಿ ಗೀತೆಯ ಅಧ್ಯಾಯ ಶೀರ್ಷಿಕೆಗಳು.

ನಾವು ತಜ್ಞರಾಗಲು ಬಯಸುತ್ತೇವೆ. ಅದು ಕಾಲದ ಕರೆಯಾಗಿದೆ. ಆದರೆ ತಜ್ಞತೆ ಸಾಲದು. ತತ್ತ್ವಜ್ಞತೆ ಬೇಕು. ಅದಕ್ಕಾಗಿ ತತ್ತ್ವಜ್ಞತೆಯ ಅಗತ್ಯಸಾರುವ ಅಧ್ಯಾಯ ಸಾಂಖ್ಯಯೋಗ. ಸಾಂಖ್ಯವು ಕಪಿಲಮಹರ್ಷಿಗಳಿಂದ ಪ್ರಣೀತವಾದ ದರ್ಶನವೆಂದೇ ರೂಢಿ. ಆದರೆ ಇಲ್ಲಿ ಸಾಂಖ್ಯ ಶುದ್ಧಾತ್ಮತತ್ತ್ವ ವಿಜ್ಞಾನ. ವಿಷಾದದ ಮೂಲ ಮೋಹ. ಮೋಹ ಮುದ್ಗರ ಸಾಂಖ್ಯ. ಆದ್ದರಿಂದ ವಿಷಾದ ಮೂಲವಾದ ಮೋಹವನ್ನು ಪುಡಿಗೊಳಿಸಲು ಎರಡನೆಯ ಅಧ್ಯಾಯ ಸಾಂಖ್ಯಯೋಗ ಸಹಕಾರಿ. ಸಾಂಖ್ಯ ಯೋಗದಲ್ಲಿ ವಿಮೋಹಕ್ಕೆಡೆಯಿಲ್ಲದ ಒಂದು ಮನಸ್ಥಿತಿಯನ್ನು ಉಲ್ಲೇಖಿಸಿದೆ. ಅದೇ ಬ್ರಾಹ್ಮೀಸ್ಥಿತಿ. ಬ್ರಾಹ್ಮೀಸ್ಥಿತಿ ಅತ್ಯುತ್ತಮ. ಆದರೆ ನೀನು ಹೋರಾಡು ಎಂದರೆ ಸಂದೇಹ ಸಹಜ. ಅಂಥ ಪರ್ಯಾಕುಲತೆಯ ಮೂಲದಿಂದ ಮೂರನೆಯ ಅಧ್ಯಾಯ ಕರ್ಮಯೋಗ ಮೂಡಿದೆ. ಕರ್ಮಯೋಗದ ಕರೆ ಕಾಮನ ಮೇಲೆ ದಿಗ್ವಿಜಯ. ನಿಜಶತ್ರು ಕಾಮ. ಅದನ್ನು ಗೆಲ್ಲುವ ಉಪಾಯ ಕರ್ಮಯೋಗ–ಫಲಪ್ರತೀಕ್ಷೆಯಿಲ್ಲದೇ ಕರ್ಮಪರರಾಗುವುದು. ಕರ್ಮದಿಂದ ಜಾರುವುದಲ್ಲ. ಜ್ಞಾನದಲ್ಲಿ ಅವಿಚಲ ನಿಷ್ಠೆಯನ್ನು, ನಿರ್ಲಿಪ್ತಕರ್ಮವನ್ನು ಅರಿತ ನಂತರ ಇವರೆಡರ ಸಮನ್ವಿತವಾದ ಒಂದು ನಡೆಯನ್ನು ನುಡಿಯುತ್ತದೆ ನಾಲ್ಕನೆಯ ಜ್ಞಾನಕರ್ಮಸಂನ್ಯಾಸಯೋಗ. ಅರಿವು ಎಂಬ ಖಡ್ಗ ಮನದಲ್ಲೇ ಮೂಡಿ ಅಲ್ಲಿ ನೆಲೆನಿಂತ ಅಜ್ಞಾನವನ್ನು ತರಿಯುತ್ತದೆ. 'ಜ್ಞಾನಕರ್ಮ ಸಂನ್ಯಾಸವೇ' ವೇದದ ಪರಮಾರ್ಥ. ಇದೇ ಗೀತೆಯಲ್ಲೆಲ್ಲಾ ಪ್ರತಿಪಾದಿತವಾಗಿದೆ. ಜ್ಞಾನಕರ್ಮಗಳ ಸಮ್ಯಕ್ ನ್ಯಾಸದಿಂದಲೇ ಏಳ್ಗೆ ಎಂಬುದು ನಾಲ್ಕನೆಯ ಅಧ್ಯಾಯದ ಸಂದೇಶ.

ಈ ಸಂದೇಶವೂ ಸಂದೇಹಮುಕ್ತವಲ್ಲ. ಕರ್ಮದ ಅನುಷ್ಠಾನ ಹಾಗೂ ಕರ್ಮಸಂನ್ಯಾಸಗಳ ಸಮನ್ವಯ ಅಸಾಧ್ಯವಲ್ಲವೇ ? ಹಾಗಾದರೆ ಇವೆರಡರಲ್ಲಿ ಆಯ್ಕೆ ಅನಿವಾರ್ಯ. ಆಯ್ಕೆಗೆ ಕರ್ಮಾನುಷ್ಠಾನ ಮೇಲೋ? ಕರ್ಮಸಂನ್ಯಾಸ ಮೇಲೋ? ಎಂಬುದು ನಿರ್ಣಯವಾಗಬೇಕಷ್ಟೆ? ಈ ನಿರ್ಣಯಕ್ಕಾಗಿಯೇ ಮೀಸಲಾಗಿದೆ ಐದನೆಯ ಸಂನ್ಯಾಸಯೋಗ. ಈ ಅಧ್ಯಾಯದಲ್ಲಿ ಭೇದವೇ ಕಲ್ಪಿತ. ಸಾಂಖ್ಯ–ಯೋಗ ಒಂದೇ ಎಂದು ಅವುಗಳ ಸಮರಸತೆಯನ್ನು ಸಾರಿದ್ದರಿಂದ ಇದು ಸಂ–ನ್ಯಾಸ ಯೋಗವೆಂಬ ಅನ್ವರ್ಥನಾಮವನ್ನು ಪಡೆದಿದೆ.

ಸಂನ್ಯಾಸಯೋಗದ ಆಚರಣೆ ತತ್ತ್ವದ ಆವಿಷ್ಕಾರಕ್ಕೆ ಉಪಕಾರಕ. ಆವಿಷ್ಕಾರ ನಿರತರು ವಿಚಲಿತರಾಗದಂತೆ ಸ್ಥಿರೀಕರಿಸುವ ಸಾಧನ ಧ್ಯಾನಯೋಗದ ಅನುಷ್ಠಾನ. ಇದೇ ಆರನೆಯ ಅಧ್ಯಾಯದ ತಲೆಬರಹ. ಅಂಥ ಅಚ್ಯುತಶ್ರದ್ಧೆ ವ್ಯಕ್ತಿತ್ವದ ವಿಕಸಿತ ಅವಸ್ಥೆ. ಅಂಥ ಅದ್ವಿತೀಯಾವಸ್ಥೆ ಯಾವುದನ್ನು ಅವಲಂಬಿಸಿದರೆ ಪಡೆಯಲು ಸಾಧ್ಯ ಎಂಬ ಕಾತರಕ್ಕೆ ಉತ್ತರವಾದ ಮುಂದಿನ ಏಳನೆಯ ಜ್ಞಾನವಿಜ್ಞಾನಯೋಗ ಅಳವಟ್ಟಿದೆ. ಯಾವುದನ್ನು ಆಶ್ರಯಿಸಿ ವ್ಯಕ್ತಿತ್ವವು ಪರಿಪೂರ್ಣವಾಗಿ ಸರ್ವಾಂಗಸುಂದರವಾಗಿ

ಅರಳುತ್ತದೆಯೋ ಅದರ ನಿರೂಪಣೆ ಈ ಅಧ್ಯಾಯದ ವಿಷಯ. ಮದಾಶ್ರಯತೆಯ ಮರ್ಮ ಭೇದಕ್ಕೆ ಮೀಸಲಾದ ಅಧ್ಯಾಯ. ಮದದ ಆಶ್ರಯವೂ ಮದಾಶ್ರಯವೇ, ಆದರೆ ಇಲ್ಲಿ ಮತ್+ಆಶ್ರಯ ಮದಾಶ್ರಯ ಅಂತಹ ಮತ್ಪದಾರ್ಥದ ಪ್ರಕಾಶಕ ಜ್ಞಾನವಿಜ್ಞಾನಯೋಗಾಧ್ಯಾಯ. ಮತ್ ಪದಾರ್ಥವೇ ಪರಮಾತ್ಮ. ಯಾವುದನ್ನರಿತರೆ ಇನ್ನೇನನ್ನೂ ಪ್ರತ್ಯೇಕವಾಗಿ ಅರಿಯ ಬೇಕಾಗಿಲ್ಲವೋ ಅಂಥ ಒಂದರಲ್ಲಿಯೇ ಎಲ್ಲವನ್ನೂ ಅಡಗಿಸಿಕೊಂಡ ಮಹತ್ತ್ವಪೂರ್ಣ ತತ್ತ್ವದ ಜ್ಞಾನವನ್ನು ವಿಜ್ಞಾನದೊಂದಿಗೆ ಅನುರಣಿಸುವ ಅಧ್ಯಾಯ ಪರಮಾತ್ಮನ ಅರಿವಿಗಾಗಿ ಪರಿತಪಿಸುವವರು ಸರ್ವವೂ ಬ್ರಹ್ಮಮಯವೆಂದು ಬಗೆಯುತ್ತಾರೆಂದು ಏಳನೆಯ ಅಧ್ಯಾಯ ಮುಕ್ತಾಯವಾಗುತ್ತದೆ. ಈ ಮುಕ್ತಾಯವೇ ಬ್ರಹ್ಮವೆಂದರೇನೆಂಬ ಜಿಜ್ಞಾಸೆಗೆ ನಾಂದಿಯಾದ ಬ್ರಹ್ಮಾಕ್ಷರನಿರ್ದೇಶಕ್ಕೆ ಇಂಬು ನೀಡುವುದರಿಂದ ಎಂಟನೆಯ ಅಧ್ಯಾಯ ಬ್ರಹ್ಮಾಕ್ಷರನಿರ್ದೇಶಯೋಗವೆಂದು ಹೆಸರಿಸಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಧಾರಣಾ ಯೋಗವನ್ನು ವಿವರಿಸಿ ಇದೇ ರೀತಿಯಲ್ಲಿ ಮೋಕ್ಷಸಾಮ್ರಾಜ್ರವನ್ನೇ ಪಡೆಯಬಹುದೆಂಬ ಸಾಧ್ಯತೆಯನ್ನು ಸ್ವಯಂಪ್ರೇರಣೆಯಿಂದ ಭಗವಂತ ಶ್ರೀಕೃಷ್ಣನು ವಿದ್ಯಾರಾಜನು, ಗುಹ್ಯಗಳ ರಾಜನೂ ಆದ.

ಚರಾಚರವಸ್ತುಗಳಲ್ಲಿ ಗಾಢವಾಗಿ ಗೂಢವಾಗಿರುವ ಸನಾತನ ತತ್ತ್ವವನ್ನು ಬಿತ್ತರಿಸುವ ಒಂಬತ್ತನೆಯ ಅಧ್ಯಾಯಕ್ಕೆ ರಾಜವಿದ್ಯಾರಾಜಗುಹ್ಯಯೋಗಬೆಂಬ ಹೆಸರು ಉಚಿತ. ಏಳು ಎಂಟನೆಯ ಅಧ್ಯಾಯಗಳಲ್ಲಿ ಭಗವದ್ವಿಭೂತಿ ಹಾಗೂ ತತ್ತ್ವವನ್ನು ವಿವರಿಸಿದೆ. ಅದನ್ನು ಯಾವ ಭಾವನೆಯಿಂದ ಮೆಲುಕುಹಾಕಬೇಕೆಂಬುದನ್ನು ತಿಳಿಸಲು ಹತ್ತನೆಯ ಅಧ್ಯಾಯವನ್ನು ಬಳಸಿದೆ. ಹೇಳಿದ್ದನ್ನೇ ಮತ್ತೆ ಹೇಳಲು ಕಾರಣ ಭಗವದ್ವಿಭೂತಿಯ ಗಹನತೆ. ಅಂಥ ವಿಭೂತಿಯ ಗಹನತೆಯನ್ನು ಎಳೆಯೆಳೆಯಾಗಿ ಬಿಡಿಸಿಡುವ ಅಧ್ಯಾಯಕ್ಕೆ ವಿಭೂತಿಯೋಗ ಎಂದು ಹೆಸರು ಸಮಂಜಸ. ಈ ವಿಭೂತಿಯ ಬಗ್ಗೆ ಕೇಳಿ ತಿಳಿದವರಿಗೆ ಅದನ್ನು ಕಾಣುವ ಹಂಬಲವಾಗುವುದಿಲ್ಲವೆ? ಮೋಹದ ಮೋಡ ಕರಗಿ ಚೇತನಾಚೇತನಗಳ ವಿವೇಕೋದಯವಾಗದಿರದೆ? ಅಂಥ ಐಶ್ವರ್ಯವನ್ನು ಜಗತ್‌ಸ್ವಾಮ್ಯವನ್ನು ಕಾಣಬಯಸಿದವರಿಗಾಗಿ ಹನ್ನೊಂದನೆಯ ವಿಶ್ವರೂಪದರ್ಶನ ಯೋಗವು ನಿರೂಪಿತವಾಗಿದೆ. ಎರಡನೆಯ ಅಧ್ಯಾಯದಿಂದ ಹತ್ತನೆಯ ಅಧ್ಯಾಯದವರೆಗೆ ಬ್ರಹ್ಮೋಪಾಸನೆ ಮತ್ತು ಉಪಾಧಿರಹಿತ ಅಕ್ಷರೋಪಾಸನೆಯನ್ನು ಹೇಳಿ ಅಲ್ಲಲ್ಲಿ ಈಶ್ವರೋಪಾಸನೆಯನ್ನು ಪ್ರಸ್ತಾಪಿಸಿದೆ.

ಹನ್ನೊಂದನೆಯ ಅಧ್ಯಾಯದಲ್ಲಿ ವಿಶ್ವರೂಪವನ್ನು ತೋರಿರುವುದು ಉಪಾಸನೆಗಾಗಿಯೇ. ಭಗವದರ್ಪಣಬುದ್ಧಿಯಿಂದ ಕಾರ್ಯವೆಸಗುವವನೇ ಭಗವತ್ತತ್ತ್ವದಲ್ಲಿ ಲೀನವಾಗುತ್ತಾನೆ ಎನ್ನಲಾಗಿದೆ. ಆದ್ದರಿಂದ ಶತ್ರುಭಾವವಿಲ್ಲದೇ ಭಗವದ್ಭಾವದಿಂದ ಮಾಡಲೇಬೇಕಾದ ಕೃತ್ಯ ಯುದ್ಧವೆಂದು ಸೂಚಿಸಿದಾಗ ಅಂಕುರಿಸಿತು ಸಂದೇಹ.

ಬ್ರಹ್ಮೋಪಾಸನೆ ಮೇಲೋ? ಅಕ್ಷರೋಪಾಸನೆ ಮಿಗಿಲೋ? ಇದರ ನಿರ್ಣಯಕ್ಕಾಗಿ ಹನ್ನೆರಡನೆಯ ಭಕ್ತಿಯೋಗ ಪ್ರಸ್ತುತವಾಗಿದೆ. ಭಗವದ್ಭಕ್ತಿಯಿಂದ ಮಾಡುವ ಎಲ್ಲಾ ಕ್ರಿಯೆಗಳೂ ಉಪಾಸನೆಯೇ. ಭಕ್ತಿಯೇ ಧರ್ಮಾಮೃತ. ಆದ್ದರಿಂದ ಮೇಲುಕೀಳೆಂಬ ತಾರತಮ್ಯ ಉಪಾಸನೆಯಲ್ಲಿಲ್ಲ. ಏಳನೆಯ ಅಧ್ಯಾಯದಲ್ಲಿ ಪ್ರಕೃತಿಯ ಇಬ್ಬಗೆಯನ್ನು ಹೇಳಿದೆ. ಅದು ಪರಾಪ್ರಕೃತಿ ಮತ್ತು ಅಪರಾಪ್ರಕೃತಿ. ಪರಾಪ್ರಕೃತಿ ಈಶ್ವರ. ಅಪರಾಪ್ರಕೃತಿ ತ್ರಿಗುಣಾತ್ಮಕ ಮೂಲಪ್ರಕೃತಿ. ಈಶ್ವರ ಪ್ರಕೃತಿ–ಕ್ಷೇತ್ರಬಲ್ಲವನಾದ್ದರಿಂದ ಕ್ಷೇತ್ರಜ್ಞ. ಪ್ರಕೃತಿಯೇ ಕ್ಷೇತ್ರ. ಕ್ಷೇತ್ರಕ್ಷೇತ್ರಜ್ಞ ಜ್ಞಾನವೇ ನಿಜವಾದ ಜ್ಞಾನವೆಂದು ಪ್ರತಿಷ್ಠಾಪಿಸುವ ಹದಿಮೂರನೆಯ ಅಧ್ಯಾಯಕ್ಕೆ ಕ್ಷೇತ್ರ ಕ್ಷೇತ್ರಜ್ಞಯೋಗವೆಂದು ಸೂಚಿಸಿರುವುದು ಸೂಕ್ತ.

ಕ್ಷೇತ್ರ–ಕ್ಷೇತ್ರಜ್ಞರು ಜಗತ್ತಿನ ಸ್ಥಿತಿಗತಿಗೆ ಸ್ವತಂತ್ರವಾಗಿ ಕಾರಣರೇ? ಪರಸ್ಪರಾವಲಂಬಿಗಳಾಗಿವೆಯೇ? ಎಂಬ ಸೂಕ್ಷ್ಮವನ್ನು ಬಹಿರಂಗ ಗೊಳಿಸುವ ಹದಿನಾಲ್ಕನೆಯ ಅಧ್ಯಾಯವನ್ನು ಗುಣತ್ರಯವಿಭಾಗವೆಂದು ಹೆಸರಿಸಲಾಗಿದೆ. ಈ ಮೂರು ಗುಣವನ್ನು ಮೀರಿ ಬಾಳಬಹುದು. ಗುಣಾತೀತತೆಗೆ ವಿರಕ್ತಿ ಮೂಲಬಂಡವಾಳ. ವಿರಕ್ತಿಯ ಶಕ್ತಿ ಪಡೆದವನೇ ಪುರುಷರಲ್ಲಿ ಉತ್ತಮ ಎಂಬುದನ್ನು ಬೋಧಿಸುವ ಹದಿನೈದನೆಯ ಅಧ್ಯಾಯಕ್ಕೆ ಪುರುಷೋತ್ತಮಯೋಗವೆಂಬ ನಾಮಕರಣ. ಜೀವಿಗಳ ವೈವಿಧ್ಯವನ್ನು ಒಂಬತ್ತನೆಯ ಅಧ್ಯಾಯದಲ್ಲಿ ಮೂರು ಬಗೆಯಲ್ಲಿ ದೈವೀ, ಆಸುರೀ ರಾಕ್ಷಸೀ ಎಂದು ಪ್ರಸ್ತಾಪಿಸಿದೆ. ದೈವೀ ಪ್ರಕೃತಿ ಮುಕ್ತಿಗಾಗಿ. ಉಳಿದವು ಬಂಧನಕ್ಕಾಗಿ. ಈ ಪ್ರಕೃತಿಯನ್ನೇ ಸಂಪತ್ತೆಂದು ಬಗೆದು ದೈವಸಂಪತ್ತು ಹಾಗೂ ಆಸುರ ಸಂಪತ್ತಿನ ಸ್ವರೂಪವನ್ನು ಬಯಲು ಮಾಡುವ ಹದಿನಾರನೆಯ ಅಧ್ಯಾಯವನ್ನು ದೈವಾಸುರಸಂಪದ್ವಿಭಾಗಯೋಗವೆಂದು ಕರೆಯಲಾಗಿದೆ. ಇದನ್ನು ಮಾಡಬೇಕು ಇದನ್ನು ಮಾಡಬಾರದು ಎಂಬುದರ ಬಗ್ಗೆ ಶಾಸ್ತ್ರವೇ ಪ್ರಮಾಣವೆಂಬ ಹದಿನಾರನೆಯ ಅಧ್ಯಾಯದ ನುಡಿಯನ್ನು ಹಿಡಿದು, ಶಾಸ್ತ್ರಗೀತ್ರ ಗೊತ್ತಿಲ್ಲದೇ ಶ್ರದ್ಧೆಯಿಂದ ಕರ್ಮವನ್ನು ಮಾಡಿದರೆ ಅದು ಸಾತ್ವಿಕವೇ ? ರಾಜಸವೇ? ತಾಮಸವೆ? ಈ ತಾಕಲಾಟಕ್ಕೆ ಉತ್ತರವಾಗಿ ಹದಿನೇಳನೆಯ ಅಧ್ಯಾಯ ಶ್ರದ್ಧೆಯನ್ನು ಮೂರು ತೆರನಾಗಿ ವಿಭಜಿಸಿ ವಿವರಿಸುವುದರಿಂದ ಶ್ರದ್ಧಾತ್ರಯವಿಭಾಗಯೋಗವೆಂಬ ಸಂಜ್ಞೆಗೆ ಅರ್ಹ. ಹೀಗೆ ಹದಿನೇಳು ಸೋಪಾನಗಳಲ್ಲಿ ಚಿಂತನೆಯ ಹರಿವನ್ನು ಹರಿಸಿ ಉಪಸಂಹಾರಕ್ಕಾಗಿಯೇ ಹದಿನೆಂಟನೆಯ ಅಧ್ಯಾಯ ರೂಪಿತವಾಗಿದೆ. ಅದರಲ್ಲಿಯೂ ಸಂನ್ಯಾಸ ಮತ್ತು ತ್ಯಾಗ ಇವುಗಳಲ್ಲಿ ಅರ್ಥವೈಷಮ್ಯವಿದೆಯೇ ? ಅರ್ಥಸಾಮ್ಯವೆ? ಎಂಬುದು ಅರ್ಜುನನ ಕಾಳಜಿ. ಇದನ್ನು ವಿವರಿಸುವ ಹದಿನೆಂಟನೆಯ ಅಧ್ಯಾಯದ ಹೆಸರು ಮೋಕ್ಷಸಂನ್ಯಾಸಯೋಗ. ಹೀಗೆ ಆ ಆ ಅಧ್ಯಾಯ ಗಳಲ್ಲಿ ವಿಶದಪಡಿಸುವ ವಿಷಯದ ಚೌಕಟ್ಟಿನಲ್ಲಿಯೇ ಹದಿನೆಂಟು ಅಧ್ಯಾಯಗಳಿಗೆ ಶೀರ್ಷಿಕೆ ನೀಡಿರುವುದು ಕಂಡುಬರುತ್ತದೆ. ಈ ಶೀರ್ಷಿಕೆಗಳೇ ಗೀತಾರ್ಥವನ್ನು ಹಿಡಿದಿರುವ ಸೂತ್ರಗಳಾಗಿವೆ.

ಭಗವದ್ಗೀತೆಯಲ್ಲಿ ಲೋಕಸಂಗ್ರಹ

– ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ಆಧ್ಯಾತ್ಮಿಕ ಜೀವನದಲ್ಲಿ ಕರ್ಮದ ಸ್ಥಾನ ಏನು ಎಂಬ ವಿಷಯದ ಬಗ್ಗೆ ಚಿಂತನೆ ಹರಿಸುವುದು ಅತಿಮುಖ್ಯ. ಗೀತೆಯಲ್ಲಿ ತಿಳಿಸಿರುವ ಅಭ್ಯಾಸ ಯೋಗವೆಂದರೆ ಅದು ಬಿಡಲಾಗದ ನಿಷ್ಕಾಮವಾದ ಕರ್ಮ ಎಂಬುದು. ಗೀತೆಯಲ್ಲಿ ರೂಪಿತವಾಗಿರುವ ಅಭ್ಯಾಸಯೋಗ ಮೊದಲ ಘಟ್ಟದಲ್ಲಿ ಮನಸ್ಸು ನಿರ್ಮಲವಾಗುವವರೆಗೆ ಇದು ಗ್ರಾಹ್ಯ. ಆದರೆ ಆ ಹಂತವನ್ನು ಮುಟ್ಟಿದ ಮೇಲೆ ಮೋಕ್ಷವನ್ನು ಬಯಸುವವನು ಧ್ಯಾನ, ತಪಸ್ಸು ಮುಂತಾದವುಗಳಲ್ಲಿ ಮಗ್ನನಾಗಬೇಕಾದಾಗ ಕರ್ಮವನ್ನು ಮಾಡಬಾರದು, ಬಿಡಬೇಕು ಎಂಬುದಾಗಿ ಕೆಲವರು ಭಾವಿಸುತ್ತಾರೆ. ಆದರೆ ಇದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ವಿಚಾರ ಮಾಡಬೇಕು. ಅಧ್ಯಾತ್ಮಜೀವನದ ವಿಕಾಸದಲ್ಲಿ ಎರಡು ಘಟ್ಟಗಳಿವೆ. ಇವುಗಳಲ್ಲಿ ತೊಡಗಿಸುವಂತಹ ಅಧ್ಯಾತ್ಮ ಶಿಕ್ಷಣ ಕ್ರಮಗಳಲ್ಲಿ ಪರಸ್ಪರ ಭೇದ ಉಂಟು. ಇದನ್ನು ಗೀತೆ ವಿಶದವಾಗಿ ತಿಳಿಸುತ್ತದೆ.

ಜೀವನದಲ್ಲಿ ಅತ್ಯುನ್ನತ ಮಟ್ಟವನ್ನು ಏರಬೇಕು ಎಂದು ಬಯಸುವವನಿಗೆ ನಿಷ್ಕಾಮ ಕರ್ಮವು ವಿಹಿತವಾಗಿದೆ. ಜೊತೆಗೆ ಎಲ್ಲಾ ಬಗೆಯ ಕಾಮನೆಗಳಿಂದಲೂ ದೂರನಾಗಿ, ನೈಷ್ಕರ್ಮ್ಯವನ್ನು ಪಡೆದು ಅಂದರೆ ಕರ್ಮ ಬಂಧನದಿಂದ ಮುಕ್ತಿಯನ್ನು ಹೊಂದಿ ಪಾಂಚಭೌತಿಕ ವಿಷಯಗಳ ಬಗ್ಗೆ ಉದಾಸೀನನಾಗಿರುವ ಜೀವನ್ಮುಕ್ತನಿಗೆ, ಭಗವಂತನನ್ನು ಸಾಕ್ಷಾತ್ಕರಿಸಿಕೊಂಡವನಿಗೆ ಪರಮಶಾಂತಿಯು ವಿಹಿತವಾಗಿದೆ. ಯೋಗಿಯಾದವನು ಯೋಗದಲ್ಲಿ ಸಿದ್ಧಿಯನ್ನು ಪಡೆಯುವವರೆಗೂ ಪರಮಾತ್ಮನಿಗೆ ಅರಿಕೆ ಮಾಡುವ ಕರ್ಮವನ್ನು ಮಾಡದಿದ್ದರೆ ಆಗ ಅಧ್ಯಾತ್ಮದಲ್ಲಿ ಪ್ರಗತಿಯೂ ಸಾಧ್ಯವಿಲ್ಲ. ಅದೂ ಅಲ್ಲದೇ ಅಭ್ಯಾಸಶೀಲನಾದವನು ಆತ್ಮಸಾಕ್ಷಾತ್ಕಾರದ ಕೊನೆಯ ಘಟ್ಟವನ್ನು ತಲುಪುವವರೆಗೆ ತನಗೆ ಇಷ್ಟವಾದ ಮನಸ್ಸಿನ ನಿಯಂತ್ರಣ, ಚಿತ್ತಶುದ್ಧಿ ಮುಂತಾದ ಅಂತಃಕರಣಕ್ಕೆ ಸಂಬಂಧಿಸಿದ ಶಿಕ್ಷಣಗಳು ಸಾಧ್ಯ ಎಂದು ತಿಳಿಸಿ ಈ ರೀತಿಯ ಪ್ರಗತಿಯ ಹಂತಗಳನ್ನೂ ಮತ್ತು ಆಯಾ ಹಂತಗಳಲ್ಲಿ ಅವನು ಮಾಡಲೇಬೇಕಾದ ಅಭ್ಯಾಸಗಳನ್ನು ಭಗವದ್ಗೀತೆಯ 18ನೆಯ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾತ್ಮ ಸಾಧನೆಯನ್ನು ಮಾಡಬೇಕಾದ ಎರಡು ಹಂತಗಳಲ್ಲೂ ಅಭ್ಯಾಸಿಯಾದವನು ಮಾಡಬೇಕಾದ ಕರ್ತವ್ಯಗಳು ಭಗವದ್ಗೀತೆಯ ನಿರೂಪಣೆಯಲ್ಲಿ ನಮಗೆ ದೊರೆಯುತ್ತವೆ. ಮೊದಲನೆಯ ಘಟ್ಟದಲ್ಲಿ ಕರ್ಮಜ್ಞಾನ ಯೋಗಗಳಲ್ಲಿ ಅಭ್ಯಾಸ ನಿರತನಾದ ಸಾಧಕನು ತಾನು ಮಾಡಬೇಕಾದ ಎಲ್ಲಾ ಕರ್ತವ್ಯಗಳನ್ನು ಭಗವಂತನ ಪೂಜೆ ಎಂದು ಭಕ್ತಿಶ್ರದ್ಧೆಗಳಿಂದ ಮಾಡುತ್ತಾನೆ. ಎರಡನೆಯ ಘಟ್ಟದಲ್ಲಿ ಅದೇ ವ್ಯಕ್ತಿಯು ಆತ್ಮ ಸಾಕ್ಷಾತ್ಕಾರವನ್ನು ಪಡೆದವನಂತೆ ಸದಾ ಭಗವಂತನಲ್ಲಿ ಹೊಂದಿಕೊಂಡಿರುವ ಕಲೆಯನ್ನು ಮನಸ್ಸಿಗೆ ಕಲಿಸುತ್ತಾನೆ. ಹೀಗೆ ಈ ಅಧ್ಯಾತ್ಮ ಸಾಧನೆಯನ್ನು ಎರಡು ಬಗೆಯಾಗಿ ಮಾಡುವುದರಿಂದ ಗೀತೆಯು ಎಲ್ಲ ವಿಧವಾದ ಕರ್ಮಗಳನ್ನೂ ಬಿಡಬೇಕೆಂದು ಹೇಳುತ್ತದೆಯೇ ಅಥವಾ ಕರ್ಮ ಬಂಧನದ ಮುಕ್ತಿಯನ್ನು ಜೀವನದ ಒಂದು ಘಟ್ಟವನ್ನಾಗಿ ಸ್ಥಾಪಿಸುತ್ತದೆಯೇ ಎಂಬುದನ್ನು ಅದರಲ್ಲಿ ಬರುವ ಇತರ ವಾಕ್ಯ ತುಣುಕುಗಳು ವಿವರವಾಗಿ ಯಾವ ಸಂದೇಹಕ್ಕೂ ಎಡೆ ಮಾಡದೇ ನಿಷೇಧಿಸುತ್ತವೆ.

ಮೇಲು ನೋಟಕ್ಕೆ ಪರಸ್ಪರ ವಿರುದ್ಧವೆಂದು ತೋರುವ ಈ ರೀತಿಯ ವಾಕ್ಯ ಖಂಡಗಳನ್ನು ಸರಿಹೊಂದಿಸುವುದು ಅತ್ಯಾವಶ್ಯಕ. ಈ ಬಗೆಯ ಪ್ರಶ್ನೆಗೆ ಗೀತೆಯ ಅಂತಿಮ ತೀರ್ಮಾನವೇನು ಎಂಬುದನ್ನು ತಿಳಿಯಬೇಕಾದರೆ ಈ ರೀತಿಯ ಸಾಮರಸ್ಯವನ್ನು ತರಲು ಮುಂದೆ ಹೇಳುವ ಈ ರೀತಿಯಲ್ಲಿ ಸಾಧ್ಯ. "ಆರುರುಕ್ಷು" (ಉತ್ತಮಮಟ್ಟವನ್ನು ಏರಬೇಕೆಂಬ ಇಚ್ಛೆಯುಳ್ಳವ), "ಆರೂಢ" (ಉತ್ತಮ ಹಂತವನ್ನು ಮುಟ್ಟಿದವನು) ಎಂಬ ಪದಗಳು. ಕ್ರಮವಾಗಿ ಮೊದಲನೆಯ ಮತ್ತು ಎರಡನೆಯ ಘಟ್ಟಗಳಿಗೆ ಅನ್ವಯವಾಗುವಂತೆ ಗೀತೆಯಲ್ಲಿ ಉಕ್ತವಾಗಿದೆ. ಆರುರುಕ್ಷುವಿಗೆ ಕರ್ಮವು ಅವನ ಅಧ್ಯಾತ್ಮದ ಪ್ರಗತಿಗೆ ಕಾರಣವಾದರೆ, ಆರೂಢನಿಗೆ ಶಮವು ಅಧ್ಯಾತ್ಮ ಪ್ರಗತಿಗೆ ಕಾರಣವಾಗುತ್ತದೆ. ಹೀಗೆ ಹೇಳಿದ ಮಾತ್ರದಿಂದ ಗೀತೆಯು ಕರ್ಮ ಬಂಧನದ ಮುಕ್ತಿಯಾದ ನೈಷ್ಕರ್ಮ್ಯವನ್ನು ತಿಳಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆರುರುಕ್ಷುವು ಕರ್ಮಗಳನ್ನು ನಿಯಮಾನುಸಾರ ಮಾಡಲು ತೊಡಗಬೇಕು. ಆದರೆ ಅವನು ಆಗಾಗ ಅಲ್ಪಕಾಲ ಅಥವಾ ದೀರ್ಘಕಾಲಗಳ ಅವಧಿಯಲ್ಲಿ ಆಚರಿಸುವ ಏಕಾಂತ ಸೇವನೆ, ಏಕಾಂತವಾಸ ಮತ್ತು ಇವುಗಳಿಂದ ಉಂಟಾಗುವ ಎಲ್ಲ ಬಗೆಯ ಕರ್ಮಗಳ ವಿಶ್ರಾಂತಿಯಿಂದ, ಭಂಗ ಉಂಟಾಗುವುದಿಲ್ಲ. ಬದಲಾಗಿ ಅವನು ಆ ಹಂತಕ್ಕೆ ಅನುಗುಣವಾದ ನಿಯಮವನ್ನು ಪಾಲಿಸಿದಂತೆಯೇ ಆಗುತ್ತದೆ. ಬೇರೆ ಸಮಯಗಳಲ್ಲಿ ಆರುರುಕ್ಷುವಾದವನು ಯಾವ ಹಂತದಲ್ಲಿ ಕರ್ಮಾರ್ಪಣಗಳ ಯೋಗವು ತನಗೆ ನಿಯತವಾಗಿದಂತೆಯೋ ಆ ಹಂತದಲ್ಲಿ ಮುಂದುವರಿದಿದ್ದರೂ ಸಹ ಅದನ್ನೂ ಮೀರಿ ಆತ ತನ್ನ ಕರ್ಮದ ಭಾರವನ್ನು ಅನಾವಶ್ಯಕವಾಗಿ ಬೆಳೆಸಿಕೊಳ್ಳದೆಯೇ ತಾನು ಮಾಡಬೇಕಾದ ಕರ್ಮಗಳನ್ನು ಭಗವಂತನಿಗೆ ಅರ್ಪಿಸಬೇಕು ಎಂಬ ಭಗವದರ್ಪಣ ಬುದ್ಧಿಯಿಂದ ಮಾಡಲೇಬೇಕು.

ಆದರೆ ಈ ಘಟ್ಟದಲ್ಲಿ ಕರ್ಮಕ್ಕೂ ಅಧ್ಯಾತ್ಮ ಪ್ರಗತಿಗೂ ಸಂಬಂಧ ಕಡಿದು ಬಿದ್ದಿದ್ದರೂ ಸಹ, ಮೋಕ್ಷವನ್ನು ಬಯಸುವವನು ಯಾವ ಉದ್ದೇಶಕ್ಕಾಗಿ ಕರ್ಮಗಳನ್ನು ಆಚರಿಸಬೇಕು? ಆತನು ಎಲ್ಲ ಬಗೆಯ ಕರ್ಮಗಳನ್ನು ಪರಿಪೂರ್ಣವಾಗಿ ಬಿಟ್ಟು ಶಮವೊಂದರಲ್ಲೇ ಮನಸ್ಸನ್ನು ಇಟ್ಟು ತನ್ನ ಅಧ್ಯಾತ್ಮ ಘಟ್ಟದ ಪ್ರಗತಿಯನ್ನು ಸಾಧಿಸಬೇಕಲ್ಲವೇ? ಎಂಬ ಪ್ರಶ್ನೆಗಳಿಗೆ ಗೀತೆಯು "ಲೋಕಸಂಗ್ರಹ" ಅಥವಾ "ಸಾಮಾಜಿಕ ವ್ಯವಸ್ಥೆಯ ರಕ್ಷಣೆ" ಎಂಬ ತನ್ನ ಅತ್ಯುತ್ತಮವಾದ ಸಾಮಾಜಿಕ ಪ್ರಜ್ಞೆಯನ್ನು ಮುಂದಿಟ್ಟುಕೊಂಡು ಒಂದು ಹೊಚ್ಚ ಹೊಸ ಭಾವನೆಯನ್ನು ಮಂಡಿಸುತ್ತದೆ. ಎಲ್ಲರೂ ಕರ್ಮವನ್ನು ಮಾಡಲೇಬೇಕು ಇದೇ ಸಾಮಾಜಿಕ ನ್ಯಾಯ ಎಂಬುದನ್ನು ಎತ್ತಿತೋರಿಸಲು ಈ ಲೋಕ ಸಂಗ್ರಹವೆಂಬ ಭಾವನೆಯನ್ನು ಗೀತೆಯು ಎಲ್ಲರ ಮುಂದಿಡುತ್ತದೆ.

ಈ ಲೋಕದಲ್ಲಿ ಆತ್ಮ ಸಾಕ್ಷಾತ್ಕಾರವನ್ನು ಪಡೆದ ಯೋಗಿಗಳು ತುಂಬ ವಿರಳ, ಇದ್ದರೂ ನಮಗೆ ಕಾಣಸಿಗುವುದಿಲ್ಲ. ಏಕೆಂದರೆ ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಂಡಿರುವ ಯೋಗಿಗಳು ತಮಗೆ ಆತ್ಮ ಸಾಕ್ಷಾತ್ಕಾರವಾಗಿದೆ ಎಂದು ಎಲ್ಲೂ ಡಂಗೂರ ಸಾರುವುದಿಲ್ಲ. ಇನ್ನು ಆತ್ಮಸಾಕ್ಷಾತ್ಕಾರವಾಗಿದೆ ಎಂದು ಹೇಳಿಕೊಳ್ಳುವ ಕೆಲವು ವ್ಯಕ್ತಿಗಳನ್ನು ಕಂಡಾಗ ಅವರು ಹೇಳಿಕೊಳ್ಳುವುದರಿಂದಲೇ ಇವನಿಗೆ ಆತ್ಮಸಾಕ್ಷಾತ್ಕಾರವಾಗಿಲ್ಲ ಎನ್ನುವುದನ್ನು ಸಾಮಾನ್ಯ ಮನುಷ್ಯನು ತಿಳಿದುಬಿಡುತ್ತಾನೆ. ಈ ಲೋಕದ ಬಹುಮಂದಿ ಜನರು ತಾವು ಮಾಡಬೇಕಾದ ಕರ್ಮಗಳನ್ನು ಮಾಡುವುದರಿಂದಲೇ ತಮ್ಮ ಮುಕ್ತಿಯನ್ನು ಸಾಧಿಸಬೇಕಾದ ಹಂತದಲ್ಲಿದ್ದಾರೆ. ಆದರೆ ಲೋಕವು ಯಾರನ್ನು ಬುದ್ಧಿವಂತರೆಂದೂ, ವಿವೇಕಿಗಳೆಂದೂ, ಪರಮಶ್ರೇಷ್ಠರೆಂದೂ ಭಾವಿಸಿ ಅವರನ್ನು ಪೂಜ್ಯ ಭಾವನೆಯಿಂದ ನೋಡುತ್ತದೋ ಅಂತಹವರು ಕರ್ಮಗಳನ್ನು ಬಿಡಬೇಕೆಂಬ ಕರ್ಮೋಪರತಿಯ ಮೇಲುಪಂಕ್ತಿಯನ್ನು ಹಾಕಿಕೊಟ್ಟಿದ್ದೇ ಆದರೆ, ಹಾಗೆಯೇ ಲೋಕದ ಈ ಬಹುಮಂದಿ ಜನರು ಇದುವೇ ಜೀವನದ ಸನ್ಮಾರ್ಗವೆಂದು ತಿಳಿದು ಅದನ್ನೇ ಅನುಸರಿಸಲು ತೊಡಗಿದ್ದೇ ಆದರೆ ಅನರ್ಥ ಸಂಭವಿಸೀತು. ಆಗ ಸಮಾಜಘಾತುಕವಾದ ಸೋಮಾರಿತನವೇ ದಿವ್ಯ ಜೀವನದ ಲಕ್ಷಣ ಎನಿಸೀತು. ಅದರ ಜೊತೆಗೆ ಯಾವುದು ಆತ್ಮವಿದ್ಯೆಯಲ್ಲವೋ ಅದೇ ಸಮಾಜದಲ್ಲಿ ಹೆಚ್ಚಾಗಿ ಬೆಳೆದೀತು. ಹಾಗಾಗಬಾರದು. ಜನರು ಸದಾ ಕ್ರಿಯಾಶೀಲರಾಗಿ ಉತ್ಸಾಹಿಗಳಾಗಿ ಲೋಕದ ಜನರಿಗೆ ಉಪಕಾರಿಗಳಾಗಿ ಬದುಕಬೇಕು. ಅದರಿಂದ ಜೀವನದ ಸಾರ್ಥಕತೆಯನ್ನು ಪಡೆಯಬೇಕು. ಅದಕ್ಕಾಗಿ ಭಗವದ್ಗೀತೆಯು ಸಮಾಜವನ್ನು ಒಳ್ಳೆಯ ಹದದಲ್ಲಿಟ್ಟು ಕಾಪಾಡುವುದಕ್ಕಾಗಿ ನಿರಂತರವಾಗಿ ಲೋಕಕ್ಕಾಗಿ ದುಡಿದ ಮಹಾಮಹಿಮರು, ಉಜ್ವಲರು ಆದ ವ್ಯಕ್ತಿಗಳನ್ನು ಉದಾಹರಿಸುತ್ತಾ, "ರಾಜರ್ಷಿ ಎನಿಸಿದ್ದ ಯಾವ ರಾಜನು ತನ್ನ ಜೀವನ ಪೂರ್ತಿ ದೊರೆಯಾಗಿ ಪ್ರಜೆಗಳನ್ನು ಕಾಪಾಡುವ ಕೆಲಸದಲ್ಲಿ ತೊಡಗಿಸಿಕೊಂಡು ಮೋಕ್ಷವನ್ನು ಪಡೆದನೋ ಅಂತಹ ಕೀರ್ತಿಶಾಲಿಯಾದ ಮಹಿಮಾನ್ವಿತನಾದ ರಾಜ ಜನಕನ ಹೆಸರನ್ನು ನಮ್ಮ ಮುಂದಿಡುತ್ತದೆ. ಆ ದೊರೆಯನ್ನು ಉದಾಹರಿಸುವ ಗೀತೆಯ ಶ್ಲೋಕವಿದು –

ಕರ್ಮಣೈವಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ ಗೀತಾ – 3/20

ಜನಕ ಮೊದಲಾದ ದೊರೆಗಳು ಕರ್ಮದಿಂದಲೇ ಅಂತಃಕರಣ ಶುದ್ಧಿಯುಳ್ಳವರಾಗಿ ಜ್ಞಾನಸಿದ್ಧಿಯನ್ನು ಪಡೆದರು. ಎಲೈ ಅರ್ಜುನ! ನಿನಗೆ ಜ್ಞಾನಸಿದ್ಧಿ ಇದೆ ಎಂಬ ಭಾವನೆ ಇದ್ದರೂ ಲೋಕದ ಜನರಿಗೆ ಉಪದೇಶ ಮಾಡುವುದಕ್ಕಾದರೂ ಕರ್ಮವನ್ನು ನೀನು ಮಾಡಬೇಕು. ಎಂದು ಶ್ರೀಕೃಷ್ಣನು ಅರ್ಜುನನಿಗೆ ತಿಳಿಹೇಳುತ್ತಾನೆ. ಲೋಕಸಂಗ್ರಹವೆಂಬುದು ಭಗವದ್ಗೀತೆಯಲ್ಲಿ ಬರುವ ಮಹತ್ತರವಾದ ಅಂಶ. ಲೋಕವೆಂದರೆ ಜೀವಿಗಳು ವಾಸಿಸುವ ಪ್ರಪಂಚ ಹಾಗೂ ಆ ಪ್ರಪಂಚದಲ್ಲಿ ವಾಸ ಮಾಡುವ ಜನರು ಎಂದು ಅರ್ಥ. "ಲೋಕಸ್ತು ಭುವನೇ ಜನೇ" ಎಂಬುದು ಅಮರಕೋಶದ ಮಾತು. ಲೋಕದಲ್ಲಿ ಜ್ಞಾನಿಗಳೂ ಇದ್ದಾರೆ. ಸಾಮಾನ್ಯ ಜನರೂ ಇದ್ದಾರೆ. ಜ್ಞಾನಿಗಳಾದವರು ನಾವು ಶಧ್ಯಾತ್ಮದಲ್ಲಿ ಸಾಧನೆ ಮಾಡಿಯಾಗಿದೆ. ಇನ್ನು ತಾನು ಮಾಡಬೇಕಾದುದು ಇಲ್ಲ ಎಂದು ಕರ್ಮ ಮಾಡದೇ ಸುಮ್ಮನೆ ಕುಳಿತರೆ ಸಾಮಾನ್ಯ ಜನರು ಅವರನ್ನು ನೋಡಿ ತಾವೂ ಸಹ ಏನನ್ನೂ ಮಾಡದೇ ಸುಮ್ಮನೆ ಕುಳಿತುಬಿಡುತ್ತಾರೆ. ಏಕೆಂದರೆ

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸಯತ್ಪ್ರಮಾಣಂ ಕುರುತೇ ಲೋಕಃ ತದನುವರ್ತತೇ ॥ ಗೀತಾ – 3/22

ಲೋಕದಲ್ಲಿ ಉತ್ತಮ ವ್ಯಕ್ತಿಯು ಯಾವ ಯಾವ ಕೆಲಸಗಳನ್ನು ಮಾಡುತ್ತಾನೋ ಅವುಗಳನ್ನು ನೋಡಿ ಬೇರೆ ಜನರೂ ಸಹ ನಾವೂ ಹೀಗೆ ಮಾಡಬೇಕೇನೋ ಎಂದು ಅವುಗಳನ್ನು ಮಾಡುತ್ತಾರೆ. ಉತ್ತಮ ಪುರುಷನು ಯಾವುದನ್ನು ಪ್ರಮಾಣವೆಂದು ಭಾವಿಸಿ ಆಚರಿಸುವನೋ ಲೋಕದ ಜನರೂ ಸಹ ಅದನ್ನೇ ಆಚರಿಸುವರು. ಆದ್ದರಿಂದ ಲೋಕದ ಜನರನ್ನು ಒಟ್ಟುಗೂಡಿಸಿ ಅವರಿಗೆ ಸರಿಯಾದುದನ್ನು ಹೇಳಿ ತೋರಿಸಿ ಸನ್ಮಾರ್ಗದಲ್ಲಿ ಹೋಗುವಂತೆ ಮಾಡುವುದು ಒಳ್ಳೆಯ ಕೆಲಸಗಳನ್ನು ಜನರಿಗೆ ಉಪಯೋಗವಾಗುವಂತೆ ಮಾಡಿಸುವುದು ಮತ್ತು ಜನರ ಮನಸ್ಸಿಗೆ ಹಿತವೂ ಆಪ್ಯಾಯಮಾನವಾಗುವಂತೆಯೂ ಮಾತನಾಡುವಂತೆ ತಿಳಿಹೇಳುವುದು ಜ್ಞಾನಿಗಳಾದ ವಿವೇಕಿಗಳ ಕರ್ತವ್ಯ.

ಜ್ಞಾನಿಗಳು ತಮ್ಮ ಅಧ್ಯಾತ್ಮ ಸಿದ್ಧಿಯನ್ನು ಈ ಲೋಕದಲ್ಲಿ ಇದ್ದೇ ಪಡೆಯಬೇಕು. ಈ ಲೋಕದ ಜನರ ಮಧ್ಯೆ ಇದ್ದೇ ಅವರ ಒಳ್ಳೆಯ ಹಾಗೂ ಕೆಟ್ಟ ಆಚರಣೆಗಳಿಂದ ಒಳ್ಳೆಯದು ಕೆಟ್ಟದ್ದನ್ನು ನೋಡಿ ತಿಳಿದು ಒಳ್ಳೆಯದನ್ನು ಆರಿಸಿಕೊಂಡು, ಕೆಟ್ಟದ್ದನ್ನು ಬಿಟ್ಟು ಮುನ್ನಡೆಯಬೇಕು. ಜನರಿಲ್ಲದೆ ಒಂಟಿಯಾಗಿ ಈ ಸಿದ್ಧಿಯನ್ನು ಪಡೆಯಲು ಸಾಧ್ಯವಿಲ್ಲ. ಜನರೂ ಅಷ್ಟೆ ಕ್ರಿಯಾಶೀಲನಾದ, ಉತ್ಸಾಹಿಯಾದ, ಸರಳನೂ ಸಜ್ಜನನೂ ಆದ ವಿವೇಕಿಯಿಲ್ಲದೆ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಜ್ಞಾನಿಗಳೂ ಸಹ ಲೋಹ ಸಂಗ್ರಹಕ್ಕಾಗಿಯೇ ಸದಾ

ಕ್ರಿಯಾಶೀಲರಾಗಿರಬೇಕು. ಕ್ರಿಯಾಶೀಲರಾದ ಜ್ಞಾನಿಗಳು ಆಲಸ್ಯವನ್ನು ಬಿಟ್ಟು ಕರ್ಮದಲ್ಲಿ ತೊಡಗದೇ ಹೋದರೆ ಕರ್ಮಗಳನ್ನು ಮಾಡಬೇಕಾದ ಜನರು ತಾವು ಮಾಡಬೇಕಾದ ಕೆಲಸಗಳನ್ನು ಬಿಟ್ಟು ಸೋಮಾರಿಗಳಾಗಿಬಿಡುತ್ತಾರೆ. ಆಗ ಲೋಕದ ಯಾವ ವ್ಯವಹಾರವೂ ನಡೆಯದೆ ಲೋಕವು ನಿಷ್ಕ್ರಿಯವಾಗಿಬಿಡುತ್ತದೆ. ಅಜ್ಞಾನಿಯಾದವನು ಈ ಕಾರ್ಯವನ್ನು ನಾನೇ ಮಾಡುವವನು, ಎಲ್ಲವೂ ನನ್ನಿಂದಲೇ ಎಂಬ ಕರ್ತೃತ್ವಾಭಿಮಾನವನ್ನು ಇಟ್ಟುಕೊಂಡು, ಯಾವುದಾದರೂ ಒಂದು ಪ್ರಯೋಜನವನ್ನು ಬಯಸಿಯೇ ಹೇಗೆ ಕೆಲಸಗಳನ್ನು ಮಾಡುತ್ತಾನೆಯೋ ಅದರಂತೆ ತಿಳಿದ ಜ್ಞಾನಿಯಾದ ಮನುಷ್ಯನು ಕರ್ತೃತ್ವಾಭಿಮಾನವನ್ನು ಬಿಟ್ಟು ಫಲಾಪೇಕ್ಷೆಯಿಲ್ಲದೆ, ಲೋಕ ಸಂಗ್ರಹಕ್ಕಾಗಿಯೇ ಸತ್ಕರ್ಮಗಳನ್ನು ಮಾಡಬೇಕು. ಸಕಾಮಕರ್ಮದಲ್ಲಿ ಆಸಕ್ತರಾದ ಅಜ್ಞಾನಿಗಳಿಗೆ ಬುದ್ಧಿವಂತನಾದ ವಿವೇಕಿಯು ಬುದ್ಧಿಯಲ್ಲಿ ವಿಕಲ್ಪವನ್ನು ಉಂಟುಮಾಡಬಾರದು. ಅದಕ್ಕೆ ಬದಲಾಗಿ ಜ್ಞಾನಿಯೂ ಸಹ ಅವರ ಮಧ್ಯದಲ್ಲೇ ಇದ್ದು ಅವರಂತೆಯೇ ತಾನೂ ಕರ್ಮವನ್ನು ಆಚರಿಸುತ್ತಾ ಸಾಮಾನ್ಯ ಜನರು ಮಾಡುವ ಕರ್ಮಗಳಿಗೆ ಪ್ರೋತ್ಸಾಹವನ್ನು ನೀಡಬೇಕು.

ಹೀಗಾಗಿ ಲೋಕಸಂಗ್ರಹವೇ ಜ್ಞಾನಿಯ ಗುರಿಯಾಗಿರಬೇಕು. ಯಾವನು ಸೃಷ್ಟಿಸ್ಥಿತಿಲಯಕರ್ತನೋ ಅಂತಹ ದೇವರೇ ಲೋಕಸಂಗ್ರಹಕ್ಕಾಗಿ ಸಮಾಜದ ಜನರಿಗೆ ಸನ್ಮಾರ್ಗದರ್ಶನ ಮಾಡಿಸುವುದಕ್ಕಾಗಿ ಕರ್ಮದಲ್ಲಿ ತೊಡಗಿದ್ದಾನೆಂದು ಗೀತೆಯು ಹೇಳಿ ಎಲ್ಲ ಅಭ್ಯಾಸಿಗಳಿಗೂ ಲೋಕಸಂಗ್ರಹದ ಹಿರಿಮೆ ಗರಿಮೆಗಳನ್ನು ಎತ್ತಿ ತೋರಿಸುತ್ತದೆ. ಲೋಕಸಂಗ್ರಹವೆಂಬುದು ವೈಯಕ್ತಿಕವಾದ ಅಧ್ಯಾತ್ಮ ಸಾಧನೆಯ ಅಲ್ಪಭಾವನೆಗಳನ್ನು ಮೀರಿ, ಅದೊಂದು ಸಾಮಾಜಿಕ ನಿಯಮ, ಸಾಮಾಜಿಕ ಕರ್ತವ್ಯ ಎಂಬ ಕಲ್ಪನೆಯಿಂದಲೂ ಸಹ ಅದನ್ನು ಮೇಲಕ್ಕೆತ್ತಿ, ಲೋಕಸಂಗ್ರಹವೆಂಬುದು ದೈವದ ಧರ್ಮವೇ ಸರಿಯೆಂದು ಉಸುರುತ್ತದೆ ಭಗವದ್ಗೀತೆ. ಒಟ್ಟಾರೆ ಲೋಕ ಸಮಾಜಗಳನ್ನು ಬಿಟ್ಟು ಜ್ಞಾನಿಯಾದವನು ವ್ಯವಹರಿಸಲಾರ. ಅವುಗಳಿಂದಲೇ ಅಧ್ಯಾತ್ಮ ಸಿದ್ಧಿಯನ್ನು ಪಡೆಯುವಂತಹುದು, ಆದ್ದರಿಂದ ಲೋಕಸಂಗ್ರಹವೇ ಜ್ಞಾನಿಯ ಪರಮ ಗುರಿಯಾಗಿರಬೇಕು, ಲೋಕೋಪಕಾರ ಕಾರ್ಯಗಳೇ ಅವನ ಕರ್ಮಗಳಾಗಿರಬೇಕು, ಲೋಕಕಲ್ಯಾಣವೇ ಅವನ ಅಧ್ಯಾತ್ಮ ಸಿದ್ಧಿಯಾಗಿರಬೇಕು ಎನ್ನುವುದನ್ನು ಭಗವದ್ಗೀತೆಯು ಮೃದು ಮಧುರವಾಗಿ ತಿಳಿಯ ಹೇಳುತ್ತದೆ.

ಸರ್ವ ಸಮನ್ವಯ ತತ್ತ್ವ ಭಗವದ್ಗೀತೆ

– ಡಾ. ಶ್ರೀರಾಮ ಭಟ್ಟ

ಮಹಾಭಾರತದ ಒಂದು ಬಿಂದು ಭಗವದ್ಗೀತೆ. ಅದು ಒಂದು ಪ್ರತ್ಯೇಕ ಗ್ರಂಥವೋ ಎನ್ನುವಂತೆ ಸ್ವತಂತ್ರ ಸಿಂಧುವಾಗಿ ನೆಲೆ ನಿಂತಿದೆ. ಒಂದು ಲಕ್ಷ ಶ್ಲೋಕದ ವ್ಯಾಪ್ತಿಯ ಮಹಾಭಾರತದಲ್ಲಿ ಕೇವಲ ಏಳುನೂರು ಶ್ಲೋಕಗಳ ಪರಿಮಿತಿ ಗೀತೆಯದು. ಆದರೆ ಅದು ಮಹಾಭಾರತದ ಹೃದಯ. ಭಾರತದ ವೈವಿಧ್ಯದ ಇತಿಹಾಸವನ್ನು ಕ್ರೋಢೀಕರಿಸಿಕೊಂಡ ಮಹಾಸಮನ್ವಯದ ಕೃತಿ ಮಹಾಭಾರತ. ಅಲ್ಲಿ ಕಂಠೋಕ್ತವಾಗಿ ಹೇಳಲಾದ ಹರಿಹರಾಭೇದ ಅಥವಾ ಹರಿಹರ ಸಮನ್ವಯ ಇದಕ್ಕೊಂದು ಸ್ಪಷ್ಟ ನಿದರ್ಶನ. ಈ ಸಮನ್ವಯದ ಹಿಂದಿನ ತಾತ್ತ್ವಿಕತೆಯನ್ನು ಭಗವದ್ಗೀತೆಯಲ್ಲಿ ಸಾರವತ್ತಾಗಿ ನಿರೂಪಿಸಲಾಗಿದೆ. ಒಳಗೆ ಮತ್ತು ಹೊರಗೆ ಮಹಾಕ್ಷೋಭೆ ಕಾಣಿಸಿದಾಗ ರಣರಂಗದಲ್ಲಿ ಗೀತೆ ಹೊರ ಹೊರಟಿತು. ಅದೊಂದು ರೂಪಕ ಕಥೆ. ಅಕರ್ಮ ಮತ್ತು ವಿಕರ್ಮಗಳನ್ನು ಕೆಡವಲು ಹೊರಟ ಗೀತೆ, ಸರ್ವೋಪಜೀವಕವಾದ ಬದುಕನ್ನು ಕಟ್ಟುವುದನ್ನೂ ಹೇಳಿಕೊಟ್ಟಿತು. ವ್ಯಷ್ಟಿ ಹಿತಕ್ಕಿಂತ ಸಮಷ್ಟಿ ಹಿತ ಮುಖ್ಯ ಎನ್ನುವುದನ್ನು ತೋರಿಸಿಕೊಟ್ಟಿತು.

ಕೃಷ್ಣ, ಮಹಾಭಾರತದಲ್ಲಿ ಒಂದು ಪ್ರಮುಖ ಪಾತ್ರ. ಒಬ್ಬ ವ್ಯಕ್ತಿ, ಗೀತೆಯ ಆರಂಭದಲ್ಲಿ ಕಾಣಿಸುವವನು ಈ ಕೃಷ್ಣ. ವ್ಯಾಕುಲಗೊಂಡ ಅರ್ಜುನನೊಂದಿಗೆ ಮಾತಿಗೆ ತೊಡಗಿದ್ದು, ಈ ವ್ಯಷ್ಟಿ ಪ್ರಜ್ಞೆ, ಇದು ಎರಡನೆಯ ಅಧ್ಯಾಯದಲ್ಲೇ ಸಮಷ್ಟಿ ಪ್ರಜ್ಞೆಯಾಗಿ ವಿಸ್ತರಿಸಿಬಿಡುತ್ತದೆ. ಆಗ ಆ ಕೃಷ್ಣ ಕೇವಲ ದೇವಕೀ ಪುತ್ರನಾದ ವ್ಯಕ್ತಿಯಾಗಿ ಉಳಿಯದೆ ಸರ್ವ ಜೀವಾಕರ್ಷಣ ಶಕ್ತಿಯಾಗಿ ಬೆಳೆಯುತ್ತಾನೆ. ಅಲ್ಲಿನ ವಿಶ್ವರೂಪ ದರ್ಶನ ಅದರ ಮಹಾರೂಪಕ. ಆದ್ದರಿಂದ ಇನ್ನು 'ಕೃಷ್ಣಗೀತೆ' ಎಂದು ಹೆಸರಿಸದೆ, 'ಭಗವದ್ಗೀತೆ' ಎಂದು ಹೆಸರಿಸಿರುವಲ್ಲಿ ವ್ಯಾಸರ ಆಶಯ ದರ್ಶನ ಸ್ಪಷ್ಟವಾಗಿದೆ. ಕೃಷ್ಣ ಅಲ್ಲಿ ಕೇವಲ ಸಾಂಕೇತಿಕ, ಭಗವಂತ ಅಲ್ಲಿ ಅರ್ಥಪೂರ್ಣ. ಭಗವಂತ ಎನ್ನುವುದು ಸರ್ವ ಸಾಧಾರಣ ಹೆಸರು, ಹರಿ,ಹರ, ಗಣೇಶ, ಅಂಬಿಕೆ, ಆದಿತ್ಯ, ಶಿವ, ವಿಷ್ಣು, ಅಲ್ಲಾ, ಏಸು ಎಲ್ಲ ಬರೀ ಹೆಸರು. ಅಲ್ಲಿರುವುದು ಭಗವಂತ. ಕೃಷ್ಣ ಎಂದಿರುವ ಕಡೆ ಶಿವ ಎಂದಿಟ್ಟುಕೊಂಡರೂ ಅಥವಾ ಇನ್ನಾವುದೇ ದೇವರ ಹೆಸರನ್ನು ಇಟ್ಟುಕೊಂಡರೂ ಗೀತೆಯ ಮಾತುಗಳ ಅರ್ಥವೇನೂ ಬದಲಾಗದು. ಗೀತೆಯ ಉದ್ದಕ್ಕೂ ಉತ್ತಮ ಪುರುಷ ವಾಚಕ ಇದಕ್ಕೆ ಪೂರಕವಾಗಿದೆ.

"ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿ ತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥"

"ಭಕ್ತನು ಯಾವ ಬಗೆಯ ರೂಪವನ್ನು ಶ್ರದ್ಧೆಯಿಂದ ಪೂಜಿಸಬಯಸುವನೋ, ಅದೇ ರೂಪವನ್ನು ನಾನು ಹೊಂದುವೆನು."

"ಯೇಽಪ್ಯನ್ಯದೇವತಾಯುಕ್ತಾಃ ಯಜಂತೇ ಶ್ರದ್ಧಾಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥"

"ಶ್ರದ್ಧೆಯಿಂದ ಬೇರೆ ಬೇರೆ ದೇವರುಗಳನ್ನು ಪೂಜಿಸುವುದೇನಿದೆ, ಅವೆಲ್ಲವೂ ನನ್ನ ಪೂಜೆಯೇ ಆಗಿದೆ. ಇಲ್ಲಿಯ ಉತ್ತಮ ಪುರುಷವಾಚಕ 'ನಾನು–ನನ್ನ' ಸಮಷ್ಟಿ ಪ್ರಜ್ಞೆಯ ಕುರುಹು. ಭಗವಂತ ಒಬ್ಬನೇ ಅವನದು ವಿಶ್ವರೂಪ – ಹಲವು ರೂಪ. ವಸ್ತುತಃ ರೂಪರಹಿತ ಅಂದರೆ ನಿರಾಕಾರನಾದ ಭಗವಂತನು ನಾನಾ ಆಕಾರಗಳಲ್ಲಿ – ಭಕ್ತರ ಮನದಿಷ್ಟದಂತೆ ಕಾಣಿಸಿಕೊಳ್ಳುವನು. ಭಗವಂತ ನಿರಾಕಾರನೂ ಹೌದು; ಸಾಕಾರನೂ ಹೌದು. ಅವು ವಿಭಿನ್ನ ನೆಲೆಗಳು. ನಮ್ಮ ಅನುಭವದಂತೆ ಆಕಾರವುಳ್ಳ ವಸ್ತುವಿಗೆ ಅದರ ಪರಿಣಾಮಕ್ಕನುಗುಣವಾಗಿ ಕಾಲ–ದೇಶಗಳ ಮಿತಿ ಇದ್ದೇ ಇದೆ. ಆಕಾರ ಮಿತ. ನಿರಾಕಾರ ಅಮಿತ. ನಮ್ಮೀ ದೇಹ ಒಂದೆಡೆ ಇದ್ದಾಗ ಇನ್ನೊಂದೆಡೆ ಇರಲಾರದು. ಅದೇ ನಿರ್ದೇಹಿಯಾದ ಗಾಳಿ ಏಕಕಾಲಕ್ಕೆ ಎಲ್ಲೆಡೆ ಇರುವುದು. ನಿರಾಕಾರವೆಂದರೆ ಶೂನ್ಯವಲ್ಲ. ಸರ್ವವ್ಯಾಪಿ ಎಂದರ್ಥ. ಅದು ವಿದ್ಯುತ್ತಿನಂತೆ. ಭಗವಂತನನ್ನು 'ಜ್ಯೋತಿಷಾಂ ಜ್ಯೋತಿಃ' ಎನ್ನಲಾಗಿದೆ. ಅದು ಜ್ಯೋತಿರ್ಲಿಂಗ. ಜ್ಯೋತಿಯೇ ಅವನ ನಿಜ ಕುರುಹು. ಆ ಕುರುಹಿನ ಅರಿವು ಅಧ್ಯಾತ್ಮ. ರೂಪ ಭಿನ್ನವಾದರೂ ಭಗವಂತ ಒಬ್ಬನೇ. ಈ ದೈವ ಸಮನ್ವಯವನ್ನು ಗೀತೆ ರೂಪಿಸಿದೆ. ಭಕ್ತನ ಭಕ್ತಿಗೆ, ಪೂಜೆಗೆ ಒಂದು ಆಲಂಬನ ಬೇಕು. ಅದಕ್ಕಾಗಿ ದೇವರು ಕಾಲ–ಸನ್ನಿವೇಶಕ್ಕನುಗುಣವಾಗಿ ಬಗೆ ಬಗೆಯ ರೂಪದಲ್ಲಿ ಸಂಭವಿಸಿದ್ದಾನೆ. ಭಕ್ತರು ಆಯಾ ರೂಪವನ್ನು ಅವಲಂಬಿಸಿ ಆತನನ್ನು ಆರಾಧಿಸುತ್ತಾರೆ. ಆ ಆರಾಧನೆಯ ಬಗೆಯೂ ಭಕ್ತನ ಚಿತ್ತಸ್ಥಿತಿಯನ್ನವಲಂಬಿಸಿ ಬಗೆ ಬಗೆಯಾಗಿರುತ್ತದೆ. ಬಗೆ ಹಲವಾದರೂ ಫಲ ಒಂದೇ ಆಗಿದೆ. ಸಾಧನಾಮಾರ್ಗ ಬೇರೆ ಬೇರೆ. ಅದು ಕರ್ಮ, ಉಪಾಸನೆ, ಧ್ಯಾನ, ಜ್ಞಾನ, ಪೂಜೆ, ಹೋಮ, ಜಪ, ಪ್ರಾರ್ಥನೆ, ಸೇವೆ – ಹೀಗೆ ಹತ್ತು ಹಲವು. ಇವೆಲ್ಲವುಗಳ ಗುರಿ ಭಗವತ್ ಪ್ರಾಪ್ತಿ. ಯಾವುದು ಮೇಲು, ಯಾವುದು ಕೀಳು? ಯಾವುದು ಸ್ವದೇಶಿ, ಯಾವುದು ಪರದೇಶಿ? ಮತ ವಿವಾದಕ್ಕೆ ಅಲ್ಲಿ ಎಡೆ ಇಲ್ಲ. ಅಲ್ಲಿ ಎಲ್ಲ ಸಮಾನ. ಗೀತೆಯ ಐದನೇ ಅಧ್ಯಾಯದ ಈ ಮಾತನ್ನು ಗಮನಿಸಬೇಕು.

"ಸಾಂಖ್ಯವನ್ನೂ ಯೋಗವನ್ನೂ ಬೇರೆ ಬೇರೆಯೆಂದು ಭಾವಿಸುವವರು ತಿಳಿಗೇಡಿಗಳು. ಬಲ್ಲವರು ಹಾಗೆ ಭಾವಿಸಲಾರರು. ಆ ಎರಡು ಮಾತುಗಳಲ್ಲಿ ಯಾವ ಒಂದನ್ನೇ ಚೆನ್ನಾಗಿ ಅನುಸರಿಸಿದರೂ ಅದರಿಂದಲೇ ಆ ಎರಡರ ಫಲವೂ ದೊರಕುತ್ತದೆ.

ಸಾಂಖ್ಯರಿಗೆ ಯಾವ ಫಲ ದೊರಕುವುದೋ ಯೋಗಿಗಳಿಗೂ ಅದೇ ಫಲ ದೊರೆಯುತ್ತದೆ. ಯಾರು ಸಾಂಖ್ಯವನ್ನೂ, ಯೋಗವನ್ನೂ ಒಂದೇ ಎಂಬಂತೆ ಕಾಣುತ್ತಾರೋ ಅವರದು ಸರಿಯಾದ ಕಾಣುವಿಕೆ". ಈ ಸಂದರ್ಭವನ್ನು ವ್ಯಾಖ್ಯಾನಿಸುತ್ತ ಡಿ.ವಿ.ಜಿ.ಯವರು ಬರೆದ ಮಾತುಗಳು ಗೀತೆಯ ಆಶಯವನ್ನು ಸ್ಫುಟಗೊಳಿಸಿವೆ : "ಈ ಅಭಿಪ್ರಾಯವು ನಮ್ಮ ದೇಶದಲ್ಲಿ ನಮ್ಮ ಕಾಲಕ್ಕೆ ಬಹು ಮುಖ್ಯವಾಗಿದೆ. ನಮ್ಮ ದೇಶದ ಜನಜೀವನದಲ್ಲಿ ಈಗ ಹಾಲಾಹಲಪ್ರಾಯವಾಗಿರುವ ಸಂಗತಿ ನಾನಾ ಮತ ವಿವಾದಗಳು ಮತ್ತು ಮತ ವೈಷಮ್ಯಗಳು. ಇವು ಅಸಾಧುವೆಂದೂ, ಹಾನಿಕಾರಕವೆಂದೂ ಮೇಲಣ ವಾಕ್ಯಗಳು ಸಾರುತ್ತವೆ. ದ್ವೈತಾದ್ವೈತ ವಿಶಿಷ್ಟಾದ್ವೈತಗಳ ವಾಗ್ವಿವಾದಗಳಿಗೆ ಮೇಲಣ ಉಪದೇಶವು ತಕ್ಕ ಉತ್ತರವಾಗಿದೆ. ಹಾಗೆಯೇ ಶೈವ ವೈಷ್ಣವ ಶಾಕ್ತೇಯಾದಿ ವಿವಾದಗಳಿಗೂ ಮೇಲಿನದೇ ಉತ್ತರ. ಅಷ್ಟೇ ಅಲ್ಲ; ಹಿಂದೂ–ಕ್ರೈಸ್ತ–ಮಹಮ್ಮದೀಯಾದಿ ಸ್ವದೇಶಿಯ–ವಿದೇಶಿಯ ಮತಗಳ ಪರಸ್ಪರ ವಿರೋಧಗಳಿಗೂ ಮೇಲಣ ವಾಕ್ಯವು ಸಮಂಜಸವಾಗಿ ಉತ್ತರ ಹೇಳುತ್ತದೆ. ಗಮ್ಯ ಸ್ಥಾನ ಒಂದು; ಅದಕ್ಕೆ ದಾರಿಗಳು ಅನೇಕ......"

ಮತಧರ್ಮ ಯಾವುದಾದರೂ ಅವು ಅನುಸರಿಸುವ ತಾತ್ವಿಕ ಮಾರ್ಗಗಳು ಮೂರು. ಕರ್ಮ, ಉಪಾಸನೆ (ಪೂಜೆ, ಧ್ಯಾನ, ಪಠನ, ಸಂಕೀರ್ತನ) ಮತ್ತು ಜ್ಞಾನ. ಈ ಮೂರು ಮಾರ್ಗಗಳಲ್ಲಿ ಅಂತರ್ಗಂಗೆಯಾಗಿ ಪ್ರವಹಿಸುವುದು ಶ್ರದ್ಧೆ ಮತ್ತು ಭಕ್ತಿ. ಈ ಮೂರು ಮಾರ್ಗಗಳು ಭಗವದ್ಗೀತೆಯಲ್ಲಿ ಸಮನ್ವಿತವಾಗಿವೆ. ಮೂರಕ್ಕೂ ಸಮಾನ ನೆಲೆಯನ್ನು ಇಲ್ಲಿ ಕಲ್ಪಿಸಲಾಗಿದೆ. ಭಗವದ್ಗೀತೆಯ ಈ ಸರ್ವ ದೈವ ಸಮನ್ವಯ ಮತ್ತು ಸರ್ವ ಮಾರ್ಗ ಸಮನ್ವಯವು ಕೇವಲ ಭಾವುಕ ನೆಲೆಯಲ್ಲಿ ಇರುವಂಥದ್ದಲ್ಲ. ವಾಸ್ತವದ ಬೆಳಕಿನಲ್ಲಿ ತಾತ್ತ್ವಿಕತೆಯಿಂದ ಪ್ರತಿಪಾದಿತವಾಗಿದೆ. ಭಗವಂತನಾದ ಪರಮ ಚೈತನ್ಯಜೀವಿಗಳಿಂದ ಬೇರೆಯಾಗಿ ಎಲ್ಲೋ ದೂರದಲ್ಲಿ ಪ್ರತಿಷ್ಠಾಪಿತನಾದ ಸಂಗತಿಯಷ್ಟೇ ಅಲ್ಲ. ಭಗವಂತ ಶಕ್ತಿ ಪ್ರತಿಯೊಂದು ಜೀವಿಯಲ್ಲೂ ತಾನಾಗಿ ನೆಲೆಸಿರುವಂಥದು. ಅಂತಿಮವಾಗಿ ಭಕ್ತನು ಭಗವಂತನನ್ನು ತನ್ನೊಳಗೆ ಕಂಡುಕೊಳ್ಳಬೇಕು. 'ಸುಹೃದಂ ಸರ್ವ ಭೂತಾನಾಮ್' 'ಸರ್ವಭೂತಸ್ಥ ಮಾತ್ಮಾನಮ್' 'ಸಮೋಹಂ ಸರ್ವಭೂತೇಷು' 'ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್' 'ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ' 'ಹೃದ್ದೇಶೇಽರ್ಜುನ ತಿಷ್ಠತಿ' 'ಸರ್ವತಃ ಪಾಣಿ ಪಾದಮ್............' ನಾನು ಎಲ್ಲ ಜೀವಿಗಳಲ್ಲಿ ಯಾವ ತಾರತಮ್ಯವಿಲ್ಲದೆ ನೆಲೆಸಿದ್ದೇನೆ; ಎಲ್ಲರ ಹೃದಯ ನನ್ನ ಆವಾಸ" ಎಂಬರ್ಥದ ಮಾತುಗಳು ಭಗವದ್ಗೀತೆಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಭಗವಂತನು ಎಲ್ಲರಲ್ಲಿ ತನ್ನನ್ನು ಅನ್ವಯಿಸಿಕೊಂಡ ಈ ಮಹಾ ಸಮನ್ವಯವನ್ನು ಬಹು ಮುಖ್ಯವಾಗಿ ಪ್ರತಿಬಿಂಬಿಸಿದ ಗ್ರಂಥ ಭಗವದ್ಗೀತೆ. ಇದು ಯಾವುದೊಂದೇ ಮತಕ್ಕೆ ಮಿತವಾದುದಲ್ಲ. ಅಲ್ಲಿ ಸಮತೆಯ ಮೂಲಕ ಸಾಧಿತವಾದದ್ದು ಸಮನ್ವಯ. ನಾವು ಸಾಧಿಸಬೇಕಾದದ್ದು ಸಮನ್ವಯದ ಮೂಲಕ ಸಮತೆಯನ್ನು. ಗೀತೆಯ

ಹದಿಮೂರನೇ ಅಧ್ಯಾಯದಲ್ಲೂ, ಒಂಬತ್ತನೆಯ ಅಧ್ಯಾಯದಲ್ಲೂ ಬಹುಮುಖ್ಯವಾದ ಮಾತೊಂದಿದೆ. ಅದು "ಅವಿಭಕ್ತಂ ವಿಭಕ್ತೇಷು........" ಮತ್ತು "ಏಕತ್ವೇನ ಪೃಥಕ್ತ್ವೇನ" ಅಂದರೆ ಭಗವಂತ ಜೀವಿಗಳಲ್ಲಿ ಬಿಡಿ ಬಿಡಿಯಾಗಿಯೂ, ಮೂಲ ಸ್ವರೂಪದಲ್ಲಿ ಇಡಿಯಾಗಿದ್ದಾನೆ. ಹೀಗೆ ಒಂದೇ ಆಗಿಯೂ ಬೇರೆಯಾಗಿದ್ದಾನೆ. ಇದರಿಂದ ಬಿಡಿಯಾದ ಜೀವಿ ತನ್ನನ್ನು ಇಡಿಯಾಗಿ ಸಮನ್ವಯಿಕೊಳ್ಳುವುದೇ ಜೀವಿತ ಧ್ಯೇಯ ಎಂದು ಗೀತೆ ಸೂಚಿಸಿದೆ.

ಈ ಸಮನ್ವಯ ತತ್ತ್ವ ಕೇವಲ ಉಪದೇಶವಾಗದೆ ಆಚರಣೆಯಲ್ಲಿರ ಬೇಕೆನ್ನುವುದು ಗೀತೆಯ ಆಶಯ. ಅದಕ್ಕಾಗಿ ಗೀತೆ ನೈತಿಕ ಮೌಲ್ಯಗಳನ್ನು, ಅದರ ಅಳವಡಿಕೆಯ ಕ್ರಮವನ್ನೂ ವಿಸ್ತಾರವಾಗಿ ನಿರೂಪಿಸಿದೆ. ನಿರಹಂಕಾರ, ನಿರಾಡಂಬರತೆ, ಅಹಿಂಸೆ, ಸಹನೆ, ಸರಳತೆ, ನೇರ ನಡೆ–ನುಡಿ, ಮನಃಸ್ಥಿರತೆ, ವಿಷಯ ವಿರಕ್ತಿ, ಅತ್ಯಾಸಕ್ತಿ–ಮೋಹರಾಹಿತ್ಯ, ಶುಚಿತ್ವ, ಇಷ್ಟಾನಿಷ್ಟ ಸುಖ ದುಃಖಗಳಲ್ಲಿ ಸಮತೆ, ಅನನ್ಯ ಭಕ್ತಿ, ಏಕಾಂತ ವಾಸ, ಆತ್ಮನಿಷ್ಠೆ, ಸರ್ವಭೂತ ದಯೆ, ಲೋಕ ಸಂಗ್ರಹ (ಸೇವೆ) ಮುಂತಾಗಿ ಮಾನವೀಯ ಮೌಲ್ಯಗಳನ್ನು ಉದ್ದಕ್ಕೂ ಎತ್ತಿ ಹೇಳಿದೆ. ಎಲ್ಲಕ್ಕೂ ಆಧಾರ–ಅಡಿಪಾಯದ 'ಆತ್ಮೌಪಮ್ಯ'ವನ್ನು ಬಹುದೊಡ್ಡ ಮೌಲ್ಯವಾಗಿ ನಿರೂಪಿಸಿದೆ. 'ಆತ್ಮೌಪಮ್ಯ' ಎಂದರೆ ಎಲ್ಲ ಜೀವಿಗಳನ್ನು ತನ್ನಂತೆ ಭಾವಿಸುವುದು. ತನಗೆ ಸುಖ–ದುಃಖಗಳು ಹೇಗೋ ಅವು ಇತರರಿಗೂ ಸುಖ–ದುಃಖಗಳು. ಅದನ್ನು ಅರಿತು ನಡೆಯುವುದು. ಸರ್ವಜ್ಞ ಕವಿ ಹೇಳುವ 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು'. ಜಾತಿ–ಮತಗಳ ಮಿತಿಯನ್ನು ಮೀರಿ ಸರ್ವ ಸಮನ್ವಯವನ್ನು ಸಾಧಿಸುವ ಹಾದಿ ಈ ಮೌಲ್ಯಗಳ ಅಳವಡಿಕೆ, ಅದು ಎಲ್ಲರಿಗೂ ಶ್ರೇಯಸ್ಕರ ಎನ್ನುವುದನ್ನು ಗೀತೆ ಸಾರಿ ಹೇಳುತ್ತಿದೆ.

ಭಗದ್ಗೀತೆಯ ಕನ್ನಡ ಪದ್ಯಾನುವಾದಗಳು

– ಪ್ರೊ. ಜಿ. ಅಶ್ವತ್ಥನಾರಾಯಣ

ಜಗತ್ತಿನಲ್ಲಿ ಧಾರ್ಮಿಕ ಪಂಥಗಳು ಸಾವಿರಾರು ಇದ್ದರೂ ವಿಶ್ವಧರ್ಮಗಳು ಕೆಲವೇ. ಕ್ರಿಸ್ತಧರ್ಮ, ಇಸ್ಲಾಂಧರ್ಮ, ಯಹೂದ್ಯಧರ್ಮ, ಬೌದ್ಧಧರ್ಮ, ಜೈನಧರ್ಮ, ಹಿಂದೂಧರ್ಮ ಮೊದಲಾದ ಕೈಬೆರಳುಗಳಲ್ಲಿ ಎಣಿಸುವಷ್ಟೇ ಧರ್ಮಗಳು ವಿಶ್ವಧರ್ಮಗಳಾಗಿವೆ. ಈ ಪೈಕಿ ಹಿಂದೂಧರ್ಮ ಅರ್ಥಾತ್ ವೇದಾಧಾರಿತ ಸನಾತನಧರ್ಮ ವಿಶ್ವಧರ್ಮಗಳಲ್ಲೇ ಅತ್ಯಂತ ಶ್ರೇಷ್ಠವೂ ಪ್ರಾಚೀನವೂ ಆದ ಧರ್ಮವಾಗಿದೆ.

ಪ್ರತಿ ಧರ್ಮವನ್ನೂ ಪ್ರತಿನಿಧಿಸುವ ಒಂದೊಂದು ಪ್ರಾತಿನಿಧಿಕ ಧರ್ಮಗ್ರಂಥವಿದೆ. ಕ್ರೈಸ್ತರಿಗೆ ಬೈಬಲ್, ಮುಸ್ಲಿಂರಿಗೆ ಖುರಾನ್, ಪಾರ್ಸಿಗಳಿಗೆ ಝುಂಡ್‌ವೆಸ್ತಾ, ಜೈನರಿಗೆ ತತ್ತ್ವಾರ್ಥ ಸೂತ್ರ, ಬೌದ್ಧರಿಗೆ ಧರ್ಮಪದ. ಹಾಗೆಯೇ ಹಿಂದೂಗಳಿಗೆ ಪ್ರಾತಿನಿಧಿಕ ಗ್ರಂಥ ಭಗವದ್ಗೀತೆ. ಜಗತ್ತಿನಲ್ಲಿ ಬೈಬಲ್ ಬಿಟ್ಟರೆ, ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಿತವಾದ ಧರ್ಮಗ್ರಂಥವೆಂದರೆ ಭಗವದ್ಗೀತೆ ಮಾತ್ರ. ಭಾರತೀಯ ಭಾಷೆಗಳಲ್ಲಿ ಭಗವದ್ಗೀತೆ ಒಂದೊಂದು ಭಾಷೆಯಲ್ಲೂ ನೂರಾರು ಅನುವಾದಗಳನ್ನು ಹೊಂದಿದೆ. ಅಷ್ಟೇ ಅಲ್ಲ, ಕೇವಲ ನೇರ ಅನುವಾದವಷ್ಟೇ ಅಲ್ಲ ನಾನಾ ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ಹೊರಹೊಮ್ಮಿದೆ. ಕನ್ನಡದಲ್ಲಿ ಭಗವದ್ಗೀತೆ ಸಿರಿಭೂವಲಯದಿಂದ ಹಿಡಿದು ಇಂದಿನವರೆಗೆ ನೂರಾರು ಗ್ರಂಥಗಳು ಹೊರಹೊಮ್ಮಿವೆ. ಇವುಗಳ ವೈವಿಧ್ಯ ಅಪಾರ. ಸಾವಿರ ವರ್ಷದ ಕೆಳಗೆ ಪಂಪಭಾರತದಲ್ಲಿ ಗೀತೆಯ ಒಂದು ಪದ್ಯ ಒಂದು ಚೂರು ಗದ್ಯದಲ್ಲಿ ತಲಕಾವೇರಿಯ ಉಗಮದಂತೆ ಕಾಣಿಸಿಕೊಂಡು 15ನೇ ಶತಮಾದಲ್ಲಿ ಕುಮಾರವ್ಯಾಸ ಭಾರತದಲ್ಲಿ ಅಂಕುರವಾಗಿ ಭೀಷ್ಮಪರ್ವದ 3ನೇ ಸಂಧಿಯಲ್ಲಿ ಸಂಕ್ಷಿಪ್ತವಾಗಿ ರೂಪುಗೊಂಡು ತುರಂಗ ಭಾರತದಲ್ಲಿ 11ನೇ ಅಧ್ಯಾಯ ಪ್ರಮುಖವಾಗಿ ಅನುವಾದಿತವಾಗಿ, 15ನೇ ಶತಮಾನದಲ್ಲಿ ವ್ಯಾಸರಾಜರಿಂದ ಗೀತಾಸಾರವಾಗಿ 18 ನುಡಿಗಳಲ್ಲಿ ಸಂಕ್ಷಿಪ್ತವಾಗಿ ಕಾಣಿಸಿಕೊಂಡಿತು.

17ನೇ ಶತಮಾನದಲ್ಲಿ (1650) ನಾಗರಸ ಕವಿಯಿಂದ ಮೊದಲಬಾರಿಗೆ ಸಮಗ್ರವಾಗಿ ಭಗವದ್ಗೀತೆ ಕನ್ನಡದಲ್ಲಿ ಮೂಡಿಬಂತು. 18ನೇ ಶತಮಾನದಲ್ಲಿ ಹರಿದಾಸಕೃತ ಶ್ರೀಮದ್ಭಗವದ್ಗೀತೆ ಶಾಂಕರಭಾಷ್ಯಾನುವಾದದೊಡನೆ ವಿಸ್ತಾರವಾಗಿ ಭಾಮಿನಿ ಷಟ್ಪದಿಯಲ್ಲಿ

ಮೂಡಿತು. ಅದೇಕಾಲದಲ್ಲಿ ತುರಂಗ ಭಾರತದಲ್ಲಿ ಪಾರ್ಶ್ವಿಕಾನುವಾದ ಕಾಣಿಸಿಕೊಂಡಿತು. 18ನೇ ಶತಮಾನದಲ್ಲಿ ದಾಸಸಾಹಿತ್ಯದ ಪ್ರಭಾವದಿಂದ ಗೋಪಾಲದಾಸರ ಪ್ರಶಿಷ್ಯರಲ್ಲಿ ಒಬ್ಬರಾದ ಮೈಸೂರು ಕೃಷ್ಣದಾಸರು ಭಾಮಿನಿ ಷಟ್ಪದಿಯಲ್ಲಿ ಭಗವದ್ಗೀತೆ ರಚಿಸಿದರು. ಗೋಪಾಲದಾಸರ ಇನ್ನೊಬ್ಬ ಪ್ರಶಿಷ್ಯರಾದ ಸುರಪುರದ ಆನಂದದಾಸರು ಕೀರ್ತನರೂಪದಲ್ಲಿ ಅನುವಾದಿಸಿದರು. ಇದೇ ಶತಮಾನದಲ್ಲಿ ಮುದವರ್ತಿ ಶೇಷ ಮತ್ತು ಕಣಿಲೆ ಪುಟ್ಟಪ್ಪ ಗೀತೆಯನ್ನು ಪದ್ಯರೂಪದಲ್ಲಿ ರಚಿಸಿದ್ದಾರೆ ಎಂದು ಶ್ರೀನಿವಾಸ ಹಾವನೂರು ತಮ್ಮ ಹೊಸಗನ್ನಡ ಅರುಣೋದಯದಲ್ಲಿ ತಿಳಿಸಿದ್ದಾರೆ.

18ನೇ ಶತಮಾನದಲ್ಲಿ ನೈರಕ್ಷರಕುಕ್ಷಿ ಎಂಬ ಮಾಧ್ವಕವಿ 1750ರಲ್ಲಿ 17 ಸಂಧಿಗಳಲ್ಲಿ 629 ಪದ್ಯಗಳಲ್ಲಿ (ಭಾಮಿನಿ ಷಟ್ಪದಿ) ಮಧ್ವಭಾಷ್ಯವನ್ನು ಅನುಸರಿಸಿ ಗೀತಾರ್ಥವನ್ನು ರಚಿಸಿದ್ದಾನೆ. 1800 ರಲ್ಲಿದ್ದ ರಾಮಕೃಷ್ಣ ಕವಿ ಭಗವದ್ಗೀತೆಗೆ ಶಂಕರಭಾಷ್ಯಾನುಸಾರ ಟೀಕೆಯನ್ನು (ಪದ್ಯರೂಪದಲ್ಲಿ) ರಚಿಸಿದ್ದಾನೆ ಎಂದು ಕವಿ ಚರಿತ್ರೆಕಾರರಾದ ಆರ್. ನರಸಿಂಹಾಚಾರ್ಯರು ತಿಳಿಸಿದ್ದಾರೆ.

ಹೀಗೆ 19ನೇ ಶತಮಾನದವರೆಗೆ ಕೆಲವೇ ಪದ್ಯಾನುವಾದಗಳು ರಚಿತವಾಗಿದ್ದು ಅವುಗಳಲ್ಲಿ ಕೆಲವೇ ಅಚ್ಚಾಗಿವೆ. 19ನೇ ಶತಮಾನದಲ್ಲೂ ಭಗವದ್ಗೀತಾ ಪದ್ಯರಚನೆ ಮುಂದುವರೆದಿದೆ. ಇವುಗಳಲ್ಲಿ ಮುಖ್ಯವಾದುದು ಬೆಂಗಳೂರಿನ ಸಿದ್ದಾಪುರದ ರಾಮಪ್ಪಯ್ಯನ ಗೀತಾರ್ಥಪ್ರಕಾಶಿಕೆ ಕುಮಾರವ್ಯಾಸ ಭಾರತದ ಹಸ್ತಪ್ರತಿಯೊಂದರಲ್ಲಿ ಸೇರ್ಪಡೆ ಆದ ಈ ಪದ್ಯಾನುವಾದ 18 ಅಧ್ಯಾಯಗಳಿಂದ 407 ಭಾಮಿನೀ ಷಟ್ಪದಿಗಳಲ್ಲಿ ಗೀತೆಯನ್ನು ಒಳಗೊಂಡಿದೆ. ಬಹುಶಃ ಇದು 18ನೇ ಶತಮಾನದಲ್ಲಿ ರಚಿತವಾಗಿದ್ದು 19ನೇ ಶತಮಾನದ ಹಸ್ತಪ್ರತಿಯಲ್ಲಿ ಸೇರಿಕೊಂಡಿದೆ. 19ನೇ ಶತಮಾನದ ಅಂತ್ಯದಲ್ಲಿದ್ದ ಕವಿ ಮುದ್ದಣನೂ ಭಾಮಿನಿ ಷಟ್ಪದಿಯಲ್ಲಿ ಗೀತೆಯನ್ನು ರಚಿಸಿದ್ದಾನೆಂದು ಕವಿಚರಿತೆಕಾರರು ಹೇಳುತ್ತಾರೆ.

19 ಶತಮಾನಗಳಲ್ಲಿ ರಚಿತವಾದ ಭಗವದ್ಗೀತೆಯ ಪದ್ಯಾನುವಾದಗಳಲ್ಲಿ ವಿಶಿಷ್ಟವಾದುದು ಸಿರಿಭೂವಲಯದ ಭಗವದ್ಗೀತೆ. ಸಂಖ್ಯಾರೂಪದಲ್ಲಿ ರಚಿತವಾದ ಅಂಕಾಕ್ಷರ ಲಿಪಿಯ ಈ ಗ್ರಂಥದಲ್ಲಿ ಜಗತ್ತಿನ ನೂರಾರು ಭಾಷೆಗಳು ಅಂತರ್ಗತವಾಗಿವೆ. ಇದು ಪ್ರಧಾನವಾಗಿ ಕನ್ನಡಗ್ರಂಥ. ಕನ್ನಡಲಿಪಿಯ ಗ್ರಂಥವಾಗಿ ಕನ್ನಡ ಕಾವ್ಯಗಳು ಇದರಲ್ಲಿ ಸಮಾವೇಶವಾಗಿದೆ. ಈ ಪೈಕಿ ಗೀತೆಯೂ ಒಂದು. (ಅದು ಪೂರ್ಣವಾಗಿ ಲಭ್ಯವಾಗಿಲ್ಲ), ಸಿರಿಭೂವಲಯ ಗ್ರಂಥ ಪೂರ್ಣವಾಗಿ ಅಚ್ಚಾಗಿಲ್ಲ, ಸಂಶೋಧಕರಿಗೆ ಸವಾಲಾಗಿ ಹಸ್ತಪ್ರತಿ ಉಳಿದಿದೆ. ಇದರಲ್ಲಿರುವ ಜೈನಧರ್ಮದ ಹಿನ್ನೆಲೆಯ ಭಗವದ್ಗೀತೆ ಸ್ವಾರಸ್ಯಕರವಾಗಿದೆ.

ಇನ್ನು 19 ಶತಮಾನಗಳಲ್ಲಿ ರಚಿತವಾದ ಪದ್ಯಾನುವಾದಗಳಲ್ಲಿ ಅಚ್ಚಾಗಿರುವ ಗ್ರಂಥಗಳೆಂದರೆ, ವ್ಯಾಸರಾಯರ ಗೀತಾಸಾರ, ನಾಗರಸಕವಿಯ ಕರ್ಣಾಟಕ ಭಗವದ್ಗೀತೆ,

ಹರಿದಾಸಕೃತ ಭಗವದ್ಗೀತೆ, ಕುಮಾರವ್ಯಾಸ ಭಾರತದಲ್ಲಿ ಸೇರಿಕೊಂಡಿರುವ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ. ಇವುಗಳಲ್ಲಿ ವ್ಯಾಸರಾಯರದು ಪುಟ್ಟಕೃತಿ, ಆದರೆ ಉಳಿದವರದು ದೀರ್ಘ ಕೃತಿಗಳಾಗಿವೆ. ಇತರ ಉಲ್ಲೇಖಿತ ಕೃತಿಗಳು ಅಚ್ಚಾಗಿಲ್ಲ.

ಇನ್ನು 20ನೇ ಶತಮಾನಕ್ಕೆ ಬಂದರೆ, ಸಾಕಷ್ಟು ಅನುವಾದಗಳು ಪೂರ್ಣಗೀತೆಯನ್ನು ಅನುವಾದಿಸಿದವು ದೊರಕುತ್ತವೆ. ಮುದ್ರಣಯಂತ್ರಗಳು ಬಂದಿದ್ದರಿಂದ 19 ಮತ್ತು 20ನೇ ಶತಮಾನಗಳಲ್ಲಿ ಅಚ್ಚಾದ ಗೀತಾಪದ್ಯಾನುವಾದಗಳು ಜನರಿಗೆ ಸಿಗತೊಡಗಿದವು. ಈ ಮುಂಚೆ ಎಲ್ಲ ಓಲೆಗರಿಗಳಲ್ಲಿ ಇದ್ದು ಜನರಿಗೆ ತಲುಪಿರಲಿಲ್ಲ. ಓಲೆಗರಿಗಳಲ್ಲಿರುವ ಎಲ್ಲ ಭಗವದ್ಗೀತೆ ಅನುವಾದಗಳೂ ಅಚ್ಚಾಗುವುದು ಅಗತ್ಯವಿದೆ. ನಾಡಿನ ಸಂಸ್ಥೆಗಳು ಮಠಗಳು ಮನಸ್ಸು ಮಾಡಬೇಕು.

20ನೇ ಶತಮಾನದಲ್ಲಿ ಭಗವದ್ಗೀತೆಯ ಗದ್ಯಾನುವಾದಗಳು ವ್ಯಾಖ್ಯಾನಗಳು, ಟೀಕೆಗಳು ಅನ್ವಯಾರ್ಥ ತಾತ್ಪರ್ಯಗಳೂ ವಿಮರ್ಶಾ ಬರಹಗಳೂ ವೈವಿಧ್ಯಮಯವಾಗಿ ಕಾಣಿಸಿಕೊಂಡವು. ಗದ್ಯದ ನೂರಾರು ಗ್ರಂಥಗಳು ಗೀತೆಯನ್ನು ಕುರಿತು ಬಂದಿವೆ. ಹಳಗನ್ನಡ ನಡುಗನ್ನಡ ಕೃತಿಗಳಲ್ಲಿ ಬಹುತೇಕ ಕಾವ್ಯರೂಪದ್ದು. ಆದರೆ ಹೊಸಗನ್ನಡದಲ್ಲಿ ಅಧಿಕ ಗ್ರಂಥಗಳು ಗದ್ಯದ್ದು, ಅಲ್ಪಸಂಖ್ಯೆಯಲ್ಲಿ (20 25) ಪದ್ಯರೂಪದ್ದಾಗಿದೆ.

ಹೊಸಗನ್ನಡದ ಗದ್ಯಾನುವಾದ ಭಗವದ್ಗೀತೆಗಳಲ್ಲಿ ಕೆಲವು ವಿಶಿಷ್ಟ ಗ್ರಂಥಗಳಿವೆ. ಹೊಸಗನ್ನಡದಲ್ಲಿ ಭಗವದ್ಗೀತೆ ಅನುವಾದ ಮೊದಲಬಾರಿಗೆ ಅಚ್ಚಾದ ಗ್ರಂಥ. ಗ್ರಂಥ 1846ರಲ್ಲಿ ಶಿಕ್ಷಣಾಧಿಕಾರಿ ಆಗಿದ್ದ ರೆ॥ ಜಾನ್ ಗ್ಯಾರೆಟ್ ಸಂಕಲಿಸಿದ ಸಂಸ್ಕೃತ ಮೂಲ ಮತ್ತು ಕನ್ನಡ ಇಂಗ್ಲೀಷ್ ತಾತ್ಪರ್ಯದೊಡನೆ 3 ಕಾಲಂಗಳಲ್ಲಿ ಒಟ್ಟಿಗೆ ಲ್ಯಾಟಿನ್ ಅನುವಾದದೊಡನೆ ಪ್ರಕಟವಾಯಿತು. ಗೀತೆಯ ಕನ್ನಡ ಅನುವಾದ ಮಾಡಿದವರು ಮುನ್ಷಿ ಶ್ರೀನಿವಾಸಯ್ಯ. ಈ ಕನ್ನಡ ಅನುವಾದ ಮೂಲದೊಡನೆ 1870ರಲ್ಲಿ ಮರುಮುದ್ರಣವಾಯಿತು. ಅದನ್ನು ಆ ವರ್ಷ ಮೈಸೂರು ಕಾಲೇಜಿನಲ್ಲಿ ಆನರ್ಸ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಪಠ್ಯಪುಸ್ತಕವಾಗಿ ಗೊತ್ತುಮಾಡಲಾಗಿತ್ತು. ಗ್ಯಾರೆಟ್ ಸಂಪಾದಕತ್ವದಲ್ಲಿ ಮುನ್ಷಿ ಶ್ರೀನಿವಾಸಯ್ಯ ಮಾಡಿದ ಗದ್ಯಾನುವಾದವೇ ಕನ್ನಡದಲ್ಲಿ ಅಚ್ಚಾದ ಮೊದಲನೇ ಗೀತಾಗ್ರಂಥ ಎಂಬುದನ್ನು ಮರೆಯಬಾರದು.

ಆಲೂರು ವೆಂಕಟರಾಯರು, ದೇವುಡು ನರಸಿಂಹಶಾಸ್ತ್ರಿಗಳು, ಹೊಸಕೆರೆ ಚಿದಂಬರಯ್ಯನವರು ಮೊದಲಾದವರು ಗೀತಾಸಾಹಿತಿಗಳಾಗಿ ಹೊರಹೊಮ್ಮಿದರು, ಗೀತೆ ಬಗ್ಗೆ ಹತ್ತಾರು ಗ್ರಂಥಗಳನ್ನು ಬರೆದರು. ಪ್ರವಚನ ಮಾಡಿದರು, ಪತ್ರಿಕೆ ಹೊರಡಿಸಿದರು, ಲೇಖನಗಳನ್ನು ಬರೆದು, ಜೀವನಪೂರ್ತಿ ಗೀತಾಪಾರಾಯಣ ಮಾಡಿದರು. ಈ ಕಾಲದಲ್ಲಿ ಆಚಾರ್ಯತ್ರಯರ ಗೀತಾಭಾಷ್ಯಗಳು ಮೊದಲಬಾರಿಗೆ ಮೂಲಸಹಿತ ಕನ್ನಡದಲ್ಲಿ ಅನುವಾದವಾಗಿ ಪ್ರಕಟವಾದವು. ಅಷ್ಟೇ ಅಲ್ಲ, ತೂಪ್ಪುಳ್ ವೆಂಕಟಾಚಾರ್ಯರೆಂಬ ವೈಷ್ಣವ ವಿದ್ವಾಂಸರು 1900ರ ಸುಮಾರಿಗೆ 1500 ಕ್ಕೂ ಮೀರಿದ ಪುಟಗಳಲ್ಲಿ 3

ಭಾಗಗಲ್ಲಿ ಕನ್ನಡಲಿಪಿಯಲ್ಲಿ ಮೂಲಗೀತೆಯನ್ನು ಆಯಾ ಶ್ಲೋಕದಡಿಯಲ್ಲಿ ಅನ್ವಯಾರ್ಥಕೊಟ್ಟು ಅನಂತರ ಆಯಾ ಶ್ಲೋಕಕ್ಕೆ ಸಂಬಂಧಿಸಿದಂತೆ ಸಂಸ್ಕೃತದ 12 ವ್ಯಾಖ್ಯಾನಗಳ ಕನ್ನಡಾನುವಾದ ನೀಡಿರುವ ಅದ್ಭುತ ಗ್ರಂಥ. ಇತರ ಭಾರತೀಯ ಭಾಷೆಗಳಲ್ಲಿ ಈ ತೆರನ ಗ್ರಂಥ ಇಲ್ಲವೆನ್ನುತ್ತಾರೆ. ಇದರ ಪುನರ್‌ಮುದ್ರಣ ಅಗತ್ಯವಿದೆ. ತೌಲನಿಕ ಅಧ್ಯಯನಕ್ಕೆ ಮಹತ್ವದ ಗ್ರಂಥ.

ತೂಪ್ಪುಲ್ ವೆಂಕಟಾಚಾರ್ಯರು ತಮ್ಮ ಶ್ರೀ ಮದ್ಗೀತಾರ್ಥಸಾರ ಗ್ರಂಥದಲ್ಲಿ ಅನುವಾದಿಸಿರುವ 12 ಅದ್ವೈತ–ದ್ವೈತ–ವಿಶಿಷ್ಟಾದ್ವೈತ ಸಂಸ್ಕೃತ ವ್ಯಾಖ್ಯಾನದ ಗ್ರಂಥಗಳ ವಿವರ ಹೀಗಿದೆ :

ಅದ್ವೈತವ್ಯಾಖ್ಯಾನ ಗ್ರಂಥಗಳು : 1. ಶಾಂಕರಭಾಷ್ಯ, 2. ಆನಂದಗಿರೀಯ ಟೀಕಾ 3. ಶಂಕರಾನಂದೀಯ ಟೀಕಾ 4. ಮಧುಸೂದನ ಸರಸ್ವತೀಯ ಟೀಕಾ 5. ಶ್ರೀಧರಾಚಾರ್ಯರ ಟೀಕಾ

ವಿಶಿಷ್ಟಾದ್ವೈತ ಗ್ರಂಥಗಳು : 1. ಶ್ರೀ ರಾಮಾನುಜಭಾಷ್ಯ, 2. ತಾತ್ಪರ್ಯಚಂದ್ರಿಕೆ, 3. ಶ್ರೀಮದ್ವೇದಾಂತ ದೇಶಿಕರ ಭಗವದ್ಗೀತಾರ್ಥ ಸಂಗ್ರಹ ದ್ರಮಿಡಗಾಥಾ.

ಮಧ್ವಸಿದ್ಧಾಂತದ ವ್ಯಾಖ್ಯಾನ ಗ್ರಂಥಗಳು: 1. ಶ್ರೀಮಧ್ವಾಚಾರ್ಯರ ಭಾಷ್ಯ, 2. ರಾಘವೇಂದ್ರ ಸ್ವಾಮಿಗಳ ಗೀತಾವಿವೃತಿ, 3. ಮಹಾಭಾರತ ತಾತ್ಪರ್ಯನಿರ್ಣಯ, 4. ಸತ್ಯಸಂಕಲ್ಪ ಸ್ವಾಮಿಗಳ ವ್ಯಾಖ್ಯಾನ.

ಈ ಬ್ರಹದ್ಗ್ರಂಥ ಗೀತಾಭ್ಯಾಸಿಗಳಿಗೆ ಆಕರಗ್ರಂಥವಾಗಿದೆ. 20ನೇ ಶತಮಾನದ ಅನುವಾದಿತ ವ್ಯಾಖ್ಯಾನ ಗ್ರಂಥಗಳಲ್ಲಿ ಪ್ರಸಿದ್ಧವಾದುದು ಬಾಲಗಂಗಾಧರ ತಿಲಕರ ಪ್ರಸಿದ್ಧ ಗೀತಾರಹಸ್ಯಗ್ರಂಥ. ತಿಲಕರ ಆರಾಧಕರಾಗಿ ಅವರ ಮೆಚ್ಚುಗೆಗೆ ಪಾತ್ರರಾಗಿದ್ದ ಆಲೂರು ವೆಂಕಟರಾಯರಿಗೆ ಕನ್ನಡಕ್ಕೆ ಅನುವಾದಿಸಲು ತಿಲಕರೇ ತಿಳಿಸಿದ್ದು ವಿಶೇಷ. ಅಷ್ಟೇ ಅಲ್ಲ ಈ ಬಗ್ಗೆ ಗೌರವ ಸಂಭಾವನೆಯನ್ನೂ ಆಲೂರು ಅವರಿಗೆ ಕೊಡಲು ಉಯಿಲಿನಲ್ಲಿ ತಿಳಿಸಿದ್ದರಂತೆ. ಈ ಗ್ರಂಥದಲ್ಲಿ ವ್ಯಾಖ್ಯಾನವನ್ನು ಆಲೂರು ಅವರು ಮೂಲಗೀತೆಯ ತಾತ್ಪರ್ಯವನ್ನು ಕೆರೂರು ವಾಸುದೇವಾಚಾರ್ಯರು ಮಾಡಿದ್ದಾರೆ. ಕನ್ನಡದ ಬೃಹದ್ಗೀತಾ ಗ್ರಂಥಗಳಲ್ಲಿ ಇದೊಂದು. ಕನ್ನಡದ ಅನುವಾದ ಅಚ್ಚಾಗಿರುವಾಗಲೇ ಅದರ ಕರಡು ಹಾಳೆಗಳಿಂದ ತೆಲುಗು ಗೀತಾರಹಸ್ಯ ರಚಿತವಾಗಿ ಅಚ್ಚಾಯಿತೆಂದು ನಿಟ್ಟೂರು ಶ್ರೀನಿವಾಸರಾಯರು ಒಮ್ಮೆ ನನಗೆ ಹೇಳಿದರು.

ಗೀತೆಯ ಸಂಸ್ಕೃತ ವ್ಯಾಖ್ಯಾನಗಳನ್ನು ಕನ್ನಡದಲ್ಲಿ ನೀಡಿರುವ ಅಪೂರ್ವ ಗ್ರಂಥ ಗೀತಾರಹಸ್ಯ, ಮರುಮುದ್ರಣ ಆಗುವುದು ಅಗತ್ಯ. ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾದ ಗೀತಾಗ್ರಂಥಗಳ ಜತೆಗೆ ಇತರ ಭಾಷೆಗಳಿಂದ ಹಿಂದಿ, ಮರಾಠಿ, ಇಂಗ್ಲಿಷ್, ತಮಿಳು, ತೆಲುಗು ಭಾಷೆಗಳಿಂದ ಕನ್ನಡಕ್ಕೆ ಗೀತಾಗ್ರಂಥಗಳು ಅನುವಾದವಾಗಿವೆ.

ಇವುಗಳ ಪೈಕಿ ಗಾಂಧೀಜಿ ಅವರ ಅನಾಸಕ್ತಿಯೋಗ (ಇಂಗ್ಲಿಷ್), ವಿನೋಬಾ ಅವರ ಗೀತಾಪ್ರವಚನ (ಮರಾಠಿ), ರಾಜಾಜಿ ಭಗವದ್ಗೀತೆ (ಇಂಗ್ಲಿಷ್) , ಕನ್ನಡ ಭಗವದ್ಗೀತೆ (ತೆಲುಗುದಿಂದ), ಇತ್ಯಾದಿ ಉದಾಹರಿಸಬಹುದು. ಕನ್ನಡದಲ್ಲಿ ಗದ್ಯದಲ್ಲಿ ಸುಮಾರು 100 ಕ್ಕೂ ಹೆಚ್ಚು ಗೀತೆಗೆ ಸಂಬಂಧಿಸಿದ ಗ್ರಂಥಗಳು ಪ್ರಕಟವಾಗಿವೆ. ಪತ್ರಿಕೆಗಳಲ್ಲಿ ಧಾರವಾಹಿಯಾಗಿ ಗೀತೆ ಕುರಿತು ಲೇಖನಮಾಲೆ ಪ್ರಕಟವಾಗುತ್ತಿವೆ. ಆ ಪೈಕಿ ಸಂಯುಕ್ತ ಕರ್ನಾಟಕದಲ್ಲಿ ಗೀತಾಂತರಂಗ ಎಂಬ ಅಂಕಣದಲ್ಲಿ ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಅವರ ಅಂಕಣ ಬರಹ 1000 ವನ್ನು ದಾಟಿದ್ದು ಕನ್ನಡದಲ್ಲಿ ಒಂದು ದಾಖಲೆ. ದಿನಕ್ಕೆರಡು ಶ್ಲೋಕದಂತೆ ಬನ್ನಂಜೆ ಗೋವಿಂದಾಚಾರ್ಯರು ಗೀತಾ ದಿನಚರಿಯೊಂದನ್ನು ಮೂಲ ತಾತ್ಪರ್ಯದೊಡನೆ ಪ್ರಕಟಿಸಿದ್ದಾರೆ. 20ನೇ ಶತಮಾನದಲ್ಲಿ ಗೀತೆಯನ್ನು ಕಂಭಗಳ ಮೇಲೆ, ಗೋಡೆಗಳ ಮೇಲೆ ಕೆತ್ತಿಸಿರುವುದು ಇನ್ನೊಂದು ವಿಶೇಷ. ಉಡುಪಿಯ ಗೀತಾಭವನ ಒಂದು ನಿದರ್ಶನ. ಹೀಗೆ ವೈವಿಧ್ಯಮಯವಾಗಿ ಗೀತೆ ಹೊರಹೊಮ್ಮಿರುವುದು ಕನ್ನಡದ ವಿಶೇಷಗಳಲ್ಲಿ ಒಂದು.

ಇನ್ನು ಸಂಸ್ಕೃತ ಇಂಗ್ಲಿಷಿನಲ್ಲಿ ಬಿಟ್ಟರೆ ಭಗವದ್ಗೀತಾ ಶಬ್ದಕೋಶಗಳಿಲ್ಲ ಎಂಬ ಕೊರತೆ ನಿಜ. ಈ ಕೊರತೆಯನ್ನು ಕನ್ನಡದಲ್ಲಿ ಹೋಗಲಾಡಿಸಲು ಭಗವದ್ಗೀತಾ ಶಬ್ದಕೋಶವೊಂದನ್ನು ಸಿದ್ಧಪಡಿಸಲಾಗಿದೆ. ಪ್ರಕಟವಾಗಬೇಕಾಗಿದೆ. ವಿದೇಶದಲ್ಲಿರುವ ಕನ್ನಡಿಗರು ಭಗವದ್ಗೀತೆ ಕುರಿತು ಪದ್ಯಾನುವಾದ ಮಾಡಿದ್ದಾರೆ. ಅಮೇರಿಕೆಯಲ್ಲಿರುವ ಹ.ಕಾ.ರಾಮಪ್ರಿಯ ಅವರು ಶ್ಲೋಕ ಛಂದಸ್ಸಿನಲ್ಲಿ ವಿಶ್ವೇಶ್ವರ ದೀಕ್ಷಿತ್ ಅವರು ನೂತನ ಛಂದಸ್ಸಿನಲ್ಲಿ ಮತ್ತೊಬ್ಬರು ವಾಷಿಂಗ್‌ಟನ್ನಿನಲ್ಲಿರುವ ಕನ್ನಡಿಗರು ಕನ್ನಡಕ್ಕೆ ಗೀತೆ ಅನುವಾದಿಸಿದ್ದಾರೆ. ಮೊದಲೆರಡು ಪ್ರಕಟವಾಗಿದೆ.

20ನೇ ಶತಮಾನದ ಪ್ರಕಟನೆಗಳು :

ಇನ್ನು 20ನೇ ಶತಮಾನದಲ್ಲಿ ಪ್ರಕಟವಾದ ಕನ್ನಡದ ಪದ್ಯಾನುವಾದದ ಗೀತೆಗಳು ಹೀಗಿವೆ.

1) ಶ್ರೀ ಭಗವದ್ಗೀತಾರ್ಥಸಾರ (ಕೀರ್ತನೆಗಳು) ಶ್ರೀ ಕೃಷ್ಣಯೋಗಿ (ಅನಕೃ ಅವರ ತಂದೆ) ರಚನೆ 1901 ಪ್ರಕಟಣೆ ಸ್ಟಾಂಡರ್ಡ್ ಬುಕ್ ಡಿಪೊ, ಬೆಂಗಳೂರು.

2) ಶ್ರೀ ಭಗವದ್ಗೀತಾ ವಚನಗಳು (ಸಂಗ್ರಹ) 150 ಶ್ಲೋಕಗಳ ಕಂದಪದ್ಯಗಳು, 1910 ಜೆ. ಅಪ್ರಮೇಯ ಅಯ್ಯಂಗಾರ್, ಚಿಕ್ಕಮಗಳೂರು

3) ಕನ್ನಡ ಭಗವದ್ಗೀತೆ (ಕಂದ್ಯಪದ್ಯಗಳು) ವೈ. ನಾಗೇಶಶಾಸ್ತ್ರಿ, 1933 ವೈ. ನಾಗೇಶಶಾಸ್ತ್ರಿಗಳ ಸಮಗ್ರಕೃತಿಗಳು ಪ್ರಕಾಶನ.

4) ಶ್ರೀದಾಸಗೀತೆ (ಭಗವದ್ಗೀತೆಯ ಶ್ಲೋಕರೂಪದ ಅನುವಾದ) ಶಂಭುಭಟ್ಟ ಎಂ.ಏಜಿ. 1949 ಪ್ರಕಟನೆ : ಶಂಭುಭಟ್ಟ ಹವ್ಯಕ, ಪಡೀವಾಡಿ, ಬಡೋದೆ.

5) ಕನ್ನಡ ಭಗವದ್ಗೀತೆ (ಶ್ಲೋಕರೂಪ) ಪು.ತಿ.ನರಸಿಂಹಾಚಾರ್, 1951 ಡಿ.ವಿ.ಕೆ.ಮೂರ್ತಿ, ಮೈಸೂರು

6) ಶ್ರೀಕೃಷ್ಣಗೀತಾಮೃತವು (ಸಾಂಗತ್ಯ) ಅಚ್ಯುತ ಕೃಷ್ಣರಾವ್, ಹುಯಿಲಗೋಳ, ಪ್ರಕಟಣೆ : ಗುರುರಾಜ ಗ್ರಂಥಮಾಲೆ, ವಕೀಲಚೌಳ, ಗದಗ

7) ಶ್ರೀಗೀತಾ ಭಾಮಿನೀ ಷಟ್ಪದಿ (ಷಟ್ಪದಿ) ಎಸ್. ಎನ್. ಕೃಷ್ಣಶಾಸ್ತ್ರಿ, 1957 ಎಸ್. ಎನ್. ಕೃಷ್ಣಶಾಸ್ತ್ರಿ, ದುರ್ಗಿಗುಡಿ, ಶಿವಮೊಗ್ಗ.

8) ಶ್ರೀಮದ್ಭಗವದ್ಗೀತಾ ಕುಸುಮ ಮಂಜರಿ (ಕುಸುಮ ಷಟ್ಪದಿ), ಲೇ : ಶ್ರೀ ಮತ್ಪರಮಹಂಸ ಬೋಧಾನಂದ ಭಾರತೀಸ್ವಾಮಿ, 1961, ಪ್ರಕಟಣೆ : ಅಭಿನವ ಆಸ್ತಿಕ ಪ್ರಕಾಶನ, ಬೆಂಗಳೂರು

9) ಶ್ರೀ ಬಾಲಗೀತಾ ಪ್ರಕಾಶಿಕಾ (ಗೋವಿನ ಹಾಡಿನ ಧಾಟಿ) ಲೇಖಕರು : ಬಿ. ಎಸ್. ಅನಂತರಾಮಯ್ಯ, 1964 ಪ್ರಕಟಣೆ : ಡಿ. ಎನ್. ಶರ್ಮ, ನಗರ್ತರ ಪೇಟೆ, ಬೆಂಗಳೂರು

10) ಕನ್ನಡ ಭಗವದ್ಗೀತೆ (ದ್ವಿಪದಿ) ವೆಂಕಟರಾವ್ ರಾಮಚಂದ್ರರಾವ್ ನಾಯಕ, 1964 ಪ್ರಕಟಣೆ : ತವಗ ಭೀಮಸೇನರಾವ್, ಕನ್ನಡ ಸಾಹಿತ್ಯ ಸಂಘ, ಕಲ್ಬುರ್ಗಿ.

11) ಶ್ರೀಮದ್ ಭಗವತ್ ಕಂನುಡಿ (ಕನ್ನಡ ಭಗವದ್ಗೀತೆ) 2000, ಲೇಖಕರು : ವಿಶ್ವೇಶ್ವರ ದೀಕ್ಷಿತ್, ಪ್ರಕಟಣೆ : ಚಿರಾಗ್ ಪ್ರಕಾಶನ ಕ್ಯಾಲಿಫೋರ್ನಿಯಾ, ಅಮೇರಿಕಾ.

20ನೇ ಶತಮಾನದ ಪದ್ಯಾನುವಾದಗಳು :

12) ಗೀತಾಮಕರಂದ ಕೀರ್ತನೆಗಳು (ಕೀರ್ತನೆಗಳು) 1994, ಲೇಖಕರು : ಕ.ಲ. ಲಕ್ಷ್ಮೀನಾರಾಯಣಶಾಸ್ತ್ರಿ, ಪ್ರಕಟನೆ : ಸಿಂಹಾದ್ರಿ, ಬಿ.ಟಿ.ಎಂ. ಬಡಾವಣೆ, ಬೆಂಗಳೂರು

13) ಶ್ರೀಭಗವದ್ಗೀತೆ (ಕನ್ನಡ ಶ್ಲೋಕರೂಪ) 1976, ನಾರಾಯಣರಾವ್ ತಾಳೀಕೋಟ, ಪ್ರಕಟಣೆ : ಶ್ರೀರಾಮಸೇವಾ ಟ್ರಸ್ಟ್, ರಾಯಚೂರು

14) ಸಂತ ಭದ್ರಗಿರಿ ಕೇಶವದಾಸರು, ಗೀತಾಪರ ಕೀರ್ತನೆಗಳು, 1986 ಪ್ರಕಟಣೆ : ವಿಶ್ವಶಾಂತಿ ಆಶ್ರಮ, ನೆಲಮಂಗಲ, ಬೆಂಗಳೂರು

15) ಶ್ರೀಮದ್ಭಗವದ್ಗೀತಾ ತಾತ್ಪರ್ಯ – ಡಿವಿಜಿ. 1966 ಪ್ರಕಟಣೆ : ಕಾವ್ಯಾಲಯ, ಮೈಸೂರು (ಕಂದಪದ್ಯಗಳು) (ಪ್ರತಿ ಅಧ್ಯಾಯದ ವಿವರಣೆ, ಪ್ರಾರಂಭ, ಮತ್ತು ಅಂತ್ಯಗಳಲ್ಲಿ ಸೂಚನೆ, ಸಂಗ್ರಹ ಎಂಬ ಹೆಸರಿನಲ್ಲಿ ಆಯಾ ಅಧ್ಯಾಯಗಳ ಸಾರವನ್ನು ಕಂದಪದ್ಯಗಳಲ್ಲಿ ರಚಿಸಿದ್ದಾರೆ.)

16) ಶ್ರೀಮದ್ಭಗವದ್ಗೀತಾಸಾರ (ಲಾವಣಿರೂಪ) 1961 ದೇವಾರಾಯ ಕುಲಕರ್ಣಿ (ಹೊಂಬಳ), ಪ್ರಕಟಣೆ : ಶ್ರೀ ಪರಮಾರ್ಥ ವಿಚಾರಸಂಘ ಟ್ರಸ್ಟ್, ವಿಶ್ವೇಶ್ವರಪುರಂ, ಬೆಂಗಳೂರು

17) ಶ್ರೀ ಕರ್ಣಾಟ ಭಗವದ್ಗೀತೆ ಪದ್ಯಾನುವಾದ : ಪಂಡಿತ ಮಿರ್ಲೆ ಕೃಷ್ಣಶರ್ಮ (ಎಂ. ಕೃಷ್ಣಪ್ಪ) 1950, 128 ಪುಟಗಳು, (ಪೂರ್ಣಾನುವಾದ, ದ್ವಿಪದಿ), ಪ್ರಕಟಣೆ : ಭಾರತ್ ಪ್ರಿಂಟಿಂಗ್ ಪ್ರೆಸ್, ಮೈಸೂರು.

21ನೇ ಶತಮಾನದ ಗೀತಾ ಪದ್ಯಾನುವಾದಗಳು :

1) ಅಥ ಶ್ರೀಮದ್ಭಗವದ್ಗೀತಾ (ವೃತ್ತಾನುವೃತ್ತಮಾಗಿ ಪರವರ್ತಿತ) 2003, ಕಡವ ಶಂಭುಶರ್ಮ, ಪ್ರಕಟಣೆ : ಕಡವ ಶಂಭುಶರ್ಮ ಸ್ಮಾರಕ ಪ್ರತಿಷ್ಠಾನ, ದ.ಕ.

2) ಶ್ರೀ ಗೀತಾಂತರಂಗ (ಶ್ಲೋಕರೂಪ) ಕೆ.ಪಿ. ರತ್ನಾಕರಭಟ್ಟ, 2004 ಪ್ರಕಟಣೆ : ಶ್ರೀರಾಮಸೇವಾ ಪ್ರಕಾಶನ, ಚಿಕ್ಕಮಗಳೂರು

3) ಶ್ರೀಮದ್ಭಗವದ್ಗೀತಾಶಾಸ್ತ್ರ ವಿಚಾರದರ್ಶನವು (ಭಾ.ಷಟ್ಪದಿ) ಲೇ : ಗೋಪಾಲ ಜೋಯಿಸ, 2005 ಪ್ರಕಟಣೆ : ಲೇಖಕರು, ರಾಜಾಜಿನಗರ, ಬೆಂಗಳೂರು

4) ಭಗವದ್ಗೀತೆ (ಸರಳಗನ್ನಡದ ನುಡಿಗಳಲ್ಲಿ ದ್ವಿಪದಿ) ಕೆ. ರಾಘವೇಂದ್ರರಾವ್, 2006, ಪ್ರಕಟನೆ : ಸರಸ್ವತೀ ಪ್ರೇರಣಾ ಪ್ರಕಾಶನ, ಹೈದರಾಬಾದ್

5) ಸಿರಿಗನ್ನಡ ಸರಳ ಭಗವದ್ಗೀತೆ (ಚೌಪದಿ) ಲೇ : ಎಸ್. ಬಿಳಿಗಿರಿವಾಸನ್, 2007, ಪ್ರಕಟಣೆ : ಸಿಂಚನ ಕನ್ನಡ ವೇದಿಕೆ, ಆರ್.ವಿ.ಪಿ.ಎಂ. ಕಾಲೇಜ್, ಬೆಂಗಳೂರು – 41

6) ಭಗವದ್ಗೀತಾ ಪದ್ಯಾನುವಾದ (ಶ್ಲೋಕ ರೂಪ), ಹಂ. ಕ. ರಾಮಪ್ರಿಯ, ಮೇರಿಲ್ಯಾಂಡ್ ಅಮೆರಿಕಾ (ಅಚ್ಚಿನಲ್ಲಿದೆ)

7) ಶ್ರೀಮದ್ಭಗವದ್ಗೀತಾ ಮೌನದನಿ – ನಾ. ಸು. ದ್ವಾರಕಾನಾಥ್ (ನವ್ಯಕವನಗಳು) 2005 ಪ್ರಕಟಣೆ : ತನುಮನ ಪ್ರಕಾಶನ, ಮೈಸೂರು

21ನೇ ಶತಮಾನದ ಪ್ರಕಟಣೆಗಳು :

ಆಧುನಿಕ ವಿಜ್ಞಾನಯುಗವಾಗಿ, ಕಂಪ್ಯೂಟರ್ ಮೊದಲಾದ ವಿದ್ಯುನ್ಮಾನ ಯುಗದಲ್ಲಿ ಭಗವದ್ಗೀತೆ ಕ್ಯಾಸೆಟ್ಟು, ಡಿವಿಡಿ, ಸಿಡಿ ಮೊದಲಾದವುಗಳಲ್ಲಿ ಬಂದಿವೆ. ಪತ್ರಿಕೆ ಪುಸ್ತಕ ಮಾಧ್ಯಮಗಳಲ್ಲಂತೂ ನಿರಂತರ ಸುಳಿಯುತ್ತಿವೆ. ಭಾಷಣ ಮಾಧ್ಯಮದಲ್ಲಿ ದಿನವೂ ನಾಡಿನ ನೂರಾರು ಕಡೆ ಪ್ರವಚನಗಳಾಗುತ್ತಿವೆ. ಸ್ವರ್ಣವಲ್ಲೀ ಮಠದಂಥ ಧಾರ್ಮಿಕ ಸಂಸ್ಥೆಗಳು ಗೀತಾ ಅಭಿಯಾನವನ್ನೇ ತಮ್ಮ ಧ್ಯೇಯವನ್ನಾಗಿ ಮಾಡಿಕೊಂಡಿದ್ದಾರೆ. ಗೀತಾಪ್ರಚಾರಕ್ಕಾಗಿಯೇ ಅನೇಕ ಸಂಘ ಸಂಸ್ಥೆಗಳಿವೆ. ಹೀಗಾಗಿ ಆಧುನಿಕ ಮಾಧ್ಯಮಗಳಲ್ಲಿ

21ನೇ ಶತಮಾನದಲ್ಲಿ ಗೀತೆ ಹೊರಹೊಮ್ಮುತ್ತಿದ್ದರೂ, ಪುಸ್ತಕರೂಪದಲ್ಲಿ ಗೀತೆ ಪದ್ಯರೂಪದಲ್ಲಿ ಪ್ರಕಟವಾಗುತ್ತಿರುವುದು ಮುಂದುವರೆದಿದೆ. 21ನೇ ಶತಮಾನದಲ್ಲಿ ಪ್ರಕಟವಾದ ಕೆಲವು ಗೀತಾ ಪದ್ಯಾನುವದಗಳು ಹೀಗಿವೆ.

ಗೀತೆಯ ಅನುವಾದಿತ ಪದ್ಯಗಳ ನಿದರ್ಶನಗಳು :

ಕನ್ನಡ ಪದ್ಯಾನುವಾದ ಗ್ರಂಥಗಳಿಂದ ಒಂದೊಂದು ಪದ್ಯವನ್ನು ಮಾದರಿಗಾಗಿ ಇಲ್ಲಿ ಕೊಟ್ಟಿದೆ. ಅನುವಾದ ಶೈಲಿ ಹೇಗಿದೆ ಎಂಬುದರ ಕಿರುಪರಿಚಯ ಆಗಬಹುದು.

ಮೂಲಶ್ಲೋಕ :

1. ನೈನಂ ಛಿಂದಂತಿ ಶಸ್ತ್ರಾಣಿ
ನೈನಂ ದಹತಿ ಪಾವಕಃ
ನಚೈನಂ ಕ್ಲೇದಯಂತ್ಯಾಪೋ
ನ ಶೋಷಯತೀ ಮಾರುತಃ (ಗೀತೆ ಅ 2 ಶ್ಲೋ 23)

ಅನುವಾದಗಳು :

1) ಕಡಿಯಲರಿಯವು ಕೈದುಗಳು ಕೇ
ಳ್ಸುಡಲರಿಯದ್ವೆ ಕಿಚ್ಚು ಉದಕವು
ಕಡೆಗೆ ತಾನೆನೆಯಿಕ್ಕಲರಿಯದು ಗಾಳಿ ನೆರೆಪಿಡಿದು
ಬಿಡದೆಯೊಣಗಿಸಲರಿಯದಾತ್ಮನು
ಕಡೆಗೆ ತಾ ನಿರಯವನಾಗಿಹ
ಕೆಡಿಸಿಕೊಳುತಿಹ ತನುಗಳಾತ್ಮಂಗಿಲ್ಲ ತನಗೆಂದ – ನಾಗರಸ

2) ಶಸ್ತ್ರಾಸ್ತ್ರಗಳು ಆ ಜೀವನಾ ಛೇದಿಸದು ಕೇಳಗ್ನಿ
ಆತ್ಮನ ಸುಡದು ತೋಯಿಸದು ಉದಕಾ
ವಾಯೂ ಜೀವನ ಒಣಗಿಸಾನಾದ್ದರಿಂದ
ಛೇದ್ಯಾದಹನೋ ಶುಷ್ಕ ತೋಯೂವನಲ್ಲ – ಶೇಷ

3) ಯಾವ ಆಯುಧವಾದರೂ ಛೇದಿಸುವುದಿಲ್ಲ
ಪಾವಕ ದಹಿಸಲಾರನು
ಕೇವಲ ಶಾಶ್ವತ ಸ್ಥಾಣು ಸನಾತನನು
ಈ ವಿಧವನು ತಿಳಿದು ಚಿಂತಿಸದಿರು ಪಾರ್ಥ – ಕೃಷ್ಣಯೋಗಿ

4) ಕಡಿಯದು ಶಸ್ತ್ರ ಸಮೂಹಂ
ಸುಡದು ಹುತಾಶನನುಮೊಣಗಿಸದು ಪವಮಾನಂ
ಪಡೆಯದು ತೋಯಿಸಲ್ಕಾರ್ಪಂ
ನಡೆನೋಳ್ಪೊಡೆ ಚಲಮದಾತ್ಮನಂ ಪಾಂಡುಸುತಾ – ನಾಗೇಶಶಾಸ್ತ್ರಿ

5) ಈತನನು ಶಸ್ತ್ರಗಳು ಕತ್ತರಿಸವು ಈತನ ಸುಡಲರಿಯದು ಬೆಂಕಿ

ಈತನ ತೋಯಿಸೆ ನೀರಿಗು ಆಗದು ಗಾಳಿಕೂಡ ಒಣಗಿಸದವನ

– ಪು.ತಿ.ನ.

6) ಇವನನು ಕಡಿಯಲಿಕಾರವು ಶಸ್ತ್ರಗಳಿಯವಿನ್ನಗ್ನಿಯುಸುಡಲಾರ
ಇವನನು ನೀರುಂ ನೆನೆಯಿಸದಾ ವಾಯುವುಮಿವನನ್ನೊಣಗಿಸಲಾರ

– ಮಿರ್ಲೆಕೃಷ್ಣಶರ್ಮ

7) ಆತ್ಮ ನಿರ್ವಿಕಾರನು ಕೇಳಿವನಾ । ಶಸ್ತ್ರಕಡಿಯದ್ಲೈ ಬೆಂಕಿಸುಡದು ಆ
ಜಲದಿಂ ತೋಯನು ಗಾಳಿಗೆ ಒಣಗಾ । ನಿತ್ಯ ಸರ್ವಗತ ಸ್ಥಿರನ ಚಲನಿವಾ

– ದೇವರಾಯ ಕುಲಕರ್ಣಿ (ಹೊಂಬಳ)

8) ಇವನಂಭೇದಿಸಲಾರ ನಾ ವರಮಹಾ ಶಸ್ತ್ರಾಸ್ತ್ರವರ್ಗಂಗಳಂ ।
ತಿವನಂ ಪಾವಕನುಂ ಸುಡಲ್ ಬಲಯುತಂ ತಾನಲ್ಲದಿರ್ಕ್ಕುಂ ಸದಾ ॥
ಇವನಂ ನೀರುಮದೆಂದಿಗುಂ ನೆನೆಯಿಸಲ್ ತಾಂ ಶಕ್ತಿಗುಂದಿರ್ಪುದಿಂ ।
ತಿವನಂ ಶೋಷಿಪ ಕರ್ಮದೊಳ್ ಪವನನುಂ ತಾಂ ಶಕ್ತಿಯಂನೀಗುಗುಂ ॥

– ಜೆ. ಅಪ್ರಮೇಯ ಐಯ್ಯಂಗಾರ್

9) ಆತ್ಮನನು ಆಯುಧಗಳು ಭೇದಿಸಲಾರವು ಅಗ್ನಿಯು ಸುಡಲಾರದು
ನೀರು ನೆನೆಯಿಸಲಾರದು, ಗಾಳಿಯು ಆರಿಸಲಾರದು

– ಎಸ್. ಬಿಳಿಗಿರಿವಾಸನ್

10) ಕತ್ತಿಗಳು ಜೀವನನು ಭೇದಿಸಿ
ಕತ್ತರಿಸವಾತ್ಮನನು ಬೆಂಕಿಯು
ಹತ್ತಿದಹಿಸದು ಜಲವು ತೋಯಿಸಲಾರದಾತ್ಮನನು ।
ಮತ್ತೆ ಜೀವಾತ್ಮನನು ಗಾಳಿಯು
ಬತ್ತಿಸದುಯೆಂದೆನುತ ಹರಿ ಸ
ರ್ವೋತ್ತಮನು ಹೇಳಿದನು ನಿಜ ಸದ್ಭಕ್ತ ಪಾರ್ಥನಿಗೆ ॥

– ಎಸ್. ಎನ್. ಕೃಷ್ಣಶಾಸ್ತ್ರೀ

11) ಕತ್ತಿಯೀಯಾತ್ಮನಂ ಕತ್ತರಿಸಲಾರದ್ಲೈ ಮತ್ತೆ ಬೆಂಕಿಯು ಸುಡದು ಜಲನೆನಸದು।
ಬತ್ತವೊಣಗಿಸದನಿಲ ಪುತ್ತಮ ಸನಾತನದ ಬಿತ್ತಮಂ ತಿಳಿದವನೆ ಧೀರನೆಂದ॥

– ಶ್ರೀ ಮತ್ಪರಮಹಂಸ ಬೋಧಾನಂದ ಭಾರತೀಸ್ವಾಮಿ

12) ಪಾರ್ಥ ಶಸ್ತ್ರಗಳು ಕತ್ತರಿಸಲಾರವು, ಅಗ್ನಿಯು ಸುಡಲಾರದು, ಈ ।
ಆತ್ಮವ ನೀರು ನೆನೆಯಿಸಲಾರದು ಗಾಳಿ ಒಣಗಿಸಲಾರದು ॥

– ಕೆ. ರಾಘವೇಂದ್ರರಾವ್

13) ತರಿಯದು ಇದನು ಹರಿತಲಗು
ಬೂದಿಸದು ಇದನು ಕಡು ಬೆಂಕಿ,

ನೆನೆಸದು ಇದನ್ನು ಮಡುನೀರು
ಒಣಗಿಸದು ಇದನು ಬಿರುಗಾಳಿ – ವಿಶ್ವೇಶ್ವರ ದೀಕ್ಷಿತ

14) ಜೀವವನು ಶಸ್ತ್ರ ಕಡಿಯದಗ್ನಿ ಅದನು ದಹಿಸದು
ಜಲವು ತೊಯ್ಸಲಾರದದನು ಗಾಳಿಬಿಡಲದೊಣಗದು
– ಶಂಭುಭಟ್ಟ, ಎಂ.ಏಜಿ.

15) ಶಸ್ತ್ರದಂಜಿಕೆಯಿಲ್ಲ ಜೀವಕ್ಕೆ ಈ ದೇಹಕ್ಕೆ ಪಾವಕನ ದಾಹಕ್ಕೆ
ಉದಕಗಳಿಂದ ವೇದನೆ ಯಾತಕೆ ಜೀವಕೆ ಮಾರುತನ ರೋಷಕ್ಕೆ
– ಶ್ರೀ ವ್ಯಾಸರಾಯರು

16) ಇವನಂ ಕಯ್ದು ತರಿಯದಿವನಂ ಕಿಚ್ಚು ಕಾಸದು
ನೀರ್ ನಾಂದದಿವನಂ ಮತ್ತಂ ಗಾಳಿ ತಾರಿಸಲಾರದು
– ಕಡವ ಶಂಭಶರ್ಮ

17) ಶಸ್ತ್ರಗಳಾವವು ಕಡಿಯಲು ಆರವು, ಬೆಂಕಿಯು ಕೂಡಾ ಸುಡುವುದು ಆಗದು
ನೀರೂ ಆತ್ಮನ ತೋಯಿಸಲಾರದು, ಗಾಳಿಯು ಕೂಡಾ ಒಣಗಿಸಲಾರದು
– ನಾರಾಯಣರಾವ್ ತಾಳೀಕೋಟೆ

18) ಆತ್ಮನ ಕತ್ತಿಯಿಂದ ಕತ್ತರಿಸಲಾಗದು
ಆತ್ಮಕೆ ಬೆಂಕಿ, ನೀರು, ಗಾಳಿ ಬಾಧಿಸದು
ಆತ್ಮ ಸಿಗಕಾಣದು, ಇಂದ್ರಿಯಗಳಲಿದು
ಆತ್ಮಕೆ ವಿಕಾರವಿಲ್ಲ ಸಾವಿಲ್ಲವೆಂದು – ಕ. ಲ. ಲಕ್ಷ್ಮೀನಾರಾಯಣಶಾಸ್ತ್ರೀ

19) ಆತ್ಮ ಶಸ್ತ್ರದಿಂ ಕಡಿಯಲ್ಪಡನು, ಆತ್ಮ ಬೆಂಕಿಯಿಂ ದಹಿಸಲ್ಪಡನು
ಆತ್ಮ ನೀರಿನಿಂ ನೆನಸಲ್ಪಡನು, ಆತ್ಮ ಗಾಳಿಯೆಂ ಒಣಗದು
– ಬಿ. ಎಸ್. ಅನಂತರಾಮಯ್ಯ

20) ಕಡಿಯುವುದಿಲ್ಲವಾಯುಧಗಳು ಬೆಂಕಿಯು । ಸುಡುವುದಿಲ್ಲೀ ಜೀವವನ್ನು
ಬಿಡುವ ಗಾಳಿಗೆಯೋಗದು ತೋಯ್ಯುದದು ನೀರಮಡುವಿನೊಳಿದ್ದರು ಕೂಡ
– ಅಚ್ಯುತ ಕೃಷ್ಣರಾವ್ ಹುಯಿಲಗೋಳ

21) ಆಯುಧಗಳು ತುಂಡರಿಸವು ಆತ್ಮನ ಸಾಯದು ಹುಟ್ಟನು
ಬದಲಾಗದು ಆತ್ಮ ॥ಪ॥
ಅಗ್ನಿಯು ಸುಡಲಾರದು ಚೈತನ್ಯದ ಜಲನೆನೆಸದು ಆ ಶಕ್ತಿ ತತ್ತ್ವವ ।
ಗಾಳಿ ಒಣಗಿಸದು ಖಡ್ಗ ತುಂಡರಿಸದು ಹೇಳಲಾಗದ ಅದ್ಭುತಶಕ್ತಿ ಆತ್ಮ ॥
– ಶ್ರೀ ಸಂತಭದ್ರಗಿರಿ ಕೇಶವದಾಸರ ಕೀರ್ತನೆಗಳು

22) ಈ ತತ್ತ್ವವನು ಶಸ್ತ್ರಛಿದ್ರವನು ಗೊಳಿಸದೈ
ಈ ತತ್ತ್ವವನು ಬೆಂಕಿ ತಾನೆಂದು ಸುಡದು

ಈ ತತ್ತ್ವವನು ನೀರು ತಾನೆಂದು ತೋಯಿಸದು
ಈ ತತ್ತ್ವವನು ಗಾಳಿ ಎಂದು ಒಣಗಿಸದು — ಕೆ. ಪಿ. ರತ್ನಾಕರಭಟ್ಟ

23) ನರನೆ ಕೇಳಾತುಮನು ನಾನಾ।
ಪರಿಯ ಶಸ್ತ್ರಗಳರಿಯಲರಿಯವು।
ಉರುವ ಪಾವನಕನುರುಹಲರಿಯನು ವಾರಿ ನೆನಹಿಸನು।
ಪಿರಿಯ ಮಾರುತನೊಣಗಿಸನು ತಾ।
ನಿರವಯಾತುಮನಪ್ಪ ಕಾರಣ।
ಕರಣಜಡಭೂತಗಳಲಾತುಮನವಳಿವನಲ್ಲೆಂದ ॥ — ಹರಿದಾಸ

24) ಆದಿ ಅಂತವದಿರದಖಂಡವ।
ಬೋಧೆ ಗೊದಗದ ದಿವ್ಯವಿದನಾ।
ಯುಧವು ಭೇದಿಸಲಾರದಾತ್ಮನ, ರೂಪ ವಿರದವನ ।
ಒದಗಿದಿಹ ದಹನಕ್ಕೆ ಅಗ್ನಿಗೆ।
ಉದಕವೀತನ ನೆನೆಸಲಾರದು।
ಕೋದುಗಾಳಿಯು ಮುಸುಕಿ ಒಣಗಿಸಲಾರದೀ ಘನನ ॥
— ಗೋಪಾಲ ಜೋಯಿಸ್

ಭಗವದ್ಗೀತೆ ಒಂದು ಮನೋವಿಜ್ಞಾನ

– ಡಾ. ಆನಂದ ಪಾಂಡುರಂಗಿ

ಭಗವದ್ಗೀತೆಯನ್ನು ಅಧ್ಯಯನ ಮಾಡಲಾಗಿ ಮೊದಲಿನಿಂದ ಕೊನೆಯವರೆಗೂ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ನೀಡಿದ ಸಂದೇಶದಲ್ಲಿ ಪ್ರತಿ ಹಂತಕ್ಕೂ ಇದೊಂದು ಅದ್ಭುತ ಮನೋವಿಜ್ಞಾನ ಎಂಬ ಕಲ್ಪನೆ ಖಚಿತವಾಗುತ್ತದೆ.

ಭಗವದ್ಗೀತೆಯು ಭರತ ಭೂಮಿಯಲ್ಲಿ ಬೆಳಗುತ್ತಿರುವ ಅಧ್ಯಾತ್ಮ ಪ್ರದೀಪ. ಚಿತ್ತಸ್ಥೈರ್ಯವನ್ನು ನೀಡುವ ದಿವ್ಯಗ್ರಂಥ. ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವವರಿಗೆ ಉದ್ಧಾರ ಗೈಯುವ, ಧೈರ್ಯಪ್ರದವಾದ ಉಪದೇಶ ರತ್ನಗಳಿಂದ ಯುಕ್ತವಾದ ದಿವ್ಯಮಾಲೆ. ಇದೊಂದು ಮಾನಸಿಕ ಶಾಸ್ತ್ರವೂ ಆಗಿದೆ. ತತ್ತ್ವಶಾಸ್ತ್ರವೂ ಆಗಿದೆ.

ಪಾಂಡವ, ಕೌರವರ ಜನನದೊಂದಿಗೆ ವೈರವೂ ಹುಟ್ಟಿ ಅವರು ಬೆಳೆದಂತೆ ಅದೂ ಬೆಳೆಯಿತು. ಕೌರವರು ಅಧರ್ಮ ಪ್ರಿಯರು. ಆ ಅಧರ್ಮವೇ ಅವರ ವೈರಕ್ಕೆ ಕಾರಣವಾಯಿತು. ಪಾಂಡವರ ಬೆಂಬಲಕ್ಕೆ ಶ್ರೀಕೃಷ್ಣನಿದ್ದರೆ, ಕೌರವರ ಕಡೆಗೆ ನಾಸ್ತಿಕ್ಯವೇ ಬೆಂಬಲಕ್ಕೆ ನಿಂತಿದೆ. ಶ್ರೀಕೃಷ್ಣನನ್ನು ನಂಬಿದ ಪಾಂಡವರು ರಾಜಸೂಯ ಯಾಗವನ್ನು ಮಾಡಿದರು. ಶಕುನಿಯನ್ನು ನಂಬಿದ ಕೌರವರು ಜೂಜಿಗಿಳಿದರು. ಪಾಂಡವರು ಕಪಟ ತಂತ್ರಕ್ಕೆ ಬಲಿಯಾಗಿ ಸೋತರು. ಅವಮಾನಿತರಾದರು. ಪಾಂಡವರು ವನವಾಸಕ್ಕೆ ತೆರಳಿದರೂ ಅವರಿಗೆ ಬರಬೇಕಾದ ರಾಜ್ಯ ಸಿಗಲಿಲ್ಲ. ದುರ್ಯೋಧನ ಯಾರ ಮಾತನ್ನೂ ಕೇಳಲಿಲ್ಲ. ಕೇಳುವಂತಹ ಪ್ರವೃತ್ತಿಯೂ ಕೂಡ ಅವನಿಗಿದ್ದಿಲ್ಲ. ಯುದ್ಧ ಅನಿವಾರ್ಯವಾಯಿತು. ಪೂರ್ವಜರಿಂದ ನಿರ್ಮಿತ ಕುರುಕ್ಷೇತ್ರವು ಸಮರಕ್ಷೇತ್ರವಾಯಿತು. ಕೌರವರ ಹನ್ನೊಂದು ಅಕ್ಷೋಹಿಣಿ, ಪಾಂಡವರ ಏಳು ಅಕ್ಷೋಹಿಣಿ ಸೈನ್ಯ ಜಮಾವಣೆಗೊಂಡಿತು.

ಯುದ್ಧವನ್ನು ಮಾಡುವ ಮಹದುತ್ಸಾಹ. ಯುದ್ಧವನ್ನು ಸ್ವತಂತ್ರವಾಗಿ ಮಾಡಿ ನಾನು ಗೆಲ್ಲುತ್ತೇನೆಂಬ ಅಹಂಕಾರ, ಮಮಕಾರಗಳಿಂದ ವಿಜೃಂಭಿತನಾದ ಅರ್ಜುನನು ಶ್ರೀಕೃಷ್ಣನಿಗೆ ನನ್ನ ರಥವನ್ನು ಎರಡೂ ಸೈನ್ಯಗಳ ಮಧ್ಯದಲ್ಲಿ ನಿಲ್ಲಿಸು. ದುಷ್ಟ

ದುರ್ಯೋಧನನ ಪರವಾಗಿ ಯುದ್ಧ ಮಾಡಲು ಬಂದವರನ್ನು ನೋಡುತ್ತೇನೆಂದು ದರ್ಪಿತನಾಗಿಯೇ ನುಡಿದ.

'ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯಮೇಚ್ಯುತ । ಯಾವದೇತಾನ್ ನಿರೀಕ್ಷೇಹಂ ಯೋದ್ಧುಕಾಮಾನವಸ್ಥಿತಾನ್ ॥ ಕೈರ್ಮಯಾ ಸಹ ಯೋದ್ಧವ್ಯಂ ಅಸ್ಮಿನ್ ರಣಸಮುದ್ಯಮೇ । ಧಾರ್ತರಾಷ್ಟ್ರಸ್ಯ ದುರ್ಬುದ್ಧೇಃ ಯುದ್ಧೇ ಪ್ರಿಯಚಿಕೀರ್ಷವಃ ॥" ಎಂಬುದಾಗಿ ಅರ್ಜುನನು ಮಾತನಾಡುತ್ತಾನೆ. ಶ್ರೀ ಕೃಷ್ಣ ಎರಡೂ ಸೇನೆಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಿ, ಇವರೆಲ್ಲರನ್ನೂ ನೋಡು ಎನ್ನುತ್ತಾನೆ.

"ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ । ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ॥ ಶ್ವಶುರಾನ್ ಸುಹೃದಶ್ಚೈವ ಸೇನಯೋ ರುಭಯೋರಪಿ । ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್ ॥"

ಅಲ್ಲಿ ನೆರೆದ ಪಿತೃಗಳನ್ನು, ಅಜ್ಜಂದಿರಾದ ಭೀಷ್ಮನನ್ನು ಆಚಾರ್ಯ ದ್ರೋಣರನ್ನು, ಅಶ್ವತ್ಥಾಮಾಚಾರ್ಯ, ಕೃಪಾಚಾರ್ಯ ಮೊದಲಾದ ಪೂಜ್ಯರನ್ನು, ಸೋದರ ಮಾವ, ಹೆಣ್ಣು ಕೊಟ್ಟ ಮಾವ, ಗೆಳೆಯರು, ಬಂಧುಬಾಂಧವರುಗಳೆಲ್ಲರನ್ನು ನೋಡಿದ. ಕೂಡಲೇ ಅರ್ಜುನನ ಉತ್ಸಾಹ ಜರ್‌ನೆ ಇಳಿದು ಬಂದು, ಸ್ನೇಹ ಉಕ್ಕಿ ಬಂದು, ವಿಷಾದವನ್ನು ಹೊಂದಿ ನುಡಿಯುತ್ತಾನೆ. (ಗೀತೆ ಹೇಳುತ್ತದೆ : "ಕೃಪಯಾ ಪರಯಾವಿಷ್ಟಃ ವಿಷೀದನ್ನಿದಮಬ್ರವೀತ್" ಬಹಳ ದಯಾಯುಕ್ತನಾದ ಅರ್ಜುನನು ವಿಷಾದದಿಂದ ನುಡಿಯುತ್ತಾನೆ)

ಅರ್ಜುನನು ತನ್ನ ಮತ್ತು ವೈರಿಗಳ ಸೈನ್ಯದಲ್ಲಿ ನಿಂತವರನ್ನು ಇವರು ಸ್ನೇಹಿತರು, ಇವರು ದ್ವೇಷಿಗಳು ಎನ್ನುವುದನ್ನು ಮರೆತು ಅವರೆಲ್ಲರೂ ತನಗೆ ಬೇಕಾದವರು, ಪ್ರೀತಿಪಾತ್ರರು, ಇಷ್ಟರು ಎಂಬುದಾಗಿ ಭಾವಿಸಿದನು. ಇದೇ ಕಾರಣದಿಂದಲೇ ಅರ್ಜುನನು ದಯೆಗೆ ವಶವಾಗಿ ಹೋದನು. ಆ ದಯಾಬುದ್ಧಿಯೇ ವಿಷಾದದಲ್ಲಿ ಪರ್ಯವಸಾನವನ್ನು ಹೊಂದಿತು. ಮುಂದೆ ಸಂಭವಿಸುವ ದುಃಖವನ್ನು ಯೋಚಿಸಿ, ಅದಕ್ಕಾಗಿ ಮನಸ್ಸು ಕರಗುವ ಸ್ಥಿತಿಗೆ ಕರುಣೆ ಅಥವಾ ದಯೆ ಎನ್ನುತ್ತಾರೆ. ಅರ್ಜುನನದು ಸಾಮಾನ್ಯ ಕರುಣೆಯಲ್ಲ. ಬಂಧುಗಳ ಸ್ನೇಹದಿಂದ ವಿಹ್ವಲಗೊಂಡು ಮಮ್ಮಲ ಮರಗುವ ಕರುಣೆ. ಇದು ಅವನ ಚಿಂತನ ಶಕ್ತಿಯನ್ನು ಆಧರಿಸಿದೆ. ಒಳಗಣ್ಣಿಗೂ ಮಂಜು ಕವಿದಿದೆ. ಹೊರಗಣ್ಣಿಗೂ ಕವಿದಿದೆ. ಯುದ್ಧ ಮಾಡುವುದು ಸರಿಯೇ, ತಪ್ಪೇ? ಎಂಬ ಸಂದಿಗ್ಧತೆ ಅವನಿಗೆ ಬಂದಿದೆ. ಒಳಗೂ ಹೊರಗೂ ವಿಷಾದದ ಛಾಯೆ ಆವರಿಸಿದೆ. ಇಲ್ಲಿ ವಿಷಾದ ಎಂದರೆ ದುಃಖ ಎಂದು ಸಾಮಾನ್ಯ ಅರ್ಥ. ಆದರೆ ಇಲ್ಲಿ ಇಷ್ಟೇ ಅಲ್ಲ, ಇನ್ನಷ್ಟೂ ವಿಶಿಷ್ಟಾರ್ಥದಲ್ಲಿ ಬಳಕೆಯಾಗಿದೆ.

ವಿಷಾದ ಲಕ್ಷಣವನ್ನು ನಮ್ಮ ಪ್ರಾಚೀನರು ವಿಶೇಷವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳವರು ಹೀಗೆ ವ್ಯಾಖ್ಯಾನಿಸಿದ್ದಾರೆ : "ವಿಷಾದೋನಾಮ ಮೋಹ ನಿಮಿತ್ತಾತ್ ಶೋಕಾತ್ ಯನ್ಮನೋ ದೌರ್ಬಲ್ಯಂ ಯಸ್ಮಿನ್ ಸತಿ ಸರ್ವವ್ಯಾಪಾರೋಪರಮಾ ಭವತಿ ಇತಿ ಜ್ಞೇಯಮ್".

ವಿಷಾದವೆಂದರೆ ಮೋಹ ಅಥವಾ ಅಜ್ಞಾನದಿಂದ ಬರುವ ಶೋಕದಿಂದ ವ್ಯಕ್ತವಾಗುವ ಮನೋದೌರ್ಬಲ್ಯ (psychoneurosis). ಆ ದೌರ್ಬಲ್ಯ ಬಂದರೆ ಯಾವುದೇ ತರಹದ ಚಟುವಟಿಕೆಗಳು ಆಗುವುದಿಲ್ಲ ಎಂದಿದ್ದಾರೆ. ಈ ರೀತಿ ವ್ಯಾಖ್ಯಾನಿಸಲ್ಪಟ್ಟ ಮನೋದೌರ್ಬಲ್ಯದಲ್ಲಿ ನಾಲ್ಕು ಅಂಶಗಳಿವೆ. ಮೋಹ (attachment), ಶೋಕ (grief), ಮನೋದೌರ್ಬಲ್ಯ (debility) ಮತ್ತು ಸರ್ವವ್ಯಾಪಾರೋಪರಮ (ceased activity), ಆದ್ದರಿಂದ ದೈಹಿಕ ಮತ್ತು ಮಾನಸಿಕ ಕುಸಿತ ಎಂದು ವಿಷಾದವನ್ನು ವಿವರಿಸಿದ್ದಾರೆ.

